ಮಂಗಳೂರು ಶುಕ್ರವಾರ, 15 ಮೇ 2026 ಸಂಪುಟ 48, ಸಂಚಿಕೆ 57, ಪುಟಗಳು 12+6 hosadigantha.com ₹5
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ REG.No.MNG /121/2024-26 Posted at kodialbail P.O / RNI:29813/78/ Daily

ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ಒಮಾನ್: ಭಾರತದ ಸರಕು ನೌಕೆ ಮೇಲೆ ದಾಳಿ

• ಪುಟ ೭

ಶರಿಯಾ ಆಡಳಿತಕ್ಕಾಗಿ ಸರ್ಕಾರ ಬೀಳಿಸುವ ಸಂಚು!

• ಪುಟ ೪

ಕಿರುಸುದ್ದಿ

ಶಾಲೆಗಳಲ್ಲಿ ಹಿಜಾಬ್‌ಗೆ ಅವಕಾಶ: ಕಾಂಗ್ರೆಸ್‌ನ ಮುಸ್ಲಿಂ ತುಷ್ಟೀಕರಣದ ಪರಮಾವಧಿ



ಮಂಗಳೂರು: ಶಾಲೆಗಳಲ್ಲಿ ಹಿಜಾಬ್ ಧರಿಸಲು ಅವಕಾಶವನ್ನು ನೀಡುವ ಮೂಲಕ ರಾಜ್ಯ ಕಾಂಗ್ರೆಸ್ ಸರ್ಕಾರ ಅನಗತ್ಯ ಸಂಘರ್ಷಕ್ಕೆ ಎಡೆ ಮಾಡಿದೆ. ಇದು ಕಾಂಗ್ರೆಸ್‌ನ ಮುಸ್ಲಿಂ ತುಷ್ಟೀಕರಣದ ಪರಮಾಧಿ ಮತ್ತು ನ್ಯಾಯಾಲಯದ ಆದೇಶದ ಉಲ್ಲಂಘನೆ ಎಂದು ಭಾರತೀಯ ಜನತಾ ಪಾರ್ಟಿಯ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಹೇಳಿದ್ದಾರೆ. ಇದು ಸರ್ಕಾರದ ವೈಫಲ್ಯ, ಪಕ್ಷದ ನಾಯಕತ್ವದ ಗೊಂದಲ ಮತ್ತು ಶಿಸ್ತು ಕ್ರಮದ ಹೆಸರಲ್ಲಿ ಕಾಂಗ್ರೆಸ್‌ನ ಮುಸ್ಲಿಂ ನಾಯಕರನ್ನು ವಜಾ ಗೊಳಿಸಿರುವುದರಿಂದ ವ್ಯಗ್ರಗೊಂಡಿರುವ ಮುಸ್ಲಿಂ ಸಮುದಾಯವನ್ನು ಸಮಾಧಾನ ಪಡಿಸಲು ಶಿಕ್ಷಣ ಕ್ಷೇತ್ರವನ್ನು ಬಳಸಿರುವುದು ರಾಜ್ಯಕ್ಕೆ ಕಾಂಗ್ರೆಸ್‌ನಿಂದ ಬಂದಿರುವ ದುರ್ದೈವ. ಶಿಕ್ಷಣ ಸಚಿವರಂತೂ ದಿಕ್ಕುದಿಸೆ ಇಲ್ಲದ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ಸರ್ಕಾರ ತಕ್ಷಣ ತನ್ನ ಹಿಜಾಬ್ ಬಗೆಗಿನ ಆದೇಶವನ್ನು ಹಿಂಪಡೆಯಬೇಕು ಎಂದು ಪತ್ರಿಕಾ ಹೇಳಿಕೆಯಲ್ಲಿ ಸತೀಶ್ ಕುಂಪಲ ಆಗ್ರಹಿಸಿದ್ದಾರೆ.

ಹಿಜಾಬ್ ನಿಷೇಧ ಹಿಂತೆಗೆತ: ಶಿಕ್ಷಣ ಕ್ಷೇತ್ರದಲ್ಲಿ ಗೊಂದಲ ಬೇಡ- ರಘುಪತಿ ಭಟ್



ಉಡುಪಿ: ಶಿಕ್ಷಣವು ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಗೆ ಮತ್ತು ಸಾಂವಿಧಾನಿಕ ಮೌಲ್ಯಗಳ ವೃದ್ಧಿಗೆ ಪೂರಕವಾಗಿರಬೇಕು. ಇಲ್ಲಿ ಜ್ಞಾನಾರ್ಜನೆ ಮೂಲ ಉದ್ದೇಶವಾಗಿರಬೇಕು. ಯಾವುದೇ ವಿಷಯದಲ್ಲೂ ವಿದ್ಯಾರ್ಥಿಗಳ ನಡುವೆ ತಾರತಮ್ಯ ಹಾಗೂ ಗೊಂದಲ ಉಂಟಾಗುವಂತಹ ವಿಷಯಗಳಿಗೆ ಆಸ್ಪದ ನೀಡಬಾರದು. ಸಮಾನತೆಯ ದೃಷ್ಟಿಯಿಂದ ಖಾಸಗಿ, ಸರ್ಕಾರಿ, ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಎಲ್ಲಾ ವಿದ್ಯಾರ್ಥಿಗಳು ತರಗತಿ ಕೊಠಡಿ ಒಳಗೆ ಎಲ್ಲರೂ ಏಕ ರೀತಿಯಲ್ಲಿ ಕಾಣುವ ಹಾಗೆ ಸಮವಸ್ತ್ರ ಸಂಹಿತೆಯನ್ನು ಮೀರಬಾರದು ಎಂದು ಮಾಜಿ ಶಾಸಕ ಕೆ. ರಘುಪತಿ ಭಟ್ ಹೇಳಿದ್ದಾರೆ. ಈ ಹಿಂದಿನ ಆದೇಶದಲ್ಲಿ ಶಾಲೆಯ ಕಂಪೌಂಡ್, ಕ್ಯಾಂಪಸ್ ಹಾಗೂ ಕಾರಿಡಾರ್‌ನಲ್ಲಿ ಹಿಜಾಬ್ ಧರಿಸಬಹುದು. ಆದರೆ ತರಗತಿ ಒಳಗೆ, ಪರೀಕ್ಷಾ ಕೊಠಡಿ ಒಳಗೆ ಸಮವಸ್ತ್ರ ಬಿಟ್ಟು ಯಾವುದೇ ಇತರ ಉಡುಗೆ ತೊಡುಗೆಗಳನ್ನು ಧರಿಸುವಂತಿರಲಿಲ್ಲ. ತರಗತಿ ಕೊಠಡಿ ಒಳಗೆ ಎಲ್ಲರೂ ಸಮಾನರು. ಇಲ್ಲಿ ಸಮವಸ್ತ್ರವನ್ನು ಮೀರಿ ಇತರ ವಿದ್ಯಾರ್ಥಿಗಳಿಗೆ ತೋರುವಂತೆ ತಾರತಮ್ಯ ಬರದಂತೆ ಏಕರೀತಿಯಲ್ಲಿ ಇರುವ ಹಾಗೆ ಎಲ್ಲ ವಿದ್ಯಾರ್ಥಿಗಳು ಇರುವುದು ಸೂಕ್ತ. ಸರ್ಕಾರ ಇದಕ್ಕೆ ಅವಕಾಶ ನೀಡಬೇಕು. ಹಾಗಾಗಿ ರಾಜ್ಯ ಸರಕಾರ ಈ ವಿಷಯದಲ್ಲಿ ಹೊರಡಿಸಿರುವ ಆದೇಶವನ್ನು ಮರು ಪರಿಶೀಲಿಸಿ ತರಗತಿ ಒಳಗೆ ಮತ್ತು ಪರೀಕ್ಷಾ ಕೊಠಡಿ ಒಳಗೆ ಸಮವಸ್ತ್ರವನ್ನು ಮೀರಿ ವಿದ್ಯಾರ್ಥಿಗಳಿಗೆ ತೋರುವಂತೆ ತಾರತಮ್ಯ ಬಾರದಂತೆ ಎಲ್ಲರೂ ಏಕರೀತಿಯಲ್ಲಿ ಇರುವ ಹಾಗೆ ಸಮವಸ್ತ್ರ ಸಂಹಿತೆಗೆ ಆದ್ಯತೆಯನ್ನು ನೀಡಬೇಕು ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ಆಗ್ರಹಿಸಿದ್ದಾರೆ.

'ಶ್ರೀಮದ್ ಭಾಗವತ ಸಪ್ತಾಹ' ಪ್ರವಚನ ನಾಲ್ಕನೇ ದಿನಕ್ಕೆ

ಮಂಗಳೂರು: ನಗರದ ಶಾರದಾ ವಿದ್ಯಾಲಯದ ಧ್ಯಾನಮಂದಿರದಲ್ಲಿ ಎಸ್.ಕೆ.ಡಿ.ಬಿ. ಅಸೋಸಿಯೇಶನ್ ಮತ್ತು ತುಳುನಾಡು ಎಜ್ಯುಕೇಶನ್ ಟ್ರಸ್ಟ್ ವತಿಯಿಂದ ಹುಬ್ಬಳ್ಳಿಯ ವಿದ್ಯಾವಾರಿಧಿ ಡಾ. ಶ್ರೀಹರಿ ಆಚಾರ್ಯ ವಾಳ್ವೇಕರ್ ಅವರಿಂದ 'ಶ್ರೀಮದ್ ಭಾಗವತ ಸಪ್ತಾಹ' ಪ್ರವಚನ ಮಾಲಿಕೆಯ 4ನೇ ದಿನದ ಕಾರ್ಯಕ್ರಮ ಜರಗಿತು. ಸಂಘಟಕ ಸುಧಾಕರ ರಾವ್ ಪೇಜಾವರ ಸ್ವಾಗತಿಸಿದರು. ಡಾ. ಎಂ.ಬಿ.ಪುರಾಣಿಕ್, ಡಾ. ಸೀತಾರಾಮ್ ಭಟ್ ದಂಡತೀರ್ಥ, ಪ್ರದೀಪಕುಮಾರಕಲ್ಕೂರ, ಬಿ. ಸುಬ್ರಹ್ಮಣ್ಯರಾವ್, ರಘುರಾಮ ಉಪಾಧ್ಯಾಯ, ಲಲಿತ ಆರ್. ಉಪಧ್ಯಾಯ, ಪುಷ್ಪಲತಾ ಎಂ. ರಾವ್, ಗುರುಪ್ರಸಾದ್ ಬಳ್ಳುಕ್ಕುರಾಯ, ದಯಾನಂದ ಕಟೀಲ್, ಪ್ರಶಾಂತ ಉಪಧ್ಯಾಯ, ಸುಮಾ ಎಸ್. ರಾವ್ ಉಪಸ್ಥಿತರಿದ್ದರು. ಸಮತಾ ಮಹಿಳಾ ಬಳಗದವರಿಂದ ಶ್ರೀಮದ್ ಭಗವನ್ನಾಮ ಸಂಕೀರ್ತನೆ ನೆರವೇರಿತು. ಸಂಜೆ 6ರಿಂದ 7.30ರ ತನಕ ಮೇ 16ರ ವರೆಗೆ ಈ ಉಪನ್ಯಾಸವು ಜರಗಲಿದೆ.

ಕುಶಾಲನಗರ, ಸುಂಟಿಕೊಪ್ಪ, ಮಾದಾಪುರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ: ಕುಶಾಲನಗರ ಹಾಗೂ ಸುಂಟಿಕೊಪ್ಪ ಮತ್ತು ಮಾದಾಪುರ ವಿದ್ಯುತ್ ವಿತರಣಾ ಉಪ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಈ ವಿದ್ಯುತ್ ವಿತರಣಾ ಉಪ ಕೇಂದ್ರದಿಂದ ಹೊರಹೊಮ್ಮುವ ಎಲ್ಲಾ 11 ಕೆವಿ ಮಾರ್ಗ ಗಳಲ್ಲಿ ಮೇ 15ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ರಾಮಚಂದ್ರ ತಿಳಿಸಿದ್ದಾರೆ.

ಕುಂದಾಪುರ: ಸಿಡಿಲು ಬಡಿದು ಓರ್ವ ಸಾವು

ಕುಂದಾಪುರ: ರಸ್ತೆ ಕಾಮಗಾರಿ ಪರಿಶೀಲನೆ ನಡೆಸುತ್ತಿದ್ದ ಕಾರ್ಮಿಕರಿಗೆ ಸಿಡಿಲು ಬಡಿದ ಪರಿಣಾಮ ಓರ್ವ ಕಾರ್ಮಿಕ ಮೃತಪಟ್ಟ ಘಟನೆ ಹೊಸಾಡು ಗ್ರಾಮದ ಅರಾಟೆ ಸೇತುವೆ ಸಮೀಪ ಗುರುವಾರ ಸಂಜೆ ನಡೆದಿದೆ. ರಾ. ಹೆ. 66 ರಲ್ಲಿ ಅಧಿಕಾರಿಗಳೊಂದಿಗೆ ರಸ್ತೆ ಕಾಮಗಾರಿ ಪರಿಶೀಲನೆ ಸಂದರ್ಭ ತಗಡು ಶೀಟ್ ಹಿಡಿದುಕೊಂಡಿದ್ದ ಇಬ್ಬರು ಕಾರ್ಮಿಕರಿಗೆ ಸಿಡಿಲು ಬಡಿದಿದೆ. ಪರಿಣಾಮ ಓರ್ವ ಕಾರ್ಮಿಕ ಆಸ್ಪತ್ರೆಯಲ್ಲಿ ಮೃತ ಪಟ್ಟಿದ್ದು, ಇನ್ನೊರ್ವ ಕಾರ್ಮಿಕ ಗಂಭೀರವಾಗಿ ಗಾಯಗೊಂಡು ಕುಂದಾಪುರ ಆಸ್ಪತ್ರೆ ಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸಿಡಿಲು ಬಡಿದು ಸಾವನ್ನಪ್ಪಿದ ಕಾರ್ಮಿಕನನ್ನು ಪಂಜಾಬ್ ರಾಜ್ಯದ ನಿವಾಸಿ ಆಶಿತೋಷ್ ಸಿಂಗ್ (35) ಎಂದು ಗುರುತಿಸಲಾಗಿದೆ. ಆಶಿತೋಷ್ ಸಮೀಪವೇ ಕೆಲಸ ಮಾಡುತ್ತಿದ್ದ ನವಜ್ಯೋತ್ ಸಿಂಗ್ (37) ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಆಶಿತೋಷ್ ಹಾಗೂ ನವಜ್ಯೋತ್ ಸಿಂಗ್ ಇಬ್ಬರು ಅರಾಟೆ ಸೇತುವೆ ದುರಸ್ತಿ ಕಾಮಗಾರಿಗೆ ಸಂಬಂಧಿಸಿ ಸ್ಥಳ ವೀಕ್ಷಣೆಗಾಗಿ ಬಂದಿದ್ದರು ಎನ್ನಲಾಗಿದೆ. ಗುರುವಾರ ಸಂಜೆ 7 ಗಂಟೆ ಸಮಯಕ್ಕೆ ಸೇತುವೆ ಬಳಿ ನಿಂತಿದ್ದಾಗ ದಿಢೀರ್ ಸಿಡಿಲು ಬಡಿದಿದೆ. ಮೃತದೇಹವನ್ನು ಕುಂದಾಪುರದ ಸರ್ಕಾರೀ ಆಸ್ಪತ್ರೆಯ ಶವಾಗಾರದಲ್ಲಿಡಲಾಗಿದೆ. ಗಂಗೊಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ತನಿಖೆ ನಡೆಯುತ್ತಿದೆ.

ಹವಾಮಾನ ವೈಪರೀತ್ಯ: ತಡವಾಗಿ ಲ್ಯಾಂಡ್ ಆದ ವಿಮಾನ | ಧರೆಗುರುಳಿದ ವಿದ್ಯುತ್ ಕಂಬಗಳು

ಕರಾವಳಿ ಜಿಲ್ಲೆಯಲ್ಲಿ ಧಾರಾಕಾರ ಮಳೆ

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ ಸೇರಿದಂತೆ ಕರಾವಳಿ ಜಿಲ್ಲೆಗಳ ಹಲವೆಡೆ ಗುರು ವಾರ ಸಂಜೆ ಧಾರಾಕಾರ ಮಳೆಯಾಗಿದೆ. ಮಂಗಳೂರಿನಲ್ಲೂ ಗುಡುಗು ಸಹಿತ ಗಾಳಿ ಮಳೆಯಾಗಿದೆ. ಮಳೆಯ ಕಾರಣ ಹವಾಮಾನ ವೈಪರೀತ್ಯ ಉಂಟಾಗಿ ಎರಡು ವಿಮಾನಗಳು ತಡವಾಗಿ ಮಂಗಳೂರು ವಿಮಾನ ನಿಲ್ದಾಣದಲ್ಲಿ ಲ್ಯಾಂಡ್ ಆದವು.

ಬೆಂಗಳೂರಿನಿಂದ ಮಂಗಳೂರು ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದ ವಿಮಾನಗಳು ಇಲ್ಲಿ ಮೋಡ ಕವಿದ ವಾತಾವರಣದ ಜೊತೆಗೆ ಭಾರೀ ಮಳೆಯ ಕಾರಣದಿಂದ ಲ್ಯಾಂಡ್ ಆಗಲು ಸಮಸ್ಯೆ ಎದುರಿಸಿದವು. ವಿಟ್ಲ, ಕಲ್ಲಡ್ಕ ಭಾಗದ ಆಗಸದಲ್ಲಿ ವಿಮಾನಗಳು ಕೆಲವು ಹೊತ್ತು ಸುತ್ತಾಡುತ್ತಿದುದರಿಂದ ಜನತೆ ಗೊಂದಲಕ್ಕೀಡಾಗಿದ್ದರು. ಆದರೆ ಬಳಿಕ ಎರಡೂ ವಿಮಾನಗಳು ಸುರಕ್ಷಿತಲಾಗಿ ಲ್ಯಾಂಡ್ ಆಗಿವೆ ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ.

ಹೆದ್ದಾರಿಗಳಲ್ಲಿ ಜಲಪ್ರವಾಹ

ಸತತವಾಗಿ ಸುರಿದ ಮಳೆಯಿಂದಾಗಿ ನಗರದ ಹೆದ್ದಾರಿಗಳಲ್ಲಿ ನೀರು ಪ್ರವಾಹದಂತೆ ಹರಿಯಿತು. ಪಂಪ್‌ವೆಲ್, ಕೂಳೂರು, ಕೊಟ್ಟಾರ ಚೌಕಿ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಮಳೆನೀರು ಸರಾಗವಾಗಿ ಹರಿದು ಹೋಗಲು ಸಾಧ್ಯವಾಗದೆ ರಸ್ತೆಯಲ್ಲೇ ಸುಮಾರು ಎರಡರಿಂದ ಮೂರು ಅಡಿಗಳಷ್ಟು ನೀರು ನಿಂತಿತ್ತು. ಪಂಪ್‌ವೆಲ್ ಫ್ಲೈ ಓವರ್ ಅಡಿಯಲ್ಲಿ ಪ್ರತಿವರ್ಷದಂತೆ ಈ ಬಾರಿಯೂ ಕೃತಕ ಪ್ರವಾಹ ಭಯ ಆವರಿಸಿದ್ದು, ದ್ವಿಚಕ್ರ ವಾಹನಗಳು ಭಯದಲ್ಲೇ ಸಂಚರಿಸುವ ದೃಶ್ಯಗಳು ಕಂಡುಬಂದವು. ಕೂಳೂರು ಹೆದ್ದಾರಿಯಲ್ಲಿ ನೀರು ನಿಂತಿದ್ದರಿಂದ ವಾಹನಗಳು ಕಿಲೋಮೀಟರ್‌ಗಟ್ಟಲೆ ಸಾಲುಗಟ್ಟಿ ನಿಂತು, ಸಂಚಾರ ವ್ಯವಸ್ಥೆ ಸಂಪೂರ್ಣ ಅಸ್ತವ್ಯಸ್ತಗೊಂಡಿತು.





ಬೆಳ್ತಂಗಡಿಯಲ್ಲಿ ಗಾಳಿ, ಮಳೆ : ಧರೆಗುರುಳಿದ ವಿದ್ಯುತ್ ಕಂಬಗಳು

ಬೆಳ್ತಂಗಡಿ:ತಾಲೂಕಿನ ಹಲವೆಡೆ ಗುರುವಾರ ಸಂಜೆ, ಗಾಳಿ, ಗುಡುಗು, ಸಿಡಿಲು ಸಹಿತ ಮಳೆಯಾಗಿದೆ. ಬೆಳ್ತಂಗಡಿ ನಗರ, ಉಜಿರೆ, ಕಲ್ಲಂಜ, ಮುಂಡಾಜೆ, ಕಡಿರುದ್ಯಾವರ, ಕಕ್ಕಿಂಜೆ, ತೋಟತ್ತಾಡಿ, ಚಿಬಿದ್ರೆ, ಚಾರ್ಮಾಡಿ, ಕರಂಬಾರು, ಶಿರ್ಲಾಲು, ಮಲವಂತಿಗೆ, ಮಿತ್ತಬಾಗಿಲು, ಗೇರುಕಟ್ಟೆ, ಅಳದಂಗಡಿ ಮುಂತಾದ ಕಡೆ ಭಾರಿ ಮಳೆ ಸುರಿದಿದೆ. ಕಡಿರುದ್ಯಾವರ ಗ್ರಾಮದ ಮಲ್ಲಡ್ಕ ಎಂಬಲ್ಲಿ ಗಾಳಿ ಮಳೆಗೆ ಸುಮಾರು 20ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಧರೆಗುರುಳಿದೆ.

- ವಿಟ್ಲ-ಕಲ್ಲಡ್ಕ ಭಾಗದಲ್ಲಿ ವಿಮಾನಗಳು ಕೆಲವು ಹೊತ್ತು ಆಕಾಶದಲ್ಲೇ ಸುತ್ತಾಡುತ್ತಿದುದರಿಂದ ಆತಂಕ
- ನಗರದ ಹೆದ್ದಾರಿಗಳಲ್ಲಿ ನೀರು ಪ್ರವಾಹದಂತೆ ಹರಿಯಿತು
- ಪಂಪ್‌ವೆಲ್ ಫ್ಲೈ ಓವರ್ ಅಡಿಯಲ್ಲಿ ಪ್ರತಿವರ್ಷದಂತೆ ಕೃತಕ ಪ್ರವಾಹ

ಕೊಲ್ಲಿ-ಕಿಲ್ಲೂರು ರಸ್ತೆಯಲ್ಲಿ ರಸ್ತೆಗೆ ಮರ ಉರುಳಿ ಬಿದ್ದು ಎರಡು ವಿದ್ಯುತ್ ಕಂಬಗಳು ಮುರಿದಿವೆ. ತಾಲೂಕಿನ ಅಲ್ಲಲ್ಲಿ ವಿದ್ಯುತ್ ಕಂಬಗಳು ಧರೆಗುರುಳಿದ ಹಿನ್ನಲೆಯಲ್ಲಿ ವಿದ್ಯುತ್ ಸಂಪರ್ಕದಲ್ಲಿ ವ್ಯತ್ಯಯ ಕಂಡು ಬಂದಿದೆ. ಕೆಲವು ಕಡೆಗಳಲ್ಲಿ ಭಾರೀ ಸಿಡಿಲಿನ ಬಡಿದ ಕಾರಣ, ಹಲವು ಮನೆಗಳ ವಿದ್ಯುತ್ ಉಪಕರಣಗಳಿಗೂ ಹಾನಿ ಉಂಟಾಗಿದೆ. ತಾಲೂಕಿನಲ್ಲಿ ಹಲವು ಕಡೆಗಳಲ್ಲಿ ನೂರಾರು ಅಡಿಕೆ ಮರಗಳು ಧರೆಗೆ ಉರುಳಿದೆ.

ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ನಡೆಯುತ್ತಿರುವ ಹಲವೆಡೆ ಮಳೆ ನೀರಿನೊಂದಿಗೆ ರಸ್ತೆಗೆ ಮಣ್ಣು ಹರಿದು ಬಂದಿದ್ದು, ವಾಹನ ಸವಾರರು ಪರದಾಟ ನಡೆಸುವಂತಾಯಿತು.

ಅಯಿತ್ತಲದಲ್ಲಿ ಹಸಿರು ಪ್ರವಾಸೋದ್ಯಮ ಕೇಂದ್ರ

ಕಾಸರಗೋಡು: ಕಾಸರಗೋಡಿನ ಕರಾವಳಿ ಭೂಮಿಯಲ್ಲಿ ಹಸಿರು ವಸಂತ ಈಗ ಕಾಣಿಸಿಕೊಂಡಿವೆ. ಅಲ್ಲಿ ನೈಸರ್ಗಿಕ ಸೌಂದರ್ಯ ಮತ್ತು ಪರಿಸರ ಜಾಗೃತಿ ಜೊತೆಗೆ ತೆರೆದುಕೊಂಡಿದೆ. ನೀಲೇಶ್ವರ ನಗರಸಭೆಯ ಅಯಿತ್ತಲ ಕರಾವಳಿ ಗ್ರಾಮವನ್ನು ಹಸಿರು ಪ್ರವಾಸೋದ್ಯಮ ಕೇಂದ್ರವೆಂದು ಘೋಷಿಸುವುದರೊಂದಿಗೆ ಜಿಲ್ಲೆಯ ಪ್ರವಾಸೋದ್ಯಮ ವಲಯದಲ್ಲಿ ಹೊಸ ಅಧ್ಯಾಯ ಬರೆಯಲಾಗುತ್ತಿದೆ.



ನೀಲೇಶ್ವರ ನದಿಯ ಮುಖಭಾಗದಲ್ಲಿ 27 ಎಕರೆಗಳಷ್ಟು ವಿಸ್ತೀರ್ಣದಲ್ಲಿರುವ ಈ ರಮಣೀಯ ಪ್ರದೇಶವು ಇಂದು ಸ್ವಚ್ಛತೆ ಮತ್ತು ಪರಿಸರ ಸಂರಕ್ಷಣೆಯ ಮಾದರಿಯಾಗಿದೆ. ತ್ಯಾಜ್ಯ ಮುಕ್ತ ಪ್ರವಾಸೋದ್ಯಮದ ಗುರಿಯೊಂದಿಗೆ ಹಸಿರು ಕೇರಳಂ ಮಿಷನ್, ಡಿಟಿಪಿಸಿ ಮತ್ತು ನಗರಸಭೆಯ ಜಂಟಿ ನೇತೃತ್ವದಲ್ಲಿ ಈ ಯೋಜನೆಯನ್ನು ಕಾರ್ಯಗತ ಗೊಳಿಸಲಾಗುತ್ತಿದೆ. ಕಡಲ ತೀರದಲ್ಲಿ ಎಸೆಯಲ್ಪಟ್ಟ ಪ್ಲಾಸ್ಟಿಕ್ ಬಾಟಲಿಗಳನ್ನು ಸಂಗ್ರಹಿಸಿ ತಯಾರಿಸಲಾದ ದೈತ್ಯ ಮೀನಿನ ಮೂರ್ತಿ ನಿರ್ಮಿಸಿರುವುದು ಸಂದರ್ಶಕರಿಗೆ ಕುತೂಹಲ ಮತ್ತು ನಿಖರವಾದ ಅರಿವನ್ನು ನೀಡುತ್ತದೆ.

ಪ್ರವಾಸೋದ್ಯಮ ಇಲಾಖೆಯಿಂದ 1.47 ಕೋಟಿ ರೂಪಾಯಿ ಮೊತ್ತದಿಂದ ಅಯಿತ್ತಲದಲ್ಲಿ ಅತ್ಯಾಧುನಿಕ ಬೀಚ್ ಪಾರ್ಕ್ ನಿರ್ಮಿಸಲು ಸಿದ್ಧತೆಗಳು ಈಗಾಗಲೇ ಪೂರ್ಣಗೊಂಡಿವೆ. ನಗರಸಭೆಯ ಅಧೀನದ 25 ಸೆಂಟ್ಸ್ ಭೂಮಿಯನ್ನು ಡಿಟಿಪಿಸಿಗೆ ಬಿಡುಗಡೆ ಮಾಡುವುದರೊಂದಿಗೆ ಅಭಿವೃದ್ಧಿ ಕಾರ್ಯಗಳು ವೇಗಗೊಳ್ಳಲಿವೆ.

ಪ್ರಮುಖ ಹಬ್ಬಗಳ ಸಮಯದಲ್ಲಿ 5000 ಕ್ಕೂ ಹೆಚ್ಚು ಪ್ರವಾಸಿಗರು ಭೇಟಿ ನೀಡುವ ಇಲ್ಲಿ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಕರಾವಳಿ ಪೊಲೀಸ್ ಠಾಣೆಯೂ ಸಕ್ರಿಯವಾಗಿದೆ. ಡಿಟಿಪಿಸಿ ನೇಮಿಸಿದ ವಿಶೇಷ ಶುಚಿ ಗೊಳಿಸುವ ಕಾರ್ಯಕರ್ತರು ಪ್ರತಿದಿನ ಕಡಲ ತೀರವನ್ನು ಸ್ವಚ್ಛವಾಗಿಡುತ್ತಾರೆ. ಅಯಿತ್ತಲವನ್ನು ಹೊರತುಪಡಿಸಿ ಬೇಕಲ, ಪಳ್ಳಿಕೆರೆ, ಕಾಞಂಗಾಡ್ ಕೈಟ್ ಬೀಚ್, ರಾಣಿಪುರಂ, ವಲಿಯಪರಂಬದಂತಹ ಜಿಲ್ಲೆಯ ಎಲ್ಲಾ ಪ್ರಮುಖ ಕೇಂದ್ರಗಳನ್ನು ಮಾಲಿನ್ಯ ಮುಕ್ತಗೊಳಿಸಲಾಗಿದೆ ಮತ್ತು ಹಸಿರು ಸ್ಥಾನಮಾನಕ್ಕೆ ಮೇಲ್ದರ್ಜೆಗೇರಿಸಲಾಗಿದೆ. ಸುಸ್ಥಿರ ಪ್ರವಾಸೋದ್ಯಮದ ಈ ಹೊಸ ಮಾದರಿಯು ಕೇರಳದ ಇತರ ಪ್ರವಾಸೋದ್ಯಮ ಕೇಂದ್ರಗಳಿಗೆ ಮಾರ್ಗದರ್ಶಿಯಾಗುತ್ತಿದೆ.

ಆಳ್ವಾಸ್ ಕಾಲೇಜ್ ಆಫ್ ನರ್ಸಿಂಗ್‌ನಲ್ಲಿ ಅಂತಾರಾಷ್ಟ್ರೀಯ ದಾದಿಯರ ದಿನಾಚರಣೆ

ಮೂಡುಬಿದಿರೆ: ರೋಗಿಗಳ ನೋವನ್ನು ಹಂಚಿಕೊಂಡು, ಅವರಿಗೆ ಮಾನಸಿಕ ಧೈರ್ಯ ನೀಡುವುದು ಹಾಗೂ ಚಿಕಿತ್ಸಾ ಪ್ರಕ್ರಿಯೆಯಲ್ಲಿ ನಿರಂತರ ಬೆಂಬಲ ನೀಡುವುದು ದಾದಿಯರ ಪ್ರಮುಖ ಕರ್ತವ್ಯ ಎಂದು ಕಾರ್ಕಳ ತಾಲೂಕು ಆಸ್ಪತ್ರೆಯ ನರ್ಸಿಂಗ್ ಅಧೀಕ್ಷಕಿ ಕಮಲಾ ಪಿ.ಜೆ. ನುಡಿದರು.

ಅವರು ಆಳ್ವಾಸ್ ಹೆಲ್ತ್ ಸೆಂಟರ್ ಹಾಗೂ ಕಾಲೇಜ್ ಆಫ್ ನರ್ಸಿಂಗ್ ಸಹಯೋಗದಲ್ಲಿ ನಡೆದ ಅಂತಾರಾಷ್ಟ್ರೀಯರ ದಾದಿಯರ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದರು.



ನರ್ಸಿಂಗ್ ಸಿಬ್ಬಂದಿ ಸದಾ ಕರುಣೆ, ಸಹಾನುಭೂತಿ ಮತ್ತು ಶಿಸ್ತಿನೊಂದಿಗೆ ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕು. ನರ್ಸಿಂಗ್ ವೃತ್ತಿಯು ಅತ್ಯಂತ ಶ್ರೇಷ್ಠ ಹಾಗೂ ಮಾನವೀಯ ಸೇವೆಯ ವೃತ್ತಿಯಾಗಿದ್ದು, ಪ್ರತಿಯೊಬ್ಬ ದಾದಿಯರು ತಮ್ಮ ವೃತ್ತಿಯನ್ನು ಗೌರವದಿಂದ ನಿರ್ವಹಿಸಬೇಕು ಎಂದು ತಿಳಿಸಿದರು.

ಆಳ್ವಾಸ್ ಹೆಲ್ತ್ ಸೆಂಟರ್‌ನ ನರ್ಸಿಂಗ್ ಅಧೀಕ್ಷಕಿ ಜುಲೇಖಾ ಖಾನ್ ಮಾತನಾಡಿ, ಭಾರತದಲ್ಲಿ ನರ್ಸಿಂಗ್ ಕ್ಷೇತ್ರವು ಕಳೆದ ಹಲವು ವರ್ಷಗಳಲ್ಲಿ ಬಹುಬೇಡಿಕೆಯ ವೃತ್ತಿಯಾಗಿದ್ದು, ಆಧುನಿಕ ಆರೋಗ್ಯ ಸೇವಾ ವ್ಯವಸ್ಥೆಯಲ್ಲಿ ನರ್ಸಿಂಗ್ ವೃತ್ತಿಗೆ ಹೆಚ್ಚಿನ ಗೌರವ ಮತ್ತು ಬೇಡಿಕೆ ಇದೆ. ವಿದೇಶಗಳಲ್ಲಿಯೂ ಭಾರತೀಯ ನರ್ಸಿಂಗ್ ವೃತ್ತಿಪರರಿಗೆ ಹೆಚ್ಚಿನ ಬೇಡಿಕೆ ಇದ್ದು, ಅಮೆರಿಕ, ಕೆನಡಾ, ಆಸ್ಟ್ರೇಲಿಯಾ, ಯುಕೆ ಹಾಗೂ ಮಧ್ಯಪ್ರಾಚ್ಯ ದೇಶಗಳಲ್ಲಿ ಭಾರತೀಯ ದಾದಿಯರು ತಮ್ಮ ಸೇವಾ ಮನೋಭಾವ, ಶಿಸ್ತು ಮತ್ತು ವೃತ್ತಿಪರತೆಯಿಂದ ಉತ್ತಮ ಹೆಸರು ಗಳಿಸಿದ್ದಾರೆ ಎಂದು ಹೇಳಿದರು. ಉತ್ತಮ ಶಿಕ್ಷಣ, ಭಾಷಾ ಕೌಶಲ್ಯ ಹಾಗೂ ವೃತ್ತಿಪರ ನೈಪುಣ್ಯ ಹೊಂದಿರುವ ನರ್ಸಿಂಗ್ ವಿದ್ಯಾರ್ಥಿಗಳು ವಿಶ್ವದ ಯಾವುದೇ ಭಾಗದಲ್ಲಿ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಬಹುದು ಎಂದು ತಿಳಿಸಿದರು.

ಸಭಾ ಕಾರ್ಯಕ್ರಮದ ಬಳಿಕ ನರ್ಸಿಂಗ್ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಮನರಂಜನಾ ಆಟಗಳನ್ನು ಆಯೋಜಿಸಲಾಗಿತ್ತು.

ಕಾರ್ಕಳ ತಾಲೂಕು ಆಸ್ಪತ್ರೆಯ ನರ್ಸಿಂಗ್ ಅಧೀಕ್ಷಕಿ ಕಮಲಾ ಪಿ.ಜೆ. ಆಳ್ವಾಸ್ ಹೆಲ್ತ್ ಸೆಂಟರ್‌ನ ಹಿರಿಯ ಶುಶ್ರೂಷಿ ಪುಷ್ಪ ರೈಯವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮವನ್ನು ಅಲೆಕ್ಸಿಯಾ ಡಿಸೋಜಾ, ಅರಂಟಾ ರೇನು ನಿರೂಪಿಸಿ, ನಿಕ್ಸಿ ಎನ್‌ಎಮ್ ವಂದಿಸಿದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಡಾ. ಹನ ಶೆಟ್ಟಿ, ಆಳ್ವಾಸ್ ಕಾಲೇಜ್ ಆಫ್ ನರ್ಸಿಂಗ್‌ನ ಪ್ರಾಚಾರ್ಯ ಡಾ. ಯತಿಕುಮಾರಸ್ವಾಮಿ ಗೌಡ ಇದ್ದರು.

ಶಾರ್ಜಾದಲ್ಲಿ ಹೆಲ್ತ್‌ಕೇರ್ ಸಿಟಿಯಲ್ಲಿ ಮೊದಲ ಮಾನಸಿಕ ಆರೋಗ್ಯ ಆಸ್ಪತ್ರೆ ನಿರ್ಮಾಣಕ್ಕೆ ತುಂಬೆ ಗ್ರೂಪ್ ಚಾಲನೆ

ಮಂಗಳೂರು: ಯುಎಇಯ ಶಾರ್ಜಾ ಹೆಲ್ತ್‌ಕೇರ್ ಸಿಟಿಯಲ್ಲಿ ಮೊದಲ ಖಾಸಗಿ ಸಮಗ್ರ ಮಾನಸಿಕ ಆರೋಗ್ಯ ಮತ್ತು ಪುನರ್ವಸತಿ ಆಸ್ಪತ್ರೆ ನಿರ್ಮಾಣಕ್ಕೆ ತುಂಬೆ ಗ್ರೂಪ್ ಭೂಮಿ ಪೂಜೆ ನೆರವೇರಿಸಿದೆ. ತುಂಬೆ ಸೈಕಿಯಾಟ್ರಿಕ್ ಅಂಡ್ ರಿಹ್ಯಾಬಿಲಿಟೇಶನ್ ಹಾಸ್ಪಿಟಲ್ ಹೆಸರಿನ ಈ ಮಹತ್ವಾಕಾಂಕ್ಷಿ ಯೋಜನೆ 1,10,000 ಚದರ ಅಡಿ ವಿಸ್ತೀರ್ಣದಲ್ಲಿ ನಿರ್ಮಾಣವಾಗಲಿದ್ದು, 120 ಹಾಸಿಗೆಗಳ ಸೌಲಭ್ಯವನ್ನು ಹೊಂದಿರಲಿದೆ.

ಶಾರ್ಜಾ ಎಕ್ಸಿಕ್ಯೂಟಿವ್ ಕೌನ್ಸಿಲ್ ಸದಸ್ಯರು ಹಾಗೂ ಶಾರ್ಜಾ ಹೆಲ್ತ್ ಅಥಾರಿಟಿ ಮತ್ತು ಶಾರ್ಜಾ ಹೆಲ್ತ್‌ಕೇರ್ ಸಿಟಿ ಅಧ್ಯಕ್ಷ ಎಚ್.ಇ. ಡಾ. ಅಬ್ದುಲ್ ಅಜೀಜ್ ಸಯೀದ್‌ಅಲ್ ಮೆಹೈರಿ ಅವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ತುಂಬೆ ಗ್ರೂಪ್ ಸ್ಥಾಪಕ ಅಧ್ಯಕ್ಷ ಡಾ. ತುಂಬೆ ಮೊಯ್ದೀನ್ ಉಪಸ್ಥಿತರಿದ್ದರು.

ಯುಎಇ ಹಾಗೂ ಗಲ್ಫ್ ರಾಷ್ಟ್ರಗಳಲ್ಲಿ ಹೆಚ್ಚುತ್ತಿರುವ ಮಾನಸಿಕ ಆರೋಗ್ಯ ಮತ್ತು ಪುನರ್ವಸತಿ ಸೇವೆಗಳ ಅಗತ್ಯವನ್ನು ಗಮನದಲ್ಲಿಟ್ಟುಕೊಂಡು ಈ ಆಸ್ಪತ್ರೆಯನ್ನು ನಿರ್ಮಿಸಲಾಗುತ್ತಿದೆ. ಇದುವರೆಗೆ ವಿಶೇಷ ಚಿಕಿತ್ಸೆಗಾಗಿ ವಿದೇಶಗಳಿಗೆ ತೆರಳಬೇಕಾಗಿದ್ದ ಅನೇಕ ರೋಗಿಗಳಿಗೆ ಈಗ ಸ್ಥಳೀಯ ಮಟ್ಟದಲ್ಲೇ ಅತ್ಯಾಧುನಿಕ ಸೇವೆಗಳು ದೊರೆಯಲಿವೆ. ಆಸ್ಪತ್ರೆಯಲ್ಲಿ ಮಾನಸಿಕ ಆರೋಗ್ಯ ಚಿಕಿತ್ಸೆ, ನ್ಯೂರೋ-ರಿಹ್ಯಾಬಿಲಿಟೇಶನ್, ವ್ಯಸನಮುಕ್ತ ಚಿಕಿತ್ಸೆ, ಮಕ್ಕಳ ಮತ್ತು ಕಿಶೋರರ ಮಾನಸಿಕ ಆರೋಗ್ಯ ಸೇವೆಗಳು, ಮನೋಭಾವ ಮತ್ತು ಆತಂಕ ಸಂಬಂಧಿತ ಚಿಕಿತ್ಸಾ ವಿಭಾಗಗಳು ಕಾರ್ಯನಿರ್ವಹಿಸಲಿವೆ. ದೀರ್ಘಕಾಲೀನ ಚಿಕಿತ್ಸೆ ಮತ್ತು ಗೌಪ್ಯತೆಗೆ ವಿಶೇಷ ಆದ್ಯತೆ ನೀಡಲಾಗಿದ್ದು, ವಿಐಪಿ ಇನ್‌ಪೇಷೆಂಟ್ ವಿಲ್ಲಾಗಳನ್ನೂ ನಿರ್ಮಿಸಲಾಗುತ್ತಿದೆ. ಸಾರ್ವಜನಿಕರ ಉಪಯೋಗಕ್ಕಾಗಿ 'ತುಂಬೆ ಮಸೀದಿ'ಯನ್ನೂ ನಿರ್ಮಿಸಲಾಗುತ್ತಿದೆ. ಜೂನ್ ತಿಂಗಳಲ್ಲಿ ಕಾಮಗಾರಿ ಆರಂಭಗೊಳ್ಳಲಿದ್ದು, 2027ರ ಮಧ್ಯಭಾಗದಲ್ಲಿ ಆಸ್ಪತ್ರೆ ಸೇವೆಗೆ ಸಿದ್ಧವಾಗುವ ನಿರೀಕ್ಷೆಯಿದೆ.



> **ಗೌರವಯುತ ಚಿಕಿತ್ಸಾ ಸೇವೆ**
> **ಮೂರು ದಶಕಗಳಿಗೂ ಹೆಚ್ಚು ಕಾಲ ಆರೋಗ್ಯಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ನಾವು, ಹೆಚ್ಚುತ್ತಿರುವ ಮಾನಸಿಕ ಆರೋಗ್ಯ ಸಮಸ್ಯೆಗಳತ್ತ ಹೆಚ್ಚಿನ ಗಮನ ಹರಿಸಿದ್ದೇವೆ. ಈ ಆಸ್ಪತ್ರೆ ಹಲವು ಕುಟುಂಬಗಳಿಗೆ ವಿಶ್ವಾಸಾರ್ಹ ಮತ್ತು ಗೌರವಯುತ ಚಿಕಿತ್ಸಾ ಸೇವೆಗಳನ್ನು ಒದಗಿಸಲಿದೆ**
> ■ **ಡಾ. ತುಂಬೆ ಮೊಯ್ದೀನ್,**
> **ತುಂಬೆ ಗ್ರೂಪ್ ಸ್ಥಾಪಕ ಅಧ್ಯಕ್ಷ**

ತೋಟದಲ್ಲಿ ಕಣಜದ ಹುಳು ದಾಳಿ: ಶಿಕ್ಷಕ ಮೃತ್ಯು; ಕಾರ್ಮಿಕರಿಗೆ ಗಾಯ



ಕಾಸರಗೋಡು: ಕೃಷಿ ತೋಟದ ಪೊದೆಗಳನ್ನು ಕಡಿಯುತ್ತಿದ್ದ ವೇಳೆ ಕಣಜದ ಹುಳುಗಳ ದಾಳಿಗೊಳಗಾಗಿ ಅಧ್ಯಾಪಕ ಮೃತಪಟ್ಟು ನಾಲ್ವರು ಗಾಯಗೊಂಡಘಟನೆ ಚಾಮುಂಡಿ ಕುನ್ನುನಲ್ಲಿ ಬುಧವಾರ ನಡೆದಿದೆ.

ಪನತ್ತಡಿ ಸರಕಾರಿ ಹೈಯರ್ ಸೆಕೆಂಡರಿ ಶಾಲೆಯ ಅಧ್ಯಾಪಕ ರಾಜಪುರಕ್ಕೆ ಸಮೀಪದ ಬಳಾಂತೋಡು ಚಾಮುಂಡಿಕುನ್ನು ನಿವಾಸಿ ಸಿ.ವಿಜಯಕುಮಾರ್ (56) ಸಾವನ್ನಪ್ಪಿದ ದುರ್ದೈವಿ. ಈ ವೇಳೆ ಅವರ ಜೊತೆಗಿದ್ದ ಕಾರ್ಮಿಕರಾದ ತುಂಬೋಡಿ ನಿವಾಸಿಗಳಾದ ನಂದಕುಮಾರ್ (41), ರಾಘವನ್ (70), ಕೇಶವನ್ (57) ಮತ್ತು ಚಂದ್ರನ್ (50) ಎಂಬವರ ಮೇಲೂ ಕಣಜದ ಹುಳ ದಾಳಿ ನಡೆಸಿದ ಪರಿಣಾಮ ಅವರೂ ಗಾಯಗೊಂಡರು.

ವಿಜಯಕುಮಾರ್ ತಮ್ಮ ಕೃಷಿ ತೋಟದಲ್ಲಿ ಇತರ ಕಾರ್ಮಿಕರೊಂದಿಗೆ ತೆರಳಿ ಪೊದೆಗಳನ್ನು ಕಡಿದು ಶುಚಿ ಕರಿಸುವ ಕೆಲಸದಲ್ಲಿ ತೊಡಗಿದಾಗ ಕಣಜದ ಹುಳುಗಳು ದಾಳಿ ನಡೆಸಿವೆ. ತಕ್ಷಣ ಅವರನ್ನು ಬಂದಡ್ಕದ ಖಾಸಗಿ ಆಸ್ಪತ್ರೆಗೆ ಸಾಗಿಸಿದರೂ ಪ್ರಾಣ ಉಳಿಸಲು ಸಾಧ್ಯವಾಗಲಿಲ್ಲ. ವಿಜಯಕುಮಾರ್ ಮೇ ತಿಂಗಳ 31ರಂದು ಅಧ್ಯಾಪಕ ಸೇವೆಯಿಂದ ನಿವೃತ್ತರಾಗಲಿದ್ದರು ಅದಕ್ಕೂ ಮುನ್ನ ಸಾವು ಸಂಭವಿಸಿದೆ.

ಮೃತದೇಹವನ್ನು ಕಾಸರಗೋಡು ಜನರಲ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆಗೊಳಪಡಿಸಲಾಯಿತು. ದಿ.ಚಂದ್ರಶೇಖರನ್ ನಾಯರ್ ಮತ್ತು ರತ್ನಮ್ಮ ದಂಪತಿಯ ಪುತ್ರನಾದ ಮೃತರು ಪತ್ನಿ ಶ್ರೀಜಾ, ಮಕ್ಕಳಾದ ಅಂಜನಾ ಅಖಿಲ್, ವಿಷ್ಣು ವಿಜಯನ್ ಅವರನ್ನು ಅಗಲಿದ್ದಾರೆ.

ಯುವಮೋರ್ಚಾದಿಂದ ಉಸ್ತುವಾರಿ ಸಚಿವೆಗೆ ಕಪ್ಪುಬಾವುಟ

ಸರಕಾರದಿಂದ ಉಡುಪಿ ಜಿಲ್ಲೆ ನಿರ್ಲಕ್ಷ್ಯ

ಉಡುಪಿ: ಉಡುಪಿ ಜಿಲ್ಲೆಯನ್ನು ನಿರ್ಲಕ್ಷ್ಯ ಮಾಡುತ್ತಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ಧೋರಣೆಯನ್ನು ಖಂಡಿಸಿ ಮೇ 16ರಂದು ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರಿಗೆ ಕಪ್ಪು ಬಾವುಟ ಪ್ರದರ್ಶಿಸಿ ಪ್ರತಿಭಟನೆ ನಡೆಸಲಾಗುವುದು ಎಂದು ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಪೃಥ್ವಿರಾಜ್ ಶೆಟ್ಟಿ ಬಿಲ್ಲಾಡಿ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 2023 ರಲ್ಲಿ ಅಧಿಕಾರಕ್ಕೆ ಬಂದ ದಿನದಿಂದ ಉಡುಪಿ ಜಿಲ್ಲೆಯ ಅಭಿವೃದ್ಧಿಯಲ್ಲಿ ಮಲತಾಯಿ ಧೋರಣೆ ತೋರಿ ಉಡುಪಿ ಜಿಲ್ಲೆಯ ಜನರಿಗೆ ಅನ್ಯಾಯ ಮಾಡುತ್ತಿದೆ.

2013ರಲ್ಲಿ ಉಡುಪಿ ನಗರ ಭಾಗಕ್ಕೆ ಆರಂಭಗೊಂಡ ನರ್ಮ ಬಸ್ ಯೋಜನೆಯಲ್ಲಿ 40 ಕ್ಕೂ ಹೆಚ್ಚು ಬಸ್ಸುಗಳು ಇದ್ದು ಇಂದು ಸರ್ಕಾರ ಗ್ಯಾರಂಟಿ ಯೋಜನೆ ಅಡಿ ಉಚಿತ ಮಹಿಳೆಯರಿಗೆ ಉಚಿತ ಪ್ರಯಾಣ ನೀಡಿ ಶೇಕಡ 50 ಬಸ್ ಗಳನ್ನು ಕಡಿತಗೊಳಿಸಿದೆ. ಉಡುಪಿ ಜಿಲ್ಲಾ ಆಸ್ಪತ್ರೆ ಕಾಮಗಾರಿ ಪೂರ್ಣಗೊಳಿಸದೆ ಜಿಲ್ಲೆಯ ಬಡ ರೋಗಿಗಳ ಜೀವದೊಂದಿಗೆ ರಾಜ್ಯ ಕಾಂಗ್ರೆಸ್ ಸರ್ಕಾರ ಆಟವಾಡುತ್ತಿದೆ. ಉಡುಪಿಯ ಪರ್ಯಾಯಕ್ಕೆ ಅನುದಾನ ನೀಡುವ ಭರವಸೆಯನ್ನು ನೀಡಿ ನಂತರ ಬಿಡಿಗಾಸು ನೀಡದೆ ಹಿಂದೂ ಸಮಾಜಕ್ಕೆ ಅನ್ಯಾಯ ಮಾಡಿದೆ. ಕಂದಾಯ ಇಲಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಭೂಮಾಪಕರ ಬಹುಕಾಲದ ಬೇಡಿಕೆಯನ್ನು ಈಡೇರಿಸದೆ ಸತತ ಎರಡು ತಿಂಗಳುಗಳಿಂದ ಭೂಮಾಪಕರು ಮುಷ್ಕರ ನಡೆಸುತ್ತಿದ್ದು, ಜನರಿಗೆ ಅನ್ಯಾಯವಾಗುತ್ತಿದ್ದರೂ ಜಾಣ ಕುರುಡುತನ ಪ್ರದರ್ಶಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಉಡುಪಿ ಜಿಲ್ಲೆಯನ್ನು ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ದಿನದಿಂದ ನಿರ್ಲಕ್ಷಿಸುತ್ತ ಬಂದಿದ್ದು ಎಲ್ಲ ಸಮಸ್ಯೆಗಳನ್ನು ಸರಿಪಡಿಸುವಂತೆ ಆಗ್ರಹಿಸಿ ಮೇ.16ರಂದು ಬೆಳಿಗ್ಗೆ 10 ಗಂಟೆಗೆ ಉಡುಪಿ ಜಿಲ್ಲಾಧಿಕಾರಿ ಕಚೇರಿ ಎದುರು ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರಿಗೆ ಬಿಜೆಪಿ ಯುವ ಮೋರ್ಚಾ ಉಡುಪಿ ಜಿಲ್ಲೆ ನೇತೃತ್ವದಲ್ಲಿ ಕಪ್ಪು ಬಾವುಟ ಪ್ರದರ್ಶಿಸಿ ಪ್ರತಿಭಟಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಯುವಮೋರ್ಚಾದ ರಾಜ್ಯ ಕಾರ್ಯದರ್ಶಿ ವಿಖ್ಯಾತ್ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ಅಭಿರಾಜ್ ಸುವರ್ಣ ಮೊದಲಾದವು ಉಪಸ್ಥಿತರಿದ್ದರು.

ದಿವಂಗತ ನಂದಳಿಕೆ ಬಾಲಚಂದ್ರ ರಾವ್ ಮೊದಲ ವರ್ಷದ ಪುಣ್ಯಸ್ಮರಣೆ

ವಿಶೇಷ ಅಂಚೆ ಲಕೋಟೆ ಬಿಡುಗಡೆ

ಮಂಗಳೂರು: ಭಾರತೀಯ ಅಂಚೆ ಇಲಾಖೆಯ ಪುತ್ತೂರು ವಿಭಾಗದಡಿಯಲ್ಲಿ ನಂದಳಿಕೆ ಬಾಲಚಂದ್ರ ರಾವ್ ಅವರ ಮೊದಲ ವರ್ಷದ ಪುಣ್ಯಸ್ಮರಣೆಯ ಅಂಗವಾಗಿ ವಿಶೇಷ ಅಂಚೆ ಲಕೋಟೆ ಬಿಡುಗಡೆಯ ಕಾರ್ಯಕ್ರಮವನ್ನು ಮಂಗಳೂರು ಆರ್.ಎಂ.ಎಸ್. ವಿಭಾಗೀಯ ಕಚೇರಿಯಲ್ಲಿ ಗುರುವಾರ ಆಯೋಜಿಸಲಾಯಿತು.

ಸಮಾಜ ಸುಧಾರಕರಾಗಿದ್ದುಕೊಂಡು, ಕನ್ನಡ ಸಾಹಿತ್ಯ ಲೋಕದಲ್ಲಿ ಅವಿರತ ಸೇವೆಯನ್ನು ಮಾಡಿ, ತನ್ನದೇ ಛಾಪು ಮೂಡಿಸಿದ ದಿವಂಗತ ನಂದಳಿಕೆ ಬಾಲಚಂದ್ರ ರಾವ್ ಅವರ ಪ್ರಥಮ ಆಬ್ದಿಕದ ಸಂದರ್ಭದಲ್ಲಿ ಈ ವಿಶಿಷ್ಟ ಸಂಸ್ಮರಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ದಿವಂಗತರು ಸಾಧಿಸಿದ ವಿವಿಧ ಸಾಮಾಜಿಕ ಅಭಿವೃದ್ಧಿ ಹಾಗೂ ಕನ್ನಡ ಸಾಹಿತ್ಯ ಕಣ್ಮಣಿ ಕವಿ ಮುದ್ದಣನ ನೆನಪಲ್ಲಿ ಮಾಡಿದ ಸಾರಸ್ವತ ಸೇವೆಯ ನೆನಪಿನಲ್ಲಿ ವಿಶೇಷ ಅಂಚೆ ಲಕೋಟೆಯನ್ನು ಅವರ ಪತ್ನಿ ಎನ್. ವಿಜಯಲಕ್ಷ್ಮಿ ಬಿ.ರಾವ್ ಅವರ ಪ್ರಾಯೋಜಕತ್ವದಲ್ಲಿ ಪುತ್ತೂರು ಅಂಚೆ ವಿಭಾಗದ ಸಹಯೋಗದೊಂದಿಗೆ ಬಿಡುಗಡೆಗೊಳಿಸಲಾಯಿತು. ಮುಖ್ಯ ಅತಿಥಿಗಳಾಗಿ ಸಾಹಿತಿ ಡಾ. ಬಿ.ಎ. ವಿವೇಕ್ ರೈ, ಮಾಜಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹರಿಕೃಷ್ಣ ಪುನರೂರು ಹಾಗೂ ವಿದ್ವಾಂಸ ಡಾ. ಪ್ರಭಾಕರ ಜೋಶಿ ಭಾಗವಹಿಸಿದ್ದರು.



ಮಂಗಳೂರು ಆರ್.ಎಂ.ಎಸ್ (ಕ್ಯೂ) ವಿಭಾಗದ ಸಹಾಯಕ ಅಧೀಕ್ಷಕರಾದ ಮೆಲ್ವಿನ್ ಅರುಣ್ ಲೋಬೋ, ಪುತ್ತೂರು ವಿಭಾಗೀಯ ಸಹಾಯಕ ಅಂಚೆ ಅಧೀಕ್ಷಕ ಚಂದ್ರ ನಾಯ್ಕ ಎಂ. ಫಿಲಾಟೆಲಿಯ ಮಹತ್ವವನ್ನು ವಿವರಿಸಿದರು. ದಿವಂಗತರ ಪುತ್ರಿ ಸೌಜನ್ಯ ರಾವ್ ನಂದಳಿಕೆ ಅವರ ಪ್ರಾರ್ಥನೆ, ಉದಯೇಶ್ ಕೆದಿಲಾಯ ಅವರಿಂದ ಕಾರ್ಯಕ್ರಮ ನಿರೂಪಣೆ ನಡೆಯಿತು. ಎನ್. ವಿಜಯಲಕ್ಷ್ಮಿ ಬಿ. ರಾವ್ ಧನ್ಯವಾದ ಸಮರ್ಪಣೆಗೈದರು.

ಮಂಗಳೂರು ಪ್ರಧಾನ ಅಂಚೆ ಕಚೇರಿಯ ಸಹಾಯಕ ಅಂಚೆ ಪಾಲಕರು, ಪುತ್ತೂರು ವಿಭಾಗದ ನೌಕರರು, ಆರ್‌ಎಂಎಸ್ ನೌಕರರು, ದಿವಂಗತರ ಬಂಧುಗಳು ಭಾಗವಹಿಸಿದ್ದರು.

ಮಂಗಳೂರು
ಶುಕ್ರವಾರ, 15 ಮೇ 2026
ಸಂಪುಟ 48, ಸಂಚಿಕೆ 57, ಪುಟಗಳು 12+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಹೊಸಬಾಳೆ ನಿಲುವಿಗೆ ನರಾವಣೆ ಸಹಮತ | ೦೭
ಹರಿಯಾಣ: ಬಿಜೆಪಿ ಗೆಲುವು | ೦೭
ಇಂದಿನಿಂದ ಪ್ರಧಾನಿ 5 ರಾಷ್ಟ್ರಗಳ ಪ್ರವಾಸ | ೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋದಶಿ ಉಪರಿ ಚತುರ್ದಶಿ, ನಕ್ಷತ್ರ: ಅಶ್ವಿನಿ

ದಿನದ ಮಾತು

ಸಜ್ಜನರ ದರ್ಶನ ಒಳ್ಳೆಯದು. ಅವರ ಹಿತೋಪದೇಶ ಕೇಳುವುದು ಇನ್ನೂ ಒಳ್ಳೆಯದು.
▲ ನೀತಿ ಮಂಜರಿ

ಮೋದಿ ವಿಶ್ವದ ಅತ್ಯಂತ ಜನಪ್ರಿಯ ರಾಜಕಾರಣಿ

ಲೇಖನ
• ಎರಿಕ್ ಸೊಲ್ಹೈಮ್

• ಪುಟ ೬

ಕಿರುಸುದ್ದಿ

ವಿ.ಡಿ. ಸತೀಶನ್ ಕೇರಳದ ನೂತನ ಮುಖ್ಯಮಂತ್ರಿ



• **ತಿರುವನಂತಪುರಂ:** ಕೇರಳದ ನೂತನ ಮುಖ್ಯಮಂತ್ರಿ ಆಯ್ಕೆಗಾಗಿ ಕಳೆದ 10 ದಿನಗಳಿಂದ ನಡೆಯುತ್ತಿದ್ದ ರಾಜಕೀಯ ಪ್ರಹಸನಕ್ಕೆ ಕೊನೆಗೂ ತೆರೆ ಬಿದ್ದಿದ್ದು, ಕಾಂಗ್ರೆಸ್ ಹೈಕಮಾಂಡ್ ವಿ.ಡಿ. ಸತೀಶನ್ ಅವರನ್ನು ಮುಖ್ಯಮಂತ್ರಿ ಸ್ಥಾನದ ಅಭ್ಯರ್ಥಿ ಎಂದು ಘೋಷಿಸಿದೆ.

• ಪುಟ ೭

ಉ.ಪ್ರದೇಶದಲ್ಲಿ ಬಿರುಗಾಳಿ ಮಳೆಗೆ 111 ಜನರು ಬಲಿ

• **ಲಖನೌ:** ಉತ್ತರ ಪ್ರದೇಶದ ಹಲವಾರು ಜಿಲ್ಲೆಗಳಲ್ಲಿ ಬುಧವಾರ ಸಂಜೆ ಸಂಭವಿಸಿದ ಭೀಕರ ಬಿರುಗಾಳಿ, ಗುಡುಗು ಸಹಿತ ಮಳೆ ಮತ್ತು ಸಿಡಿಲಿನ ಅಬ್ಬರಕ್ಕೆ ಕನಿಷ್ಠ 111 ಜನರು ಬಲಿಯಾಗಿದ್ದು, 72 ಮಂದಿ ಗಾಯಗೊಂಡಿದ್ದಾರೆ. ಬುಧವಾರ ಕಂಡುಬಂದ ಹವಾಮಾನ ವೈಪರೀತ್ಯದಿಂದ ರಾಜ್ಯಾದ್ಯಂತ 227 ಮನೆಗಳು ಜಖಂಗೊಂಡಿದ್ದು, 170 ಜಾನುವಾರುಗಳು ಮೃತಪಟ್ಟಿವೆ ಎಂದು ಪರಿಹಾರ ಆಯುಕ್ತರ ಕಚೇರಿ ಗುರುವಾರ ತಿಳಿಸಿದೆ.

• ಪುಟ ೭

ಪರವಾನಗಿ ಇದೆಯೇ?: ಮಮತಾಗೆ ಬಾರ್ ಕೌನ್ಸಿಲ್

• ಪುಟ ೭

ಪಳನಿಸ್ವಾಮಿ ಸೇರಿ 22 ಶಾಸಕರ ಅನರ್ಹತೆಗೆ ಆಗ್ರಹ

• ಪುಟ ೭

ಹಿಜಾಬ್ ನಿಷೇಧ ವಾಪಸ್ ಸರಿಯಲ್ಲ: ಬಿಜೆಪಿ

• ಪುಟ ೫



ಕ್ಸಿ-ಟ್ರಂಪ್ ಬೀಜಿಂಗ್ ಶೃಂಗ: ತೈವಾನ್ ವಿಚಾರ ರಣರಂಗ


• ಪುಟ ೮

ಸುದ್ದಿ ಸಮಗ್ರ

ಮೋದಿ ಆರಂಭಿಸಿದ ಇಂಧನ ಉಳಿತಾಯ ಅಭಿಯಾನಕ್ಕೆ ವೇಗ

ದೇಶವ್ಯಾಪಿ ಮಿತವ್ಯಯ

- ಸಚಿವರ ಸೈಕಲ್ ಸವಾರಿ, ನಡೆದು ಕಚೇರಿಗೆ; ಮೆಟ್ರೋ ಬಳಕೆ
- ಬೆಂಗಾವಲು ವಾಹನ ಕಡಿತ, ವರ್ಕ್ ಫ್ರಂ ಹೋಮ್ ಕ್ರಮ ಜಾರಿ
- ಜನಪ್ರತಿನಿಧಿಗಳಿಗೆ ಸಾಥ್ ನೀಡಿದ ಅಧಿಕಾರಿಗಳು, ಜನತೆ



• **ಹೊಸದಿಲ್ಲಿ:** ಪಶ್ಚಿಮ ಏಷ್ಯಾದ ಯುದ್ಧ ಪರಿಸ್ಥಿತಿಯಿಂದ ಜಾಗತಿಕ ಇಂಧನ ಪೂರೈಕೆಯಲ್ಲಿ ಉಂಟಾದ ಅಸ್ಥಿರತೆಯ ನಡುವೆ ಪೆಟ್ರೋಲ್-ಡೀಸೆಲ್ ಉಳಿತಾಯ ಮತ್ತು ವಿದೇಶಿ ವಿನಿಮಯ ಸಂರಕ್ಷಣೆಗೆ ಪ್ರಧಾನಿ ನರೇಂದ್ರ ಮೋದಿ ನೀಡಿದ ಕರೆಗೆ ದೇಶದ ವಿವಿಧ ರಾಜ್ಯಗಳಲ್ಲಿ ಗುರುವಾರ ಭಾರೀ ಸ್ಪಂದನೆ ವ್ಯಕ್ತವಾಯಿತು. ಮಂತ್ರಿಗಳು, ರಾಜ್ಯಪಾಲರು, ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಸೈಕಲ್ ಸವಾರಿ, ನಡೆದು ಕಚೇರಿಗೆ ತೆರಳುವುದು, ಸಾರ್ವಜನಿಕ ಸಾರಿಗೆ ಬಳಸುವುದು, ಅಧಿಕೃತ ಬೆಂಗಾವಲು ವಾಹನಗಳ ಕಡಿತಗೊಳಿಸುವುದು ಹಾಗೂ ವರ್ಕ್ ಫ್ರಂ ಹೋಮ್ ವ್ಯವಸ್ಥೆ ಜಾರಿಗೊಳಿಸುವಂತಹ ಕ್ರಮಗಳನ್ನು ಕೈಗೊಂಡರು.

ಉತ್ತರ ಪ್ರದೇಶದಲ್ಲಿ ಹಲವು ಸಚಿವರು ಮತ್ತು ಹಿರಿಯ ಅಧಿಕಾರಿಗಳು ಪರಿಸರ ಸ್ನೇಹಿ ಸಂಚಾರಕ್ಕೆ ಉತ್ತೇಜನ ನೀಡಿದರು.

➡ಪುಟ ೪



ವಿಧಾನ ಭವನಕ್ಕೆ ಬೈಕ್‌ನಲ್ಲಿ ಫಡ್ನವೀಸ್

• **ಮುಂಬೈ:** ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ವಿಧಾನ ಭವನಕ್ಕೆ ಬೈಕ್‌ನಲ್ಲಿ ತೆರಳಿ ಇಂಧನ ಉಳಿತಾಯದ ಸಂದೇಶ ನೀಡಿದರು. ಪ್ರಧಾನಿ ಮೋದಿ ಜನರಿಂದ ಸಣ್ಣ ತ್ಯಾಗ ಮಾತ್ರ ಕೇಳಿದ್ದಾರೆ ಎಂದು ಹೇಳಿದ ಅವರು, ರಾಜ್ಯದಲ್ಲಿ ಸಚಿವ ಬೆಂಗಾವಲು ವಾಹನಗಳ ಕಡಿತ, ಅನಗತ್ಯ ವಿದೇಶ ಪ್ರವಾಸ ರದ್ದು ಹಾಗೂ ಆರು ತಿಂಗಳು ಬೃಹತ್ ಸರ್ಕಾರಿ ಕಾರ್ಯಕ್ರಮಗಳನ್ನು ನಿಲ್ಲಿಸುವ ನಿರ್ಧಾರ ಕೈಗೊಂಡಿರುವುದಾಗಿ ತಿಳಿಸಿದರು.



ಎತ್ತಿನಬಂಡಿಯಲ್ಲಿ ಮದುವೆ ಮೆರವಣಿಗೆ

• **ರಾಯ್ಪುರ:** ಛತ್ತೀಸ್‌ಗಢದ ನಾರಾಯಣಪುರ ಜಿಲ್ಲೆಯ ಪೊಲೀಸ್ ಸಿಬ್ಬಂದಿ ಕುಬೇರ್ ದೇಹರಿ ತಮ್ಮ ಮದುವೆ ಮೆರವಣಿಗೆಯಲ್ಲಿ ವಾಹನಗಳ ಬದಲು ಎತ್ತಿನಬಂಡಿಗಳನ್ನು ಬಳಸುವ ಮೂಲಕ ಗಮನ ಸೆಳೆದಿದ್ದಾರೆ. ಪ್ರಧಾನಿ ಮೋದಿ ಅವರ ಇಂಧನ ಉಳಿತಾಯ ಕರೆಗೆ ಸ್ಪಂದನೆಯಾಗಿ ಈ ಕ್ರಮ ಕೈಗೊಂಡಿದ್ದಾಗಿ ಅವರು ಹೇಳಿದ್ದಾರೆ. ಈ ವಿಶಿಷ್ಟ ಮೆರವಣಿಗೆ ಪರಿಸರ ಸಂರಕ್ಷಣೆ ಹಾಗೂ ಪರಂಪರೆ ಉಳಿವಿನ ಸಂದೇಶ ನೀಡಿದೆ.

ದಿಲ್ಲಿ ಸರ್ಕಾರದಿಂದ ವಾರಕ್ಕೆ 2 ದಿನ ವರ್ಕ್ ಫ್ರಂ ಹೋಮ್

• **ಹೊಸದಿಲ್ಲಿ:** ಪ್ರಧಾನಿ ಮೋದಿ ಅವರ ಇಂಧನ ಉಳಿತಾಯ ಕರೆಗೆ ಸ್ಪಂದಿಸಿದ ದಿಲ್ಲಿ ಮುಖ್ಯಮಂತ್ರಿ ರೇಖಾ ಗುಪ್ತಾ, ಸರ್ಕಾರಿ ಕಚೇರಿಗಳಿಗೆ ವಾರದಲ್ಲಿ ಎರಡು ದಿನ ವರ್ಕ್ ಫ್ರಂ ಹೋಮ್ ಘೋಷಿಸಿದರು. ಪ್ರತಿ ಸೋಮವಾರ ಸಚಿವರು ಮತ್ತು ಅಧಿಕಾರಿಗಳು ಮೆಟ್ರೋ ಬಳಕೆ ಮಾಡಲಿದ್ದು, ವಾರದಲ್ಲಿ ಒಂದು ದಿನ ನೋ ವೆಹಿಕಲ್ ಡೇ ಆಚರಿಸಲು ಕರೆ ನೀಡಲಾಗಿದೆ. ಮುಖ್ಯಮಂತ್ರಿ ಬೆಂಗಾವಲು ವಾಹನಗಳ ಸಂಖ್ಯೆಯಲ್ಲಿ ಶೇ.60ರಷ್ಟು ಕಡಿತಗೊಂಡಿದೆ.

ರಾಜ್ಯಪಾಲರ ಬೆಂಗಾವಲು ಪಡೆ ಗಾತ್ರ ಅರ್ಧಕ್ಕೆ ಇಳಿಕೆ



• **ಬೆಂಗಳೂರು:** ತೈಲ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಇಂಧನ ಉಳಿತಾಯಕ್ಕಾಗಿ ಕರೆ ನೀಡಿರುವುದನ್ನು ಬೆಂಬಲಿಸಿರುವ ಕರ್ನಾಟಕ ರಾಜ್ಯಪಾಲ ಥಾವರಚಂದ್ ಗೆಹಲೋತ್ ಗುರುವಾರ ತಮ್ಮ ಅಧಿಕೃತ ಬೆಂಗಾವಲು ಪಡೆಯ ಗಾತ್ರವನ್ನು ಅರ್ಧದಷ್ಟು ಕಡಿಮೆ ಮಾಡಿದ್ದಾರೆ. ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಹಿನ್ನಲೆಯಲ್ಲಿ ಇಂಧನ ಸಂರಕ್ಷಣೆ ಮತ್ತು ವಿದೇಶಿ ವಿನಿಮಯ ವೆಚ್ಚವನ್ನು ಕಡಿಮೆ ಮಾಡುವ ಪ್ರಧಾನಿಯವರ ಮನವಿಗೆ ಸ್ಪಂದಿಸಿ ರಾಜ್ಯಪಾಲರು ಈ ಕ್ರಮ ಕೈಗೊಂಡಿದ್ದಾರೆ.

---

16 ರಾಜ್ಯ, 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ

ಎಸ್‌ಐಆರ್ 3ನೇ ಹಂತ ಮೇ 30ರಿಂದ ಆರಂಭ



• **ಹೊಸದಿಲ್ಲಿ:** ಬಿಹಾರ ಮತ್ತು ಪಶ್ಚಿಮ ಬಂಗಾಳದಲ್ಲಿ ಭಾರೀ ಸದ್ದು ಮಾಡಿದ್ದ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಮೂರನೇ ಹಂತವನ್ನು ಮೇ 30ರಿಂದ ಆರಂಭಿಸುವುದಾಗಿ ಭಾರತೀಯ ಚುನಾವಣಾ ಆಯೋಗ (ಇಸಿಐ) ಶುಕ್ರವಾರ ಘೋಷಿಸಿದೆ. ಇದರಲ್ಲಿ ಕರ್ನಾಟಕ ಸೇರಿದಂತೆ ಒಟ್ಟು 16 ರಾಜ್ಯಗಳು ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳ 36.73 ಕೋಟಿ ಮತದಾರರು ಒಳಗೊಂಡಿದ್ದಾರೆ.

ದಿಲ್ಲಿ, ಒಡಿಶಾ, ಮಿಜೋರಾಂ, ಸಿಕ್ಕಿಂ, ಮಣಿಪುರ, ಉತ್ತರಾಖಂಡ, ಆಂಧ್ರ, ಅರುಣಾಚಲ ಪ್ರದೇಶ, ಹರ್ಯಾಣ, ಚಂಡೀಗಢ, ತೆಲಂಗಾಣ, ಪಂಜಾಬ್, ಕರ್ನಾಟಕ, ಮೇಘಾಲಯ, ಮಹಾರಾಷ್ಟ್ರ, ಜಾರ್ಖಂಡ್, ನಾಗಾಲ್ಯಾಂಡ್, ತ್ರಿಪುರಾ, ದಾದರ್ ಮತ್ತು ನಗರ್ ಹವೇಲಿ ಹಾಗೂ ದಾಮನ್, ದಿಯುನಲ್ಲಿ ಮೇ 30ರಂದು ಎಸ್‌ಐಆರ್ ಪ್ರಕ್ರಿಯೆ ಆರಂಭವಾಗಲಿದೆ. ವಿಪಕ್ಷಗಳು ಆಡಳಿತ ನಡೆಸುತ್ತಿರುವ ಪಂಜಾಬ್, ಜಾರ್ಖಂಡ್, ಕರ್ನಾಟಕ, ತೆಲಂಗಾಣ ರಾಜ್ಯಗಳಲ್ಲೂ ಏಕಕಾಲದಲ್ಲಿ ಎಸ್‌ಐಆರ್ ನಡೆಸಲಾಗುವುದು. 3.94 ಲಕ್ಷಕ್ಕೂ ಹೆಚ್ಚು ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) 36.73 ಕೋಟಿ ಮತದಾರರ ಮನೆ-ಮನೆಗೆ ತೆರಳಿ ಮತದಾರರ ಪಟ್ಟಿ ತೀವ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಮಾಹಿತಿ ಸಂಗ್ರಹಿಸಲಿದ್ದಾರೆ.

➡ಪುಟ ೪

ಪಟ್ಟಿಯಲ್ಲಿ ಅರ್ಹರಿಗಷ್ಟೇ ಸ್ಥಾನ

ಮತದಾರರ ಪಟ್ಟಿಯಲ್ಲಿ ಅರ್ಹ ಮತದಾರರ ಹೆಸರು ಮಾತ್ರ ಸೇರಬೇಕು, ಅನರ್ಹರ ಹೆಸರುಗಳು ಸೇರಬಾರದು ಎಂಬ ಉದ್ದೇಶದಿಂದ ಎಸ್‌ಐಆರ್ ನಡೆಸಲಾಗುತ್ತಿದೆ. ಹಂತ-3ರ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಎಲ್ಲ ಮತದಾರರೂ ಉತ್ಸಾಹದಿಂದ ಭಾಗವಹಿಸಿ ತಮ್ಮ ವಿವರ ನಮೂನೆಗಳನ್ನು ಭರ್ತಿ ಮಾಡಬೇಕು ಎಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಮನವಿ ಮಾಡಿದ್ದಾರೆ. ಎಸ್‌ಐಆರ್ 2ನೇ ಹಂತದಲ್ಲಿ 9 ರಾಜ್ಯ ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳ 60 ಲಕ್ಷಕ್ಕೂ ಅಧಿಕ ಮತದಾರರ ಹೆಸರುಗಳನ್ನು ತೆಗೆದುಹಾಕಲಾಗಿದೆ.



ಕರ್ನಾಟಕದಲ್ಲಿ

- ಜೂ.20-29: ಸಿದ್ಧತೆ, ತರಬೇತಿ ಮತ್ತು ಮುದ್ರಣ
- ಜೂ.30-ಜು.29: ಬಿಎಲ್‌ಒಗಳಿಂದ ಮನೆ ಮನೆ ಭೇಟಿ
- ಜು.29ರಿಂದ ಮತಗಟ್ಟೆಗಳ ಪ್ರಕ್ರಿಯೆ
- ಆ.5: ಮತದಾರರ ಕರಡು ಪಟ್ಟಿ ಪ್ರಕಟ
- ಆ.5-ಸೆ.4: ಆಕ್ಷೇಪಣೆಗಳ ಸಲ್ಲಿಕೆಗೆ ಅವಕಾಶ
- ಆ.5-ಅ.3: ಆಕ್ಷೇಪಣೆ ಅರ್ಜಿಗಳ ಇತ್ಯರ್ಥ /ನೋಟಿಸ್ ಅವಧಿ
- ಅ.7: ಅಂತಿಮ ಮತದಾರರ ಪಟ್ಟಿ ಪ್ರಕಟ

ಆರೆಸ್ಸೆಸ್ ಸರಕಾರ್ಯವಾಹ ಹೊಸಬಾಳೆ ಬಣ್ಣನೆ

ಏನನ್ನೂ ಬಯಸದ ತ್ಯಾಗದ ಪರಮಮೂರ್ತಿ ಜಯದೇವ



ಬೆಂಗಳೂರಿನಲ್ಲಿ ರಾಷ್ಟ್ರೋತ್ಥಾನ ಪರಿಷತ್ ಆಯೋಜಿಸಿದ್ದ ಮೈ.ಚ. ಜಯದೇವ ಬದುಕು-ನೆನಪು ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಆರೆಸ್ಸೆಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ಸುತ್ತೂರು ಮಠಾಧೀಶ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕೃತಿಯ ಲೇಖಕರಾದ ಡಾ. ಬಾಬು ಕೃಷ್ಣಮೂರ್ತಿ, ಬೇಲೂರು ಸುದರ್ಶನ, ರಾಷ್ಟ್ರೋತ್ಥಾನ ಪರಿಷತ್ ಅಧ್ಯಕ್ಷ ಎಂ.ಪಿ. ಕುಮಾರ್ ಇದ್ದರು.

• **ಬೆಂಗಳೂರು:** ಜೀವನದಲ್ಲಿ ತಮಗಾಗಿ ಏನನ್ನೂ ಬಯಸದ ತ್ಯಾಗದ ಪರಮ ಮೂರ್ತಿ ಮೈ.ಚ. ಜಯದೇವ. ಅವರು ಧ್ಯೇಯಜೀವಿ ಮಾತ್ರವಲ್ಲದೇ ಅವಿಶ್ರಾಂತರು ಮತ್ತು ಕರ್ಮಯೋಗಿಯೂ ಆಗಿದ್ದರು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಬಣ್ಣಿಸಿದ್ದಾರೆ.

ರಾಷ್ಟ್ರೋತ್ಥಾನ ಪರಿಷತ್ ನಗರದ ಪುರಭವನದಲ್ಲಿ ಆಯೋಜಿಸಿದ ಅವಿಶ್ರಾಂತ ಧ್ಯೇಯಜೀವಿ ಮೈ.ಚ. ಜಯದೇವ ಬದುಕು-ನೆನಪು ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಪುಸ್ತಕದ ಕುರಿತು ಅವರು ಮಾತನಾಡಿದರು. ಒಬ್ಬ ಸಂಘಟಕ, ಜನರನ್ನು ಸೇರಿಸುವ ಸಾಮರ್ಥ್ಯ ಇರುವವರು ಜೀವನದ ವಿವಿಧ ಮುಖಗಳಲ್ಲಿ ಅದನ್ನು ಸಾಕಾರಗೊಳಿಸುವ ಪ್ರಯತ್ನ ಮಾಡಿದರು.

➡ಪುಟ ೪

> ಅವಿಶ್ರಾಂತ ಧ್ಯೇಯ ಜೀವಿ ಜಯದೇವ ಅವರ ಜೀವನದ ಚರಿತ್ರೆ ಅಲ್ಲ; ಅವರು ಸ್ಥಾಪಿಸಿದ ಸಂಸ್ಥೆಗಳ ಪುನರುಜ್ಜೀವನದ ಇತಿಹಾಸ ಅಡಗಿರುವ ಮೌಲಿಕ ಪುಸ್ತಕ. ಅವರ ಧ್ಯೇಯಾ ದರ್ಶಗಳು ನಮ್ಮೊಂದಿಗೆ ಇರುತ್ತವೆ.
> ■ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸುತ್ತೂರು ಮಠಾಧೀಶರು

ಯಾರನ್ನೂ ಓಲೈಸುವ, ನೋಯಿಸುವ ಉದ್ದೇಶವಿಲ್ಲ: ಸಿಎಂ ಸಿದ್ದರಾಮಯ್ಯ

ಧರ್ಮ, ಜಾತಿ ಆಚರಣೆ ಗೌರವಿಸುವ ಉದ್ದೇಶ



• **ಬೆಂಗಳೂರು:** ಸಂವಿಧಾನದ ಆಶಯವಾಗಿರುವ ಸರ್ವ ಧರ್ಮ ಸಮಭಾವದ ಆಶಯಕ್ಕೆ ಅನುಗುಣವಾಗಿಯೇ ರಾಜ್ಯದ ಶಾಲಾ ಕಾಲೇಜುಗಳಲ್ಲಿ ಪರಿಷ್ಕೃತ ವಸ್ತ್ರಸಂಹಿತೆ ಯನ್ನು ಜಾರಿಗೊಳಿಸಲಾಗಿದೆ. ಇದು ಯಾರನ್ನಾದರೂ ಓಲೈಸುವ ಇಲ್ಲವೇ ನೋಯಿಸುವ ಉದ್ದೇಶದ ವಸ್ತ್ರಸಂಹಿತೆ ಅಲ್ಲ, ಎಲ್ಲ ಜಾತಿ-ಧರ್ಮಗಳ ಆಚರಣೆ, ಸಂಪ್ರದಾಯಗಳನ್ನು ಗೌರವಿಸುವ ವಸ್ತ್ರಸಂಹಿತೆಯಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ವಸ್ತ್ರಸಂಹಿತೆ ಕುರಿತು ಮಾಧ್ಯಮ ಹೇಳಿಕೆ ನೀಡಿರುವ ಅವರು, ಹಿಜಾಬ್ ಧರಿಸಲು ಅವಕಾಶ ನೀಡಿರುವುದು ಮುಸ್ಲಿಮರ ಓಲೈಕೆಯಾದರೆ, ಜನಿವಾರ, ಪೇಟ, ಟರ್ಬನ್ ಧರಿಸಲು ಅವಕಾಶ ನೀಡಿರುವುದು ಆಯಾಧರ್ಮಗಳ ಓಲೈಕೆ ಯಾಗುವುದೇ ಎಂದು ಪ್ರಶ್ನಿಸಿದ್ದಾರೆ.

ರಾಜ್ಯದ ಶಿಕ್ಷಣ ಸಂಸ್ಥೆಗಳಲ್ಲಿ ಜಾರಿಗೊಳಿಸಿರುವ ವಸ್ತ್ರಸಂಹಿತೆ ಕೇಂದ್ರ ಸರ್ಕಾರದ ಅಧೀನದಲ್ಲಿರುವ ಕೇಂದ್ರಿಯ ವಿದ್ಯಾಲಯಗಳ ವಸ್ತ್ರಸಂಹಿತೆಗೆ ಅನುಗುಣವಾಗಿಯೇ ಇದೆ. ರಾಜ್ಯ ಸರ್ಕಾರ ಹೊರಡಿಸಿರುವ ವಸ್ತ್ರ ಸಂಹಿತೆಯನ್ನು ವಿರೋಧಿಸುವವರು ಕೇಂದ್ರೀಯ ವಿದ್ಯಾಲಯಗಳ ವಸ್ತ್ರಸಂಹಿತೆಯನ್ನೂ ವಿರೋಧಿಸಬೇಕಲ್ಲವೇ? ಯಾಕೆ ಈ ಹಿಪಾಕ್ರಸಿ ಎಂದಿದ್ದಾರೆ.


➡ಪುಟ ೪

ನಂಬಿಕೆ ಆಧಾರಿತ ಗುರುತು ಧರಿಸಲು ಅವಕಾಶ

ಸರ್ಕಾರವು ಸಾಂವಿಧಾನಿಕ ತತ್ವಗಳಿಗೆ ಅನುಗುಣವಾಗಿ ಎಲ್ಲಾ ಧರ್ಮ ಮತ್ತು ಸಂಪ್ರದಾಯಗಳ ಬಗ್ಗೆ ತಟಸ್ಥ ಮತ್ತು ಸಮಾನ ನಿಲುವು ಹೊಂದಿರಬೇಕಿದೆ. ಅದೇ ರೀತಿ ಯಾರಿಗೂ ತೊಂದರೆಯಾಗದಂತಹ ಸೀಮಿತ ಸಾಂಪ್ರದಾಯಿಕ ಅಥವಾ ನಂಬಿಕೆ ಆಧಾರಿತ ಆಚರಣೆಗಳಿಂದಾಗಿ ಯಾವುದೇ ವಿದ್ಯಾರ್ಥಿಗೆ ಶಿಕ್ಷಣ ಹಕ್ಕು ನಿರಾಕರಣೆ ಆಗದಂತೆ ನೋಡಿಕೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ನಿಗದಿತ ಸಮವಸ್ತ್ರಕ್ಕೆ ಪೂರಕವಾಗಿ ಮತ್ತು ಅದಕ್ಕೆ ಹೊಂದಿಕೊಳ್ಳುವಂತೆ ಸೀಮಿತ ಸಾಂಪ್ರದಾಯಿಕ ಅಥವಾ ನಂಬಿಕೆ ಆಧಾರಿತ ಗುರುತುಗಳನ್ನು ಧರಿಸಲು ಅವಕಾಶ ಕಲ್ಪಿಸಲು ನಮ್ಮ ಸರ್ಕಾರ ನಿರ್ಧರಿಸಿದೆ ಎಂದು ತಿಳಿಸಿದ್ದಾರೆ.

ರಾಜ್ಯದ ಜನರೇ ಉತ್ತರಿಸುತ್ತಾರೆ: ವಿಜಯೇಂದ್ರ

ಹಿಜಾಬ್ ಕುರಿತ ಸರ್ಕಾರದ ಕ್ರಮಕ್ಕೆ ಬಿವೈವಿ ಆಕ್ರೋಶ



• **ಬೆಂಗಳೂರು:** ಶಾಲಾ- ಕಾಲೇಜುಗಳಲ್ಲೂ ಹಿಂದುಗಳು, ಮುಸಲ್ಮಾನರೆಂದು ಬೆಂಕಿ ಹಚ್ಚುವ ಕೆಲಸಕ್ಕೆ ಕಾಂಗ್ರೆಸ್ ಸರ್ಕಾರ ಕೈ ಹಾಕಿದ್ದು, ಬರುವ ದಿನಗಳಲ್ಲಿ ರಾಜ್ಯದ ಜನರು ಇದಕ್ಕೆ ಉತ್ತರ ಕೊಡುತ್ತಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಭಿವೃದ್ಧಿಯನ್ನು ಮರೆತು ಹಿಂದುಗಳಿಗೆ ಅವಮಾನಗೈದು ಮಾಡಿಕೊಂಡು ಅಲ್ಪಸಂಖ್ಯಾತರ ಓಲೈಕೆ ರಾಜಕಾರಣ ಮಾಡುತ್ತಿರುವ ಕಾಂಗ್ರೆಸ್ ಸರ್ಕಾರದ ಆಡಳಿತಕ್ಕೆ ಇತಿಶ್ರೀ ಹಾಡುವ ದಿನಗಳು ಬಂದೇ ಬರಲಿವೆ. ಆಗ ರಾಜ್ಯದ ಜನರೂ ಇದಕ್ಕೆ ಉತ್ತರ ಕೊಡಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

➡ಪುಟ ೪

ಮತೀಯ ವಿಷ ಬೀಜ ಬಿತ್ತುವ ಕೆಲಸ

ಶಾಸಕ ಮಹೇಶ್ ಟೆಂಗಿನಕಾಯಿ ಮಾತನಾಡಿ, ಕಾಂಗ್ರೆಸ್ ಸರ್ಕಾರ ಹಿಜಾಬ್ ವಿಷಯವನ್ನು ಮತ್ತೆ ಮುನ್ನೆಲೆಗೆ ತಂದು ಮಕ್ಕಳಲ್ಲಿ ಮತೀಯ ವಿಷ ಬೀಜ ಬಿತ್ತಲು ಶುರು ಮಾಡಿದೆ ಎಂದು ಆರೋಪಿಸಿದರು. ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2022ರಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ವಸ್ತ್ರ ಸಂಹಿತೆ ಬೇಕು ಎಂಬುದನ್ನು ನ್ಯಾಯಾಲಯ ಸಹ ಎತ್ತಿ ಹಿಡಿದಿತ್ತು. ಆದರೆ, ಇಂದು ಕಾಂಗ್ರೆಸ್ ಸರ್ಕಾರ ಹಿಜಾಬ್ ಧರಿಸಲು ತೀರ್ಮಾನ ಕೈಗೊಂಡಿದೆ ಎಂದು ದೂರಿದರು.

ಗ್ರಾಮೀಣ ವಿದ್ಯಾರ್ಥಿಗಳಿಗೆ ಮಾದರಿಯಾದ ಪ್ರೇಮ್‌ಕುಮಾರ್

ಚಾಲಕನ ಪುತ್ರನಿಗೆ 15 ಚಿನ್ನದ ಪದಕ

▶ ದೇವಿತಾ ಸಿ. ಸುಬ್ಬಯ್ಯ

ದಿಗಂತ ವಿಶೇಷ

• **ಬೆಂಗಳೂರು:** ಸಾಮಾನ್ಯ ರೈತ ಕುಟುಂಬದ ಹಿನ್ನಲೆ ಹೊಂದಿರುವ ಹಾಗೂ ಟೆಂಪೋ ಚಾಲಕನ ಮಗ ಇಂದು ಕೃಷಿ ವಿಜ್ಞಾನ ಕ್ಷೇತ್ರದಲ್ಲಿ ಹೊಸ ಇತಿಹಾಸ ನಿರ್ಮಿಸಿದ್ದಾನೆ. ಈ ಮೂಲಕ ಅನೇಕ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದ್ದಾನೆ.

ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಕುಡಿಯನೂರು ಗ್ರಾಮದ ಟೆಂಪೋ ಚಾಲಕ ಈಶ್ವರರಾವ್ ಹಾಗೂ ಲಕ್ಷ್ಮಿಬಾಯಿ ದಂಪತಿ ಮಗನಾಗಿರುವ ಕೆ.ಈ. ಪ್ರೇಮ್‌ಕುಮಾರ್ ಕೃಷಿ ವಿಜ್ಞಾನ ಪದವಿಯಲ್ಲಿ ಸಾಧನೆ ಮಾಡಿರುವ ವಿದ್ಯಾರ್ಥಿ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಜಿಕೆವಿಕೆಯಲ್ಲಿ ಬಿ.ಎಸ್ಸಿ (ಆನರ್ಸ್) ಕೃಷಿಯಲ್ಲಿ ಶೇ.91.02 ರಷ್ಟು ಅಂಕಗಳನ್ನು ಪಡೆಯುವ ಮೂಲಕ ಪ್ರಥಮ ಸ್ಥಾನ ಜತೆಗೆ ಒಟ್ಟು 15 ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಈ ಮೂಲಕ ಹಲವಾರು ಗ್ರಾಮೀಣ ವಿದ್ಯಾರ್ಥಿಗಳಿಗೆ ಮಾದರಿಯಾಗಿದ್ದಾನೆ.

ಗ್ರಾಮೀಣ ಬದುಕಿನಿಂದ ಸಾಧನೆವರೆಗೆ: ರೈತ ಕುಟುಂಬದ ಹಿನ್ನೆಲೆಯಲ್ಲೇ ಬೆಳೆದ ಪ್ರೇಮ್‌ಕುಮಾರ್, ಬಾಲ್ಯದಿಂದಲೇ ಕೃಷಿ ಜೀವನವನ್ನು ಹತ್ತಿರದಿಂದ ಕಂಡವರು.

➡ಪುಟ ೪



> ಕೃಷಿ ಕೇವಲ ಒಂದು ಕೋರ್ಸ್ ಅಲ್ಲ, ಅದು ದೇಶದ ಭವಿಷ್ಯ. ಶ್ರಮ, ಆಸಕ್ತಿ ಮತ್ತು ತಂತ್ರಜ್ಞಾನವನ್ನು ಸರಿಯಾದ ರೀತಿಯಲ್ಲಿ ಬಳಸಿದರೆ ಕೃಷಿ ಕ್ಷೇತ್ರದಲ್ಲಿ ಅಪಾರ ಅವಕಾಶಗಳಿವೆ.
> ■ ಪ್ರೇಮ್ ಕುಮಾರ್, ಕೃಷಿ ವಿವಿ ವಿದ್ಯಾರ್ಥಿ

ಕೃಷಿಯಿಂದ ಕೃಷಿ ವಿಜ್ಞಾನಕ್ಕೆ

ಜಿಕೆವಿಕೆ ಶಿಕ್ಷಣದ ವೇಳೆ ಅವರು ಕೃಷಿಯ ವೈಜ್ಞಾನಿಕ ಅಂಶಗಳನ್ನು ಆಳವಾಗಿ ಅರ್ಥಮಾಡಿಕೊಂಡರು. ಮಣ್ಣು ವಿಜ್ಞಾನ, ಬೆಳೆ ಉತ್ಪಾದನೆ, ಬೀಜ ತಂತ್ರಜ್ಞಾನ, ಮತ್ತು ಕೃಷಿ ಸಂಶೋಧನೆಗಳಂತಹ ವಿಷಯಗಳಲ್ಲಿ ವಿಶೇಷ ಆಸಕ್ತಿ ಹೊಂದಿದ್ದರು. ಇದರೊಂದಿಗೆ ವಿಶ್ವವಿದ್ಯಾಲಯದಲ್ಲಿ ಶಿಕ್ಷಕರಿಂದ ಸಿಗುತ್ತಿದ್ದಂತಹ ಮಾರ್ಗದರ್ಶನದಿಂದ ಅತ್ಯುತ್ತಮ ಅಂಕಗಳೊಂದಿಗೆ 15 ಚಿನ್ನದ ಪದಕಗಳನ್ನು ಗಳಿಸಿದ್ದಾರೆ.

ತ.ನಾಡಿನಲ್ಲಿ ಮದ್ಯ ಖರೀದಿಗೆ 21 ವರ್ಷ ಕಡ್ಡಾಯ: ಆದೇಶ



• **ಚೆನ್ನೈ:** ಜೋಸೆಫ್ ವಿಜಯ್ ನೇತೃತ್ವದ ತಮಿಳುನಾಡು ಸರ್ಕಾರ ರಾಜ್ಯದಲ್ಲಿ ಮದ್ಯಪಾನದ ನಿಯಮಗಳನ್ನು ಕಠಿಣಗೊಳಿಸುವ ಮಹತ್ವದ ನಿರ್ಧಾರ ಕೈಗೊಂಡಿದೆ. ಇನ್ನು ಮುಂದೆ ಮದ್ಯ ಖರೀದಿ ಅಥವಾ ಮಾರಾಟ ಮಾಡಲು ಕನಿಷ್ಠ 21 ವರ್ಷ ನಿಗದಿಪಡಿಸಿ ಮಹತ್ವದ ಆದೇಶ ಹೊರಡಿಸಿದೆ. ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಕೆಲವೇ ದಿನಗಳಲ್ಲಿ ವಿಜಯ್ ಸರ್ಕಾರ ಈ ಕ್ರಮ ಜಾರಿಗೆ ತಂದಿದೆ. ರಾಜ್ಯದಲ್ಲಿ ಮದ್ಯಪಾನ ನಿಯಂತ್ರಣ ಮತ್ತು ಸಾರ್ವಜನಿಕ ಕಲ್ಯಾಣಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಈಗಾಗಲೇ ದೇವಾಲಯಗಳು, ಶಿಕ್ಷಣ ಸಂಸ್ಥೆಗಳು ಹಾಗೂ ಬಸ್ ನಿಲ್ದಾಣಗಳ ಸಮೀಪದಲ್ಲಿದ್ದ 717 ಟಾಸ್ಮಾಕ್ ಮದ್ಯದಂಗಡಿಗಳನ್ನು ಮುಚ್ಚಲು ಸರ್ಕಾರ ಆದೇಶಿಸಿದ ಬೆನ್ನಲ್ಲೇ ಮತ್ತೊಂದು ಕ್ರಮ ಕೈಗೊಂಡಿದೆ.

➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,98,000(2,96,000) ಅಪರಂಜಿ ಚಿನ್ನ 16,240(16,530) ಆಭರಣ ಚಿನ್ನ: 14,880(15,390) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 75,398(789↑) ಎನ್‌ಎಸ್‌ಇ 23,629(277↑)

$1 = ₹95.71

ಇಂಜಿನಿಯರಿಂಗ್ ವಿದ್ಯಾರ್ಥಿಗಳು ನೀರುಪಾಲು

ದಾವಣಗೆರೆ: ಕಿರುಪ್ರವಾಸಕ್ಕೆ ತೆರಳಿದ್ದ 10 ಜನ ಇಂಜಿನಿಯರಿಂಗ್ ವಿದ್ಯಾರ್ಥಿಗಳ ಪೈಕಿ ಇಬ್ಬರು ನೀರು ಪಾಲಾಗಿದ್ದು, ಉಳಿದ 8 ಮಂದಿ ಸ್ಥಳೀಯರ ನೆರವಿನೊಂದಿಗೆ ಪ್ರಾಣಾಪಾಯದಿಂದ ಪಾರಾದ ಘಟನೆ ಜಿಲ್ಲೆಯ ಚನ್ನಗಿರಿ ತಾಲೂಕು ಮರಬನಹಳ್ಳಿ ಗ್ರಾಮ ಸಮೀಪದ ಭದ್ರಾ ನಾಲೆಯಲ್ಲಿ ಗುರುವಾರ ಮಧ್ಯಾಹ್ನ ವರದಿಯಾಗಿದೆ.

ನಗರದ ಖಾಸಗಿ ಇಂಜಿನಿಯರಿಂಗ್ ಕಾಲೇಜಿನ ಐಎಸ್ ವಿಭಾಗದ 8ನೇ ಸೆಮಿಸ್ಟರ್ ವಿದ್ಯಾರ್ಥಿಗಳಾದ ಮಾನಸಿ ಸಿಂಧೆ (22), ಹೆಚ್.ಎಸ್. ವಿವೇಕ್(22) ಮೃತ ದುರ್ದೈವಿಗಳು. ನಾಲ್ಕೈದು ದಿನಗಳ ಹಿಂದಷ್ಟೇ ಬೆಂಗಳೂರಿನಲ್ಲಿ 2 ತಿಂಗಳ ಇಂಟರ್ನ್‌ಶಿಪ್ ಮುಗಿಸಿಕೊಂಡು ಬಂದು ಅಂತಿಮ ಪರೀಕ್ಷೆಗೆ ತಯಾರಾಗುತ್ತಿದ್ದ ನಾಲ್ವರು ವಿದ್ಯಾರ್ಥಿಗಳು, ಆರು ವಿದ್ಯಾರ್ಥಿನಿಯರು ವಿಹಾರಕ್ಕೆಂದು ದ್ವಿಚಕ್ರ ವಾಹನಗಳಲ್ಲಿ ಮರಬನಹಳ್ಳಿ ಸಮೀಪದ ಭದ್ರಾ ನಾಲೆಯ ಬಳಿ ತೆರಳಿದ್ದರು. ಬೇಸಿಗೆ ಬೆಳೆಗೆಂದು ಭದ್ರಾ ನಾಲೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರು ಬಿಡಲಾಗಿದ್ದು, ನೀರಿನಲ್ಲಿ ಆಟವಾಡುತ್ತಿದ್ದ ವಿದ್ಯಾರ್ಥಿಗಳ ಪೈಕಿ ಓರ್ವ ವಿದ್ಯಾರ್ಥಿ ಕಾಲು ಜಾರಿ ನೀರಿನ ಸೆಳೆತಕ್ಕೆ ಸಿಲುಕಿದ್ದಾರೆ. ಆ ವಿದ್ಯಾರ್ಥಿ ರಕ್ಷಣೆಗೆ ಬಂದ ಇನ್ನೊಬ್ಬರು ನೀರಿನ ಸೆಳವಿಗೆ ಸಿಕ್ಕಿದ್ದಾರೆ.

ಹೀಗೆ ಹತ್ತೂ ಜನ ವಿದ್ಯಾರ್ಥಿಗಳು ನಾಲೆಯಲ್ಲಿ ಹರಿಯುತ್ತಿದ್ದ ನೀರಿನ ರಭಸಕ್ಕೆ ಸಿಲುಕಿ ಕೊಚ್ಚಿ ಹೋಗಿದ್ದಾರೆ. ವಿದ್ಯಾರ್ಥಿಗಳ ಕೂಗಾಟ ಕೇಳಿ ಸ್ಥಳೀಯ ರೈತರು, ಗ್ರಾಮಸ್ಥರು, ದಾರಿಹೋಕರು ನಾಲೆಗೆ ಹಾರಿ, ನೀರಿನ ಸೆಳೆತಕ್ಕೆ ಸಿಲುಕಿದ್ದವನ್ನು ರಕ್ಷಣೆ ಮಾಡಿದ್ದು, ಈ ಪೈಕಿ ವಿವೇಕ್ ಸಾಕಷ್ಟು ನೀರು ಕುಡಿದಿದ್ದರಿಂದ ಪ್ರಥಮ ಚಿಕಿತ್ಸೆ ನೀಡಿ ಬದುಕಿಸುವ ಪ್ರಯತ್ನ ಮಾಡುವಷ್ಟರಲ್ಲಾಗಲೇ ಆತ ಪ್ರಾಣ ಬಿಟ್ಟಿದ್ದ. ನೀರಿನಲ್ಲಿ ಕೊಚ್ಚಿ ಹೋಗಿದ್ದ ಮಾನಸಿ ಸಿಂಧೆ ಪತ್ತೆಗೆ ಅಗ್ನಿಶಾಮಕ ದಳದ ಸಿಬ್ಬಂದಿ ತೊಡಗಿದ್ದು, ಸ್ಥಳೀಯ ಈಜು ಪಟುಗಳು ಕೂಡ ಕಾರ್ಯಾಚರಣೆಗೆ ಸಹಕರಿಸಿದ್ದಾರೆ. ಇನ್ನುಳಿದಂತೆ 8 ಜನ ವಿದ್ಯಾರ್ಥಿಗಳು ಪ್ರಾಣಾಪಾಯದಿಂದ ಪಾರಾಗಿದ್ದರೂ, ತಮ್ಮ ಸ್ನೇಹಿತರಾದ ಮಾನಸಿ ಸಿಂಧೆ ಹಾಗೂ ವಿವೇಕ್ ಸಾವಿನ ಸುದ್ದಿ ನೋವಿಗೀಡು ಮಾಡಿದೆ. ಈ ಬಗ್ಗೆ ಬಸವಾಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

- ಕಿರುಪ್ರವಾಸಕ್ಕೆ ತೆರಳಿದ್ದ 10 ಜನ ಇಂಜಿನಿಯರಿಂಗ್ ವಿದ್ಯಾರ್ಥಿಗಳು
- ಮರಬನಹಳ್ಳಿ ಬಳಿ ಭದ್ರಾ, ನಾಲೆಗಿಳಿದು ಹುಡುಗಾಟ
- ನೀರಿನ ಸೆಳೆತಕ್ಕೆ ಸಿಲುಕಿದ ಓರ್ವ, ರಕ್ಷಣೆಗೆ ಮುಂದಾದ ಇತರರು
- ನಾಲೆಯಲ್ಲಿ ಅಪಾರ ನೀರಿದ್ದ ಕಾರಣ ಎಲ್ಲರೂ ಅಪಾಯದಲ್ಲಿದ್ದಾಗ ಸ್ಥಳೀಯರಿಂದ ರಕ್ಷಣೆ
- 8 ಜನರ ಪ್ರಾಣ ರಕ್ಷಣೆ, 2 ವಿದ್ಯಾರ್ಥಿಗಳ ಸಾವು

ಚಾಲಕನ ಪುತ್ರನಿಗೆ 15 ಚಿನ್ನದ ಪದಕ

ಪುಟ ೩➡ ತಮ್ಮ ಗ್ರಾಮದಲ್ಲಿ ರೈತರು ಎದುರಿಸುವ ಸಮಸ್ಯೆಗಳು, ನೀರಿನ ಕೊರತೆ, ಬೆಳೆ ನಷ್ಟ, ಮಾರುಕಟ್ಟೆ ಅಸ್ಥಿರತೆ ಇತ್ಯಾದಿಗಳನ್ನು ಗಮನಿಸಿದ ಅವರು, ಕೃಷಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಬಳಸಿದರೆ ರೈತರ ಬದುಕು ಬದಲಾಗಬಹುದು ಎಂಬ ನಂಬಿಕೆಯನ್ನು ಹೊಂದಿದ್ದರು. ಅದೇ ದೃಷ್ಟಿಯಿಂದ ಶಿಕ್ಷಕರ ಮಾರ್ಗದರ್ಶನದಲ್ಲಿ ಕೃಷಿ ಶಿಕ್ಷಣವನ್ನು ಆಯ್ಕೆ ಮಾಡಿಕೊಂಡ ಅವರು, ಶಾಲಾ ದಿನಗಳಿಂದಲೇ ಓದಿನಲ್ಲಿ ಮುಂದಿದ್ದರು. ನಂತರ ಅವರು ಜಿಕೆವಿಕೆ (ಬೆಂಗಳೂರು ಕೃಷಿ ವಿವಿ)ಯಲ್ಲಿ ಕೃಷಿ ಪದವಿಗೆ ಸೇರಿ, ಶಿಸ್ತಿನ ಅಧ್ಯಯನ ಹಾಗೂ ಪ್ರಾಯೋಗಿಕ ಜ್ಞಾನದಿಂದ ತಮ್ಮ ಸಾಧನೆಯನ್ನು ಮತ್ತಷ್ಟು ವಿಸ್ತರಿಸಿದರು.

ಶಿಸ್ತಿನ ಅಧ್ಯಯನವೇ ಯಶಸ್ಸಿನ ಗುಟ್ಟು: ಪ್ರೇಮ್‌ಕುಮಾರ್ ಅವರ ಯಶಸ್ಸಿನ ಹಿಂದೆ ಅತ್ಯಂತ ಶಿಸ್ತಿನ ಜೀವನಶೈಲಿ ಪ್ರಮುಖ ಕಾರಣವಾಗಿದೆ. ಬೆಂಗಳೂರಿನಲ್ಲಿ ತಮ್ಮ ಚಿಕ್ಕಮ್ಮನ ಮನೆಯಲ್ಲಿ ವಾಸವಿದ್ದು, ದಿನಕ್ಕೆ ಸುಮಾರು 6ರಿಂದ 7 ಗಂಟೆಗಳ ನಿರಂತರ ಅಧ್ಯಯನ ಮಾಡುತ್ತಿದ್ದರು. ತರಗತಿ ಪಾಠಗಳ ಜತೆಗೆ ಗ್ರಂಥಾಲಯ ಅಧ್ಯಯನ, ಪ್ರಾಯೋಗಿಕ ಕೃಷಿ ತರಬೇತಿ ಹಾಗೂ ಕ್ಲಾಸ್ ನೋಟ್ಸ್‌ಗಳ ನಿರಂತರ ಪರಿಶೀಲನೆ ಅವರ ದಿನಚರಿಯಾಗಿತ್ತು.

ಬೀಜ ವಿಜ್ಞಾನದಲ್ಲಿ ಸಂಶೋಧನೆ ಗುರಿ

ಪ್ರಸ್ತುತ ಪ್ರೇಮ್‌ಕುಮಾರ್ ಅವರು ಹೊಸದಿಲ್ಲಿಯ ಪೂಸಾ ಕ್ಯಾಂಪಸ್‌ನಲ್ಲಿ ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ(Seed Science Technology) ವಿಷಯದಲ್ಲಿ ಎಂಎಸ್ಸಿ ವ್ಯಾಸಂಗ ಮಾಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಪಿಎಚ್‌ಡಿ ಮಾಡಿ, ಉತ್ತಮ ಗುಣಮಟ್ಟದ ಹಾಗೂ ಅಧಿಕ ಇಳುವರಿ ನೀಡುವ ಬೀಜಗಳ ಅಭಿವೃದ್ಧಿಯಲ್ಲಿ ಸಂಶೋಧನೆ ನಡೆಸುವುದು ಅವರ ಕನಸಾಗಿದೆ.

ತ.ನಾಡಿನಲ್ಲಿ ಮದ್ಯ ಖರೀದಿಗೆ 21 ವರ್ಷ ಕಡ್ಡಾಯ: ಆದೇಶ



ಪುಟ ೩➡ ತಮಿಳುನಾಡು ರಾಜ್ಯ ಮಾರುಕಟ್ಟೆ ನಿಗಮ(ಟಾಸ್ಮಾಕ್) ಅಂಗಡಿಗಳ ಸಿಬ್ಬಂದಿಗೆ ಗ್ರಾಹಕರ ವಯಸ್ಸನ್ನು ಕಟ್ಟುನಿಟ್ಟಾಗಿ ಪರಿಶೀಲಿಸುವಂತೆ ಸೂಚನೆ ನೀಡಲಾಗಿದೆ. ಅನುಮಾನ ಬಂದಲ್ಲಿ ಆಧಾರ್ ಕಾರ್ಡ್ ಸೇರಿದಂತೆ ಗುರುತಿನ ಚೀಟಿಗಳನ್ನು ಪರಿಶೀಲಿಸಿ, 21 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಮದ್ಯ ಮಾರಾಟ ಮಾಡಬಾರದು ಎಂದು ಸರ್ಕಾರ ಸ್ಪಷ್ಟಪಡಿಸಿದೆ. ಇದೇ ವೇಳೆ ಮದ್ಯದಂಗಡಿಗಳ ಕಾರ್ಯಾಚರಣೆ ಸಮಯವನ್ನು ಕಡಿಮೆ ಮಾಡುವ ಬಗ್ಗೆ ಸರ್ಕಾರ ಚಿಂತನೆ ನಡೆಸುತ್ತಿದೆ. ಪ್ರಸ್ತುತ ಮಧ್ಯಾಹ್ನ 12ರಿಂದ ರಾತ್ರಿ 10ರವರೆಗೆ ಕಾರ್ಯನಿರ್ವಹಿಸುತ್ತಿರುವ ಅಂಗಡಿಗಳನ್ನು ರಾತ್ರಿ 8 ಗಂಟೆಗೆ ಮುಚ್ಚುವ ಪ್ರಸ್ತಾಪವೂ ಚರ್ಚೆಯಲ್ಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎಸ್‌ಐಆರ್ 3ನೇ ಹಂತ ಮೇ 30ರಿಂದ ಆರಂಭ

ಪುಟ ೩➡ ಬಿಎಲ್‌ಒಗಳಿಗೆ ನೆರವು ನೀಡಲು 3.42 ಲಕ್ಷ ಬೂತ್ ಮಟ್ಟದ ಏಜೆಂಟರನ್ನು(ಬಿಎಲ್‌ಎ) ರಾಜಕೀಯ ಪಕ್ಷಗಳೇ ನೇಮಕ ಮಾಡಲಿವೆ. ಹಿಮಾಚಲ ಪ್ರದೇಶ, ಜಮ್ಮು ಕಾಶ್ಮೀರ ಮತ್ತು ಲಡಾಖ್ ವಾತಾವರಣವನ್ನು ಗಮನದಲ್ಲಿಟ್ಟುಕೊಂಡು ಎಸ್‌ಐಆರ್ ಆರಂಭಿಸುವ ದಿನಾಂಕ ಘೋಷಿಸುವುದಾಗಿ ಚುನಾವಣಾ ಆಯೋಗ ತನ್ನ ಹೇಳಿಕೆಯಲ್ಲಿ ತಿಳಿಸಿದೆ. ಒಮ್ಮೆ ಎಸ್‌ಐಆರ್ 3ನೇ ಹಂತ ಮುಕ್ತಾಯದೊಂದಿಗೆ ದೇಶದೆಲ್ಲೆಡೆ ಎಸ್‌ಐಆರ್ ಪೂರ್ಣವಾಗಲಿದೆ. ಹಿಮಾಚಲ, ಜಮ್ಮು ಕಾಶ್ಮೀರ ಮತ್ತು ಲಡಾಖ್ ಮಾತ್ರ ಉಳಿದುಕೊಳ್ಳಲಿವೆ ಎಂದು ಆಯೋಗ ಹೇಳಿದೆ.

ಆ.7ಕ್ಕೆ ರಾಜ್ಯ ಮತದಾರರ ಅಂತಿಮ ಪಟ್ಟಿ ಘೋಷಣೆ

ಕರ್ನಾಟಕ, ದಿಲ್ಲಿ, ಮೇಘಾಲಯ, ಮಹಾರಾಷ್ಟ್ರ ಮತ್ತು ಜಾರ್ಖಂಡ್ ರಾಜ್ಯಗಳ ಅಂತಿಮ ಮತದಾರರ ಪಟ್ಟಿ ಆ.7ರಂದು ಪ್ರಕಟವಾಗಲಿವೆ. ಸೆ.6ರಂದು ಒಡಿಶಾ, ಸಿಕ್ಕಿಂ, ಮಿಜೋರಾಂ ಮತ್ತು ಮಣಿಪುರ ರಾಜ್ಯಗಳ ಅಂತಿಮ ಮತದಾರರ ಪಟ್ಟಿ ಪ್ರಕಟವಾಗಲಿವೆ. ಡಿ.23ರಂದು ತ್ರಿಪುರಾ ರಾಜ್ಯದ ಪಟ್ಟಿ ಪ್ರಕಟವಾಗಲಿದೆ ಎಂದು ಆಯೋಗ ತಿಳಿಸಿದೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ನಮ್ಮ ದೇಶದ ಆತ್ಮ ಹಿಂದುತ್ವ, ಪರಂಪರಾಗತವಾಗಿ ಬಂದಿರುವ ಸಂಸ್ಕಾರ, ಸಂಸ್ಕೃತಿಗಳು ನಮ್ಮ ದೇಶವನ್ನು ಪರಮ ವೈಭವದೆಡೆಗೆ ಕೊಂಡೊಯ್ದಿವೆ
– ಪ್ರಭಾಕರ ಜೋಷಿ

– ಇಂಥಾ ದೇಶದ ಮೇಲೆ ಧಾಳಿ ಮಾಡಿ ಇಲ್ಲಿನ ಸಂಪತ್ತನ್ನು ದೋಚಿದ, ಸಂಸ್ಕೃತಿಯನ್ನು ನಾಶ ಮಾಡಿದ ದುರಾತ್ಮರನ್ನು ದಿ ಗ್ರೇಟ್ ಎಂದು ಹೇಳುವ ಪರಮ ನೀಚರು ಇಲ್ಲಿರುವುದು ದೇಶದ ದೌರ್ಭಾಗ್ಯ!

ದಿನ ಭವಿಷ್ಯ

ಮೇಷ ಅತಿಯಾದ ನಿರೀಕ್ಷೆ ಫಲ ನೀಡದು. ಖಾಸಗಿ ಬದುಕಿನ ಕುರಿತು ಅನವಶ್ಯ ಚಿಂತಿಸುವಿರಿ. ನೀವು ಭಾವಿಸಿದ ಸಮಸ್ಯೆ ಇಲ್ಲ. ವಿವಾದ ಪರಿಹರಿಸಿ.

ವೃಷಭ ವ್ಯಕ್ತಿಯೊಬ್ಬರು ನಿಮ್ಮ ಬದುಕಿನಲ್ಲಿ ಪ್ರವೇಶಿಸುವರು. ಅವರ ಜತೆ ಸಖ್ಯ ವೃದ್ಧಿ. ಸಂಘಟಿತ ಕಾರ್ಯದಿಂದ ವ್ಯವಹಾರ ಬೆಳವಣಿಗೆ ಕಾಣುವುದು.

ಮಿಥುನ ಎಲ್ಲ ಕಾರ್ಯ ಸುಸೂತ್ರವಾಗಿ ಸಾಗಲಿದೆ. ಅಡ್ಡಿಗಳ ನಿವಾರಣೆ. ವೃತ್ತಿ ಸಂಬಂಧಿತ ಉದ್ವಿಗ್ನತೆ ಶಮನ. ಆಪ್ತರ ಜತೆಗಿನ ವಿರಸ ಅಂತ್ಯ.

ಕಟಕ ಸಾಮಾಜಿಕ ಕಾರ್ಯದಲ್ಲಿ ಹೆಚ್ಚು ವ್ಯಸ್ತ. ಉಳಿದವರ ಜತೆ ಹೊಂದಾಣಿಕೆ ಇರಲಿ. ಸಣ್ಣ ಗಾಯದ ಸಾಧ್ಯತೆಯಿದೆ, ಎಚ್ಚರ ವಹಿಸಿ.

ಸಿಂಹ ಬದುಕನ್ನು ಗಂಭೀರವಾಗಿ ಪರಿಗಣಿಸಿ. ಬೇಕಾಬಿಟ್ಟಿ ಧೋರಣೆ ಪ್ರತಿಕೂಲವಾದೀತು. ಇತರರಿಗೆ ಮಾನಸಿಕ ನೋವು ನೀಡಬೇಡಿ.

ಕನ್ಯಾ ಖಾಸಗಿ ಸಮಸ್ಯೆ ಮನಸ್ಸಿಗೆ ಕಿರಿಕಿರಿ ತರಲಿದೆ. ಸಣ್ಣ ವಿಷಯದಲ್ಲೂ ತಪ್ಪು ಹುಡುಕುವಿರಿ. ವಿರಸ ಉಂಟಾದೀತು. ಅನಿರೀಕ್ಷಿತ ಬಂಧು ಭೇಟಿ.

ತುಲಾ ನಿಮ್ಮ ಧೋರಣೆಗೆ ಕೆಲವರಿಂದ ವಿರೋಧ. ಹೊಂದಿಕೊಂಡು ಬಾಳಿ. ಬಾಕಿ ಉಳಿದ ಕಾರ್ಯ ಮುಗಿಸಲು ಆದ್ಯತೆ ಕೊಡಿ. ಸಾಧನೆಯ ಯಶ.

ವೃಶ್ಚಿಕ ಸರಿಯಾದ ದಿಕ್ಕಿನಲ್ಲಿ ನಿಮ್ಮ ಪ್ರಯತ್ನ ಸಾಗುತ್ತದೆ. ಕುಟುಂಬಸ್ಥರ ಮಧ್ಯೆ ಹೆಚ್ಚು ಸಮಯ ಕಳೆಯಿರಿ. ಅವರ ಮನಸ್ಸಿಗೆ ನೋವು ಉಂಟುಮಾಡಬೇಡಿ.

ಧನು ಹಣದ ವ್ಯವಹಾರದಲ್ಲಿ ಜಾಗ್ರತೆ ವಹಿಸಿ. ನಷ್ಟ ಆಗದಂತೆ ನೋಡಿಕೊಳ್ಳಿ. ಮನೆಯವರ ಬೆಂಬಲ ವಿಶ್ವಾಸ ಹೆಚ್ಚಿಸಲಿದೆ. ಪ್ರವಾಸ ಸಂಭವ.

ಮಕರ ವೃತ್ತಿ ಮತ್ತು ಪ್ರೀತಿ ಕ್ಷೇತ್ರದಲ್ಲಿ ಮಹತ್ವದ ಬೆಳವಣಿಗೆ. ಸರಿಯಾದ ಹೆಜ್ಜೆ ಇಟ್ಟರೆ ಸಫಲತೆ. ಆತ್ಮೀಯ ವ್ಯಕ್ತಿಗಳ ಮನ ನೋಯಿಸಬೇಡಿ.

ಕುಂಭ ಉದ್ಯೋಗದ ಹುಡುಕಾಟ ಅಂತ್ಯ. ಶುಭ ಸುದ್ದಿ ಸಿಗಲಿದೆ. ದಂಪತಿ ಮಧ್ಯೆ ಕಲಹವಾದೀತು. ಆರೋಗ್ಯ ಸಮಸ್ಯೆ ಇದ್ದವರು ಎಚ್ಚರ ವಹಿಸಿ.

ಮೀನ ಆತ್ಮೀಯರ ವರ್ತನೆಯಲ್ಲಿ ಬದಲಾವಣೆ ಕಂಡೀತು. ವಾಗ್ವಾದದಿಂದ ದೂರವಿರಿ. ಪ್ರವಾಸದ ಅವಕಾಶ. ಬೆನ್ನು ನೋವು ಇದ್ದವರಿಗೆ ನಿರಾಳತೆ.

ರಾಹುಕಾಲ : 10.30–12.00
ಗುಳಿಕಕಾಲ : 7.30–9.00

ಅದೃಷ್ಟ ಸಂಖ್ಯೆ : 8,3,9,1

ಔಷಧ ಸರಬರಾಜು ವ್ಯವಸ್ಥೆ ಮೇಲೆ ನಿಗಾ: ಸಚಿವ ಗುಂಡೂರಾವ್

ಪ್ರತ್ಯೇಕ ಪೋರ್ಟಲ್ ಜಾರಿ

ಬೆಂಗಳೂರು: ದೇಶದಲ್ಲಿ ಇದೇ ಮೊದಲ ಬಾರಿಗೆ ಔಷಧ ಸರಬರಾಜು ವ್ಯವಸ್ಥೆ ಮೇಲೆ ನಿಗಾ ಇರಿಸಲು ಪ್ರತ್ಯೇಕ ಪೋರ್ಟಲ್ ರೂಪಿಸಲಾಗಿದ್ದು, ಪ್ರಮಾಣಿತ ಗುಣಮಟ್ಟ ಹೊಂದಿರದ ಔಷಧಗಳ ನಿಗದಿತ ಬ್ಯಾಚ್‌ಗಳನ್ನು ಮಾರುಕಟ್ಟೆಯಿಂದ ಕೂಡಲೇ ಹಿಂಪಡೆಯಲು ಇದು ಸಹಕಾರಿಯಾಗಲಿದೆ. ಈ ಹಿಂದೆ ಮಾರುಕಟ್ಟೆಯಿಂದ ವಾಪಸ್ ಪಡೆಯುವುದು ಕಷ್ಟಸಾಧ್ಯವಾಗಿತ್ತು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಗುರುವಾರ ಆರೋಗ್ಯಸೌಧದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಈ ವ್ಯವಸ್ಥೆಗೆ ಚಾಲನೆ ನೀಡಿ ಮಾತನಾಡಿದ ಸಚಿವರು, ಈ ಪೋರ್ಟಲ್ ಮೂಲಕ ಸಗಟು ಮತ್ತು ಚಿಲ್ಲರೆ ಔಷಧಿ ಮಳಿಗೆಗಳಲ್ಲಿ ಲಭ್ಯವಿರುವ ಗುಣಮಟ್ಟದ ಮಾನದಂಡವನ್ನು ಪೂರೈಸದ ಔಷಧಿಗಳ ಬ್ಯಾಚ್‌ಗಳನ್ನು ಪತ್ತೆ ಹಚ್ಚಲಾದ ಔಷಧಿಗಳ ಮಾರಾಟವನ್ನು ತಕ್ಷಣವೇ ಸ್ಥಗಿತಗೊಳಿಸಲಾಗುವುದು. ಔಷಧ ಪ್ರಮಾಣಿತ ಗುಣಮಟ್ಟ ಹೊಂದಿರದಿದ್ದಲ್ಲಿ ಪೋರ್ಟಲ್‌ನಲ್ಲಿ ಆ ಬಗ್ಗೆ ಸೂಕ್ತ ಕಾರಣ ಸಹಿತ ಮಾಹಿತಿ ನಮೂದಿಸಲಾಗುವುದು.

ಈ ಸಂದೇಶ ಎಲ್ಲ ಸಗಟು ವ್ಯಾಪಾರಿಗಳಿಗೆ ರವಾನೆಯಾಗಲಿದ್ದು, ಅವರು ಮುಂದೆ ಅದನ್ನು ಮಾರಾಟ ಮಾಡಲು ಸಾಧ್ಯವಾಗುವುದಿಲ್ಲ ಎಂದು ಹೇಳಿದರು.

ನಮ್ಮಲ್ಲಿರುವ ಸುಮಾರು 15 ಸಾವಿರ ಔಷಧ ಸಗಟು ವರ್ತಕರ ಮಾಹಿತಿಯನ್ನು ಈ ಪೋರ್ಟಲ್‌ನಲ್ಲಿ ಅಳವಡಿಸಿಕೊಳ್ಳಲಾಗಿದೆ. ಭವಿಷ್ಯದಲ್ಲಿರುವ 45 ಸಾವಿರ ಚಿಲ್ಲರೆ ಔಷಧ ವರ್ತಕರ ಮಾಹಿತಿಯನ್ನು ಪೋರ್ಟಲ್‌ನಲ್ಲಿ ಅಳವಡಿಸಿ ಅವರಿಂದಲೂ ನೈಜ ಸಮಯದಲ್ಲೇ ಔಷಧ ಹಿಂಪಡೆಯಲು ಸಾಧ್ಯವಾಗುವಂತೆ ಮಾಡಲಾಗುತ್ತದೆ ಎಂದರು. ಕಳೆದ ವರ್ಷ ಔಷಧ ಆಡಳಿತ ಇಲಾಖೆಯಿಂದ ಇ-ಸಹಿ ಸೌಲಭ್ಯ ಜಾರಿಗೆ ತರಲಾಗಿದ್ದು, ಪ್ರಮಾಣಿತ ಗುಣಮಟ್ಟ ಹೊಂದಿರದ ಔಷಧಿಗಳ ನಿಗದಿತ ಬ್ಯಾಚ್‌ನ ಮಾಹಿತಿ ಪಡೆಯಲು ಸಹಾಯವಾಯಿತು. ಇದರಿಂದ 1.85 ಕೋಟಿ ರೂ. ಮೌಲ್ಯದ ಅನುತ್ತಮ ಗುಣಮಟ್ಟದ ಔಷಧಿಗಳನ್ನು ಹಿಂಪಡೆಯಲಾಗಿದೆ ಎಂದು ವಿವರಿಸಿದರು.

ಎನ್‌ಡಿಪಿಎಸ್ ದುರ್ಬಳಕೆಗೆ ಕಡಿವಾಣ: ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ನೂತನ ಪೋರ್ಟಲ್ ಮೂಲಕ ಮಾದಕ ಔಷಧ (ಎನ್‌ಡಿಪಿಎಸ್)ಗಳ ದುರ್ಬಳಕೆಗೂ ಕಡಿವಾಣ ಹಾಕಲು ಸಾಧ್ಯ. ಎನ್‌ಡಿಪಿಎಸ್ ಮಾರಾಟ ಮಾಡಿದರೆ ಈ ಪೋರ್ಟಲ್ ನಲ್ಲಿ ಮಾಹಿತಿಯನ್ನು ಕಡ್ಡಾಯವಾಗಿ ನಮೂದಿಸಬೇಕಾಗುತ್ತದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ಆಯುಕ್ತ ಕೆ. ಶ್ರೀನಿವಾಸ್ ಸೇರಿದಂತೆ ಇತರರಿದ್ದರು.



ಒಂದೇ ತಿಂಗಳಿನಲ್ಲಿ 26 ಮಾದರಿ ಕಳಪೆ ಗುಣಮಟ್ಟ

ಕಳೆದ ಏಪ್ರಿಲ್ ತಿಂಗಳಿನಲ್ಲಿ ಒಟ್ಟು 924 ಔಷಧ ಮಾದರಿಗಳ ನಿಗದಿತ ಬ್ಯಾಚ್‌ಗಳನ್ನು ಸಂಗ್ರಹಿಸಿ ಪರೀಕ್ಷಿಸಿದ್ದು, ಆ ಪೈಕಿ 26 ಮಾದರಿಗಳು ಪ್ರಮಾಣಿತ ಗುಣಮಟ್ಟ ಹೊಂದಿಲ್ಲ. ಕಳೆದ ವರ್ಷ 16,337 ಔಷಧ ಮಾದರಿಗಳನ್ನು ವಿಶ್ಲೇಷಿಸಲಾಗಿದ್ದು, 473 ಔಷಧಗಳ ನಿಗದಿತ ಬ್ಯಾಚ್‌ಗಳು ಪ್ರಮಾಣಿತ ಗುಣಮಟ್ಟ ಹೊಂದಿರಲಿಲ್ಲ. ಪರವಾನಗಿ ರದ್ದತಿ ಸೇರಿ ವಿವಿಧ ಕ್ರಮ ಕೈಗೊಳ್ಳಲಾಗಿದೆ. ನಿಯಮ ಬಾಹಿರವಾಗಿ ಮಾದಕ ಔಷಧಗಳ ಮಾರಾಟಕ್ಕೆ ಸಂಬಂಧಿಸಿದಂತೆ ಕಳೆದ ವರ್ಷ 1,309 ಔಷಧ ಮಳಿಗೆಗಳನ್ನು ಪರಿಶೀಲಿಸಿ, 457 ಔಷಧ ಮಳಿಗೆಗಳ ಪರವಾನಗಿ ರದ್ದು ಮಾಡಲಾಗಿದೆ ಎಂದು ಸಚಿವ ದಿನೇಶ್ ಗುಂಡುರಾವ್ ಮಾಹಿತಿ ನೀಡಿದರು.

ಪ.ಬಂಗಾಳ ಸರ್ಕಾರದಿಂದ ಅಧಿಸೂಚನೆ

ಗೋವಧೆಗೆ ನಿರ್ಬಂಧ



ಕೋಲ್ಕತ್ತಾ: ಗೋಪ್ರೇಮಿಗಳ ಪಾಲಿಗೊಂದು ಖುಷಿ ಸುದ್ದಿ. ಪಶ್ಚಿಮ ಬಂಗಾಳದಲ್ಲಿ 1950ರ ಗೋವಧೆ ನಿಯಂತ್ರಣ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಮುಖ್ಯಮಂತ್ರಿ ಸುವೇಂದು ಅಧಿಕಾರಿ ನೇತೃತ್ವದ ಬಿಜೆಪಿ ಸರ್ಕಾರ ಬುಧವಾರ ಅಧಿಸೂಚನೆ ಹೊರಡಿಸಿದೆ.

ಮುಖ್ಯವಾಗಿ ಗೋವು, ಗೂಳಿ, ಎಮ್ಮೆ, ಎತ್ತು, ಕೋಣ ಇತ್ಯಾದಿಗಳನ್ನು ಸಾರ್ವಜನಿಕವಾಗಿ ವಧಿಸುವಂತಿಲ್ಲ. ಕಸಾಯಿಖಾನೆಗಳು ಕಡ್ಡಾಯವಾಗಿ ಕ್ಷಮತಾ ಪ್ರಮಾಣಪತ್ರ ಹೊಂದಿರಬೇಕು. ಕ್ಷಮತಾ ಪ್ರಮಾಣಪತ್ರವಿಲ್ಲದೆ ಗೂಳಿ, ಎಮ್ಮೆ, ಗೋವು, ಕರು, ಎತ್ತು ಇತ್ಯಾದಿ ಜಾನುವಾರುಗಳನ್ನು ವಧಿಸುವಂತಿಲ್ಲ .

2018ರ ಆ.6ರಂದು ಕೋಲ್ಕತ್ತಾ ಹೈಕೋರ್ಟ್ ನೀಡಿರುವ ತೀರ್ಪು ಮತ್ತು ಇದಕ್ಕೆ ಪೂರಕವಾಗಿ 2022ರ ಜೂ.8ರಂದು ಸರ್ಕಾರ ಜಾರಿಗೊಳಿಸಿದ ನಿಯಮಾವಳಿಗಳಿಗೆ ಬದ್ಧವಾಗಿ ಪ್ರಸ್ತುತ ನಿರ್ದೇಶ ಹೊರಡಿಸಲಾಗಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಗೋವು ಅಥವಾ ಹೋರಿಗಳಿಗೆ ತೀರಾ ವಯಸ್ಸಾಗಿದ್ದಲ್ಲಿ, ಗಾಯವಾಗಿದ್ದಲ್ಲಿ ಅಥವಾ ವಾಸಿಯಾಗಲು ಅಸಾಧ್ಯ ಕಾಯಿಲೆಗಳಿಂದ ಬಳಲುತ್ತಿರುವ ಸಂದರ್ಭದಲ್ಲಿ ಮಾತ್ರ ಅಧಿಕೃತ ಕಸಾಯಿಖಾನೆಗಳಲ್ಲಿ ಇವುಗಳ ವಧೆಗೆ ಸಮ್ಮತಿ ಕೊಡಲಾಗುವುದು.

ಕ್ಷಮತಾ ಪ್ರಮಾಣಪತ್ರ ಕಡ್ಡಾಯ

ಜಾನುವಾರು ವಧೆಗೆ ಯೋಗ್ಯವೆಂಬ ಕ್ಷಮತಾ ಅಥವಾ ಯೋಗ್ಯತಾ ಪ್ರಮಾಣಪತ್ರವಿಲ್ಲದೆ ಯಾರೂ ಗೂಳಿಗಳು, ಹೋರಿಗಳು, ಗೋವುಗಳು, ಕರುಗಳು, ಗಂಡು–ಹೆಣ್ಣು ಎಮ್ಮೆಗಳು, ಎಮ್ಮೆ ಮರಿಗಳನ್ನು ವಧಿಸಲು ಅಧಿಸೂಚನೆ ಯಲ್ಲಿ ಅವಕಾಶವಿಲ್ಲ. ಗೋವು ಅಥವಾ ಗೂಳಿ ವಧೆಗೆ ಅರ್ಹವೆಂಬ ಪ್ರಮಾಣಪತ್ರ ನೀಡುವ ಜವಾಬ್ದಾರಿ ಮುನ್ಸಿಪಾಲಿಟಿ ಅಧ್ಯಕ್ಷರು, ಪಂಚಾಯತ್ ಸಮಿತಿ ಸಭಾಪತಿ, ಸರ್ಕಾರಿ ಪಶುವೈದ್ಯಾಧಿಕಾರಿಗಳಿಗೆ ಇರಲಿದೆ. ಇವರು ಗೋವಿನ ವಧಾರ್ಹತೆ ಬಗ್ಗೆ ಜಂಟಿ ಪ್ರಮಾಣಪತ್ರ ನೀಡುತ್ತಾರೆ. ದುಡಿಮೆ ಅಥವಾ ಸಂತಾನೋತ್ಪತ್ತಿಗೆ ಸಂಬಂಧಿಸಿದಂತೆ ಗೋವು ಅಥವಾ ಎಮ್ಮೆ ಅಥವಾ ಗೂಳಿಗೆ 14 ವರ್ಷ ದಾಟಿದೆ ಅಥವಾ ಗೋವು ಅಥವಾ ಹೋರಿಗೆ ವಯಸ್ಸಾಗಿದೆ ಅಥವಾ ಗಾಯ, ನ್ಯೂನತೆ, ವಾಸಿಯಾಗದ ಕಾಯಿಲೆಯಿಂದಾಗಿ ಖಾಯಂ ಆಗಿ ದುರ್ಬಲ ಸ್ಥಿತಿಯಲ್ಲಿದೆ ಎಂಬ ಸಮಾನ ಅಭಿಪ್ರಾಯವನ್ನು ಪಂಚಾಯತ್ ಅಧ್ಯಕ್ಷರು, ಪಶು ವೈದ್ಯಾಧಿಕಾರಿಗಳು ಲಿಖಿತವಾಗಿ ದಾಖಲಿಸಬೇಕು.

ರಾಜ್ಯದ ಜನರೇ ಉತ್ತರಿಸುತ್ತಾರೆ: ವಿಜಯೇಂದ್ರ

ಪುಟ ೩➡ ಹಿಜಾಬ್‌ಗೆ ಅವಕಾಶ ಕೊಡುವುದಾಗಿ ಅಧಿಕೃತ ಮುದ್ರೆ ಒತ್ತಲಾಗಿದೆ. ಶಿಕ್ಷಣ ಸಚಿವರು ಹೇಳಿರುವುದು ಖಂಡಿತ ಸರಿಯಲ್ಲ. ಹಿಂದೆ ಬಿಜೆಪಿ ಸರ್ಕಾರವು ಹಿಜಾಬ್ ನಿಷೇಧಿಸಿತ್ತು. ಇವತ್ತು ಅದು ನ್ಯಾಯಾಲಯದ ಕಟಕಟೆಯಲ್ಲಿದೆ, ಆದರೂ, ಸರ್ಕಾರ ಈ ಹುಚ್ಚು ನಿರ್ಧಾರ ತಗೆದುಕೊಂಡಿದೆ ಎಂದು ವಿಜಯೇಂದ್ರ ಹೇಳಿದರು.

> **ಅಲ್ಪಸಂಖ್ಯಾತರನ್ನು ಖುಷಿ ಪಡಿಸಲು ಯಾವ ಮಟ್ಟಕ್ಕೆ ತೆರಳಲೂ ಇವರು ಹೇಸುವುದಿಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಓಲೈಕೆ ರಾಜಕಾರಣ ಒಂದು ಕಡೆಯಾದರೆ, ಹಿಂದುಗಳಿಗೆ ಅಪಮಾನ ಮಾಡುವ ಕೆಲಸವನ್ನು ನಿರಂತರವಾಗಿ ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ.**
>
> ■ ಬಿ.ವೈ.ವಿಜಯೇಂದ್ರ,
> ಬಿಜೆಪಿ ರಾಜ್ಯಾಧ್ಯಕ್ಷ

ಸಂಘರ್ಷಕ್ಕೆ ನಾಂದಿ

ಬೆಂಗಳೂರು: ನಾಲ್ಕು ವರ್ಷಗಳ ತರುವಾಯ ಕಾಂಗ್ರೆಸ್ ಮತ್ತೆ ಹಿಜಾಬ್‌ಗೆ ಅವಕಾಶ ನೀಡಿ ಸಂಘರ್ಷಕ್ಕೆ ಎಡೆ ಮಾಡಿಕೊಡುತ್ತಿದೆ ಎಂದು ವಿಧಾನ ಪರಿಷತ್ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಟೀಕಿಸಿದ್ದಾರೆ. ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಗುರುವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಶಾಲಾ ಕಾಲೇಜುಗಳಲ್ಲಿ ಸಹೋದರತ್ವ ಇಲ್ಲದಿದ್ದರೆ ಸಮಾಜ ಉತ್ತಮವಾಗಿ ಬದುಕಲು ಸಾಧ್ಯವಿಲ್ಲ. ಆದ್ದರಿಂದ ನಾಲ್ಕು ವರ್ಷದ ಹಿಂದೆ ಶಾಲಾ ಕಾಲೇಜುಗಳಲ್ಲಿ ತಲೆದೋರಿದ್ದ ಧಾರ್ಮಿಕ ಭಾವನೆ ಕೆರಳಿಸುವ ಹಿಜಾಬ್ ಅನ್ನು ನಿಷೇಧ ಮಾಡಲಾಗಿತ್ತು. ಸಮವಸ್ತ್ರ ಬಿಟ್ಟು ಬಹಿರಂಗವಾಗಿ ಎದ್ದು ಕಾಣುವ ವಸ್ತ್ರ ಧರಿಸಬಾರದು ಎಂದು ತೀರ್ಮಾನ ಮಾಡಲಾಗಿತ್ತು ಎಂದರು. ಹಿಜಾಬ್ ನಿಷೇಧ ಪ್ರಶ್ನಿಸಿ ಕೇಸ್ ಹಾಕಲಾಗಿದೆ. ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣ ಇರುವಾಗಲೇ ಇವರು ತಕ್ಷಣಕ್ಕೆ ಒಂದು ಸಮುದಾಯ ಓಲೈಸಲು ಮತ್ತೆ ಹಿಜಾಬ್ ಹಾಕಲು ಆದೇಶ ಮಾಡಿದ್ದಾರೆ. ಇದು ದೊಡ್ಡ ತಪ್ಪು, ಕೋರ್ಟ್‌ನಲ್ಲಿರುವಾಗಲೇ ಆದೇಶ ಮಾಡಿರುವುದು ಕೋರ್ಟ್‌ಗೆ ಅಪಚಾರ ಮಾಡಿದಂತೆ ಎಂದು ತಿಳಿಸಿದರು.

ಧರ್ಮ,ಜಾತಿ ಆಚರಣೆ ಗೌರವಿಸುವ ಉದ್ದೇಶ

ಪುಟ ೩➡ ಸಾರ್ವಜನಿಕ ಸುವ್ಯವಸ್ಥೆ, ಸುರಕ್ಷತೆ, ತರಗತಿಯ ವಾತಾವರಣ ಮತ್ತು ಶಿಕ್ಷಣ ಸಂಸ್ಥೆಗಳ ಜಾತ್ಯತೀತ ಸ್ವರೂಪಕ್ಕೆ ಧಕ್ಕೆಯಾಗದಂತೆ ಶಿಕ್ಷಣ ವ್ಯವಸ್ಥೆಯಲ್ಲಿ ಶಿಸ್ತು, ಸಮಾನತೆ ಮತ್ತು ಘನತೆಯನ್ನು ಮರುಸ್ಥಾಪಿಸಲು ನಾವು ಬದ್ಧರಿದ್ದೇವೆ. ಜಾತಿ, ಧರ್ಮಗಳ ಆಧಾರದಲ್ಲಿ ಸಮಾಜವನ್ನು ಒಡೆಯುತ್ತಿರುವವರಿಗೆ ಇದರಿಂದ ನೋವಾಗಿರುವುದು ಸಹಜವೇ ಆಗಿದೆ. ಅವರು ಮೊದಲು ತಮ್ಮೊಳಗೆ ಇಣುಕಿ ಆತ್ಮವಿಮರ್ಶೆ ಮಾಡಲಿ ಎಂದು ಗುಡುಗಿದ್ದಾರೆ.

37 ಕಾರ್ಮಿಕರ ರಕ್ಷಣೆ

ವಿಜಯನಗರ: ಹೊಸಪೇಟೆ ತಾಲೂಕಿನ ಮರಿಯಮ್ಮನಹಳ್ಳಿ ಹೋಬಳಿಯ ನಂದಿಬಂಡಿ ಗ್ರಾಮದಲ್ಲಿ ಜೀತ ಪದ್ಧತಿಯಲ್ಲಿ ಸಿಲುಕಿದ್ದ ಒಡಿಶಾ ಮೂಲದ 37 ಕಾರ್ಮಿಕರನ್ನು ಯಶಸ್ವಿಯಾಗಿ ರಕ್ಷಿಸಲಾಗಿದೆ. ಬೆಳಗಾವಿ ಜಿಲ್ಲೆಯ ಸ್ಪಂದನ ಎಂಬ ಎನ್‌ಜಿಒ ಸಂಸ್ಥೆ ನೀಡಿದ ಖಚಿತ ಮಾಹಿತಿಯ ಮೇರೆಗೆ ಜಿಲ್ಲಾಧಿಕಾರಿಗಳ ಮಾರ್ಗದರ್ಶನದಲ್ಲಿ ಸಹಾಯಕ ಆಯುಕ್ತರು ನಂದಿಬಂಡಿ ಗ್ರಾಮದ ಮೇಲೆ ದಾಳಿ ನಡೆಸಿದರು. ದಾಳಿಯ ವೇಳೆ ಕಾರ್ಮಿಕರು ನಾಲ್ಕು ಅಡಿ ಅಗಲದ ಪುಟ್ಟ ಮನೆಗಳಲ್ಲಿ ಕನಿಷ್ಠ ಮೂಲಭೂತ ಸೌಕರ್ಯಗಳಿಲ್ಲದ ದಯನೀಯ ಸ್ಥಿತಿಯಲ್ಲಿ ಬದುಕುತ್ತಿದ್ದ 10 ಮಕ್ಕಳು, 11 ಮಹಿಳೆಯರು, 16 ಪುರುಷರು ಸೇರಿದಂತೆ ಒಟ್ಟು 37 ಮಂದಿ ಕಾರ್ಮಿಕರು ಇದ್ದು, ಎಲ್ಲರೂ ಒಡಿಶಾದ ಬಲಂಗೀರ್ ಮತ್ತು ನವರಂಗಪುರರ ಜಿಲ್ಲೆಯವರಾಗಿದ್ದಾರೆ.

ಏನನ್ನೂ ಬಯಸದ ತ್ಯಾಗದ ಪರಮಮೂರ್ತಿ ಜಯದೇವ

ಪುಟ ೩➡ ಸಂಘದ ಸ್ವಯಂಸೇವಕ ಸಮಾಜ ಜೀವನದಲ್ಲಿ ಹೇಗಿರಬೇಕು ಎನ್ನುವುದಕ್ಕೆ ಜಯದೇವರು ಉದಾಹರಣೆ. ಈ ಪುಸ್ತಕದಲ್ಲಿರುವುದು ಜಯದೇವರ ಕುರಿತು ಘಟನೆಗಳಾದರೂ ಅದರಲ್ಲಿ ಅವರು ಆರಂಭಿಸಿದ ಯೋಜನೆಗಳ ಮುನ್ನಡೆಯನ್ನೂ ತಿಳಿಸಿಕೊಡುತ್ತದೆ ಎಂದು ಹೇಳಿದರು.

ಮೈ.ಚ.ಜಯದೇವ ಅವರು ಕೃ.ನರಹರಿ, ಅಜಿತ್ ಕುಮಾರ್, ಅರಕಲಿ ನಾರಾಯಣ್ ಅವರ ತಂಡವು ಸಾಂಘಿಕವಾಗಿ ಸಂಸ್ಥೆಯನ್ನು ಕಟ್ಟಿಬೆಳೆಸುವುದಕ್ಕೆ ಮಾದರಿಯಾದರು. ತಮ್ಮ ಗುರಿಯ ಸಾಧನೆಗಾಗಿ ಜೀವನವನ್ನೇ ತೆತ್ತರು. ಸಂಸ್ಥೆ ಎನ್ನುವುದು ಇಟ್ಟಿಗೆ, ಕಲ್ಲಿನ ಕಟ್ಟಡ ಮಾತ್ರವಲ್ಲ. ಅಲ್ಲಿರುವವರು ತಮ್ಮ ಪ್ರಾಣವನ್ನು ಸಮರ್ಪಿಸಿ ಕೆಲಸ ಮಾಡಿದಾಗ ಅದಕ್ಕೆ ಜೀವಂತಿಕೆ ಬರುತ್ತದೆ ಎಂದಿದ್ದವರು ಜಯದೇವ ಅವರು. ಅದಕ್ಕಿಂತಲೂ ಮೊದಲು ಅದನ್ನು ಜೀವಿಸಿದವರು. ಅವರು ಭಾವನೆಗಳನ್ನುಳ್ಳ ಧ್ಯೇಯಜೀವಿಯಾಗಿದ್ದರು. ಅವರು ಮಾತ್ರ ಅವಿಶ್ರಾಂತರಾಗಿರುತ್ತಿರಲಿಲ್ಲ, ಬೇರೆಯವರೂ ವಿರಮಿಸಲು ಬಿಡುತ್ತಿರಲಿಲ್ಲ ಎಂದು ತಿಳಿಸಿದರು.

ಜಯದೇವ ಹೆಸರಿನ ಆಸ್ಪತ್ರೆ, ನಿಜವಾದ ಸ್ಮಾರಕ: ಆಧುನಿಕ ಚಿಕಿತ್ಸೆಯ ಜೊತೆಗೆ ಭಾರತೀಯ ವೈದ್ಯಕೀಯವೂ ಸೇರಬೇಕು ಎನ್ನುವುದು ಆಸ್ಪತ್ರೆಯ ಮೂಲಕ ಸಾಕಾರಗೊಂಡಿದೆ. ಒಂದು ಸಂಸ್ಥೆಯನ್ನು ಹೇಗೆ ಕಟ್ಟಿಬೆಳೆಸಬೇಕು ಎಂದು ತೋರಿಸಿದವರು ಜಯದೇವರು. ಮಿಥಿಕ್ ಸೊಸೈಟಿ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಅಬಲಾಶ್ರಮದಂತಹ ಅನೇಕ ಸಂಸ್ಥೆಗಳು ಗುರಿಗೆ ತಕ್ಕಂತೆ ನಡೆಯುವಂತೆ ಮಾಡಿದವರು. ಹಾಗಾಗಿ, ಅವರ ಹೆಸರಿನಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟಿರುವುದು ನಿಜವಾದ ಸ್ಮಾರಕ. ಈ ಪುಸ್ತಕ ಒಬ್ಬ ವ್ಯಕ್ತಿಯ ಜೀವನ ಮಾತ್ರವಲ್ಲ. ಜಯದೇವರ ಜೀವನವರ ನೆನಪಿಸುತ್ತಾ ನಾವು ಹೇಗೆ ಜೀವಿಸಬೇಕು ಎನ್ನುವುದನ್ನು ಪುಸ್ತಕ ನೆನಪಿಸುತ್ತದೆ ಎಂದು ದತ್ತಾತ್ರೇಯ ಹೊಸಬಾಳೆ ವಿವರಿಸಿದರು.

ಸಮಾಜದ ದೃಷ್ಟಿಯಿಂದ ಅಗತ್ಯ ವಿಚಾರಗಳನ್ನು ಸಂಪೂರ್ಣ ಪರಿಶ್ರಮದೊಂದಿಗೆ ಪೂರ್ಣಗೊಳಿಸಬೇಕು ಎನ್ನುವುದನ್ನು ನಮಗೆಲ್ಲ ಕಲಿಸಿದರು. ಜಯದೇವ ಅವರು ಮುನ್ನಡೆಸಿದ ಸಂಸ್ಥೆಗಳಲ್ಲಿ ಆರಂಭಿಸಿದ ಪರಂಪರೆಗಳು ಇನ್ನೂ ಮುನ್ನಡೆದಿವೆ. ಶೇಕ್ಸ್‌ಪಿಯರ್ ವಂಶ ವೃದ್ಧಿ ಮತ್ತು ಕಾವ್ಯದ ಮೂಲಕ ಮನುಷ್ಯ ಶಾಶ್ವತನಾಗುತ್ತಾನೆಂದು ಹೇಳುತ್ತಾನೆ. ಆದರೆ, ಭಾರತೀಯ ಸಂಸ್ಕೃತಿ ಇದಕ್ಕಿಂತ ಮುಂದೆ ಸಾಗುತ್ತದೆ. ತ್ಯಾಗದಿಂದ ಶಾಶ್ವತ ಆಗುತ್ತಾರೆ ಎನ್ನುತ್ತದೆ ಭಾರತೀಯ ಸಂಸ್ಕೃತಿ. ಜಯದೇವರು ಹೀಗೆಯೇ ಎಲ್ಲವನ್ನೂ ತ್ಯಾಗ ಮಾಡುತ್ತಾ ಕಾರ್ಯ ಮಾಡಿದರು ಎಂದು ಸ್ಮರಿಸಿದರು.

ಸುತ್ತೂರು ಮಠಾಧೀಶ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಪುಸ್ತಕ ಲೋಕಾರ್ಪಣೆ ಮಾಡಿದರು. ಕೃತಿಯ ಲೇಖಕರಾದ ಡಾ. ಬಾಬು ಕೃಷ್ಣಮೂರ್ತಿ, ಬೇಳೂರು ಸುದರ್ಶನ, ರಾಷ್ಟ್ರೋತ್ಥಾನ ಪರಿಷತ್ ಅಧ್ಯಕ್ಷ ಎಂ.ಪಿ. ಕುಮಾರ್ ವೇದಿಕೆಯಲ್ಲಿದ್ದರು.

ದೇಶವ್ಯಾಪಿ ಮಿತವ್ಯಯ

ಪುಟ ೩➡ ರಾಜ್ಯ ಹಣಕಾಸು ಸಚಿವ ಸುರೇಶ್ ಕುಮಾರ್ ಖನ್ನಾ ತಮ್ಮ ಅಧಿಕೃತ ನಿವಾಸದಿಂದ ಸೈಕಲ್‌ನಲ್ಲಿ ಕಚೇರಿಗೆ ತೆರಳಿದರೆ, ಸಚಿವ ದಿನೇಶ್ ಪ್ರತಾಪ್ ಸಿಂಗ್ ಸಾರ್ವಜನಿಕ ಸಾರಿಗೆ ಬಳಸಿದರು.

ಲಖನೌನ ಸಂಜಯ್ ಗಾಂಧಿ ಸ್ನಾತಕೋತ್ತರ ವೈದ್ಯಕೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕ ರಾಧಾ ಕೃಷ್ಣ ಧೀಮನ್ ಸೈಕಲ್‌ನಲ್ಲಿ ಸಂಸ್ಥೆಗೆ ತೆರಳಿ, ವಿದ್ಯಾರ್ಥಿಗಳು, ಸಿಬ್ಬಂದಿ ಮತ್ತು ಅಧ್ಯಾಪಕರು ಅನಗತ್ಯ ವಾಹನ ಬಳಕೆಯನ್ನು ಕಡಿಮೆ ಮಾಡುವಂತೆ ಕರೆ ನೀಡಿದರು. ಕ್ಯಾಂಪಸ್‌ನಲ್ಲಿ ಸೈಕಲ್ ನಿಲ್ದಾಣಗಳನ್ನು ಸ್ಥಾಪಿಸುವುದಾಗಿ ಅವರು ಹೇಳಿದರು.

ಬರಾಬಂಕಿಯಲ್ಲಿ ಜಿಲ್ಲಾಧಿಕಾರಿ ಈಶಾನ್ ಪ್ರತಾಪ್ ಸಿಂಗ್ ಹಾಗೂ ಹೆಚ್ಚುವರಿ ಜಿಲ್ಲಾಧಿಕಾರಿ ನಿರಂಕಾರ್ ಸಿಂಗ್ ನಡೆದು ಕಲೆಕ್ಟರೇಟ್ ಕಚೇರಿಗೆ ತೆರಳಿದರು. ಸಾಧ್ಯವಾದಷ್ಟು ನಡೆದು ಹೋಗುವ ಮೂಲಕ ಇಂಧನ ಉಳಿತಾಯ ಹಾಗೂ ಪರಿಸರ ಸಂರಕ್ಷಣೆಗೆ ಕೈಜೋಡಿಸುವಂತೆ ಅವರು ಸಾರ್ವಜನಿಕರಿಗೆ ಮನವಿ ಮಾಡಿದರು. ವಾರಾಣಸಿ ಮಹಾಪೌರ ಅಶೋಕ್ ಕುಮಾರ್ ತಿವಾರಿ ಕೂಡ ನಡೆದು ಮಹಾನಗರ ಪಾಲಿಕೆ ಕಚೇರಿಗೆ ತೆರಳಿದರು. ಪ್ರತೀ ಶನಿವಾರವನ್ನು 'ನೋ ಫ್ಯುಯೆಲ್ ಡೇ' ಆಗಿ ಆಚರಿಸುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅವರು ಘೋಷಿಸಿದರು. "ಕಾಶಿಯ ಮೊದಲ ನಾಗರಿಕನಾಗಿ ಮಾದರಿಯಾಗುವುದು ನನ್ನ ಕರ್ತವ್ಯ" ಎಂದು ತಿವಾರಿ ಹೇಳಿದರು. ಇದಕ್ಕೂ ಮೊದಲು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅಧಿಕೃತ ಬೆಂಗಾವಲು ವಾಹನಗಳ ಸಂಖ್ಯೆ ಶೇ.50ರಷ್ಟು ಕಡಿತಗೊಳಿಸುವಂತೆ ಸೂಚಿಸಿ, ಸಾರ್ವಜನಿಕ ಸಾರಿಗೆ, ವರ್ಚುವಲ್ ಸಭೆಗಳು ಮತ್ತು ವರ್ಕ್ ಫ್ರಂ ಹೋಮ್ ವ್ಯವಸ್ಥೆಗೆ ಉತ್ತೇಜನ ನೀಡಿದ್ದರು.

ಫಡ್ನವೀಸ್ ಬುಲೆಟ್ ಪ್ರಯಾಣ

ಮಹಾರಾಷ್ಟ್ರದಲ್ಲಿ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಮುಂಬೈನ ವಿಧಾನ ಭವನಕ್ಕೆ ಬೈಕ್‌ನಲ್ಲಿ ತೆರಳಿ ಇಂಧನ ಉಳಿತಾಯದ ಸಂದೇಶ ನೀಡಿದರು. ಪ್ರಧಾನಿ ಮೋದಿ ಜನರಿಂದ "ಸಣ್ಣ ತ್ಯಾಗ" ಮಾತ್ರ ಕೇಳಿದ್ದಾರೆ ಎಂದು ಅವರು ಹೇಳಿ, ಸರ್ಕಾರ ಈಗಾಗಲೇ ಮಂತ್ರಿಗಳ ವಿದೇಶ ಪ್ರವಾಸ ರದ್ದು, ವಾಹನ ದಂಡು ಕಡಿತ ಹಾಗೂ ಆರು ತಿಂಗಳು ಭಾರೀ ಸರ್ಕಾರಿ ಕಾರ್ಯಕ್ರಮಗಳನ್ನು ನಿಲ್ಲಿಸುವ ನಿರ್ಧಾರ ಕೈಗೊಂಡಿದೆ ಎಂದರು.

ತಿಂಗಳಲ್ಲಿ 4 ದಿನ 'ನೋ ವೆಹಿಕಲ್ ಡೇ': ದಿಲ್ಲಿ ಮುಖ್ಯಮಂತ್ರಿ ರೇಖಾ ಗುಪ್ತಾ "ಮೇರಾ ಭಾರತ್, ಮೇರಾ ಯೋಗದಾನ್" ಅಭಿಯಾನದಲ್ಲಿ ವಾರಕ್ಕೆ ಎರಡು ದಿನ ಸರ್ಕಾರಿ ಕಚೇರಿಗಳಲ್ಲಿ ವರ್ಕ್ ಫ್ರಂ ಹೋಮ್, ವಾರದಲ್ಲಿ ಒಂದು ದಿನ 'ನೋ ವೆಹಿಕಲ್ ಡೇ' ಹಾಗೂ ಪ್ರತಿ ಸೋಮವಾರ ಸಚಿವರು ಮತ್ತು ಅಧಿಕಾರಿಗಳು ಮೆಟ್ರೋ ಪ್ರಯಾಣ ಮಾಡುವ ಕ್ರಮಗಳನ್ನು ಘೋಷಿಸಿದರು. ಸರ್ಕಾರಿ ಅಧಿಕಾರಿಗಳ ಪೆಟ್ರೋಲ್–ಡೀಸೆಲ್ ಕೋಟಾವನ್ನು ಶೇ.20ರಷ್ಟು ಕಡಿತಗೊಳಿಸಲಾಗಿದೆ. ಪಶ್ಚಿಮ ಏಷ್ಯಾದ ಯುದ್ಧದಿಂದ ಜಾಗತಿಕ ಇಂಧನ ಪೂರೈಕೆಯಲ್ಲಿ ಉಂಟಾದ ವ್ಯತ್ಯಯದ ಹಿನ್ನೆಲೆಯಲ್ಲಿ, ಕಚ್ಚಾ ತೈಲ ಮತ್ತು ಅನಿಲಕ್ಕಾಗಿ ಆ ರಾಷ್ಟ್ರಗಳ ಮೇಲೆ ಹೆಚ್ಚಿನ ಅವಲಂಬನೆ ಹೊಂದಿರುವ ಭಾರತದಲ್ಲಿ ಈ ಮಿತವ್ಯಯ ಅಭಿಯಾನಕ್ಕೆ ಹೆಚ್ಚಿನ ಮಹತ್ವ ದೊರೆತಿದೆ.

ತೆಲಂಗಾಣ ರಾಜ್ಯಪಾಲರಿಂದ ಬೆಂಗಾವಲು ವಾಹನ ಕಡಿತ

ಹೈದರಾಬಾದ್: ತೆಲಂಗಾಣ ರಾಜ್ಯಪಾಲ ಶಿವ ಪ್ರತಾಪ್ ಶುಕ್ಲಾ ತಮ್ಮ ಬೆಂಗಾವಲು ವಾಹನಗಳ ಸಂಖ್ಯೆಯನ್ನು ಶೇ.50ರಷ್ಟು ಕಡಿಮೆ ಮಾಡುವುದಾಗಿ ಘೋಷಿಸಿದರು. ರಾಜಕೀಯ ನಾಯಕರು ಅನಗತ್ಯ ವಾಹನ ಬಳಕೆ ತಗ್ಗಿಸಬೇಕು ಎಂದು ಕರೆ ನೀಡಿದ ಅವರು, ಎಲೆಕ್ಟ್ರಿಕ್ ವಾಹನಗಳ ಬಳಕೆಗೆ ಉತ್ತೇಜನ ನೀಡಬೇಕೆಂದರು.

ಮೋದಿ ಕ್ರಮ ಅನುಸರಿಸಿದ ತ್ರಿಪುರಾ ಮುಖ್ಯಮಂತ್ರಿ

ಅಗರ್ತಲಾ: ತ್ರಿಪುರಾ ಮುಖ್ಯಮಂತ್ರಿ ಮಾನಿಕ್ ಸಾಹಾ ತಮ್ಮ ಬೆಂಗಾವಲಿಗೆ ನಾಲ್ಕು ವಾಹನಗಳಿಗೆ ಸೀಮಿತಗೊಳಿಸುವಂತೆ ಸೂಚನೆ ನೀಡಿದ್ದಾರೆ. ರಾಜ್ಯದಲ್ಲಿ ಸರ್ಕಾರಿ ನೌಕರರಿಗೆ ರೊಟೇಷನ್ ಆಧಾರಿತ ವರ್ಕ್ ಫ್ರಂ ಹೋಮ್ ವ್ಯವಸ್ಥೆಯೂ ಜಾರಿಯಾಗಿದೆ. ಇದೇ ವೇಳೆ ಸರ್ಕಾರಿ ವಾಹನಗಳ ದುರುಪಯೋಗ ಕುರಿತು ಸಾರ್ವಜನಿಕ ಚರ್ಚೆ ಹೆಚ್ಚಾಗಿದೆ.

ಕೆಂಪುಕೋಟೆ ಸ್ಫೋಟ ಪ್ರಕರಣದಲ್ಲಿ 10 ಮಂದಿ ವಿರುದ್ಧ ಆರೋಪಪಟ್ಟಿ

ಸರ್ಕಾರ ಬೀಳಿಸುವ ಸಂಚು!

ಹೊಸದಿಲ್ಲಿ: ಭಾರತ ಸರ್ಕಾರವನ್ನು ಉರುಳಿಸಿ ದೇಶದಲ್ಲಿ ಶರಿಯಾ ಆಡಳಿತ ಸ್ಥಾಪಿಸುವ ಉದ್ದೇಶದಿಂದ 'ಆಪರೇಷನ್ ಹೆವನ್‌ಲಿ ಹಿಂದ್' ಹೆಸರಿನಲ್ಲಿ ಜಿಹಾದಿ ಸಂಚು ರೂಪಿಸಿದ್ದ ಅಲ್‌ಖೈದಾ ಅಂಗಸಂಸ್ಥೆ ಅನ್ಸಾರ್ ಘಜ್ವತ್-ಉಲ್-ಹಿಂದ್ ಸಂಘಟನೆಯ ಭಯೋತ್ಪಾದಕ ಜಾಲ ವನ್ನು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಬಯಲಿಗೆಳೆದಿದೆ.

ಕಳೆದ ವರ್ಷ ದಿಲ್ಲಿಯ ಕೆಂಪುಕೋಟೆ ಸಮೀಪ ಸಂಭವಿಸಿದ್ದ ಭೀಕರ ಕಾರು ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿ 10 ಮಂದಿಯ ವಿರುದ್ಧ 7,500 ಪುಟಗಳ ಮಹತ್ವದ ಆರೋಪಪಟ್ಟಿಯನ್ನು ಎನ್‌ಐಎ ಕೋರ್ಟ್‌ಗೆ ಸಲ್ಲಿಸಿದೆ.

ಪಟಿಯಾಲಾ ಹೌಸ್‌ನ ವಿಶೇಷ ಎನ್‌ಐಎ ನ್ಯಾಯಾಲಯಕ್ಕೆ ಸಲ್ಲಿಸಲಾದ ಆರೋಪಪಟ್ಟಿಯಲ್ಲಿ ಆಮಿರ್ ರಶೀದ್ ಮಿರ್, ಜಾಸಿರ್ ಬಿಲಾಲ್ ವಾನಿ, ಡಾ. ಮುಜಮಿಲ್ ಶಕೀಲ್, ಡಾ. ಅದೀಲ್ ಅಹ್ಮದ್ ರಾಥರ್, ಡಾ. ಶಾಹೀನ್ ಸಯೀದ್, ಮುಫ್ತಿ ಇರ್ಫಾನ್ ಅಹ್ಮದ್ ವಾಗೇ, ಸೋಯಬ್, ಡಾ. ಬಿಲಾಲ್ ನಸೀರ್ ಮಲ್ಲಾ ಹಾಗೂ ಯಾಸಿರ್ ಅಹ್ಮದ್ ದಾರ್ ಸೇರಿದಂತೆ 10 ಮಂದಿಯನ್ನು ಆರೋಪಿಗಳನ್ನಾಗಿ ಗುರುತಿಸಲಾಗಿದೆ. ಇವರ ವಿರುದ್ಧ ಅಕ್ರಮ ಚಟುವಟಿಕೆಗಳ ತಡೆ ಕಾಯ್ದೆ, ಭಾರತೀಯ ನ್ಯಾಯ ಸಂಹಿತೆ, ಸ್ಫೋಟಕ ವಸ್ತುಗಳ ಕಾಯ್ದೆ, ಶಸ್ತ್ರಾಸ್ತ್ರ ಕಾಯ್ದೆ ಹಾಗೂ ಸಾರ್ವಜನಿಕ ಆಸ್ತಿ ಹಾನಿ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ಎನ್‌ಐಎ ತನಿಖೆಯ ಪ್ರಕಾರ, 2022ರಲ್ಲಿ ಶ್ರೀನಗರದಲ್ಲಿ ನಡೆದ ರಹಸ್ಯ ಸಭೆಯಲ್ಲಿ ಈ ಆರೋಪಿಗಳು ಅನ್ಸಾರ್ ಘಜ್ವತ್-ಉಲ್-ಹಿಂದ್ ಇಂಟರಿಂ ಎಂಬ ಹೊಸ ಘಟಕವನ್ನು ಮರುಸಂಘಟಿಸಿದ್ದರು. ಟರ್ಕಿ ಮಾರ್ಗವಾಗಿ ಅಫ್ಘಾನಿಸ್ತಾನಕ್ಕೆ ತೆರಳುವ ಹಿಜ್ರತ್ ಯತ್ನ ವಿಫಲವಾದ ಬಳಿಕ ಭಾರತದಲ್ಲೇ ಭಯೋತ್ಪಾದಕ ಚಟುವಟಿಕೆಗಳನ್ನು ವಿಸ್ತರಿಸಲು ಸಂಚು ರೂಪಿಸಲಾಗಿತ್ತು.

ಡ್ರೋನ್, ರಾಕೆಟ್ ಬಳಕೆಗೆ ಪಿತೂರಿ

ತನಿಖೆಯಲ್ಲಿ ಆರೋಪಿ ಗಳು ಅಕ್ರಮವಾಗಿ ಎಕೆ-47 ರೈಫಲ್, ಕ್ರಿಂಕೊವ್ ರೈಫಲ್, ಪಿಸ್ತೂಲುಗಳು, ಜೀವಂತ ಗುಂಡುಗಳನ್ನು ಸಂಗ್ರಹಿಸಿದ್ದೂ ಪತ್ತೆ ಯಾಗಿದೆ. ಜಮ್ಮು-ಕಾಶ್ಮೀರ ಸೇರಿ ದೇಶದ ವಿವಿಧ ಭಾಗಗಳ ಭದ್ರತಾ ಕೇಂದ್ರಗಳ ಮೇಲೆ ದಾಳಿ ನಡೆಸುವ ಉದ್ದೇಶದಿಂದ ಡ್ರೋನ್, ರಾಕೆಟ್ ಆಧಾರಿತ ಐಇಡಿ ತಂತ್ರಜ್ಞಾನಗಳ ಮೇಲೂ ಪ್ರಯೋಗ ನಡೆಸಿದ್ದರು ಎಂದು ಎನ್‌ಐಎ ತಿಳಿಸಿದೆ. ಜಮ್ಮು-ಕಾಶ್ಮೀರ, ಹರಿಯಾಣ, ಉತ್ತರ ಪ್ರದೇಶ, ಮಹಾರಾಷ್ಟ್ರ, ಗುಜರಾತ್, ದಿಲ್ಲಿ-ಎನ್‌ಸಿಆರ್‌ಗಳಲ್ಲಿ ತನಿಖೆ ನಡೆಸಲಾಗಿದೆ.

ಪ್ರಶಸ್ತಿ, ಪ್ರೋತ್ಸಾಹಧನ ನೀಡಿ



ಬೆಂಗಳೂರು: ಮಹಾರಾಷ್ಟ್ರ ಸೇರಿದಂತೆ ಗಡಿನಾಡ ಹಾಗೂ ಹೊರನಾಡಿನ ಕನ್ನಡ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕಳೆದ ಎರಡು ವರ್ಷಗಳಿಂದ ಬಾಕಿ ಉಳಿದಿದ್ದ ಕನ್ನಡ ಮಾಧ್ಯಮ ಪ್ರಶಸ್ತಿ, ಶಿಷ್ಯವೇತನ ಹಾಗೂ ಪ್ರಸಕ್ತ ಸಾಲಿನ ಪ್ರೋತ್ಸಾಹ ಧನದ ಕುರಿತು ತುರ್ತು ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಗಡಿನಾಡಿನ ಕನ್ನಡಿಗರ ಶೈಕ್ಷಣಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಈ ವಿಷಯದಲ್ಲಿ ಯಾವುದೇ ವಿಳಂಬವಾಗದಂತೆ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಗಳು, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಇಲಾಖೆಯ ಕಾರ್ಯದರ್ಶಿಗಳಿಗೆ ನಿರ್ದೇಶನ ನೀಡಿದ್ದಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮೂಲಕ ಜಾರಿಯಾಗುವ ಕನ್ನಡ ಮಾಧ್ಯಮ ಪ್ರಶಸ್ತಿ ಯೋಜನೆಯು ಗಡಿನಾಡ, ಹೊರನಾಡಿನ ಕನ್ನಡ ಶಾಲಾ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವ ಮಹತ್ವದ ಯೋಜನೆಯಾಗಿದೆ.

ಪ್ರತಿಭಾವಂತರಿಗೆ ಆರ್ಥಿಕ ಪ್ರೋತ್ಸಾಹ

ಈ ಯೋಜನೆಯಡಿ ಹೊರನಾಡಿನ ಕನ್ನಡ ಶಾಲೆಗಳಲ್ಲಿ 10ನೇ ಮತ್ತು 12ನೇ ತರಗತಿಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಪ್ರತಿ ಶಾಲೆಯ ಮೂರು ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಲಾಗುತ್ತದೆ. ಪ್ರಥಮ ಸ್ಥಾನ 12 ಸಾವಿರ ರೂ, ದ್ವಿತೀಯ ಸ್ಥಾನ 11 ಸಾವಿರ ರೂ, ತೃತೀಯ ಸ್ಥಾನ 10 ಸಾವಿರ ರೂ.ನಗದು ಬಹುಮಾನ ನೀಡಲಾಗುತ್ತದೆ. ಇದರೊಂದಿಗೆ ವಿದ್ಯಾರ್ಥಿಗಳ ಮುಂದಿನ ವ್ಯಾಸಂಗಕ್ಕೆ ನೆರವಾಗುವ ಉಚಿತ ಶೈಕ್ಷಣಿಕ ಕಿಟ್‌ಗಳನ್ನೂ ವಿತರಿಸಲಾಗುತ್ತದೆ. ಈ ಯೋಜನೆಯಿಂದ ಹೊರನಾಡಿನ ಸುಮಾರು 500ಕ್ಕೂ ಹೆಚ್ಚು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೆರವಾಗುತ್ತಿದೆ. ಈ ಸಂಬಂಧ ಹಲವು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳನ್ನು ಭೇಟಿ ಮಾಡಿ ಸಮಸ್ಯೆಯ ಗಂಭೀರತೆಯನ್ನು ಮನವರಿಕೆ ಮಾಡಿಕೊಡಲಾಗಿತ್ತು. ಇದರ ಪರಿಣಾಮವಾಗಿ ಇದೀಗ ಸರ್ಕಾರ ಸ್ಪಂದಿಸಿದ್ದು, ತುರ್ತು ಕ್ರಮ ವಹಿಸಲು ಮುಂದಾಗಿದೆ.

ಶುಭ ಆರೈಕೆ



ಮುಂಬೈನಲ್ಲಿರುವ ರಾಷ್ಟ್ರೀಯ ಷೇರು ವಿನಿಮಯ ಕೇಂದ್ರದಲ್ಲಿ ಗುರುವಾರ ನಡೆದ ಬಾಗ್ಮನೆ ಕೇಂದ್ರ ಕಚೇರಿಯ ಬೆಲ್ ರಿಂಗಿಂಗ್ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಬಾಗ್ಮನೆ ಸಂಸ್ಥೆಗೆ ಶುಭ ಕೋರಿದರು.

ಉಮೇಶ್ ಮೇಟಿ, ಸಮರ್ಥ್ ಪ್ರಮಾಣವಚನ ಸ್ವೀಕಾರ

» ಭಗವಂತನ ಹೆಸರಿನಲ್ಲಿ ಉಮೇಶ್ ಮೇಟಿ, ತಾತನ ಹೆಸರಿನಲ್ಲಿ ಸಮರ್ಥ್ ಪ್ರಮಾಣ ವಚನ ಸ್ವೀಕಾರ



ಬೆಂಗಳೂರು: ನೂತನ ಶಾಸಕರಾಗಿ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಚುನಾಯಿತರಾಗಿದ್ದ ಉಮೇಶ್ ಹುಲ್ಲಪ್ಪ ಮೇಟಿ ಹಾಗೂ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಚುನಾಯಿತರಾಗಿದ್ದ ಸಮರ್ಥ್ ಶಾಮನೂರು ಮಲ್ಲಿಕಾರ್ಜುನ ಗುರುವಾರ ಪ್ರಮಾಣವಚನ ಸ್ವೀಕರಿಸಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರು ಇಬ್ಬರು ನೂತನ ಶಾಸಕರಿಗೆ ಅಧಿಕಾರ ಹಾಗೂ ಗೌಪ್ಯತೆಯ ಪ್ರಮಾಣವಚನ ಸ್ವೀಕರಿಸಿದರು. ಕಲ್ಲೇಶ್ವರ ಅಜ್ಜ ಹಾಗೂ ಶಾಮನೂರು ಶಿವಶಂಕರಪ್ಪ ಅವರ ಹೆಸರಿನಲ್ಲಿ ಸಮರ್ಥ್ ಪ್ರಮಾಣ ವಚನ ಸ್ವೀಕರಿಸಿದರೆ ಭಗವಂತನ ಹೆಸರಿನಲ್ಲಿ ಉಮೇಶ್ ಮೇಟಿ ಪ್ರಮಾಣವಚನ ಸ್ವೀಕರಿಸಿದರು. ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಸಂಸದೆ ಪ್ರಭಾ ಮಲ್ಲಿಕಾರ್ಜುನ್, ಮಾಜಿ ಸಚಿವ ಎಸ್.ಆರ್.ಪಾಟೀಲ್ ಮೊದಲಾದ ಗಣ್ಯರು ಉಪಸ್ಥಿತರಿದ್ದು ನೂತನ ಶಾಸಕರನ್ನು ಅಭಿನಂದಿಸಿದರು.

ಕಿರುಸುದ್ದಿ

ಕೆಎಎಂಎಸ್-ಕರ್ತವ್ಯ ಆ್ಯಪ್ ಜಾರಿಗೆ ಚಿಂತನೆ

ಬೆಂಗಳೂರು: ಡಿಜಿಟಲ್ ಆಡಳಿತ, ಪಾರದರ್ಶಕತೆ ಹಾಗೂ ಆಡಳಿತಾತ್ಮಕ ದಕ್ಷತೆಯನ್ನು ಜಾರಿಗೆ ತರುವ ಉದ್ದೇಶದಿಂದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಕರ್ನಾಟಕ ಅಡ್ವಾನ್ಸ್ಡ್ ಅಟೆಂಡೆನ್ಸ್ ಮ್ಯಾನೇಜ್‌ಮೆಂಟ್ ಸಿಸ್ಟಂ –ಕರ್ತವ್ಯ (ಕೆಎಎಂಎಸ್–ಕರ್ತವ್ಯ) ಮೊಬೈಲ್ ಅಪ್ಲಿಕೇಷನ್ ಅನ್ನು ಕಡ್ಡಾಯವಾಗಿ ಜಾರಿಗೆ ತರಲು ಮುಂದಾಗಿದೆ. ಈ ಬಗ್ಗೆ ಎಕ್ಸ್‌ನಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಮಾಹಿತಿ ಹಂಚಿಕೊಂಡಿದ್ದು, ರಾಜ್ಯದ ಸರ್ಕಾರಿ ಶಾಲೆಗಳ ಶಿಕ್ಷಕರ ಹಾಜರಾತಿ ಹಾಗೂ ಕರ್ತವ್ಯ ನಿರ್ವಹಣೆಯನ್ನು ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ಮಾಡಲು ಈ ಆ್ಯಪ್ ಸಹಕಾರಿಯಾಗಲಿದೆ ಎಂದು ತಿಳಿಸಿದೆ. ಶಿಕ್ಷಕರ ಸಮಯಪಾಲನೆ, ಶಾಲಾ ಹಾಜರಾತಿ ಮತ್ತು ಆಡಳಿತಾತ್ಮಕ ಕಾರ್ಯಚಟುವಟಿಕೆಗಳ ಮಾಹಿತಿಗಳನ್ನು ಡಿಜಿಟಲ್ ರೂಪದಲ್ಲಿ ದಾಖಲಿಸುವ ವ್ಯವಸ್ಥೆಯನ್ನು ಇಲಾಖೆ, ರೂಪಿಸಿದೆ. ಈ ಮೂಲಕ ಶಾಲಾ ಆಡಳಿತದಲ್ಲಿ ಪಾರದರ್ಶಕತೆ ಹೆಚ್ಚುವುದರ ಜತೆಗೆ ಶಿಕ್ಷಕರ ಕಾರ್ಯನಿರ್ವಹಣೆಯನ್ನು ಸಮರ್ಪಕವಾಗಿ ಗಮನಿಸಲು ಸಾಧ್ಯವಾಗಲಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಹೇಳಿದೆ.

ತನಿಖೆಗೆ ಸಂಪೂರ್ಣ ಸಹಕಾರ: ವಚನಾನಂದ ಶ್ರೀ

ದಾವಣಗೆರೆ: ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಹರಿಹರ ಪಂಚಮಸಾಲಿ ಮಠದ ಪೀಠಾಧ್ಯಕ್ಷಶ್ರೀ ವಚನಾನಂದ ಸ್ವಾಮೀಜಿ ಹರಿಹರ ಗ್ರಾಮಾಂತರ ಠಾಣೆಗೆ ವಿಚಾರಣೆಗೆಂದು ಗುರುವಾರ ಹಾಜರಾದರು. ಸತತ 4 ಗಂಟೆಗಳ ಕಾಲ ಡಿವೈಎಸ್ಪಿ ಬಸವರಾಜ, ಪಿಎಸೈ ಮಂಜುಳಾ ನೇತೃತ್ವದಲ್ಲಿ ನಡೆದ ವಿಚಾರಣೆಯಲ್ಲಿ ತನಿಖಾಧಿಕಾರಿಗಳು ಸ್ವಾಮೀಜಿಗೆ 50ಕ್ಕೂ ಹೆಚ್ಚು ಪ್ರಶ್ನೆಗಳನ್ನು ಕೇಳಿ ಮಾಹಿತಿ ಪಡೆದರು. ಮಧ್ಯಾಹ್ನದ ಊಟ ಮುಗಿಸಿದ ನಂತರ ಸ್ವಾಮೀಜಿಯನ್ನು ಸಾರ್ವಜನಿಕ ಆಸ್ಪತ್ರೆಗೆ ಕರೆತಂದು, ವೈದ್ಯಕೀಯ ಪರೀಕ್ಷೆ ಜೊತೆಗೆ ರಕ್ತದ ಮಾದರಿ ಸಂಗ್ರಹಿಸುವ ಪ್ರಕ್ರಿಯೆ ನಡೆಸಲಾಯಿತು. ವಿಚಾರಣೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಶ್ರೀ ವಚನಾನಂದ ಸ್ವಾಮೀಜಿ, ನಾವು ದೇಶದ ಕಾನೂನನ್ನು ಗೌರವಿಸುತ್ತೇವೆ ಮತ್ತು ಅದನ್ನು ಪಾಲಿಸುತ್ತೇವೆ. ತನಿಖೆಗೆ ಸಂಪೂರ್ಣ ಸಹಕಾರ ನೀಡುತ್ತೇವೆ ಎಂದು ತಿಳಿಸಿದರು.

ಹಲ್ಲೆ: ಇಬ್ಬರು ಗಂಭೀರ

ಕಲಬುರಗಿ: ಹಳೆ ವೈಷಮ್ಯದ ಹಿನ್ನೆಲೆ ಎರಡು ಗುಂಪುಗಳ ನಡುವೆ ನಡೆದ ಮಾರಾಮಾರಿಯಲ್ಲಿ ಏರ್ ಗನ್ ಹಾಗೂ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿರುವ ಘಟನೆ ನಗರದ ಖದೀರ್ ಚೌಕ್ ಪ್ರದೇಶದಲ್ಲಿ ನಡೆದಿದೆ. ಅಸ್ಲಾಂ ಪಟೇಲ್ ಅಲಿಯಾಸ್ ಬಾಂಬೆ ಅಸ್ಲಾಂ ನೇತೃತ್ವದ ಗುಂಪು ಹಾಗೂ ನೌಷೇದ್ ಪಟೇಲ್ ಗುಂಪಿನ ನಡುವೆ ಈ ಗಲಾಟೆ ನಡೆದಿದೆ ಎಂದು ತಿಳಿದುಬಂದಿದೆ. ನೌಷೇದ್ ಪಟೇಲ್ ತನ್ನ ಸ್ನೇಹಿತರೊಂದಿಗೆ ಚಹಾ ಸೇವಿಸುತ್ತಿದ್ದ ವೇಳೆ, ಅಸ್ಲಾಂ ಪಟೇಲ್ ಅಲಿಯಾಸ್ ಬಾಂಬೆ ಅಸ್ಲಾಂ, ಚಿಲ್ಲು, ಲಂಗಡೆ ಸದ್ದಾಂ, ಸಿಕ್ಕಂದರ್, ಮಾರಿ ಹಾಗೂ ರೇಹಾನ್ ಸೇರಿ ಆರು ಜನರ ಗುಂಪು ಏಕಾಏಕಿ ದಾಳಿ ನಡೆಸಿದೆ ಎನ್ನಲಾಗಿದೆ. ಘಟನೆಯಲ್ಲಿ ಬಾಂಬೆ ಅಸ್ಲಾಂ ಏರ್‌ಗನ್‌ನಿಂದ ಸೈಯದ್ ಜಿಲಾನಿ ಅವರ ಹೊಟ್ಟೆ ಭಾಗಕ್ಕೆ ಎರಡು ಬಾರಿ ಗುಂಡು ಹಾರಿಸಿದ್ದಾನೆ ಎಂದು ಆರೋಪಿಸಲಾಗಿದೆ.

ಬಿಜೆಪಿ ಮುಖಂಡರ ಖಂಡನೆ | ಶಾಲಾ–ಕಾಲೇಜು ಸಮವಸ್ತ್ರ ಸಂಹಿತೆಗೆ ಧಕ್ಕೆ| ವೋಟ್ ಬ್ಯಾಂಕ್ ರಾಜಕಾರಣ

ಹಿಜಾಬ್ ನಿಷೇಧ ವಾಪಸ್ ಸರಿಯಲ್ಲ

ನವದೆಹಲಿ: ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಹಿಜಾಬ್ ನಿಷೇಧ ಹಿಂಪಡೆದು ತನ್ನ ತುಷ್ಟೀಕರಣ ನೀತಿಯನ್ನು ಶೈಕ್ಷಣಿಕ ಅಂಗಳಕ್ಕೂ ಹೇರಿದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ್ ಜೋಶಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಈ ಕುರಿತು ಪ್ರಕಟಣೆಗೆ ತಿಳಿಸಿದ ಅವರು, ಹಿಜಾಬ್ ವಿವಾದದ ಅರ್ಜಿಗಳು ಸುಪ್ರೀಂ ಕೋರ್ಟ್ ಸಾಂವಿಧಾನಿಕ ಪೀಠದಲ್ಲಿ ಬಾಕಿ ಇರುವಾಗಲೇ ರಾಜ್ಯ ಸರ್ಕಾರ ಹಿಜಾಬ್ ನಿಷೇಧ ಹಿಂಪಡೆದಿರುವುದು ಅತ್ಯಂತ ದುರದೃಷ್ಟಕರ ಸಂಗತಿ ಎಂದು ಖಂಡಿಸಿದ್ದಾರೆ. ಶಾಲಾ–ಕಾಲೇಜು ಗಳಲ್ಲಿ 'ಸಮವಸ್ತ್ರ ಸಂಹಿತೆ' ವಿದ್ಯಾರ್ಥಿಗಳಲ್ಲಿ ಸಮಾನತೆ ಬೆಳೆಸುವ ಮೂಲ ಉದ್ದೇಶವಾಗಿದೆ. ಆದರೆ, ಕಾಂಗ್ರೆಸ್ ಸರ್ಕಾರ ಧರ್ಮಾಧಾರಿತ ಎನ್ನುವಂತೆ ಸಮವಸ್ತ್ರ ಸಂಹಿತೆಗೆ ಧಕ್ಕೆ ತರುತ್ತಿದೆ. ಸಮಾನತೆ ಬದಲು ತಾರತಮ್ಯ ತೋರುತ್ತಿದೆ ಎಂದು ಆರೋಪಿಸಿದ್ದಾರೆ.



ನ್ಯಾಯಾಂಗದ ಪ್ರಕ್ರಿಯೆಯನ್ನು ಕಡೆಗಣಿಸಿ ಸರ್ಕಾರ ಹಿಜಾಬ್ ನಿಷೇಧ ಹಿಂಪಡೆದಿರುವುದು ನ್ಯಾಯಾಂಗ ವ್ಯವಸ್ಥೆಗೆ ಮಾಡುವ ಅಪಮಾನವಾಗಿದೆ. ಒಂದು ನಿರ್ದಿಷ್ಟ ವರ್ಗವನ್ನು ಓಲೈಸಲು ಹೋಗಿ ಇಡೀ ಶೈಕ್ಷಣಿಕ ವಾತಾವರಣವನ್ನೇ ಹಾಳು ಮಾಡುತ್ತಿದೆ ಎಂದು ಕಿಡಿಕಾರಿದ್ದಾರೆ. ರಾಜ್ಯ ಕಾಂಗ್ರೆಸ್ ಸರ್ಕಾರ ವಿದ್ಯಾರ್ಥಿಗಳಲ್ಲೂ 'ವಿಭಜಕ ನೀತಿ' ಅನುಸರಿಸಿ ಶಾಲಾ ಶಿಸ್ತನ್ನು ಹದಗೆಡಿಸುವ ಹುನ್ನಾರಕ್ಕೆ ಮುಂದಾಗಿರುವುದು ನಿಜಕ್ಕೂ ಶೋಚನೀಯ ಎಂದು ಹರಿಹಾಯ್ದಿದ್ದಾರೆ.

ಕೇಂದ್ರ ಸರ್ಕಾರ ದೇಶದೆಲ್ಲೆಡೆ ಏಕರೂಪ ನಾಗರಿಕ ಸಂಹಿತೆ ಜಾರಿ ತರುತ್ತಿರುವ ಬೆನ್ನಲ್ಲೇ ಕರ್ನಾಟಕದ ಕಾಂಗ್ರೆಸ್ ಸರ್ಕಾರ ಧರ್ಮಗಳನ್ನು ಒಡೆದಾಳುವ ನೀತಿಗೆ ಕೈ ಹಾಕಿದೆ ಎಂದು ವಾಗ್ದಾಳಿ ನಡೆಸಿದ್ದಾರೆ. ಇನ್ನು ಕೇಸರಿ ಶಾಲು ಧಾರ್ಮಿಕವಲ್ಲ, ಆದರೆ, ರಾಜ್ಯ ಕಾಂಗ್ರೆಸ್ ಸರ್ಕಾರ ಯಾವ ಬಣ್ಣ ಹಾಕಬೇಕು, ಹಾಕಬಾರದೆಂಬ ಹಕ್ಕನ್ನೇ ಕಸಿದುಕೊಳ್ಳುವ ಸರ್ವಾಧಿಕಾರಿ ಧೋರಣೆ ಪ್ರದರ್ಶಿಸುತ್ತಿದೆ ಎಂದು ಸಚಿವ ಜೋಶಿ ಆರೋಪಿಸಿದ್ದಾರೆ.

ಒಂದು ವರ್ಗದ ಓಲೈಕೆಗೆ ಹಿಜಾಬ್ ಮತ್ತೆ ಮುನ್ನೆಲೆಗೆ

» ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಆರೋಪ



ಬೆಂಗಳೂರು: ಒಂದು ವರ್ಗವನ್ನು ಸಮಾಧಾನ, ಓಲೈಕೆ ಮಾಡುವುದಕ್ಕೆ ವಿವಾದಿತ ಹಿಜಾಬ್ ವಿಷಯವನ್ನು ಮತ್ತೆ ಮುನ್ನೆಲೆಗೆ ತರಲಾಗಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದ್ದಾರೆ. ಜೆಡಿಎಸ್ ಪಕ್ಷದ ರಾಜ್ಯ ಕಚೇರಿ ಜೆಪಿ ಭವನದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಉತ್ತರಿಸಿದ ಸಚಿವರು, ದಾವಣಗೆರೆ ಉಪ ಚುನಾವಣೆಯ ಫಲಿತಾಂಶ ಹೊರ ಬಂದ ನಂತರ ಕಾಂಗ್ರೆಸ್ ಪಕ್ಷಕ್ಕೆ ದಿಢೀರ್ ಜ್ಞಾನೋದಯವಾಗಿ ಈ ನಿರ್ಧಾರ ಮಾಡಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಅಷ್ಟು ಧೈರ್ಯ ಇದ್ದಿದ್ದರೆ ಅಧಿಕಾರಕ್ಕೆ ಬಂದ ಕೂಡಲೇ ಈ ಬಗ್ಗೆ ನಿರ್ಧಾರ ಕೈಗೊಳ್ಳಬೇಕಾಗಿತ್ತು. ಮೂರು ವರ್ಷದಿಂದ ಯಾಕೆ ಸುಮ್ಮನೆ ಇದ್ದರು, ದಾವಣಗೆರೆ ಉಪ ಚುನಾವಣೆಯಲ್ಲಿ ಒಂದು ಸಮುದಾಯದ ಜನರು ಮತ ಚಲಾವಣೆ ಮಾಡಿರುವ ರೀತಿಯನ್ನು ನೋಡಿ ಇವರು ಗಾಬರಿಗೆ ತುತ್ತಾಗಿ ಈ ರೀತಿ ಮಾಡುತ್ತಿದ್ದಾರೆ ಎಂದು ಅವರು ದೂರಿದರು. ಇತ್ತೀಚೆಗೆ ನಡೆದ ಪರೀಕ್ಷೆಯಲ್ಲಿ ಒಬ್ಬ ಹುಡುಗನ ಮೈ ಮೇಲಿದ್ದ ಜನಿವಾರ ತೆಗೆಸಿದರು. ಸಮರ್ಥನೆ ಮಾಡಲು ಆಗುತ್ತದೆಯೇ? ಎಲ್ಲವನ್ನು ರಾಜಕೀಯಕ್ಕಾಗಿ ಮಾಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ರಾಜಕೀಯ ಲಾಭದ ದೃಷ್ಟಿ ಬಿಟ್ಟರೆ ಸಮಾಜದ ಶಾಂತಿ ಮುಖ್ಯವಲ್ಲ ಎಂದು ಹೇಳಿದರು.

ಈ ಪ್ರಕರಣ ನ್ಯಾಯಾಲಯದಲ್ಲಿ ಇನ್ನೂ ವಿಚಾರಣೆಯಲ್ಲಿದೆ. ಹಿಜಾಬ್ ಬಗ್ಗೆ ತಡೆಯಾಜ್ಞೆ ಜಾರಿಯಲ್ಲಿದೆ. ಅದು ತೆರವಾಗದೇ ಇವರು ಇಂಥ ಆದೇಶ ಮಾಡುತ್ತಾರೆ. ನ್ಯಾಯಾಂಗಕ್ಕೂ ಈ ಸರಕಾರ ಅಪಚಾರ ಮಾಡುತ್ತಿದೆ ಎಂದು ಟೀಕಿಸಿದರು.

ವಿದ್ಯಾರ್ಥಿಗಳ ಹಿತದೃಷ್ಟಿಯಿಂದಲೇ ಸರ್ಕಾರದ ಆದೇಶ: ಸಚಿವ ದಿನೇಶ್

» ಉತ್ತಮ, ಸುಸಜ್ಜಿತ ವಾತಾವರಣ ಇರಬೇಕು ಎಂಬ ಉದ್ದೇಶದಿಂದ ಆದೇಶ ಕೈಗೊಳ್ಳಲಾಗಿದೆ

» ಮಕ್ಕಳು ಶಾಲೆಗೆ ಹೋದಾಗ ಕೆಟ್ಟ ವಾತಾವರಣ ನಿರ್ಮಾಣವಾಗಬಾರದು ಎಂಬ ಉದ್ದೇಶ



ಬೆಂಗಳೂರು: ರಾಜ್ಯದಲ್ಲಿ ಹಿಜಾಬ್‌ಗೆ ಅವಕಾಶ ನೀಡಿರುವ ಸರ್ಕಾರದ ಕ್ರಮವನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸಮರ್ಥಿಸಿಕೊಂಡಿದ್ದು, ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಬಿಜೆಪಿ ಅಲ್ಪಸಂಖ್ಯಾತರನ್ನು ಕಡೆಗಣನೆ ಮಾಡುತ್ತಿದೆ. ನಾವು ಯಾವುದೇ ಒಂದು ಸಮುದಾಯದ ಪರವಾಗಿಲ್ಲ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದಲೇ ಸರ್ಕಾರ ಈ ಆದೇಶ ಹೊರಡಿಸಿದೆ ಎಂದು ಹೇಳಿದರು. ಸಿಇಟಿ ಪರೀಕ್ಷೆ ವೇಳೆ ವಿದ್ಯಾರ್ಥಿನಿಯರಿಂದ ಹಿಜಾಬ್ ತೆಗೆಸಿದ ವಿಚಾರವನ್ನು ಉಲ್ಲೇಖಿಸಿದ ಅವರು, ಹಿಜಾಬ್ ತೆಗೆಸುವುದು ಎಷ್ಟು ಸರಿ? ಹಿಜಾಬ್ ತೆಗೆಯಿರಿ ಎಂದರೆ ವಿದ್ಯಾರ್ಥಿನಿಯರಿಗೆ ಖಿನ್ನತೆ ಆಗೋದಿಲ್ಲವೇ? ಮಕ್ಕಳು ಶಾಲೆಗೆ ಹೋದಾಗ ಕೆಟ್ಟ ವಾತಾವರಣ ನಿರ್ಮಾಣವಾಗಬಾರದು. ಉತ್ತಮ ಹಾಗೂ ಸುಸಜ್ಜಿತ ವಾತಾವರಣ ಇರಬೇಕು ಎಂಬ ಉದ್ದೇಶದಿಂದ ಈ ಆದೇಶ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಬಿಜೆಪಿ ವಿರುದ್ಧ ಟೀಕಿಸಿದ ಸಚಿವರು, ಬಿಜೆಪಿ ವಿನಾಕಾರಣ ಹೋರಾಟ ಮಾಡುತ್ತಿದೆ. ವಿದ್ಯಾರ್ಥಿಗಳ ಬಗ್ಗೆ ನಿಜವಾದ ಕಾಳಜಿ ಇದ್ದರೆ ನೀಟ್ ಪರೀಕ್ಷೆ ವಿರುದ್ಧ ಹೋರಾಟ ಮಾಡಲಿ. ಎನ್‌ಟಿಎ ವಿರುದ್ಧ ಪ್ರತಿಭಟನೆ ನಡೆಸಲಿ ಎಂದು ಸವಾಲು ಹಾಕಿದರು.

ರಾಜ್ಯದಲ್ಲಿ ನೀಟ್ ಪರೀಕ್ಷೆಯನ್ನು ರದ್ದುಪಡಿಸಿ, ಈ ಹಿಂದೆ ಸಿಇಟಿ ಮಾದರಿಯಲ್ಲಿ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಪ್ರವೇಶ ಪರೀಕ್ಷೆ ನಡೆಸುವ ವ್ಯವಸ್ಥೆ ಜಾರಿಗೆ ತರಬೇಕೆಂದು ಅವರು ಆಗ್ರಹಿಸಿದರು. 2022ರ ಹಿಜಾಬ್ ಆದೇಶವನ್ನು ಹಿಂಪಡೆದು ಸರ್ಕಾರ ಅವಕಾಶ ನೀಡಿರುವುದನ್ನು ಸಮರ್ಥಿಸಿಕೊಂಡ ಅವರು, ಕೇಸರಿ, ಹಸಿರು, ನೀಲಿ ಶಾಲ್ ಹಾಕಿಕೊಂಡು ಬರುವುದು ಯಾವ ಮಾನದಂಡದಲ್ಲಿದೆ? ಯಾವುದೇ ಶಾಲೆಯಲ್ಲೂ ಇಂತಹ ಶಾಲ್‌ಗಳಿಗೆ ಅವಕಾಶವಿಲ್ಲ. ಸಮವಸ್ತ್ರಕ್ಕೆ ಅನುಗುಣವಾಗಿ ಶಾಲ್ ಹಾಕಿಕೊಂಡು ಬರಬಹುದು. ಹಿಜಾಬ್ ಅಂದರೆ ಒಂದು ಸ್ಕಾರ್ಫ್ ಅಷ್ಟೇ, ಅದಕ್ಕೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯವಿಲ್ಲ ಎಂದು ಹೇಳಿದರು.

ವಿಭೂತಿ, ಕುಂಕುಮ ಇಟ್ಟುಕೊಂಡು ಬರುವುದು ತಪ್ಪು ಎಂದು ಹೇಳಲು ಆಗುತ್ತದೆಯೇ? 2022ರ ಮೊದಲು ಯಾವುದೇ ರೀತಿಯ ಸಮಸ್ಯೆಗಳಿರಲಿಲ್ಲ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಈ ವಿಚಾರ ದೊಡ್ಡ ಸಮಸ್ಯೆಯಾಯಿತು ಎಂದು ಅವರು ತಿಳಿಸಿದರು.

ನಾವು ಯಾವುದೇ ಸಮುದಾಯವನ್ನು ಓಲೈಕೆ ಮಾಡುವ ಕೆಲಸ ಮಾಡುತ್ತಿಲ್ಲ. ಸರ್ಕಾರದ ಆದೇಶ ಸಹಜವಾಗಿರುವ ಒಂದು ಪದ್ಧತಿಯನ್ನು ಮುಂದುವರಿಸುವ ಕ್ರಮ ಮಾತ್ರ. ಹಿಜಾಬ್ ಧರಿಸುವುದು ಹಲವು ವರ್ಷಗಳಿಂದ ನಡೆದುಕೊಂಡು ಬಂದಿರುವ ಪದ್ಧತಿ. ಹಿಂದುಗಳ ಮೇಲೆ ಭಯ ಸೃಷ್ಟಿಸುವುದು ಹಾಗೂ ಅಲ್ಪಸಂಖ್ಯಾತರ ಓಲೈಕೆ ಎಂದು ಭಾವನೆ ಮೂಡಿಸುವುದೇ ಬಿಜೆಪಿಯ ರಾಜಕೀಯ ಕಾಯಕ ಎಂದು ಸಚಿವ ದಿನೇಶ್ ಗುಂಡೂರಾವ್ ಟೀಕಿಸಿದರು.

ಹಿಜಾಬ್‌ಗೆ ಅವಕಾಶ ನೀಡಿ ಹೈಕೋರ್ಟ್ ಆದೇಶದ ಉಲ್ಲಂಘನೆ: ಕೆ.ಎಸ್.ಈಶ್ವರಪ್ಪ

ಶಿವಮೊಗ್ಗ: ಮುಸ್ಲಿಂ ತುಷ್ಟೀಕರಣ ಮುಂದುವರಿಸಿರುವ ರಾಜ್ಯ ಸರ್ಕಾರ ಹಿಜಾಬ್‌ಗೆ ಅವಕಾಶ ನೀಡಿ ಹೈಕೋರ್ಟ್ ಆದೇಶವನ್ನು ಸ್ಪಷ್ಟ ಉಲ್ಲಂಘನೆ ಮಾಡಿದೆ ಎಂದು ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ಹೇಳಿದರು. ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಅವರು, ಹಿಜಾಬ್ ಧರಿಸಿ ಕಾಲೇಜಿಗೆ ಬರುವುದನ್ನು ಈ ಹಿಂದಿನ ಬಿಜೆಪಿ ಸರ್ಕಾರ ನಿಷೇಧಿಸಿತ್ತು. ಇದನ್ನು ಹೈಕೋರ್ಟ್‌ನಲ್ಲಿಯೂ ಪ್ರಶ್ನಿಸಲಾಗಿತ್ತು. ಹೈಕೋರ್ಟ್ ಸಮವಸ್ತ್ರ ಸಂಹಿತೆಯಂತೆ ಕಾಲೇಜಿಗೆ ಬರಬೇಕು. ಹಿಜಾಬ್‌ಗೆ ಅವಕಾಶವಿಲ್ಲ ಎಂದು ಹೇಳಿತ್ತು. ಆದರೂ ರಾಜ್ಯ ಕಾಂಗ್ರೆಸ್ ಸರ್ಕಾರ ಈಗ ಮತ್ತೊಂದು ಆದೇಶ ಹೊರಡಿಸಿ ವಿವಾದಕ್ಕೆ ಕಾರಣವಾಗಿದೆ ಎಂದರು. ಹಿಜಾಬ್‌ಗೆ ಅವಕಾಶ ಕೊಟ್ಟು, ಕೇಸರಿ ಶಾಲು ಧರಿಸುವುದಕ್ಕೆ ನಿರ್ಬಂಧ ಹೇರಿದರೆ, ಶಾಲಾ ಕಾಲೇಜುಗಳಲ್ಲಿ ಮಾತ್ರವಲ್ಲ ಇಡೀ ರಾಜ್ಯ ಹಾಗೂ ವಿಧಾನ ಮಂಡಲವೂ ಕೇಸರಿಮಯವಾಗಿ ಕಾಂಗ್ರೆಸ್ ನಿರ್ನಾಮವಾಗುವುದು ಖಚಿತ ಎಂದು ಭವಿಷ್ಯ ನುಡಿದರು.



ಮುಸ್ಲಿಂ ತುಷ್ಟೀಕರಣದ ಪರಾಕಾಷ್ಠೆ ಮುಟ್ಟಿದ ಸರ್ಕಾರ: ಆರಗ ಜ್ಞಾನೇಂದ್ರ

ತೀರ್ಥಹಳ್ಳಿ: ಹಿಜಾಬ್ ನಿಷೇಧ ಮಾಡಿ ಶಾಲೆಗಳಲ್ಲಿ ಹಿಜಾಬ್ ಹಾಕಬಾರದು. ಶಾಲೆಯ ಸಮವಸ್ತ್ರಕ್ಕೆ ಆದ್ಯತೆ ನೀಡಬೇಕು ಎಂದು ನಮ್ಮ ಸರ್ಕಾರ ಆದೇಶ ಮಾಡಿತ್ತು. ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಇದನ್ನು ತೆಗೆದುಹಾಕುವ ಮೂಲಕ ಮುಸ್ಲಿಂ ತುಷ್ಟೀಕರಣದ ಪರಾಕಾಷ್ಠೆಯನ್ನು ಮುಟ್ಟಿದೆ ಎಂದು ಮಾಜಿ ಗೃಹ ಸಚಿವ ಆರಗ ಜ್ಞಾನೇಂದ್ರ ವಾಗ್ದಾಳಿ ನಡೆಸಿದರು. ಗುರುವಾರ ಮಾಧ್ಯಮಗಳಿಗೆ ವಿಡಿಯೋ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಹಿಜಾಬ್‌ನ್ನು ಮತ್ತೆ ಧರಿಸಲು ಆದೇಶವನ್ನು ನೀಡಿದೆ. ಜನಿವಾರ, ಶಿವದಾರ, ಹಿಜಾಬ್‌ನ್ನು ಹಾಕಲು ಅವಕಾಶ ಕೊಡುತ್ತೇವೆ ಎಂದು ಹೇಳಿದೆ. ನಾಚಿಕೆ ಇಲ್ಲದ ಕಾಂಗ್ರೆಸ್ ಸರ್ಕಾರ. ಇತ್ತೀಚೆಗೆ 600 ಕೋಟಿ ರೂ.ಗಳನ್ನು ಮುಸ್ಲಿಂ ಕಾನೂನಿನ ಅಭಿವೃದ್ಧಿಗೋಸ್ಕರ ಇಟ್ಟಿದಾರೆ. ಕಳೆದ 3 ಬಜೆಟ್‌ನ ಪ್ರತಿಯೊಂದು ಬಜೆಟ್‌ನಲ್ಲೂ 1600 ಕೋಟಿ ರೂ. ಮುಸ್ಲಿಂ ಮಕ್ಕಳಿಗೆ ಓದಲು, ಶಾಲೆ-ಕಾಲೇಜು ತೆರೆಯಲು ಇಟ್ಟಿದ್ದಾರೆ ಎಂದಿದ್ದಾರೆ.



ಸರ್ಕಾರದಿಂದ ಜನರ ದಾರಿ ತಪ್ಪಿಸುವ ಕೆಲಸ: ಶಾಸಕ ಯಶ್‌ಪಾಲ್ ಸುವರ್ಣ



ಬೆಂಗಳೂರು: ಹಿಜಾಬ್ ಆದೇಶ ಹಿಂಪಡೆ ಯುವ ಮೂಲಕ ಜನರ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ದಾವಣಗೆರೆ ಉಪ ಚುನಾವಣೆ ಸಂದರ್ಭದಲ್ಲೂ ಮತ್ತೊಮ್ಮೆ ಅಲ್ಪಸಂಖ್ಯಾತರನ್ನು ಓಲೈಕೆ ಮಾಡಲು ಮುಂದಾಗಿದ್ದರು ಎಂದು ಶಾಸಕ ಯಶ್‌ಪಾಲ್ ಸುವರ್ಣ ಆಕ್ಷೇಪಿಸಿದರು.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಿಸ್ತು, ಭೇದಭಾವವಿಲ್ಲದೇ, ಶ್ರೀಮಂತ–ಬಡವ ಎಂಬ ಭಾವನೆಗೆ ಅವಕಾಶ ಇರದಂತೆ ಶಾಲೆ ನಡೆಯಬೇಕೆಂಬ ಉದ್ದೇಶದಿಂದ ಸಮವಸ್ತ್ರ ವ್ಯವಸ್ಥೆಯನ್ನು ಶಾಲಾ–ಕಾಲೇಜುಗಳಲ್ಲಿ ಜಾರಿ ಮಾಡಲಾಗಿದೆ ಎಂದರು. ಮುಂದಿನ ಚುನಾವಣೆಗಳಲ್ಲಿ ಅಲ್ಪಸಂಖ್ಯಾತರು ಕಾಂಗ್ರೆಸ್ಸನ್ನು ಕೈಬಿಡುವರೇ? ಎಂಬ ಆತಂಕ ಕಾಂಗ್ರೆಸ್ಸಿಗರದು. ಎಂಐಎಂ ಅಥವಾ ಮುಸ್ಲಿಂ ಲೀಗಿನ ಮೂಲಕ ಸಂಘಟನೆ ಮಾಡಿ ಕಾಂಗ್ರೆಸ್ಸಿಗೆ ಸೆಡ್ಡು ಹೊಡೆಯುವ ಭಯದ ವಾತಾವರಣ ನಿರ್ಮಾಣವಾಗಿದೆ. ಕಾಂಗ್ರೆಸ್, ತನ್ನ ಸ್ವಾರ್ಥ ಮತ್ತು ರಾಜಕೀಯ ಲಾಭಕ್ಕಾಗಿ ವಿದ್ಯಾರ್ಥಿಗಳ ಜೀವನದಲ್ಲಿ ಚೆಲ್ಲಾಟವಾಡುತ್ತಿದೆ. ಶಾಲಾ–ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ನಡುವೆ ವಿಷಬೀಜ ಬಿತ್ತುವ ಕೆಲಸ ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಅವಿಶ್ರಾಂತ ಧ್ಯೇಯಜೀವಿ ಮೈ.ಚ. ಜಯದೇವ ಬದುಕು–ನೆನಪು ಪುಸ್ತಕ ಲೋಕಾರ್ಪಣೆ

ಸೌಹಾರ್ದಯುತ ವಾತಾವರಣಕ್ಕೆ ಶ್ರಮಿಸಿದ ಜಯದೇವ

ಬೆಂಗಳೂರು: ಎಲ್ಲರಿಗೂ ಉದ್ಯೋಗ ಪೂರ್ಣಕಾಲಿಕ ಹಾಗೂ ಬೇರೆಯದ್ದು ಅರೆಕಾಲಿಕ ಆಗಿರುತ್ತದೆ. ಆದರೆ, ಜಯದೇವ ಅವರಿಗೆ ಇಂಡಿಯಾ ಗ್ಯಾರೇಜಿನ ಉದ್ಯೋಗವೇ ಅರೆಕಾಲಿಕವಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಕಾರ್ಯವೇ ಪೂರ್ಣಕಾಲಿಕವಾಗಿತ್ತು ಎಂದು ಸುತ್ತೂರು ಮಠಾಧೀಶ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ರಾಷ್ಟ್ರೋತ್ಥಾನ ಪರಿಷತ್ ನಗರದ ಪುರಭವನದಲ್ಲಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಅವರು ಅವಿಶ್ರಾಂತ ಧ್ಯೇಯಜೀವಿ ಮೈ. ಚ. ಜಯದೇವ ಬದುಕು–ನೆನಪು ಪುಸ್ತಕ ಲೋಕಾರ್ಪಣೆ ಮಾಡಿದರು. ಜಯದೇವ ಅವರು ಮಠದ ಭಾರತೀಯ ಸಾಂಸ್ಕೃತಿಕ ಪರಿಷತ್ತಿನ ಮಾರ್ಗದರ್ಶಕರಾಗಿದ್ದರು. ಭಾರತೀಯ ಸಂಸ್ಕೃತಿಯ ಪುನರುತ್ಥಾನದಲ್ಲಿ ಮಠಮಾನ್ಯಗಳೂ ತೊಡಗಿಸಿಕೊಳ್ಳಬೇಕೆಂದು ಸಿದ್ದೇಶ್ವರ ಸ್ವಾಮೀಜಿ, ಪೇಜಾವರ ಶ್ರೀ ಮುಂತಾದವರು ಊಟಿಯಲ್ಲಿ ಆರಂಭಿಸಿದರು. ಅದರ ಸಭೆಗಳಿಗೆ ಅತ್ಯಂತ ಸಿದ್ಧವಾಗಿ ಆಗಮಿಸುತ್ತಿದ್ದವರು ಜಯದೇವ ಅವರು ಎಂದು ತಿಳಿಸಿದರು.

ವಂದೇ ಮಾತರಂನಲ್ಲಿ ಬರುವಂತೆ ಎಲ್ಲವೂ ತಾಯಿಗಾಗಿಯೇ ಎಂದು ಬದುಕು ನಡೆಸಿದವರು. ಸದಾ ಸೌಹಾರ್ದಯುತ ವಾತಾವರಣಕ್ಕೆ ಶ್ರಮಿಸಿದವರು. ತುರ್ತು ಪರಿಸ್ಥಿತಿಯ ವೇಳೆ ಸೆರೆಮನೆಗೆ ಉದ್ದೇಶಪೂರ್ವಕವಾಗಿ ಆಗಮಿಸಿ ಅಲ್ಲಿದ್ದವರಿಗೆ ಆತ್ಮಸ್ಥೈರ್ಯ, ದೇಶಭಕ್ತಿಯನ್ನು ನೀಡಿದವರು. ನಿರ್ಲಿಪ್ತವಾದ ಬದುಕನ್ನು ನಡೆಸಿದರು ಎಂದರು.

ಜಯದೇವ ಅವರು ಎಂದೂ ರಾಜ ಆಗಬೇಕೆಂದುಕೊಂಡಿದ್ದವರಲ್ಲ. ಕಿಂಗ್ ಮೇಕರ್ ಆಗಿದ್ದವರು ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಸಾವಿರಾರು ಪುಣ್ಯಕರ್ಮಗಳ ಸಂಚಯದಿಂದ ಪ್ರಾಪ್ತವಾದ ಮನುಷ್ಯ ಜೀವನವನ್ನು ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು ಎಂಬ ಮಾತಿಗರ ಅನ್ವರ್ಥರಾಗಿದ್ದವರು ಜಯದೇವರು. ಯಾವುದೇ ಅಧಿಕಾರಕ್ಕೆ ಆಸೆ ಪಟ್ಟವರಲ್ಲ. ಅವರು ಇದ್ದಷ್ಟೂ ಕಾಲ ಸಂಸ್ಥೆಗಳಿಗೆ ಮೀಸಲಿಟ್ಟು ಕಟ್ಟಿ ಬೆಳೆಸಿದರು. ಅವರ ಧ್ಯೇಯಾದರ್ಶಗಳು ನಮ್ಮೊಂದಿಗೆ ಇರುತ್ತವೆ ಎಂದು ಹೇಳಿದರು.



ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಪುಸ್ತಕದ ಕುರಿತು ಮಾತನಾಡಿದರು. ಕೃತಿಯ ಲೇಖಕರಾದ ಡಾ. ಬಾಬು ಕೃಷ್ಣಮೂರ್ತಿ, ಬೇಳೂರು ಸುದರ್ಶನ, ರಾಷ್ಟ್ರೋತ್ಥಾನ ಪರಿಷತ್ ಅಧ್ಯಕ್ಷ ಎಂ.ಪಿ. ಕುಮಾರ್ ವೇದಿಕೆಯಲ್ಲಿದ್ದರು. ಪರಿಷತ್ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಪ್ರಾಸ್ತಾವಿಕ ಮಾತುಗಳನ್ನಾಡಿದರು.

> **ಪರಿಷತ್ತು ಯಾವ ದಿಕ್ಕಿನಲ್ಲಿ ಸಾಗಬೇಕೆಂದು ಅವರಿಗೆ ಸ್ಪಷ್ಟತೆ ಇದ್ದಿದ್ದರಿಂದ ಈ ಮಟ್ಟಕ್ಕೆ ಬೆಳೆಯಲು ಸಾಧ್ಯವಾಗಿದೆ. ಸರ್ವಾಂತರ್ಗತ ವೈದ್ಯಕೀಯ ಸೇವೆ ಸಿಗಬೇಕು ಎಂದು ಅವರ ಅಪೇಕ್ಷೆಯಾಗಿತ್ತು. ಅದು ಇಂದು ರಾಜರಾಜೇಶ್ವರಿ ನಗರದಲ್ಲಿ ಅವರದ್ದೇ ಹೆಸರಿನ ಆಸ್ಪತ್ರೆಯಾಗಿ ಸಾಕಾರಗೊಂಡಿದೆ.**
>
> ■ **ನಾ. ದಿನೇಶ್ ಹೆಗ್ಡೆ, ರಾಷ್ಟ್ರೋತ್ಥಾನ ಪರಿಷತ್ ಪ್ರಧಾನ ಕಾರ್ಯದರ್ಶಿ**

> **ಅನೇಕ ಸಂಸ್ಥೆಗಳನ್ನು ಕಟ್ಟಿ ನೂರಾರು ಚಟುವಟಿಕೆಗಳನ್ನು ಹಾಗೂ ಎಂದಿಗೂ ವಿಶ್ರಮಿಸದೆ ಪಾಲಿಗೆ ಬಂದ ಎಲ್ಲ ಕೆಲಸಗಳನ್ನೂ ಸಮಚಿತ್ತ, ಆತ್ಮವಿಶ್ವಾಸ, ಬದ್ಧತೆಯಿಂದ ಪೂರ್ಣಗೊಳಿಸಿದವರು ಜಯದೇವ ಅವರು. ನಿರ್ಮೋಹಿಯಾಗಿ ಸಂಘಕ್ಕೆ ತನ್ನನ್ನು ಸಮರ್ಪಣೆ ಮಾಡಿಕೊಂಡವರು. ಅವರ ಜೀವನ ನೆನೆದರೆ ಅನೇಕ ಕ್ರಾಂತಿಕಾರಿಗಳ ಜೀವನ ನೆನಪಾಗುತ್ತದೆ.**
>
> ■ **ಬಾಬು ಕೃಷ್ಣಮೂರ್ತಿ, ಕೃತಿಯ ಲೇಖಕ**

ಆರ್‌ಎಸ್‌ಎಸ್ ಸಹಸರಕಾರ್ಯವಾಹ ಸಿ.ಆರ್. ಮುಕುಂದ, ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ ಮುಂತಾದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕೇಂದ್ರದ ಆಡಳಿತಾತ್ಮಕ ವೈಫಲ್ಯ: ಸಿದ್ದರಾಮಯ್ಯ

ನೀಟ್ ಪರೀಕ್ಷೆ ರದ್ದು: ದ್ರೋಹ

ಬೆಂಗಳೂರು: ದೇಶಾದ್ಯಂತ 22 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಬರೆದಿದ್ದ ನೀಟ್–ಯುಜಿ 2026 ಪರೀಕ್ಷೆಯನ್ನು ರದ್ದುಗೊಳಿಸಿರುವ ಕೇಂದ್ರ ಸರ್ಕಾರದ ನಿರ್ಧಾರವು ಆಡಳಿತಾತ್ಮಕ ವೈಫಲ್ಯ ಮಾತ್ರವಲ್ಲ, ದೇಶದ ಯುವಜನತೆಗೆ ಬಗೆದ ಕ್ರೂರ ದ್ರೋಹವಾಗಿದೆ ಎಂದು ಸಿಎಂ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನೀಟ್ ರದ್ದತಿ ಬಗ್ಗೆ ಮಾಧ್ಯಮ ಹೇಳಿಕೆ ನೀಡಿರುವ ಅವರು, ಕರ್ನಾಟಕದ 1 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಸೇರಿದಂತೆ ದೇಶದ 22 ಲಕ್ಷಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ತಿಂಗಳುಗಟ್ಟಲೆ ಶ್ರಮಪಟ್ಟು ಈ ಪರೀಕ್ಷೆ ಬರೆದಿದ್ದರು. ಪೋಷಕರು ತಮ್ಮ ಮಕ್ಕಳ ಭವಿಷ್ಯಕ್ಕಾಗಿ ತರಬೇತಿ, ಪ್ರಯಾಣ ಸೇರಿದಂತೆ ಸಾಕಷ್ಟು ಖರ್ಚುಗಳನ್ನು ಮಾಡಿದ್ದರು. ಆದರೆ ಕೇಂದ್ರದ ಒಂದು ನಿರ್ಧಾರ ಇಡೀ ವಿದ್ಯಾರ್ಥಿ ಸಮುದಾಯವನ್ನು ಅನಿಶ್ಚಿತತೆ ಮತ್ತು ಸಂಕಷ್ಟಕ್ಕೆ ತಳ್ಳಿದೆ ಎಂದು ಕಿಡಿಕಾರಿದ್ದಾರೆ.

2024ರಲ್ಲೇ ನಮ್ಮ ಸರ್ಕಾರವು ನೀಟ್ ಪರೀಕ್ಷೆಯು ಗ್ರಾಮೀಣ ಮತ್ತು ಬಡ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡುತ್ತದೆ. ಶಾಲಾ ಶಿಕ್ಷಣ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತದೆ ಮತ್ತು ದಾಖಲಾತಿ ವಿಚಾರದಲ್ಲಿ ರಾಜ್ಯಗಳ ಅಧಿಕಾರವನ್ನು ಕಸಿದುಕೊಳ್ಳುತ್ತದೆ ಎಂದು ಆಕ್ಷೇಪ ವ್ಯಕ್ತಪಡಿಸಿ, ಸದನ ನಿರ್ಣಯ ಕೈಗೊಂಡಿದ್ದೇವು. ಅಂದಿನ ನಮ್ಮ ಕಾಳಜಿ ಎಷ್ಟು ಸತ್ಯ ಮತ್ತು ಅನಿವಾರ್ಯವಾಗಿತ್ತು ಎನ್ನುವುದನ್ನು ಇಂದಿನ ಪರೀಕ್ಷಾ ರದ್ಧತಿಯು ಸಾಬೀತುಪಡಿಸಿದೆ ಎಂದು ದೂರಿದ್ದಾರೆ. ಈ ಬಗ್ಗೆ ಪಾರದರ್ಶಕ, ಕಾಲಮಿತಿಯ ತನಿಖೆ ನಡೆಸಬೇಕು. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ನೀಡಬೇಕು. ಹೊಸ ಪರೀಕ್ಷಾ ವೇಳಾಪಟ್ಟಿಯ ಬಗ್ಗೆ ಕೂಡಲೇ ಸ್ಪಷ್ಟನೆ ನೀಡಬೇಕು ಮತ್ತು ಅಂತಹ ಪ್ರವೇಶ ಪರೀಕ್ಷೆಗಳನ್ನು ನಡೆಸುವ ರಾಜ್ಯಗಳ ಅಧಿಕಾರವನ್ನು ಪುನಃ ಸ್ಥಾಪಿಸಬೇಕು ಎಂಬುದು ನಮ್ಮ ಒತ್ತಾಯವಾಗಿದೆ. ಪೇಪರ್ ಲೀಕ್‌ನಿಂದ ತೊಂದರೆಗೀಡಾಗಿರುವ ಪ್ರತಿಯೊಬ್ಬ ವಿದ್ಯಾರ್ಥಿ ಮತ್ತು ಪೋಷಕರ ಜೊತೆ ನಾವಿದ್ದೇವೆ. ಅವರ ಪರಿಶ್ರಮಕ್ಕೆ ತಕ್ಕ ಫಲ ಸಿಗುವಂತೆ ಮಾಡುವುದು ಮತ್ತು ವಿದ್ಯಾರ್ಥಿಗಳ ಭವಿಷ್ಯವನ್ನು ರಕ್ಷಿಸುವುದು ನಮ್ಮ ಕರ್ತವ್ಯ ಎಂದಿದ್ದಾರೆ.

ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಲಿ

ನೇಮಕಾತಿ ಪರೀಕ್ಷೆಗಳಿಂದ ಹಿಡಿದು ರಾಷ್ಟ್ರೀಯ ಪ್ರವೇಶ ಪರೀಕ್ಷೆಗಳವರೆಗೆ ಪೇಪರ್ ಲೀಕ್ ಪ್ರಕರಣಗಳು ಪ್ರತಿಭಾವಂತ ವಿದ್ಯಾರ್ಥಿಗಳ ಹಿತರಕ್ಷಣೆಯಲ್ಲಿ ಕೇಂದ್ರ ಸರ್ಕಾರದ ವೈಫಲ್ಯಕ್ಕೆ ಸಾಕ್ಷಿಯಾಗಿವೆ. ಹೊಣೆ ಹೊರಬೇಕಾದ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಮಾಧ್ಯಮಗಳಿಂದ ದೂರ ಉಳಿದಿದ್ದಾರೆ. ಯುವಜನತೆಯ ಬಗ್ಗೆ ಕಿಂಚಿತ್ತೂ ಕಾಳಜಿಯಿಲ್ಲದ ಅವರು ರಾಜೀನಾಮೆ ನೀಡಬೇಕೆಂದು ಆಗ್ರಹಿಸಿದ್ದಾರೆ.

ಸಂಪಾದಕೀಯ

ವಿಶ್ವಶಾಂತಿ ಬಯಸಿದರೆ ತಪ್ಪೇನು?

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರಯ ಹೊಸಬಾಳೆಯವರ ಎರಡು ಹೇಳಿಕೆಗಳ ಬಗ್ಗೆ ಚರ್ಚೆ ನಡೆಯುತ್ತಿದೆ. ಸಂಘದ ಪ್ರಮುಖರ ಹೇಳಿಕೆಗಳ ಬಗ್ಗೆ ಚರ್ಚೆ ನಡೆಯುವುದು ಉತ್ತಮ ಸಂಗತಿಯೇ ಆದರೂ ಎರಡು ಸಂಗತಿಗಳನ್ನು ಆದಷ್ಟೂ ವಿವಾದವನ್ನಾಗಿ ಪರಿವರ್ತಿಸುವ ಹುನ್ನಾರ ನಡೆಯುತಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಸುದ್ದಿಸಂಸ್ಥೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಹೊಸಬಾಳೆಯವರು ಅನೇಕ ಸಂಗತಿಗಳ ಬಗ್ಗೆ ಮುಕ್ತ ಮಾತುಕತೆ ನಡೆಸಿದ್ದರು. ಲವ್ ಜಿಹಾದಿನ ಬಗ್ಗೆ ಮಾತನಾಡುತ್ತಾ



ಅವರು ಶುದ್ಧ ಪ್ರೀತಿಗೆ ಯಾರ ವಿರೋಧವಿಲ್ಲ, ಆದರೆ ಉದ್ದೇಶಪೂರ್ವಕ ಮತಾಂತರ ಅಪಾಯಕಾರಿ ಎಂದಿದ್ದರು. ಇದನ್ನು ಚರ್ಚೆ ನಡೆಸುವ ದಾರಿ ಬೇರೆ ಇರಬೇಕಿತ್ತು. ಏಕೆಂದರೆ ಶುದ್ಧ ಪ್ರೀತಿಯನ್ನು ವಿಚಾರವಂತರೆಲ್ಲರೂ ಒಪ್ಪುತ್ತಾರೆ. ಪಾಕಿಸ್ಥಾನದ ಜತೆ ಮಾತುಕತೆಗೆ ಭಾರತ ಮುಕ್ತವಾಗಿರಬೇಕು ಎನ್ನುವ ಇನ್ನೊಂದು ಹೇಳಿಕೆಯನ್ನು ಕಾಂಗ್ರೆಸ್ ವಕ್ತಾರರ ಸಹಿತ ಅನೇಕರು ವ್ಯಂಗ್ಯವಾಡಿದ್ದಾರೆ. ಇದರಲ್ಲೇನೂ ಆಭಾಸ ಇರಲಿಲ್ಲ. ಅದು ಹೊಸಬಾಳೆಯವರ ಅಮೆರಿಕ ಪ್ರವಾಸದ ಕಾರಣ ಇರಬಹುದು ಎಂದು ಹಿರಿಯ ಕಾಂಗ್ರೆಸಿಗ ಜೈರಾಂ ರಮೇಶ್ ಅವರಂಥವರೇ ಪ್ರತಿಕ್ರಿಯಿಸಿದ್ದಾರೆ. ಹಾಗಾದರೆ ಏನು ಮಾಡಬೇಕಿತ್ತು. ಪಾಕಿಸ್ಥಾನದೊಂದಿಗೆ ಚರ್ಚೆಯ ಎಲ್ಲಾ ಬಾಗಿಲುಗಳನ್ನು ಮುಚ್ಚಬೇಕೆನ್ನಬೇಕಿತ್ತೇ? ಪಾಕಿಸ್ಥಾನ ಭಯೋತ್ಪಾದನೆಯನ್ನು ಪೋಷಿಸುತ್ತಿದೆ ಮತ್ತು ಭಾರತದ ವಿರುದ್ಧ ಅದನ್ನು ಬಳಸುತ್ತಿದೆ ಎನ್ನುವುದರಲ್ಲಿ ಯಾವ ದೇಶಗಳಿಗೂ ಇಂದು ಸಂಶಯವಿಲ್ಲ. ಭಾರತ ಸದಾ ಶಾಂತಿಯನ್ನು ಪೋಷಿಸುವ ದೇಶ ಎನ್ನುವುದನ್ನು ಒಪ್ಪುವವರೆಲ್ಲರೂ ಹೊಸಬಾಳೆಯವರ ಹೇಳಿಕೆಯನ್ನು ಸ್ವಾಗತಿಸಲೇಬೇಕು. ಭಾರತವು ಭಯೋತ್ಪಾದನಾ ದಾಳಿಯನ್ನೆದುರಿಸಿದಾಗಲೆಲ್ಲಾ ತಕ್ಕ ಉತ್ತರವನ್ನು ನೀಡಿದೆ. ಆದರೆ ಶಾಂತಿಯ ಹಾದಿ ದೀರ್ಘಾವಧಿಯದ್ದು. ಯುದ್ಧ ಮತ್ತು ಶಾಂತಿ ಎರಡು ಧ್ರುವಗಳದ್ದು. ಶಾಂತಿಯ ಹಾದಿಯಲ್ಲಿ ಅನೇಕ ಪ್ರಕ್ರಿಯೆಗಳು ನಡೆಯಬೇಕಿವೆ.

ಹಿಂದಿನಂತೆ ಕ್ರಿಕೆಟ್ ಪಂದ್ಯಾವಳಿಯೇ ಪರಿಹಾರ ಎಂದು ನಂಬುವ ಸ್ಥಿತಿಯಲ್ಲಿ ಇಂದು ದೇಶ ಇಲ್ಲ. ಭಾರತ ಇಂದು ತನ್ನ ಶಕ್ತಿ ಸಾಮರ್ಥ್ಯಗಳನ್ನು ವೃದ್ಧಿಸಿಕೊಂಡಿದೆ. ತಾಕತ್ತಿನಲ್ಲಿ ಶಾಂತಿಯನ್ನು ಬಯಸುವುದಕ್ಕೂ ದೌರ್ಬಲ್ಯವಿಟ್ಟುಕೊಂಡು ಶಾಂತಿಯ ಮಾತಾಡುವುದಕ್ಕೂ ವ್ಯತ್ಯಾಸವಿಲ್ಲವೇ? ಒಂದು ವೇಳೆ ಹೊಸಬಾಳೆಯವರು ಮಾತುಕತೆಯ ಎಲ್ಲಾ ಬಾಗಿಲುಗಳನ್ನು ಮುಚ್ಚಬೇಕು ಎಂದಿದ್ದರೂ ಕಾಂಗ್ರೆಸ್ ನಾಯಕರು ಅದನ್ನು ಆರೆಸ್ಸೆಸ್ ಹಿಂಸೆಯನ್ನು ಪ್ರಚೋದಿಸುತ್ತದೆ ಎಂದು ಆರೋಪಿಸುತ್ತಿತ್ತು. ಆರೆಸ್ಸೆಸ್ ಪ್ರತಿಪಾದಿಸುವ ಹಿಂದುತ್ವದ ಸಿದ್ಧಾಂತದ ಅಂತಿಮ ಗುರಿ ವಿಶ್ವಶಾಂತಿ ಎನ್ನುವುದನ್ನು ಅರಿಯದಿದ್ದರೆ ಮೊಸರಲ್ಲೂ ಕಲ್ಲು ಹುಡುಕುವ ಇಂಥ ಹೇಳಿಕೆಗಳು ಹುಟ್ಟುತ್ತವೆ. ಲವ್ ಜಿಹಾದ್ ಪದ ಕೂಡ ಆರೆಸ್ಸೆಸ್ ಕೊಡುಗೆಯಲ್ಲ ಎನ್ನುವುದನ್ನು ಚರ್ಚಿಸಿದ್ದರೆ ಸಮಾಜಿಕ ಶಾಂತಿಯ ಹೊಸ ವ್ಯಾಖ್ಯಾನವನ್ನು ಬರೆಯುವ ಅವಕಾಶಗಳಿದ್ದವು. ಸರಕಾರ್ಯವಾಹರ ಅಮೆರಿಕಾ ಪ್ರವಾಸಕ್ಕೂ ಶಾಂತಿಯನ್ನು ಬಯಸುವ ಹೇಳಿಕೆಗೂ ನಂಟಸ್ಥನ ಕಟ್ಟುವ ಹೇಳಿಕೆ ಬಾಲಿಶತನದ್ದು ಮಾತ್ರವಲ್ಲ, ಮೂರ್ಖತನದ್ದು. ಅದರಲ್ಲೂ ಭಯೋತ್ಪಾದನೆಗೆ ತಿರುಗೇಟು ಕೊಟ್ಟಾಗ ವಿರೋಧಿಸುವ ಮತ್ತು ಸೈನಿಕ ಕಾರ್ಯಾಚರಣೆಗಳಿಗೆ ಸಾಕ್ಷಿ ಕೇಳುವ ಮಾನಸಿಕತೆಗೆ ಪ್ರಾಮಾಣಿಕವಾಗಿ ಶಾಂತಿಯ ಅಪೇಕ್ಷೆ ಇಲ್ಲವೆಂದೇ ಹೇಳಬೇಕು.

ವಿನಾ ಬೀಜಂ ಕಥಂ ವೃಕ್ಷಃ

ಜ್ಞಾನಂ ವಿನಾ ಕುತೋ ಮುಕ್ತಿಃ ವಿನಾ ಸ್ನಾನ ಶಯೇ ಕುತಃ ।
ವಿನಾ ಬೀಜಂ ಕಥಾ ವೃಕೋ ವಿನಾ ವಿತ್ತಂ ಕಥಂ ಸುಖಮ್ ॥ –ಸುವಚನಶತಕಮ್

ಜ್ಞಾನವಿಲ್ಲದೆ ಮುಕ್ತಿ ಉಂಟಾಗುವುದು ಹೇಗೆ? ಸ್ನಾನವಿಲ್ಲದೆ ಶುಚಿಯಾಗುವುದು ಹೇಗೆ? ಬೀಜವಿಲ್ಲದೆ ಮರ ಹುಟ್ಟುವುದು ಸಾಧ್ಯವೇ? ಹಣವಿಲ್ಲದೆ ಸುಖ ಎಲ್ಲಿದೆ – ಎಂಬುದು ಶ್ಲೋಕಾರ್ಥ.

'ಅರ್ಥ ಸರ್ವ ಜಗನ್ಮೂಲಮ್' ಎಂಬ ಲೋಕೋಕ್ತಿಯಿದೆ. ಲೋಕದ ಸಕಲ ವ್ಯಾಪಾರಕ್ಕೂ ವ್ಯವಹಾರಕ್ಕೂ ಹಣವೇ ಮೂಲ ಎಂಬುದು ಇದರ ಅರ್ಥ. ಆದ್ದರಿಂದ ಎಲ್ಲರೂ ಅರ್ಥವಂತರಾಗಬೇಕು. ಶ್ರಮವರಿಯದೇ ದುಡಿದು ಸಂಪತ್ತನ್ನು ಗಳಿಸಬೇಕು. ತನ್ಮೂಲಕ ಜೀವನವನ್ನು ನಿರ್ವಹಣೆ ಮಾಡಬೇಕು ಎಂಬುದು ತಾತ್ಪರ್ಯ.



ಧರ್ಮ, ಕಾಮಗಳಿಗೂ ಅರ್ಥವೇ ಬೇಕು. ಅರ್ಥವಿಲ್ಲದವನು ಇವೆರಡನ್ನೂ ಪೂರೈಸಿಕೊಳ್ಳಲಾರ.

ಲೋಕದಲ್ಲಿ ಹಣವಿರುವವರಿಗೆ ವಿಶಿಷ್ಟವಾದ ಸ್ಥಾನಮಾನಾದಿಗಳು ಲಭ್ಯವಾಗುತ್ತವೆ. ಲೋಕವೂ ಇಂಥವರನ್ನೇ ಆಧರಿಸುತ್ತದೆ. ಸಂಪತ್ತು ನಮ್ಮಲ್ಲಿಲ್ಲದ ಗುಣಗಳನ್ನು ತಂದುಕೊಡುತ್ತದೆ. 'ಅರ್ಥವಾನ್ ದುಷ್ಕುಲೀನೋಽಪಿ ಲೋಕೇ ಪೂಜ್ಯತವೋ ನರಃ' ಅಂದರೆ ಹಣವಿರುವಾತನು ಕುಲಹೀನನಾದರೂ ಲೋಕದಲ್ಲಿ ಪರಮಪೂಜ್ಯ ಎಂಬುದು ಇದರ ಅರ್ಥ. ಇದರಿಂದಲೇ ಸಂಪತ್ತಿನ ಮಹಿಮೆ ಮನದಟ್ಟಾಗುತ್ತದೆ. ಆದ್ದರಿಂದಲೇ ಚಾಣಕ್ಯ 'ಅರ್ಥಾರ್ಥಂ ಪ್ರವರ್ತತೇ ಲೋಕಃ' ಎಂದಿದ್ದಾನೆ. 'ಅರ್ಥಾಃ ಬಹಿಷ್ಚಕಪ್ರಾಣಾಃ ಅರ್ಥವಾನೇವ ಭೂಪತಿಃ' ಎಂಬ ಸೂಕ್ತಿ ಪ್ರಸಿದ್ಧವೆನಿಸಿದೆ. ಪ್ರಚಲಿತದಲ್ಲಿದೆ ಕೂಡ. ಐಶ್ವರ್ಯಗಳು ಮನುಷ್ಯನ ಹೊರಗಿನ ಪ್ರಾಣಗಳು. ಹಣವುಳ್ಳವನೇ ಭೂಪತಿ. ಇದನ್ನು ಹೊರ ಪ್ರಪಂಚದಲ್ಲಿ ನಿತ್ಯವೂ ಕಾಣುತ್ತೇವೆ.

ಜೀವನದಲ್ಲಿ ಸುಖ ಪಡಬೇಕೆಂದಾದರೆ ಸಂಪತ್ತಿರಬೇಕು. ಸಂಪತ್ತನ್ನು ಗಳಿಸಬೇಕು. ಲೋಕದಲ್ಲಿ ಸಂಪತ್ತಿರುವವರಿಗೆ ಮಿತಿಮೀರಿ ಗೌರವವನ್ನು ಕೊಡುತ್ತಾರೆ. ಆದ್ದರಿಂದ ಏನಕೇನ ಪ್ರಕಾರೇಣ ಸಂಪತ್ತನ್ನು ಗಳಿಸಬೇಕು. ಸುಖದ ಮೂಲ ಸಂಪತ್ತು. ಸಂಪತ್ತಿಲ್ಲದೆ ಸುಖವಿಲ್ಲ ಎನ್ನುತ್ತಾ ಪ್ರಕೃತ ಶ್ಲೋಕ ಸೋದಾಹರಣವಾಗಿ ಹಣದ ಹಿರಿಮೆಯನ್ನು ಮುಕ್ತವಾಗಿ ಸಾರಿದೆ.

ಮುಕ್ತಿ ಬದುಕಿನ ಪರಮ ಗುರಿ. ಮುಕ್ತಿ ಎಂಬುದು ಸುಲಭವಾಗಿ ಪ್ರಾಪ್ತವಾಗುವುದಿಲ್ಲ. ಮುಕ್ತಿ ಪಡೆಯಲು ಜ್ಞಾನ ಬೇಕು. ಮುಕ್ತಿ ಪ್ರಾಪ್ತಿಗೆ ಇರುವ ಏಕೈಕ ಮಾರ್ಗವೆಂದರೆ ಜ್ಞಾನ ಮಾತ್ರ. ಶರೀರ ಶುದ್ಧವಾಗುವುದಕ್ಕೆ ಸ್ನಾನ ಮಾಡಬೇಕು. "ಸ್ನಾನೇನ ಶುದ್ಧಿಃ ನ ತು ಚಂದನೇನ' ಸ್ನಾನದಿಂದಲೇ ಶರೀರ ಶುದ್ಧಿಯೇ ವಿನಾ ಚಂದನ ಮೊದಲಾದ ಲೇಪನ ದ್ರವ್ಯದಿಂದ ಶರೀರವೆಂದೂ ಶುದ್ಧವಾಗಲಾರದು. ಇನ್ನು ಅನಿವಾರ್ಯ ಪ್ರಸಂಗಗಳಲ್ಲಿ ಮೃತ್ ಶುದ್ಧಿ, ಸಂಪ್ರೋಕ್ಷಣ ಶುದ್ಧಿ, ಮಂತ್ರ ಶುದ್ಧಿ ಇವುಗಳು ಶರೀರವನ್ನು ಶುದ್ಧಿಗೊಳಿಸುತ್ತದೆ ಎನ್ನುತ್ತಾರೆ. ಏನಿದ್ದರೂ ಸ್ನಾನ ಬೇಕು.

'ಬೀಜವಿಲ್ಲದೆ ವೃಕ್ಷವಿಲ್ಲ' ಎನ್ನುತ್ತಾರೆ. ವೃಕ್ಷದ ಮೂಲ ಬೀಜವೇ. ಉತ್ತಮ ಜಾತಿಯ ಗಿಡಗಳಿಗೆ ಕಸಿ ಮಾಡುವ ಪರಂಪರೆ ಇದೆ. ಆದರೆ ಅದು ಬೀಜದ ಪ್ರತಿರೂಪವೇ. ಒಟ್ಟಿನಲ್ಲಿ ಉತ್ತಮ ಬೀಜ ಉತ್ತಮ ವೃಕ್ಷಕ್ಕೆ ಕಾರಣ ಎಂಬುದು ತ್ರಿಕಾಲಾಭಾದಿತ ಸತ್ಯ.

ಮೋದಿ ವಿಶ್ವದ ಅತ್ಯಂತ ಜನಪ್ರಿಯ ರಾಜಕಾರಣಿ

▸ ಎರಿಕ್ ಸೊಲ್ಹೈಮ್

ಪರಿಸರದ ಮೇಲೆ ನರೇಂದ್ರ ಮೋದಿಯವರಿಗಿರುವ ಅಚಲ ವಿಶ್ವಾಸದಿಂದ ಪಾಶ್ಚಿಮಾತ್ಯ ದೇಶಗಳು ಕಲಿಯಬೇಕಾದದ್ದು ಸಾಕಷ್ಟಿದೆ. ಮುಂಬರುವ ಸೋಮವಾರ, ಮೇ 18ರಂದು ವಿಶ್ವದ ಅತ್ಯಂತ ಜನಪ್ರಿಯ ರಾಜಕಾರಣಿ ನಾರ್ವೆಗೆ ಭೇಟಿ ನೀಡಲಿದ್ದಾರೆ. ಭಾರತದ ಪ್ರಧಾನಿ ನರೇಂದ್ರ ಮೋದಿಯವರನ್ನು ಅಲ್ಲಿನ ದೊರೆ ಹರಾಲ್ಡ್ ಗೌರವಪೂರ್ವಕವಾಗಿ ಬರಮಾಡಿಕೊಳ್ಳಲಿದ್ದಾರೆ. ಈ ಭೇಟಿಯ ಅವಧಿಯಲ್ಲಿ ಮೋದಿ ಅವರು ಭಾರತೀಯ ಉದ್ಯಮಗಳಿಗೆ ಉತ್ತೇಜನ ನೀಡಲಿದ್ದಾರೆ, ಅಲ್ಲಿನ ಅನಿವಾಸಿ ಭಾರತೀಯರನ್ನು ಭೇಟಿಯಾಗಲಿದ್ದಾರೆ ಹಾಗೂ 'ಭಾರತ–ನಾರ್ಡಿಕ್' ಪ್ರಧಾನ ಮಂತ್ರಿಗಳ ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ. ನಿಜ ಹೇಳಬೇಕೆಂದರೆ, ನಾರ್ಡಿಕ್ ದೇಶಗಳ ಪ್ರಧಾನಮಂತ್ರಿಗಳು ಮೋದಿಯವರ ಮಾತುಗಳನ್ನು ಬಹಳ ಎಚ್ಚರಿಕೆಯಿಂದ ಆಲಿಸಬೇಕಿದೆ; ಏಕೆಂದರೆ ತಮ್ಮ ಭಾರತೀಯ ಸಹೋದ್ಯೋಗಿಯಿಂದ ಅವರು ಕಲಿಯಬೇಕಾದ ಅಂಶಗಳು ಸಾಕಷ್ಟಿವೆ.

ನಾರ್ಡಿಕ್ ದೇಶಗಳ ಪ್ರಧಾನಮಂತ್ರಿಗಳಿಗೆ ಸ್ವದೇಶದಲ್ಲೇ ಇರುವ ಜನಪ್ರಿಯತೆ ಕೇವಲ ಶೇ. 30ರಷ್ಟಿದ್ದರೆ, ಮೋದಿಯವರು ಸಮೀಕ್ಷೆಗಳಲ್ಲಿ ಶೇ. 70ರಷ್ಟು ಬೆಂಬಲದೊಂದಿಗೆ ಮುನ್ನಡೆಯುತ್ತಿದ್ದಾರೆ. ಇಂದು ವಿಶ್ವದ ಯಾವುದೇ ಪ್ರಮುಖ ದೇಶದ ನಾಯಕನಿಗೂ ತನ್ನ ಸ್ವಂತ ನೆಲದಲ್ಲಿ ಮೋದಿಯವರಿಗಿರುವಷ್ಟು ಜನಪ್ರಿಯತೆ ಇಲ್ಲ ಎನ್ನುವುದು ಗಮನಾರ್ಹ.



ಕಳೆದ ಹನ್ನೆರಡು ವರ್ಷಗಳಿಂದ ಅಧಿಕಾರದಲ್ಲಿರುವ ಮೋದಿ, ಮತ್ತೊಮ್ಮೆ ಚುನಾವಣೆಗೆ ನಿಂತರೆ ಗೆಲ್ಲುವುದು ಖಚಿತ ಎಂಬ ಮಾತುಗಳು ಎಲ್ಲೆಡೆ ಕೇಳಿಬರುತ್ತಿವೆ. ಯುರೋಪಿಯನ್ ನಾಯಕರಿಗೆ ಇದು ಕೇವಲ ಕನಸಿನ ಮಾತಷ್ಟೇ. ಭಾರತದ ವೇಗವಾದ ಆರ್ಥಿಕ ಬೆಳವಣಿಗೆ, ಜನರನ್ನು ಸೆಳೆಯುವ ಸಿದ್ಧಾಂತ, ವಿಶ್ವದ ಅತ್ಯಂತ ಬಲಿಷ್ಠ ರಾಜಕೀಯ ಪಕ್ಷ ಮತ್ತು ಅವರ ಸ್ಫೂರ್ತಿದಾಯಕ ಜೀವನಗಾಥೆ – ಇವೆಲ್ಲವೂ ಮೋದಿಯವರ ಈ ಅಭೂತಪೂರ್ವ ಯಶಸ್ಸಿಗೆ ಕಾರಣವಾಗಿವೆ.

ವಿಶ್ವದ ಬಹುತೇಕ ರಾಷ್ಟ್ರಗಳ ಮುಖ್ಯಸ್ಥರು ಶ್ರೀಮಂತ ಅಥವಾ ಮೇಲ್ಮಧ್ಯಮ ವರ್ಗದ ಹಿನ್ನೆಲೆಯಿಂದ ಬಂದವರಾಗಿದ್ದಾರೆ. ಆದರೆ, ಮೋದಿಯವರ ಹಿನ್ನೆಲೆಯೇ ವಿಭಿನ್ನ. ಭಾರತದ ಅದೆಷ್ಟೋ ಜನರಿಗೇ ತಿಳಿಯದ 'ವಡ್ನಾಗರ' ಎಂಬ ಪುಟ್ಟ ಪಟ್ಟಣದ ರೈಲು ನಿಲ್ದಾಣದಲ್ಲಿ ಅವರ ಪೋಷಕರು ಮೂರು ಸಣ್ಣ ಚಹಾ ಅಂಗಡಿಗಳನ್ನು ನಡೆಸುತ್ತಿದ್ದರು. ಅಂತಹ ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಮೋದಿ, ಇಂದು ಈ ಮಟ್ಟಕ್ಕೆ ಬೆಳೆದಿದ್ದಾರೆ ಎಂದರೆ ಅದಕ್ಕೆ ಅವರು ಪಟ್ಟ ಶ್ರಮ ಮತ್ತು ಅವರ ಹಿಂದಿರುವ ಹಿಂದೂ ರಾಷ್ಟ್ರೀಯತಾವಾದಿ ಚಳವಳಿಯೇ ಕಾರಣ. ಅವರೊಬ್ಬ ಸ್ವಪ್ರಯತ್ನದಿಂದ ಬೆಳೆದ ನಾಯಕ. ಅವರನ್ನು ನಾರ್ವೆಯ ಮಾಜಿ ಪ್ರಧಾನಿ, ಸಂಘಟನಾ ಚತುರರಾಗಿದ್ದ 'ಐನಾರ್ ಗೆರ್ಹಾರ್ಡ್ಸೆನ್' ಅವರಿಗೆ ಹೋಲಿಸಬಹುದು; ಇಬ್ಬರೂ ಸ್ವಯಂ ಕಲಿಕೆಯಿಂದ ಬೆಳೆದು ದೇಶವನ್ನು ಮುನ್ನಡೆಸಿದವರು.

ವೇಗವಾಗಿ ಬೆಳೆಯುತ್ತಿರುವ ಭಾರತವನ್ನು ಮುನ್ನಡೆಸುವ ಅದೃಷ್ಟ ಮೋದಿಯವರಿಗೆ ದೊರಕಿದೆ, ಹಾಗೆಯೇ ಆ ಬೆಳವಣಿಗೆಯ ಹಿಂದೆ ಅವರದ್ದೇ ಆದ ಬಲವಾದ ಶ್ರಮವೂ ಇದೆ. ಪ್ರಸ್ತುತ ಭಾರತದ ಆರ್ಥಿಕತೆಯು ಶೇಕಡಾ ಏಳರ ದರದಲ್ಲಿ ವೃದ್ಧಿಸುತ್ತಿದ್ದು, ಇದು ಚೀನಾ ಸೇರಿದಂತೆ ವಿಶ್ವದ ಇತರ ಪ್ರಮುಖ ದೇಶಗಳ ಬೆಳವಣಿಗೆಗಿಂತ ಬಹುದೂರ ಮುಂದಿದೆ.

ಸಹಜವಾಗಿ, ಈ ಬೆಳವಣಿಗೆಯಲ್ಲಿ ಕೆಲವು ಸವಾಲುಗಳಿವೆ; ಭಾರತದ ಶ್ರೀಮಂತ ಮತ್ತು ಬಡ ರಾಜ್ಯಗಳ ನಡುವೆ ಇಂದಿಗೂ ದೊಡ್ಡ ಅಂತರವಿದೆ. ಚೀನಾದಲ್ಲಿರುವಂತೆ ಉನ್ನತ ಶಿಕ್ಷಣ ಪಡೆದ ಬೃಹತ್ ಕಾರ್ಯಪಡೆಯ ಕೊರತೆ ಭಾರತದಲ್ಲಿದೆ ಮತ್ತು ಆಡಳಿತಾತ್ಮಕ ವಿಳಂಬಗಳು ಇನ್ನೂ ಪೂರ್ಣವಾಗಿ ನಿಂತಿಲ್ಲ. ಅಲ್ಲದೆ, ಜಾಗತಿಕ ಮಟ್ಟದಲ್ಲಿ ದೊಡ್ಡ ಮಟ್ಟದ ರಫ್ತು ಉದ್ಯಮವನ್ನು ರೂಪಿಸುವಲ್ಲಿ ಭಾರತ ಇಂದಿಗೂ ಹೆಣಗಾಡುತ್ತಿದೆ. ಆದರೂ, ಸದ್ಯದ ಪ್ರಗತಿಯ ವೇಗವನ್ನು ಗಮನಿಸಿದರೆ 2050ರ ವೇಳೆಗೆ ಭಾರತದ ಆರ್ಥಿಕತೆ ನಾಲ್ಕು ಪಟ್ಟು ಹೆಚ್ಚಾಗಲಿದೆ. ಅಂದು ಭಾರತವು ಅಮೆರಿಕದಂತಹ ರಾಷ್ಟ್ರಗಳಿಗೇ ಪೈಪೋಟಿ ನೀಡಿ ವಿಶ್ವದ ಎರಡನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಲಿದೆ.

ನಾನು ಭಾರತದ ಬಹುತೇಕ ಎಲ್ಲಾ ರಾಜ್ಯಗಳಿಗೂ ಭೇಟಿ ನೀಡಿದ್ದೇನೆ ಮತ್ತು ಹೋದಲ್ಲೆಲ್ಲಾ ಅಭಿವೃದ್ಧಿಯ ಹೊಸ ಅಲೆ ಎದ್ದಿರುವುದನ್ನು ಕಣ್ಣಾರೆ ಕಂಡಿದ್ದೇನೆ. ಇಂದು ದೇಶದ ಮೂಲೆ ಮೂಲೆಗಳಲ್ಲಿ ಸುಸಜ್ಜಿತ ಮತ್ತು ಆಧುನಿಕ ವಿಮಾನ ನಿಲ್ದಾಣಗಳು ತಲೆ ಎತ್ತಿವೆ; ಹಿಂದೆ ತಲುಪಲು ಅಸಾಧ್ಯವೆನಿಸುತ್ತಿದ್ದ ಹಳ್ಳಿಗಳಿಗೂ ಈಗ ಅತ್ಯುತ್ತಮ ರಸ್ತೆ ಸಂಪರ್ಕ ಕಲ್ಪಿಸಲಾಗಿದೆ. ಇಷ್ಟೇ ಅಲ್ಲದೆ, ಗುಜರಾತಿನಲ್ಲಿ ವಿಶ್ವದ ಅತಿದೊಡ್ಡ ಸೋಲಾರ್ ಪಾರ್ಕ್ ನಿರ್ಮಾಣವಾಗುತ್ತಿದ್ದರೆ, ಆಂಧ್ರಪ್ರದೇಶದಲ್ಲಿ ಸೌರ, ಪವನ ಮತ್ತು ಜಲಶಕ್ತಿಗಳನ್ನು ಒಟ್ಟುಗೂಡಿಸಿ ವಿದ್ಯುತ್ ಉತ್ಪಾದಿಸುವ ಜಗತ್ತಿನಲ್ಲೇ ಅತಿ ದೊಡ್ಡದಾದ ಘಟಕ ಸಿದ್ಧವಾಗುತ್ತಿದೆ.

ಭಾರತದ ಪರಿಸರಸ್ನೇಹಿ ಅಥವಾ 'ಹಸಿರು ಬೆಳವಣಿಗೆ'ಗೆ ಮೋದಿಯವರೇ ದೊಡ್ಡ ಭರವಸೆ. ಸೌರ ಮತ್ತು ಪವನ ಶಕ್ತಿ ಉತ್ಪಾದನೆಯಲ್ಲಿ ಭಾರತ ಇಂದು ವಿಶ್ವದಲ್ಲೇ ಮೂರನೇ ಸ್ಥಾನದಲ್ಲಿದೆ; ಶೀಘ್ರದಲ್ಲೇ ಭಾರತವು ಅಮೆರಿಕವನ್ನೂ ಹಿಂದಿಕ್ಕಿ ಎರಡನೇ ಸ್ಥಾನಕ್ಕೇರಿದರೆ ಅಚ್ಚರಿಯೇನಿಲ್ಲ. ಇದಕ್ಕೆ ಸಾಕ್ಷಿ ಎಂಬಂತೆ, ಕಳೆದ ವರ್ಷ ಭಾರತದಲ್ಲಿ ಕಲ್ಲಿದ್ದಲಿನಿಂದ ಉಂಟಾಗುವ ಮಾಲಿನ್ಯವು ಮೊದಲ ಬಾರಿಗೆ ಇಳಿಮುಖವಾಗಿದೆ.

ಪರಿಸರದ ಬಗ್ಗೆ ಮೋದಿಯವರು ನೀಡುವ ಸ್ಥಿರವಾದ ಸಂದೇಶದಿಂದ ಪಾಶ್ಚಿಮಾತ್ಯ ನಾಯಕರು ಕಲಿಯಬೇಕಾದದ್ದು ಸಾಕಷ್ಟಿದೆ. ಮೋದಿಯವರು ಪ್ರಮುಖ ಭಾಷಣಕಾರರಾಗಿರುವ ಹಲವಾರು ಸಮ್ಮೇಳನಗಳಲ್ಲಿ ನಾನು ಭಾಗವಹಿಸಿದ್ದೇನೆ. ಅಲ್ಲಿ ಅವರು ಜಾಗತಿಕ ಹವಾಮಾನ ಒಪ್ಪಂದಗಳ ಬಗ್ಗೆ ಅಥವಾ ಮಾಲಿನ್ಯದ ತಾಂತ್ರಿಕತೆಗಳ ಬಗ್ಗೆ ಮಾತನಾಡುವುದೇ ಅಪರೂಪ. ಅವರು ಪರಿಸರಕ್ಕಾಗಿ ಯಾರನ್ನೂ ತ್ಯಾಗ ಮಾಡುವಂತೆ ಕೇಳುವುದಿಲ್ಲ. ಬದಲಾಗಿ, 'ಹಸಿರು ಬೆಳವಣಿಗೆ'ಯ ಮೂಲಕವೇ ಭಾರತದ 150 ಕೋಟಿ ಜನರನ್ನು ಬಡತನದಿಂದ ಮುಕ್ತಗೊಳಿಸಬಹುದು ಎಂಬುದು ಅವರ ದೃಢವಾದ ನಂಬಿಕೆ. ಅಂದರೆ, ದೇಶದ ಆರ್ಥಿಕತೆ ಬೆಳೆಯಬೇಕೋ ಅಥವಾ ಪರಿಸರ ಉಳಿಯಬೇಕೋ ಎನ್ನುವ ಗೊಂದಲ ಈಗ ಉಳಿದಿಲ್ಲ; ಎರಡನ್ನೂ ಜೊತೆಯಾಗಿಯೇ ಸಾಧಿಸಬಹುದು ಎಂಬುದನ್ನು ಅವರು ತೋರಿಸಿಕೊಡುತ್ತಿದ್ದಾರೆ.

ಮುಂದಿನ ಚುನಾವಣೆಯಲ್ಲಿ ಒಂದು ವೇಳೆ ಜಾತ್ಯತೀತ ಪಕ್ಷಗಳೇ ಅಧಿಕಾರಕ್ಕೆ ಬಂದರೂ ಸಹ, ಭಾರತದ ಸಿದ್ಧಾಂತವು 'ಹಿಂದೂ ರಾಷ್ಟ್ರೀಯತಾವಾದ'ದ ಸುತ್ತಲೇ ಇರಲಿದೆ. ಕೈಗಾರಿಕಾ ಕ್ರಾಂತಿಯ ನಂತರ ಪ್ರತಿಯೊಂದು ಪಾಶ್ಚಿಮಾತ್ಯೇತರ ದೇಶವನ್ನೂ ಒಂದು ಪ್ರಶ್ನೆ ಕಾಡುತ್ತಲೇ ಇತ್ತು: 'ನಮ್ಮತನವನ್ನು ಬಿಟ್ಟುಕೊಡದೆ ಆಧುನಿಕ ಜಗತ್ತಿಗೆ ಹೊಂದಿಕೊಳ್ಳುವುದು ಹೇಗೆ?' ಈ ಕಠಿಣ ಪ್ರಶ್ನೆಗೆ ಭಾರತ ಕಂಡುಕೊಂಡ ಉತ್ತರವೇ ಈ ಸಿದ್ಧಾಂತ.

ಇದಕ್ಕೆ ಜಪಾನ್ ಅತ್ಯುತ್ತಮ ಉದಾಹರಣೆ; ಅದು ತಾಂತ್ರಿಕವಾಗಿ ಅತ್ಯಂತ ಆಧುನಿಕವಾಗಿದ್ದರೂ, ತನ್ನ ಸಂಸ್ಕೃತಿಯ ವಿಷಯದಲ್ಲಿ ಇಂದಿಗೂ ಅಪ್ಪಟ ಜಪಾನಿ ಶೈಲಿಯನ್ನೇ ಉಳಿಸಿಕೊಂಡಿದೆ. ದಕ್ಷಿಣ ಕೊರಿಯಾ ಕೂಡ ಇಂದು ಜಪಾನಿಗಿಂತ ಶ್ರೀಮಂತವಾಗಿದ್ದು, ತನ್ನ ಸಂಸ್ಕೃತಿ ಮತ್ತು ಸಂಗೀತವನ್ನು ಜಗತ್ತಿನಾದ್ಯಂತ ಪಸರಿಸುತ್ತಿದೆ. ಅತ್ತ ಚೀನಾ ಕೂಡ ತನ್ನ ಆಧುನಿಕತೆಯನ್ನು ತನ್ನದೇ ಆದ ಪುರಾತನ ತತ್ವಗಳಾದ ಕನ್ಫ್ಯೂಷಿಯನಿಸಂ, ತಾವೋಯಿಸಂ ಮತ್ತು ಬೌದ್ಧಧರ್ಮದ ಬೇರುಗಳಲ್ಲಿ ಕಂಡುಕೊಂಡಿದೆ. ಅದರಂತೆ ಭಾರತವೂ ಕೂಡ ತನ್ನದೇ ಆದ ಸಂಸ್ಕೃತಿಯ ಅಡಿಯಲ್ಲಿ ಆಧುನಿಕವಾಗಿ ಬೆಳೆಯಲು ಹವಣಿಸುತ್ತಿದೆ.

ಬಿಜೆಪಿ ಇಂದು 10 ಕೋಟಿಗೂ ಅಧಿಕ ಸದಸ್ಯರನ್ನು ಹೊಂದಿರುವ ವಿಶ್ವದ ಅತಿದೊಡ್ಡ ರಾಜಕೀಯ ಪಕ್ಷವಾಗಿದೆ. ಉತ್ತರ ಮತ್ತು ಮಧ್ಯ ಭಾರತದ ಪ್ರತಿಯೊಂದು ಕ್ಷೇತ್ರದಲ್ಲೂ ಪಕ್ಷಕ್ಕಾಗಿ ಹಗಲಿರುಳು ಶ್ರಮಿಸುವ ಕಾರ್ಯಕರ್ತರ ದೊಡ್ಡ ಪಡೆಯೇ ಅಲ್ಲಿದೆ. ಭಾರತದ ರಾಜಕಾರಣದಲ್ಲಿ ಬಿಜೆಪಿ ಒಂದು ಅಪರೂಪದ ಸಾಧನೆ ಮಾಡಿದೆ: ಮೇಲ್ಜಾತಿ, ಕೆಳಜಾತಿ ಹಾಗೂ ದಲಿತ ಸಮುದಾಯಗಳು ಸೇರಿದಂತೆ ಸಮಾಜದ ಎಲ್ಲಾ ಸ್ತರದವರಿಂದಲೂ ಈ ಪಕ್ಷಕ್ಕೆ ಸಮಾನ ಬೆಂಬಲ ಸಿಗುತ್ತಿದೆ. ಅತ್ತ ಬೃಹತ್ ಉದ್ಯಮಿಗಳಿಂದ ಹಿಡಿದು ಇತ್ತ ದೇಶದ ಕುಗ್ರಾಮಗಳಲ್ಲಿರುವ ಬುಡಕಟ್ಟು ಜನಾಂಗದವರೆಗೂ ಎಲ್ಲರೂ ಪಕ್ಷದ ಪರವಾಗಿ ನಿಂತಿದ್ದಾರೆ.

ಪಾಶ್ಚಿಮಾತ್ಯ ವಿಶ್ಲೇಷಕರಿಗೆ ಬಿಜೆಪಿಯಲ್ಲಿ ತಪ್ಪುಗಳನ್ನು ಹುಡುಕುವುದೇ ಒಂದು ಹವ್ಯಾಸವಾಗಿಬಿಟ್ಟಿದೆ. ಬಿಜೆಪಿ ಹಿಂದೂಗಳನ್ನು ಒಂದುಗೂಡಿಸಲು ಪ್ರಯತ್ನಿಸುತ್ತಿದೆ ಎಂಬ ಟೀಕಾಕಾರರ ಮಾತು ನಿಜವಿರಬಹುದು; ಆದರೆ, ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಹಿಂದೂ–ಮುಸ್ಲಿಂ ಸಂಘರ್ಷಗಳು ಹೆಚ್ಚಾಗಿವೆ ಎನ್ನುವುದಕ್ಕೆ ಯಾವುದೇ ಬಲವಾದ ಪುರಾವೆಗಳಿಲ್ಲ. ವಾಸ್ತವವಾಗಿ, ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಹೆಚ್ಚಿನ ಹಿಂಸಾಚಾರ ಮತ್ತು ಗಲಭೆಗಳು ನಡೆದಿದ್ದವು. ಇಂದಿಗೂ ನೆರೆಯ ದೇಶಗಳಿಂದ ಲಕ್ಷಾಂತರ ಮುಸ್ಲಿಮರು ಆಶ್ರಯ ಅರಸಿ ಭಾರತಕ್ಕೆ ಬರುತ್ತಿದ್ದಾರೆಯೇ ಹೊರತು, ಇಲ್ಲಿಂದ ಯಾರೂ ಹೊರಗೆ ಓಡಿಹೋಗುತ್ತಿಲ್ಲ.

ಆದರೆ, ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮಗಳು ಹೊರಗಿನಿಂದ ಬಂದವು ಎಂಬ ಬಿಜೆಪಿಯ ನಿಲುವು ಹಾಗೂ ಮಧ್ಯಕಾಲೀನ ಮುಸ್ಲಿಂ ಆಕ್ರಮಣಗಳನ್ನು ಬ್ರಿಟಿಷ್ ವಸಾಹತುಶಾಹಿಗೆ ಹೋಲಿಸುವುದು ಅನೇಕ ಮುಸ್ಲಿಮರಲ್ಲಿ ಅಭದ್ರತೆಯ ಭಾವನೆಯನ್ನು ಮೂಡಿಸುತ್ತಿದೆ. ಅದೇ ಸಮಯದಲ್ಲಿ, ಬಿಜೆಪಿಯ ಕೆಲವು ಪ್ರಸ್ತಾವನೆಗಳು ಸಾಮಾನ್ಯ ಜ್ಞಾನಕ್ಕೆ ಹತ್ತಿರವಾಗಿವೆ.ಉದಾಹರಣೆಗೆ, ಮುಸ್ಲಿಂ ಪುರುಷರಿಗೆ ಇತರರಿಗಿಂತ ಸುಲಭವಾಗಿ ವಿಚ್ಛೇದನ ನೀಡಲು ಅವಕಾಶವಿರುವ ಪ್ರತ್ಯೇಕ ವಿವಾಹ ಕಾನೂನು ಇರಬಾರದು ಎಂಬುದು ಸಮಂಜಸವಾಗಿ ಕಾಣುತ್ತದೆ. ಆದರೆ, ಹಿಂದೂ ಧರ್ಮದ ತಳಹದಿಯ ಮೇಲೆ ಹೊಸದಾದ ಮತ್ತು ಬಲಿಷ್ಠ ಭಾರತವನ್ನು ನಿರ್ಮಿಸುವ ಈ ಪ್ರಯತ್ನದಲ್ಲಿ ಬಿಜೆಪಿಗೆ ಎದುರಾಗುವ ನಿಜವಾದ ಸವಾಲು ಒಂದೇ: ಭಾರತದಲ್ಲಿರುವ ವಿಶ್ವದ ಅತಿದೊಡ್ಡ ಅಲ್ಪಸಂಖ್ಯಾತ ಸಮುದಾಯವಾದ 20 ಕೋಟಿ ಮುಸ್ಲಿಮರನ್ನು ಈ ಬೆಳವಣಿಗೆಯಲ್ಲಿ ಹೇಗೆ ಜೊತೆಗೂಡಿಸಿಕೊಳ್ಳುತ್ತಾರೆ ಎಂಬುದು.

ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿದ್ದ ವಿಶ್ವದ ದೊಡ್ಡ ಮತ್ತು ಅಂದಿನ ಬಡ ರಾಷ್ಟ್ರಗಳ ಪೈಕಿ, ಸ್ವಾತಂತ್ರ್ಯದ ನಂತರ ಪ್ರಜಾಪ್ರಭುತ್ವದ ಹಾದಿಯನ್ನು ಆರಿಸಿಕೊಂಡ ಏಕೈಕ ದೇಶ ಭಾರತ. ಇದಕ್ಕೆ ಬ್ರಿಟಿಷರು ಹಾಕಿಕೊಟ್ಟ ತಳಹದಿ ಕಾರಣ ಎಂದು ಅವರು ಆಗಾಗ ಹೇಳಿಕೊಳ್ಳುತ್ತಿರುತ್ತಾರೆ, ಆದರೆ ಅದು ನಿಜವಲ್ಲ. ಒಂದು ವೇಳೆ ಅದೇ ನಿಜವಾಗಿದ್ದರೆ, ಬ್ರಿಟಿಷರ ಅಧೀನದಲ್ಲಿದ್ದ ಪಾಕಿಸ್ತಾನ, ಮ್ಯಾನ್ಮಾರ್ ಅಥವಾ ಗಲ್ಫ್ ದೇಶಗಳು ಇಂದು ಪ್ರಜಾಪ್ರಭುತ್ವ ರಾಷ್ಟ್ರಗಳಾಗಿರಬೇಕಿತ್ತಲ್ಲವೇ? ಭಾರತ ಇಂದು ಪ್ರಜಾಪ್ರಭುತ್ವವಾಗಿ ಉಳಿದಿದೆ ಎಂದರೆ, ಅದಕ್ಕೆ ಇಲ್ಲಿನ ಆಳವಾದ ಸಂಸ್ಕೃತಿ ಮತ್ತು ಜನರಲ್ಲಿ ಬೇರೂರಿರುವ ಪರಂಪರೆಯೇ ಮುಖ್ಯ ಕಾರಣ.

ಜಾಗತಿಕ ನಿಯಮಗಳನ್ನು ಗೌರವಿಸುವ ಹೊಸ ಮಿತ್ರರ ಅಗತ್ಯ ಇಂದು ನಾರ್ವೆಗೆ ಇದೆ; ಹಾಗೆಯೇ ಅಲ್ಲಿನ ಉದ್ಯಮಗಳಿಗೂ ಹೊಸ ಮಾರುಕಟ್ಟೆಯ ಅವಶ್ಯಕತೆಯಿದೆ. ಇಂತಹ ಸಂದರ್ಭದಲ್ಲಿ ಭಾರತದೊಂದಿಗೆ ನಿಕಟ ಸಂಬಂಧ ಬೆಳೆಸುವುದರಿಂದ ನಾರ್ವೆಗೆ ಅಪಾರ ಲಾಭವಿದೆ. ಆದರೆ ಇದು ಸಾಧ್ಯವಾಗಬೇಕೆಂದರೆ, ನಾವು ಭಾರತಕ್ಕೆ ಕೇವಲ ಉಪದೇಶ ಮಾಡುವುದನ್ನು ಬಿಟ್ಟು, ಅವರ ಮಾತುಗಳನ್ನು ಆಲಿಸುವ ಮನಸ್ಥಿತಿ ಬೆಳೆಸಿಕೊಳ್ಳಬೇಕು. ನಾವು ಪರಸ್ಪರ ಗೌರವದಿಂದ ವ್ಯವಹರಿಸಲು ಮುಂದಾದರೆ, ಇಬ್ಬರಿಗೂ ಸಮಾನ ಲಾಭ ತಂದುಕೊಡುವ ಅಸಂಖ್ಯಾತ ಅವಕಾಶಗಳು ತೆರೆದುಕೊಳ್ಳುತ್ತವೆ.

'ಮುಸ್ಲಿಂ ಓಟ್‌ಬ್ಯಾಂಕ್' ಎಂಬ ಬಲೂನು ಒಡೆದ ಕತೆ!

▸ ದಿವಾಕರ ಹನಕೋಡು

ಮೇ 4ರ ಪಶ್ಚಿಮ ಬಂಗಾಳದ ಚುನಾವಣಾ ಫಲಿತಾಂಶ ರಾಜಕೀಯ ರಂಗದಲ್ಲಿ ಮನೆ ಮಾಡಿದ್ದ ಹಲವು ಭ್ರಮೆಗಳನ್ನು ಕಳಚಿದೆ. ಇದುವರೆಗೆ ಮುಸ್ಲಿಂ ವೋಟ್ ಬ್ಯಾಂಕಿನ ಬಗ್ಗೆ ಪ್ರತಿ ಚುನಾವಣೆಯಲ್ಲೂ ವಿಶೇಷ ಚರ್ಚೆಯಾಗುತ್ತಿದ್ದವು. ಮುಸ್ಲಿಮರ ಬೆಂಬಲ ಇದ್ದರೆ ಸಾಕು ಚುನಾವಣೆಯಲ್ಲಿ ಗೆಲುವು ನಿಶ್ಚಿತ ಎಂದು ನಮ್ಮ ಮಾಧ್ಯಮಗಳು ಸಾರುತ್ತಿದ್ದವು.

ಹಿಂದೊಮ್ಮೆ ಭಾರತದ ಪ್ರಧಾನಿಯಾಗಿದ್ದ ಅಟಲ್ ಬಿಹಾರಿ ವಾಜಪೇಯಿಯವರು "ಮುಸ್ಲಿಮರು ಬೆಂಬಲ ಕೊಡದಿದ್ದರೂ ಬಿ.ಜೆ.ಪಿ. ಗೆಲ್ಲುತ್ತದೆ" ಎಂದು ಹೇಳಿದ್ದನ್ನು ನೆನಪಿಸಿಕೊಳ್ಳಿ. ಆಗ ಮಾಧ್ಯಮಗಳು ಈ ವಿಷಯದ ಬಗ್ಗೆ ದೊಡ್ಡ ಗುಲ್ಲೆಬ್ಬಿಸಿದ್ದವು. ಇಂದು ಅನೇಕ ಪತ್ರಕರ್ತರು, ರಾಜಕೀಯ ವಿಶ್ಲೇಷಕರೆನಿಸಿಕೊಂಡವರು ಮುಸ್ಲಿಂ ವೋಟ್ ಬ್ಯಾಂಕ್ ಬಗ್ಗೆ ಮಾತಾಡುವುದನ್ನೂ, ಅದರ ಬಗ್ಗೆ ಅತಿ ವರ್ಣರಂಜಿತವಾಗಿ ಹೇಳುವುದನ್ನೂ ಒಂದು ಚಾಳಿಯಾಗಿಸಿಕೊಂಡಿದ್ದಾರೆ.

ಕೆಲವರಂತೂ ಇಲ್ಲಿಯೇ ಕುಳಿತು ಉತ್ತರಪ್ರದೇಶದ ರಾಜಕೀಯದ ವಿಮರ್ಶೆ ಮಾಡಿಬಿಡುತ್ತಾರೆ! ದೊಡ್ಡ ಲೇಖನಗಳನ್ನು ಬರೆದುಬಿಡುತ್ತಾರೆ. ಉತ್ತರಪ್ರದೇಶದಲ್ಲಿ ಮುಸ್ಲಿಮರ ಪಾತ್ರವೇ ನಿರ್ಣಾಯಕ. ಅವರು 19% ಇದ್ದಾರೆ. ನೂರು ಕ್ಷೇತ್ರಗಳಲ್ಲಿ ಅವರೇ ನಿರ್ಣಾಯಕ. ಇನ್ನು ನೂರು ಕ್ಷೇತ್ರಗಳಲ್ಲಿ ಅವರು ಯಾವ ಪಕ್ಷದತ್ತ ವಾಲುವರೋ ಅವರೇ ಗೆಲ್ಲುವುದು ಎಂದೆಲ್ಲಾ ಬರೆದುಬಿಡುತ್ತಾರೆ!.



ಇದನ್ನು ಓದಿದಾಗ ನಮಗನ್ನಿಸುವುದು... 19% ಇದ್ದವರದ್ದೇ ಮುಖ್ಯಪಾತ್ರ ಎಂದಾದರೆ ಇನ್ನುಳಿದಿರುವ 81% ಇದ್ದವರ ಕತೆ ಏನು?! ಚುನಾವಣೆಗಳಲ್ಲಿ ಅವರ ನಿಲುವುಗಳು ಅದು ಹೇಗೆ ಫಲಿತಾಂಶದ ಮೇಲೆ ಪರಿಣಾಮ ಬೀರುವುದಿಲ್ಲ?! ಎಂದು ತಲೆ ಕೆಡಿಸಿಕೊಳ್ಳುವಂತಾಗುತ್ತೆ.

ಮೊನ್ನೆ ಪಶ್ಚಿಮಬಂಗಾಳದ ಫಲಿತಾಂಶ ಬರುವುದಕ್ಕೆ ಮುನ್ನ ನಮ್ಮ ರಾಜಕೀಯ ಪಂಡಿತರುಗಳು ಏನೇನು ಹೇಳಿದರು ನೋಡಿ: ಒಬ್ಬ ಪತ್ರಕರ್ತರು ಪಶ್ಚಿಮಬಂಗಾಳದ 65 ಕೇತ್ರಗಳಲ್ಲಿ ಮುಸ್ಲಿಮರು 40% ಗಿಂತಾ ಹೆಚ್ಚಿದ್ದಾರೆ. ಹಾಗಾಗಿ ಈ 65 ಕ್ಷೇತ್ರಗಳಲ್ಲಿ ತೃಣಮೂಲ ಕಾಂಗ್ರೆಸ್ ಸಲೀಸಾಗಿ ಗೆಲ್ಲುತ್ತದೆ. ಅದರಿಂದ ಮತ್ತೊಮ್ಮೆ ವಿಧಾನಸಭೆಯ ಚುನಾವಣೆಯಲ್ಲಿ ಟಿಎಂಸಿ ಗೆಲುವು ಸುಲಭವಾಗುತ್ತದೆ ಎಂದು ವಿಶ್ಲೇಷಿಸಿದ್ದರು.

ಅವರೆನ್ನುವಂತೆ 65 ಕ್ಷೇತ್ರಗಳಲ್ಲಿ ಮುಸ್ಲಿಮರ ಬೆಂಬಲದಿಂದ ಟಿಎಂಸಿ ಗೆಲ್ಲುತ್ತದೆ ಎಂಬುದನ್ನು ಒಪ್ಪಿಕೊಂಡರೂ ರಾಜ್ಯದಲ್ಲಿ ಉಳಿದ 229 ವಿಧಾನಸಭಾ ಕ್ಷೇತ್ರಗಳ ಫಲಿತಾಂಶದ ಕತೆಯೇನು?! ಆ 229 ಕ್ಷೇತ್ರಗಳ ಮತದಾರರ ಒಲವು, ನಿಲುವುಗಳು, ಭಾವನೆಗಳು ಇವುಗಳ್ಯಾವುದೂ ಲೆಕ್ಕಕ್ಕಿಲ್ಲವೇನು?!

ಈ ಬಾರಿ ಕೇರಳದಲ್ಲಿ ಕಾಂಗ್ರೆಸ್ ಗೆದ್ದ ತಕ್ಷಣ ಟಿ.ವಿ. ವಾಹಿನಿಯ ನಿರೂಪಕಿ ಇಬ್ಬರು ಏರುಧ್ವನಿಯಲ್ಲಿ ಕೂಗಿ ಹೇಳುತ್ತಿದ್ದರು, "ಕೇರಳದಲ್ಲಿ ಮುಸ್ಲಿಮರ ಬೆಂಬಲ ಸಿಕ್ಕಿದ್ದರಿಂದ ಕಾಂಗ್ರೆಸ್‌ಗೆ ಗೆಲುವು" ಎಂದು. ಮರುದಿನ ಪತ್ರಿಕೆಯೊಂದರ ಖ್ಯಾತ ಅಂಕಣಕಾರರ ಲೇಖನದ ಶೀರ್ಷಿಕೆಯೂ ಸಹ ಮುಸ್ಲಿಮರು ಬೆಂಬಲಿಸಿದ್ದರಿಂದ ಕೇರಳದಲ್ಲಿ ಕಾಂಗ್ರೆಸ್‌ಗೆ ಜಯ ಎಂದು ಬಂದಿತ್ತು!! ಇಲ್ಲಿ ತುಂಬಾ ಆಸಕ್ತಿಯ ವಿಷಯವೆಂದರೆ ಮುಸ್ಲಿಂ ಲೀಗ್ ಕೇರಳದಲ್ಲಿ ಕಾಂಗ್ರೆಸ್‌ನ ಮಿತ್ರಪಕ್ಷ. ಕಳೆದ ಚುನಾವಣೆಗಳಲ್ಲಿಯೂ ಈ ಮುಸ್ಲಿಂ ಲೀಗ್ ಕಾಂಗ್ರೆಸ್‌ನ ಮಿತ್ರ ಪಕ್ಷವಾಗಿತ್ತು! ಆದರೂ ಕಳೆದೆರಡು ಚುನಾವಣೆಗಳಲ್ಲಿಯೂ ಕಾಂಗ್ರೆಸ್‌ಗೆ ಸೋಲಾಗಿದೆ!! ಮುಸ್ಲಿಂ ಬೆಂಬಲ ಪಡೆದ ಮೇಲೂ ಕಾಂಗ್ರೆಸ್ಸ್‌ಗೆ ಏಕೆ ಸೋಲಾಯಿತು ಎಂಬ ಬಗ್ಗೆ ಯಾರೂ ಚರ್ಚೆ ಮಾಡಲಿಲ್ಲ!! ಈಗ ಗೆದ್ದ ತಕ್ಷಣ ಮುಸ್ಲಿಮರ ಕಾರಣದಿಂದ ಗೆಲುವು ಎಂಬ ಪಾಂಡಿತ್ಯದ ಪ್ರದರ್ಶನ!! 24% ಇರುವ ಮುಸ್ಲಿಮರ ಜೊತೆಗೆ ಉಳಿದ 76% ಇರುವವರ ಕತೆಯೇನು?! ಅವರ ರಾಜಕೀಯ ಒಲವು, ನಿಲುವುಗಳ ವಿವರವೇನು? ಅವರುಗಳು ಯಾಕೆ ಮುಖ್ಯವಾಗುವುದಿಲ್ಲ?!.

2017ರ ಉತ್ತರ ಪ್ರದೇಶದ ಚುನಾವಣೆಗಳ ಫಲಿತಾಂಶ ಬರುವುದಕ್ಕೆ ಮುಂಚೆ ಟಿ.ವಿ.ಗಳಲ್ಲಿ ರಾಜಕೀಯ ಪರಿಣಿತರ ಚರ್ಚೆ ನಡೆಯುತ್ತಿದ್ದ ವೇಳೆ ಒಬ್ಬ ರಾಜಕೀಯ ವಿಶ್ಲೇಷಕರು ಮಾಯಾವತಿಯವರನ್ನು 'ಸ್ಮಾರ್ಟ್ ಪೊಲಿಟಿಷಿಯನ್' ಎಂದು ಹೊಗಳಿದರು. ಅವರ ಪ್ರಕಾರ ನಾನೂರಕ್ಕೂ ಹೆಚ್ಚು ಕ್ಷೇತ್ರಗಳಿರುವ ಉತ್ತರಪ್ರದೇಶದಲ್ಲಿ 95 ಮುಸ್ಲಿಂ ಅಭ್ಯರ್ಥಿಗಳಿಗೆ ಟಿಕೆಟ್ ಕೊಟ್ಟಿದ್ದರಿಂದ ಮಾಯಾವತಿ 'ಸ್ಮಾರ್ಟ್ ಪೊಲಿಟಿಷಿಯನ್' ಅಂತೆ. ಆ ಚುನಾವಣೆಯಲ್ಲಿ ಬಿಎಸ್‌ಪಿ ಉತ್ತಮ ಸಾಧನೆ ಮಾಡಿದ್ದರೆ ಮಾಯಾವತಿಯನ್ನು ಚಾಣಕ್ಯನ ಪ್ರತಿರೂಪವೆಂಬಂತೆ ಇವರು ವರ್ಣಿಸಿಬಿಡುತ್ತಿದ್ದರು!!

ಒಂದು ರೀತಿಯ ಸ್ಥಾಪಿತ ಸಿದ್ಧಾಂತ ಇಂತಹ ಪತ್ರಕರ್ತರಲ್ಲಿರುತ್ತದೆ. ಫಲಿತಾಂಶಕ್ಕೂ ಮೊದಲು ಮುಸ್ಲಿಮರ ಬೆಂಬಲ ಇಲ್ಲದ್ದರಿಂದ ಬಿಜೆಪಿ ಗೆಲ್ಲುವುದಿಲ್ಲ ಎನ್ನುವುದು. ಬಿ.ಜೆ.ಪಿ.ಗೆ ಗೆಲುವು ಸಿಕ್ಕಿದರೆ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಗೆಲುವು ಸಿಗಬೇಕಾದರೆ ಮುಸ್ಲಿಮರಲ್ಲೂ ಒಂದು ಭಾಗ ಬಿಜೆಪಿಗೆ ಮತ ಹಾಕಿದ್ದಾರೆ. ಆದ್ದರಿಂದಲೇ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಬಿಜೆಪಿಗೆ ಜಯ ಸಿಕ್ಕಿದೆ ಎಂದು ಪ್ರತಿಪಾದಿಸುವುದು!!

ಚುನಾವಣೆಗೆ ಮುಂಚೆ ಯಾವುದಾದರೂ ರಾಜಕೀಯ ಪಕ್ಷಗಳು ಮುಸ್ಲಿಮರ ಪರವಾದ ನಿರ್ಣಯಗಳನ್ನು ಮಾಡಿದರೆ ಸಾಕು. ಈ ಪತ್ರಕರ್ತರು "ತುಂಬಾ ಚಾಣಾಕ್ಷ ನಡೆ", "ವಿರೋಧಿಗಳಿಗೆ ಚೆಕ್‌ಮೇಟ್" ಎಂಬ ಪದಪುಂಜಗಳಿಂದ ಈ ಮುಸ್ಲಿಂ ಓಲೈಕೆ ರಾಜಕಾರಣವನ್ನು ಹೊಗಳತೊಡಗುತ್ತಾರೆ.

ಇಂತಹ ಕ್ರಮಗಳಿಂದ ಹಿಂದೂ ಮತದಾರರ ಮೇಲೆ ಬೀರುವ ಪರಿಣಾಮಗಳೇನು ಎಂಬ ಬಗ್ಗೆ ಇವರು ವಿಮರ್ಶೆ ಮಾಡಲು ಹೋಗುವುದಿಲ್ಲ!! ಅತಿಯಾಗಿ ಮುಸ್ಲಿಂ ವೋಟ್ ಬ್ಯಾಂಕ್ ಹಿಂದೆ ಬಿದ್ದಿರುವುದರಿಂದಲೇ ಇಂದು ಕಾಂಗ್ರೆಸ್‌ಗೆ ಕೆಟ್ಟ ಸ್ಥಿತಿ ಬಂದಿರುವುದು.

"ಮಮತಾ ಬ್ಯಾನರ್ಜಿಯವರ ಮತಗಳ ಎಣಿಕೆ ಆರಂಭವಾಗುವುದೇ 30%ನ ಮೇಲಿನಿಂದ" ಎಂಬ ಮಾತುಗಳನ್ನು ನಂಬಿ ಅತಿಯಾದ ಮುಸ್ಲಿಂ ಓಲೈಕೆಯಲ್ಲಿ ಮುಳುಗಿ ಹಿಂದುಗಳನ್ನು ದಮನ ಮಾಡಿದ ಕಾರಣ ಇಂದು ಮಮತಾ ಬ್ಯಾನರ್ಜಿಯವರಿಗೆ ಸೋಲಾಗಿದೆ. ಅಕ್ರಮವಾಗಿ ನುಸುಳಿ ಬರುವ ಬಾಂಗ್ಲಾದೇಶೀಯರಿಗೆ, ರೋಹಿಂಗ್ಯಾಗಳಿಗೆ ಸಹಾಯ ಮಾಡದೆ, ಎಲ್ಲಾ ಪ್ರಜೆಗಳನ್ನು ಸಮಾನವಾಗಿ ನೋಡುತ್ತಾ ಅಭಿವೃದ್ಧಿ ಪರವಾದ ಆಡಳಿತ ನೀಡಿದ್ದರೆ ಮಮತಾ ಬ್ಯಾನರ್ಜಿಯವರನ್ನು ಇನ್ನು ಹಲವು ವರ್ಷಗಳ ಕಾಲ ಸೋಲಿಸಲು ಯಾರಿಂದಲೂ ಸಾಧ್ಯವಾಗುತ್ತಿರಲಿಲ್ಲ.

ರಾಜಕೀಯ ಎಂದ ಮೇಲೆ ಸ್ವಾರ್ಥ ಸಾಧನೆ ಇದ್ದೇ ಇರುತ್ತದೆ ಎಂಬುದು ಹಲವರ ಅಭಿಪ್ರಾಯ. ಈ ಪ್ರಾದೇಶಿಕ ಪಕ್ಷಗಳ ನಾಯಕರ ಸ್ವಾರ್ಥ ದೃಷ್ಟಿಯಲ್ಲೂ ಭವಿಷ್ಯದ ಬಗ್ಗೆ ಆಳವಾದ ಯೋಚನೆ, ಯೋಜನೆ ಇರಬಾರದೆ?! ಯಾದವರ ಪಕ್ಷದ ನಾಯಕನಾದ ಅಖಿಲೇಶ್ ಸಿಂಗ್ ಯಾದವ್‌ಗೆ ಮುಸ್ಲಿಂ ಜನಸಂಖ್ಯೆ ಹೆಚ್ಚಾದರೆ ಖುಷಿ!! ಅದೇ ಕಾಲಕ್ಕೆ ಯಾದವರ ಜನಸಂಖ್ಯೆ ಕಡಿಮೆ ಆಗುತ್ತಿರುವುದರ ಬಗ್ಗೆ ಈತನಿಗೆ ಎಳ್ಳಷ್ಟೂ ಗಮನವಿಲ್ಲ!! ದೇಶದ ವಿಷಯ ಬೇಡ... ತಮ್ಮ ಮಕ್ಕಳು, ಮೊಮ್ಮಕ್ಕಳ ಬಗ್ಗೆಯಾದರೂ... ಅವರ ರಾಜಕೀಯ ಭವಿಷ್ಯದ ಬಗ್ಗೆಯಾದರೂ ಈ ನಾಯಕರುಗಳು ಯೋಚಿಸಬೇಕಲ್ಲವೇ?! ಮುಸ್ಲಿಮರ ಸಂಖ್ಯೆ 35% ಮೇಲೆ ಹೋದರೆ ನಂತರ ಅವರದ್ದೇ ಅಧಿಪತ್ಯವಾಗುತ್ತದೆ. ಆಗ ನಮ್ಮ ಮುಂದಿನ ಪೀಳಿಗೆಯ ಕತೆಯೇನು? ತಾವು ಗಳಿಸಿದ ಸಂಪತ್ತಿಗೆ ಭದ್ರತೆಯೇನು?! ಎಂಬ ಬಗ್ಗೆ ಒಮ್ಮೆಯಾದರೂ ಇವರುಗಳು ಯೋಚಿಸಬೇಕಲ್ಲವೇ?!

ಕಣ್ಣಿಗೆ ಬಟ್ಟೆ ಕಟ್ಟಿಕೊಂಡವರಂತೆ ಮುಸ್ಲಿಂ ಓಲೈಕೆ ರಾಜಕಾರಣದ ದಾರಿಯಲ್ಲಿ ಮುನ್ನುಗ್ಗುತ್ತಿರುವ ಇಂತಹ ರಾಜಕೀಯ ಪಕ್ಷಗಳನ್ನು ಕಂಡು ಇಂದು ದೇಶಭಕ್ತರು ದಿಗಿಲಿಗೊಳಗಾಗಿದ್ದಾರೆ.


ಇಂದು ಅಸ್ಸಾಂನಲ್ಲಿ 34%ನಷ್ಟು ಮುಸ್ಲಿಮರು ಇದ್ದಾಗಲೂ, ಪಶ್ಚಿಮಬಂಗಾಳದಲ್ಲಿ 30% ನ ಆಸುಪಾಸು ಮುಸ್ಲಿಂ ಜನಸಂಖ್ಯೆ ಇದ್ದಾಗಲೂ ಆ ರಾಜ್ಯಗಳ ಹಿಂದುಗಳು ಒಗ್ಗಟ್ಟಾಗಿ, ಸಂಘಟಿತರಾಗಿ ರಾಷ್ಟ್ರಹಿತದ ಪಕ್ಷವನ್ನು ಗೆಲ್ಲಿಸಿರುವುದು ಒಂದು ಆಶಾದಾಯಕ ಬೆಳವಣಿಗೆಯಾಗಿದೆ. ಹಿಂದುಗಳು ಸಂಘಟಿತರಾಗಿ ಮತ ಚಲಾಯಿಸುವುದಿಲ್ಲ ಎಂಬ ನಂಬಿಕೆಯಲ್ಲಿದ್ದ ರಾಜಕೀಯ ಪಕ್ಷಗಳು ಇನ್ನು ಮುಂದಾದರೂ ತಮ್ಮ ಓಲೈಕೆ ರಾಜಕಾರಣವನ್ನು ಕಡಿಮೆ ಮಾಡಿಕೊಂಡು ಹಿಂದುಗಳ ಒಲವನ್ನೂ ಗಳಿಸಿಕೊಳ್ಳಲು ಪ್ರಯತ್ನ ಮಾಡಲಿವೆಯೇ?! ಕಾದು ನೋಡಬೇಕು.

ವಿದ್ಯಾರ್ಥಿಗಳ ಭವಿಷ್ಯವೂ... ಪ್ರಶ್ನೆಪತ್ರಿಕೆ ಸೋರಿಕೆಯ ಕರಿನೆರಳೂ...

▸ ಡಾ. ಮೈತ್ರಿ ಭಟ್, ವಿಟ್ಲ

ನಮ್ಮ ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಪರೀಕ್ಷೆ ಎನ್ನುವುದು ವಿದ್ಯಾರ್ಥಿಯ ಜ್ಞಾನ, ಪರಿಶ್ರಮ ಮತ್ತು ಸಾಮರ್ಥ್ಯವನ್ನು ಅಳೆಯುವ ಅತ್ಯಂತ ಮುಖ್ಯವಾದ ಸಾಧನ. ವಿದ್ಯಾರ್ಥಿಯ ಭವಿಷ್ಯ, ಶ್ರಮ ಮತ್ತು ಕನಸುಗಳೆಲ್ಲವೂ ಪರೀಕ್ಷೆಯ ಫಲಿತಾಂಶದ ಮೇಲೆ ಅವಲಂಬಿತವಾಗಿರುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ನಿರಂತರವಾಗಿ ನಡೆಯುವ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳು ಶಿಕ್ಷಣ ವ್ಯವಸ್ಥೆಯ ಮೇಲಿನ ಜನರ ನಂಬಿಕೆಯನ್ನು ಕುಗ್ಗಿಸುತ್ತಿವೆ. ಒಂದು ಪ್ರಶ್ನೆಪತ್ರಿಕೆ ಸೋರಿಕೆಯಾಗುವುದು ಎಂದರೆ ಕೇವಲ ಕೆಲವು ಪ್ರಶ್ನೆಗಳು ಹೊರಬೀಳುವುದಲ್ಲ; ಅದು ಲಕ್ಷಾಂತರ ವಿದ್ಯಾರ್ಥಿಗಳ ಕನಸುಗಳ ಮೇಲೆ ಬೀಳುವ ಕರಿನೆರಳ ಛಾಯೆ. ಇದು ವಿದ್ಯಾರ್ಥಿಗಳ ಮಾನಸಿಕ ಸ್ಥೈರ್ಯ, ಶಿಕ್ಷಣದ ಮೌಲ್ಯ ಮತ್ತು ಸಮಾಜದ ನೈತಿಕತೆಯ ಮೇಲೆ ಬೀಳುವ ದೊಡ್ಡ ಹೊಡೆತವಾಗಿದ್ದು, ಅದೆಷ್ಟೋ ವಿದ್ಯಾರ್ಥಿಗಳ ಕನಸುಗಳನ್ನೇ ನುಚ್ಚುನೂರಾಗಿಸುತ್ತದೆ.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಪರೀಕ್ಷೆಗಾಗಿ ದಿನರಾತ್ರಿ ಶ್ರಮಿಸುತ್ತಾರೆ. ಹೆತ್ತವರ ಆಶಾಭಾವನೆ, ಶಿಕ್ಷಕರ ಮಾರ್ಗದರ್ಶನ ಮತ್ತು ತಮ್ಮ ಕನಸುಗಳ ಜೊತೆಗೆ ಅವರು ಪರೀಕ್ಷಾ ಕೇಂದ್ರಕ್ಕೆ ಹೋಗುತ್ತಾರೆ. ಆದರೆ ಕೆಲವೇ ಕೆಲವು ನೈತಿಕತೆ ಮರೆತ ವ್ಯಕ್ತಿಗಳು ಹಣಕ್ಕಾಗಿ ಪ್ರಶ್ನೆಪತ್ರಿಕೆಗಳನ್ನು ಸೋರಿಕೆ ಮಾಡುವ ಮೂಲಕ ವಿದ್ಯಾರ್ಥಿಗಳ ವರುಷದ ಪರಿಶ್ರಮವನ್ನು, ಬದುಕಿನ ಕನಸನ್ನು ವ್ಯರ್ಥಗೊಳಿಸುತ್ತಾರೆ. ಪರಿಣಾಮವಾಗಿ ಪ್ರಾಮಾಣಿಕವಾಗಿ ಓದಿದ ವಿದ್ಯಾರ್ಥಿಗಳು ಅನ್ಯಾಯಕ್ಕೊಳಗಾಗುತ್ತಾರೆ; ಮೋಸದ ಮಾರ್ಗ ಅನುಸರಿಸಿದವರು ಮುನ್ನಡೆಯುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದು ಶಿಕ್ಷಣದ ಮೂಲಭೂತ ಉದ್ದೇಶವನ್ನೇ ಹಾಳುಮಾಡುವ ದುಃಸ್ಥಿತಿಯಾಗಿದೆ.



ಪ್ರಶ್ನೆಪತ್ರಿಕೆ ಸೋರಿಕೆಯಿಂದ ಪರೀಕ್ಷೆಗಳು ರದ್ದಾಗುವುದು, ಮರುಪರೀಕ್ಷೆ ನಡೆಸುವುದು, ವಿದ್ಯಾರ್ಥಿಗಳು ಮತ್ತೆ ಸಿದ್ಧತೆ ಮಾಡಿಕೊಳ್ಳುವುದು ಇವೆಲ್ಲವೂ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಅಸಹನೆ ಮತ್ತು ನಿರಾಶೆಯನ್ನು ಹುಟ್ಟಿಸುತ್ತವೆ. ಕೆಲವರು ಮಾನಸಿಕ ಒತ್ತಡಕ್ಕೆ ಒಳಗಾಗುತ್ತಾರೆ.

ಈ ಪ್ರಶ್ನೆಪತ್ರಿಕೆ ಸೋರಿಕೆಯ ಹಿಂದೆ ದೊಡ್ಡ ಜಾಲವೊಂದು ಕಾರ್ಯನಿರ್ವಹಿಸುತ್ತಿರುವುದಂತೂ ಸ್ಪಷ್ಟ. ಪರೀಕ್ಷಾ ಮಂಡಳಿ ಗಳಲ್ಲಿನ ಕೆಲವು ಭ್ರಷ್ಟ ಅಧಿಕಾರಿಗಳು, ಮುದ್ರಣ ಕೇಂದ್ರದ ಸಿಬ್ಬಂದಿಗಳು, ಮಧ್ಯವರ್ತಿಗಳು ಮತ್ತು ತಂತ್ರಜ್ಞಾನವನ್ನು ದುರುಪಯೋಗಪಡಿಸಿಕೊಳ್ಳುವ ಕೆಲವರು ಸೇರಿಕೊಂಡು ಈ ದಂಧೆಯನ್ನು ನಡೆಸುತ್ತಾರೆ. ಕೆಲವೊಮ್ಮೆ ಮೊಬೈಲ್ ಫೋನ್, ಸಾಮಾಜಿಕ ಜಾಲತಾಣಗಳು ಮತ್ತು ಮೆಸೇಜಿಂಗ್ ಆ್ಯಪ್‌ಗಳ ಮೂಲಕ ಪ್ರಶ್ನೆಪತ್ರಿಕೆ ಕ್ಷಣಾರ್ಧದಲ್ಲಿ ಸಾವಿರಾರು ಜನರಿಗೆ ತಲುಪುತ್ತದೆ. ಶಿಕ್ಷಣಕ್ಕೆ ವರವಾಗಬೇಕಾದ ತಂತ್ರಜ್ಞಾನವೇ ದುರುಪಯೋಗವಾಗುವ ಉದಾಹರಣೆಯಿದು.

ಈ ಸಮಸ್ಯೆಯ ಮತ್ತೊಂದು ಗಂಭೀರ ಅಂಶವೆಂದರೆ – ತನ್ನ ಯಶಸ್ಸಿಗಾಗಿ ಯಾವುದೇ ಮಾರ್ಗ ಹಿಡಿದರೂ ಸರಿ ಎಂಬ ಅಪಾಯಕಾರಿ ಮನೋಭಾವವೂ ಸಮಾಜದಲ್ಲಿ ಬೆಳೆದುಬರುತ್ತಿರುವುದು. ಕೆಲವರು ದುಡಿಮೆಗೆ ಬದಲಾಗಿ ಅಕ್ರಮ ಮಾರ್ಗಗಳನ್ನು ಆರಿಸುತ್ತಿದ್ದಾರೆ. ಪೋಷಕರಲ್ಲಿಯೂ ಕೆಲವೊಮ್ಮೆ ಮಕ್ಕಳನ್ನು ಯಾವ ರೀತಿಯಲ್ಲಾದರೂ ಮುನ್ನಡೆಸಬೇಕು ಎಂಬ ಒತ್ತಡ ಕಾಣಸುತ್ತದೆ. ಸಮಾಜದಲ್ಲಿ ನೈತಿಕ ಮೌಲ್ಯಗಳು ಕುಗ್ಗುತ್ತಿರುವುದು ಪ್ರಶ್ನೆಪತ್ರಿಕೆ ಸೋರಿಕೆಗಳಂತಹ ಅಪರಾಧಗಳಿಗೆ ಪೂರಕ ವಾತಾವರಣವನ್ನು ಸೃಷ್ಟಿಸುತ್ತಿದೆ. ಹೀಗಿರುವಾಗ, ಶಿಕ್ಷಣವು ಕೇವಲ ಅಂಕಗಳಿಗಾಗಿ ಮಾತ್ರವೇ ಅಲ್ಲ; ಅದು ವ್ಯಕ್ತಿತ್ವ ನಿರ್ಮಾಣಕ್ಕಾಗಿ ಎಂಬ ಅರಿವನ್ನು ಮತ್ತೆ ಮೂಡಿಸಬೇಕಾಗಿದೆ.

ಈ ಪ್ರಶ್ನೆಪತ್ರಿಕೆ ಸೋರಿಕೆ ಎಂಬುದು ಕೇವಲ ವಿದ್ಯಾರ್ಥಿಗಳ ಸಮಸ್ಯೆಯಲ್ಲ;ಅದುದೇಶದಭವಿಷ್ಯಕ್ಕೂಅಪಾಯಕಾರಿಯಾಗಿದೆ. ಅಕ್ರಮ ಮಾರ್ಗದಿಂದ ಪರೀಕ್ಷೆ ಪಾಸಾದವರು ಮುಂದಿನ ದಿನಗಳಲ್ಲಿ ವೈದ್ಯರು, ಇಂಜಿನಿಯರ್‌ಗಳು, ಶಿಕ್ಷಕರು, ಪೊಲೀಸ್ ಅಧಿಕಾರಿಗಳು ಅಥವಾ ಆಡಳಿತಾಧಿಕಾರಿಗಳಾಗುವ ಸಾಧ್ಯತೆ ಇದೆ. ಅರ್ಹತೆ ಇಲ್ಲದವರು ಪ್ರಮುಖ ಹುದ್ದೆಗಳಿಗೆ ಬಂದರೆ ಅದರ ಪರಿಣಾಮ ಸಂಪೂರ್ಣ ಸಮಾಜದ ಮೇಲೆ ಬೀಳುತ್ತದೆ. ಆದ್ದರಿಂದ ಪ್ರಶ್ನೆಪತ್ರಿಕೆ ಸೋರಿಕೆ ಎನ್ನುವುದು ಕೇವಲ ಪರೀಕ್ಷಾ ಅಕ್ರಮವಲ್ಲ; ಅದು ರಾಷ್ಟ್ರದ ಅಭಿವೃದ್ಧಿಯನ್ನೇ ದುರ್ಬಲಗೊಳಿಸುವ ಸಾಮಾಜಿಕ ಅಪರಾಧವೂ ಹೌದು.

ಈ ಸಮಸ್ಯೆಗೆ ಕಠಿಣ ಕಾನೂನು ಕ್ರಮಗಳು ಅತ್ಯಗತ್ಯ. ಪ್ರಶ್ನೆಪತ್ರಿಕೆ ಸೋರಿಕೆಯಲ್ಲಿ ಭಾಗಿಯಾದವರಿಗೆ ಕೇವಲ ಸಣ್ಣ ಶಿಕ್ಷೆಗಳು ಸಾಲದು. ವೇಗದ ತನಿಖೆ, ತ್ವರಿತ ನ್ಯಾಯ ಮತ್ತು ಕಠಿಣ ದಂಡನೆಗಳು ಜಾರಿಯಾಗಬೇಕು. ಆಗ ಮಾತ್ರ ಇಂತಹ ಅಕ್ರಮಗಳು ಕಡಿಮೆಯಾಗಬಹುದು. ಜೊತೆಗೆ ಪರೀಕ್ಷಾ ಪ್ರಕ್ರಿಯೆಯನ್ನು ಸಂಪೂರ್ಣ ಡಿಜಿಟಲ್ ಭದ್ರತೆಯೊಳಗೆ ತರಬೇಕು. ಪ್ರಶ್ನೆಪತ್ರಿಕೆ ಸಿದ್ಧಪಡಿಸುವುದರಿಂದ ಹಿಡಿದು ಪರೀಕ್ಷಾ ಕೇಂದ್ರಕ್ಕೆ ತಲುಪುವವರೆಗಿನ ಪ್ರತಿಯೊಂದು ಹಂತವೂ ಕಟ್ಟುನಿಟ್ಟಿನ ನಿಗಾ ವ್ಯವಸ್ಥೆಯಡಿ ಇರಬೇಕು. ಎನ್ಕ್ರಿಪ್ಷನ್ ತಂತ್ರಜ್ಞಾನ, ಸುರಕ್ಷಿತ ಸರ್ವರ್‌ಗಳು ಮತ್ತು ಕೃತಕ ಬುದ್ಧಿಮತ್ತೆಯ ನೆರವಿನಿಂದ ಪ್ರಶ್ನೆಪತ್ರಿಕೆ ಸೋರಿಕೆಗಳನ್ನು ತಡೆಯಲು ನಮ್ಮ ಸರ್ಕಾರಗಳು ಮುಂದಾಗಬೇಕು.

ಇವುಗಳೊಂದಿಗೆ ಪರೀಕ್ಷಾ ವ್ಯವಸ್ಥೆಯಲ್ಲಿ ಪಾರದರ್ಶಕತೆ ಮತ್ತು ವಿಶ್ವಾಸಾರ್ಹತೆಯನ್ನು ಹೆಚ್ಚಿಸುವುದು ಅಗತ್ಯ. ಮತ್ತೆ ಮತ್ತೆ ನಡೆಯುವ ಸೋರಿಕೆಗಳು ವಿದ್ಯಾರ್ಥಿಗಳಲ್ಲಿ 'ಪ್ರಾಮಾಣಿಕ ಪರಿಶ್ರಮಕ್ಕೆ ಬೆಲೆಯೇ ಇಲ್ಲ' ಎಂಬ ನಿರಾಶಾ ಮನೋಭಾವವನ್ನು ಹುಟ್ಟಿಸುತ್ತವೆ. ಈ ಮನೋಭಾವ ಅಪಾಯಕಾರಿ.

ನಮ್ಮ ಶಿಕ್ಷಣ ಸಂಸ್ಥೆಗಳೂ ವಿದ್ಯಾರ್ಥಿಗಳಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸುವ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕು. "ಯಶಸ್ಸಿಗಿಂತ ಪ್ರಾಮಾಣಿಕತೆ ಮುಖ್ಯ" ಎಂಬ ಪಾಠವನ್ನು ಬಾಲ್ಯದಿಂದಲೇ ಕಲಿಸಬೇಕು.

ಒಟ್ಟಿನಲ್ಲಿ, ಪ್ರಶ್ನೆಪತ್ರಿಕೆ ಸೋರಿಕೆ ಎನ್ನುವುದು ಕೇವಲ ನಮ್ಮ ಶಿಕ್ಷಣ ಹಾಗೂ ವ್ಯವಸ್ಥೆಯ ದೌರ್ಬಲ್ಯವಷ್ಟೇ ಅಲ್ಲ. ಇದು ನಮ್ಮ ಸಮಾಜದ ನೈತಿಕ ಕುಸಿತದ ಪ್ರತಿಬಿಂಬವೂ ಆಗಿದೆ. ಇದನ್ನು ತಡೆಯಲು ಕಾನೂನು, ತಂತ್ರಜ್ಞಾನ ಮತ್ತು ನೈತಿಕ ಶಿಕ್ಷಣ ಈ ಮೂರೂ ಒಟ್ಟಾಗಿ ಕಾರ್ಯನಿರ್ವಹಿಸಬೇಕು.

ಮೂಲಸೌಕರ್ಯಗಳನ್ನೇ ಗುರಿಯಾಗಿಸುವುದು ನಿಲ್ಲಿಸಿ: ಜೈಶಂಕರ್

ಯುದ್ಧ ನಿಲ್ಲಿಸಲು ಭಾರತ ಕೊಡುಗೆ



ಹೊಸದಿಲ್ಲಿ: ಪಶ್ಚಿಮ ಏಷ್ಯಾ ಬಿಕ್ಕಟ್ಟು ಮತ್ತು ಈ ಬಿಕ್ಕಟ್ಟು ಇಂಧನ ಪೂರೈಕೆಗಳು ಹಾಗೂ ಹೋರ್ಮುಜ್ ಜಲಸಂಧಿಯಲ್ಲಿ ಸಾಗರ ಸ್ಥಿರತೆ ಮೇಲೆ ಬೀರಿರುವ ಪರಿಣಾಮಗಳ ಕುರಿತು ತೀವ್ರತರ ನಾದ ಕಳವಳ ವ್ಯಕ್ತಪಡಿಸಿರುವ ಭಾರತ, ಭೌಗೋಳಿಕ-ರಾಜಕೀಯ ಅಸ್ಥಿರತೆ ನಿವಾರಣೆ ಮತ್ತು ಏಕ ಪಕ್ಷೀಯ ಬಲವಂತದ ನಿರ್ಬಂಧಗಳನ್ನು ಕೈಬಿಡಲು ಕಾರ್ಯಾರ್ಥ ಮಾರ್ಗೋಪಾಯಗಳನ್ನು ಕಂಡುಕೊಳ್ಳುವಂತೆ ಬ್ರಿಕ್ಸ್ ರಾಷ್ಟ್ರಗಳನ್ನು ಒತ್ತಾಯಿಸಿದೆ.

ಅಂತಾರಾಷ್ಟ್ರೀಯ ಬಾಂಧವ್ಯಗಳನ್ನು ಬಲಿಷ್ಠಗೊಳಿಸಲು ಪೂರಕವಾಗಿ ಪರಸ್ಪರರ ಸಾರ್ವಭೌಮತೆ ಮತ್ತು ಭೌಗೋಳಿಕ ಸಮಗ್ರತೆಗಳನ್ನು ಗೌರವಿಸಬೇಕು. ಸಂಘರ್ಷ ಮುಕ್ತಾಯಕ್ಕೆ ಮಾತುಕತೆ ಮತ್ತು ರಾಜತಾಂತ್ರಿಕತೆಯೊಂದೇ ಸಹ್ಯ ಮಾರ್ಗವಾಗಿದೆ. ಯುದ್ಧ ನಿಲ್ಲಿಸೋ ಪ್ರಯತ್ನಗಳಿಗೆ ಮತ್ತು ಸ್ಥಿರತೆ ಕಾಪಾಡುವ ಉದ್ದೇಶದ ಉಪಕ್ರಮಗಳಿಗೆ ತುಂಬು ರಚನಾತ್ಮಕ ಕೊಡುಗೆ ನೀಡಲು ಭಾರತ ಸಿದ್ಧವಿದೆ ಎಂದು ಎರಡು ದಿನಗಳ ಬ್ರಿಕ್ಸ್ ಸಮಾವೇಶದ ಉದ್ಘಾಟನಾ ಸಂದರ್ಭ ಭಾರತದ ವಿದೇಶ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ನಿರ್ದಿಷ್ಟ ರಾಷ್ಟ್ರಗಳನ್ನು ಹೆಸರಿಸದೆ ಹೇಳಿದ್ದಾರೆ.

ಶಾಂತಿ ಎಂದರೆ ಇರುವ ಶಾಂತಿಯನ್ನೂ ಚೂರುಚೂರು ಮಾಡೋದಲ್ಲ. ಅಂತಾರಾಷ್ಟ್ರೀಯ ಕಾನೂನನ್ನು ಎತ್ತಿಹಿಡಿಯುವುದು, ನಾಗರಿಕರ ರಕ್ಷಣೆ ಜತೆ ಸಾರ್ವಜನಿಕ ಮೂಲಸೌಕರ್ಯಗಳನ್ನು ಟಾರ್ಗೆಟ್ ಮಾಡೋದನ್ನು ನಿಲ್ಲಿಸುವುದು ಮುಖ್ಯ ಎಂದು ಸಚಿವರು ಸಲಹೆ ಮಾಡಿದ್ದಾರೆ.

ಸುರಕ್ಷಿತ, ಅಡೆತಡೆಮುಕ್ತ ನೌಕಾ ಸಂಚಾರಕ್ಕೆ ಆಗ್ರಹ: ಹೋರ್ಮುಜ್ ಜಲಸಂಧಿ ಮತ್ತು ಕೆಂಪು ಸಮುದ್ರ ಮುಖೇನ ಹಡಗುಗಳು ಸುರಕ್ಷಿತ ಮತ್ತು ಅಡೆತಡೆಮುಕ್ತವಾಗಿ ಸಂಚರಿಸುವಂತಾಗಬೇಕೆಂದು ಬಲವಾಗಿ ಪ್ರತಿಪಾದಿಸಿರುವ ಸಚಿವ ಜೈಶಂಕರ್, ಜಾಗತಿಕ ವಿತ್ತೀಯ ಹಿತದೃಷ್ಟಿಯಿಂದ ಇದು ತೀರಾ ಮುಖ್ಯ ಎಂದಿದ್ದಾರೆ. ಗಾಜಾದಲ್ಲಿನ ಸಂಘರ್ಷವು ಗಂಭೀರ ಮಾನವೀಯ ಬಿಕ್ಕಟ್ಟುಗಳನ್ನು ಸೃಜಿಸಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ. ಸುಸ್ಥಿರ ಕದನ ವಿರಾಮ, ಮಾನವೀಯ ನೆರವು ಮತ್ತು ದೀರ್ಘಕಾಲೀನ ಹಾಗೂ ಶಾಂತಿಯುತ ಪರಿಹಾರಕ್ಕೆ ಪೂರಕವಾಗಬಲ್ಲ ವಿಶ್ವಾಸಾರ್ಹ ಮಾರ್ಗೋಪಾಯಗಳು ಅತ್ಯವಶ್ಯವೆಂದು ಹೇಳಿದ್ದಾರೆ. ಪ್ಯಾಲೆಸ್ತೀನ್ ಸಮಸ್ಯೆಗೆ ಸಂಬಂಧಿಸಿ ದ್ವಿರಾಷ್ಟ್ರ ಪರಿಹಾರವನ್ನು ಭಾರತ ಬೆಂಬಲಿಸುತ್ತದೆ ಎಂದು ಗಮನ ಸೆಳೆದಿದ್ದಾರೆ.

ಹಿರಿಯ ನಾಯಕರು ಭಾಗಿ

ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಗ್ಚಿ, ರಷ್ಯಾದ ವಿದೇಶಾಂಗ ಸಚಿವ ಸರ್ಗೇ ಲಾವ್ರೊ, ಬ್ರೆಜಿಲ್‌ನ ಮೌರೊ ವಿಯೆರಾ, ಇಂಡೋನೇಷ್ಯಾ ಸಚಿವ ಸುಗಿಯೊನೊ, ದ.ಆಫ್ರಿಕಾ ಅಂತಾರಾಷ್ಟ್ರೀಯ ವ್ಯವಹಾರ ಸಚಿವ ರೊನಾಲ್ಡ್ ಲಮೋಲ ಮತ್ತಿತರ ಹಿರಿಯ ನಾಯಕರು ಸಮಾವೇಶದಲ್ಲಿ ಪಾಲ್ಗೊಂಡಿದ್ದಾರೆ. ಪ.ಏಷ್ಯಾ ಬಿಕ್ಕಟ್ಟು ಸೃಜಿಸಿರುವ ಆರ್ಥಿಕ ದುಷ್ಪರಿಣಾಮಗಳು, ಮುಖ್ಯವಾಗಿ ಇಂಧನ ಪೂರೈಕೆ ಬಿಕ್ಕಟ್ಟು, ವ್ಯಾಪಾರ ಮತ್ತು ಸುಂಕಗಳಿಗೆ ಸಂಬಂಧಿಸಿ ಅಮೆರಿಕದ ನೀತಿ ಇತ್ಯಾದಿ ವಿಚಾರಗಳು ಚರ್ಚೆಗೀಡಾಗಲಿರುವ ಹಿನ್ನೆಲೆಯಲ್ಲಿ, ಭಾರತ ಆತಿಥೇಯದ ಬ್ರಿಕ್ಸ್ ಸಮಾವೇಶ ತುಂಬು ಮಹತ್ವ ಪಡೆದಿದೆ.

ಇರಾನ್ ಸಚಿವರ ಜತೆ ಮೋದಿ ಚರ್ಚೆ

ಹೊಸದಿಲ್ಲಿ: ಸಂಘರ್ಷ ನಿರತ ಇರಾನ್, ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನ ಸನ್ನಿವೇಶಗಳ ಮಧ್ಯೆ, ಭಾರತದ ಆತಿಥ್ಯದಲ್ಲಿ ದಿಲ್ಲಿಯ ಭಾರತ ಮಂಡಪಮ್‌ನಲ್ಲಿ ನಡೆಯುತ್ತಿರುವ ಬ್ರಿಕ್ಸ್ ವಿದೇಶಾಂಗ ಸಚಿವರುಗಳ ಶೃಂಗಸಭೆ ಸಂದರ್ಭ, ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ಮತ್ತು ರಷ್ಯಾದ ವಿದೇಶಾಂಗ ಸಚಿವ ಸರ್ಗೇ ಲಾವ್ರೊವ್ ಜತೆ ಪ್ರಧಾನಿ ನರೇಂದ್ರ ಮೋದಿ ಗುರುವಾರ ಸಾಂಪ್ರದಾಯಿಕವಾಗಿ ಮಾತುಕತೆ ನಡೆಸಿದರು.

ಉನ್ನತ ಮಟ್ಟದ ರಾಜತಾಂತ್ರಿಕ ಕಾರ್ಯಕ್ರಮವೆಂದು ಬಣ್ಣಿಸಲ್ಪಟ್ಟ ಬ್ರಿಕ್ಸ್ ಸಮಾವೇಶದಲ್ಲಿ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳು, ಪಾಲುದಾರ ರಾಷ್ಟ್ರಗಳು ಪಾಲ್ಗೊಂಡಿದ್ದು, ಅಧಿಕೃತ ಬ್ರಿಕ್ಸ್ ಫ್ಯಾಮಿಲಿ ಫೋಟೋ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ, ಭಾರತಕ್ಕೆ ಭೇಟಿ ನೀಡಿರುವ ವಿದೇಶಿ ಸಚಿವರುಗಳು, ಪ್ರತಿನಿಧಿಗಳೊಂದಿಗೆ ಸೇರಿಕೊಂಡರು.

ಮೊತ್ತ ಮೊದಲು ಭಾರತಕ್ಕೆ ಚೀನಾ ರಾಯಭಾರಿ ಆಗಿರುವ ಕ್ಸು ಫೈಹಾಂಗ್ ಅವರನ್ನು ಎಸ್.ಜೈಶಂಕರ್ ಸ್ವಾಗತಿಸಿದ್ದರು. ಅಮೆರಿಕ ಅಧ್ಯಕ್ಷ ಟ್ರಂಪ್ ಚೀನಾ ಭೇಟಿ ಹಿನ್ನೆಲೆಯಲ್ಲಿ ಚೀನಾದ ವಿದೇಶಾಂಗ ಸಚಿವ ವಾಂಗ್ ಇ ಬ್ರಿಕ್ಸ್ ಸಮಾವೇಶಕ್ಕೆ ಬಂದಿರಲಿಲ್ಲ. ಯುಎಇ ಸಚಿವ ಖಲೀಫಾ ಶಹೀನ್ ಅಲಂ ಮರಾರ್, ಇಂಡೋನೇಷ್ಯಾದ ಸುಗಿಯೋನೋ, ದ.ಆಫ್ರಿಕಾದ ರೊನಾಲ್ಡ್ ಲಮೋಲ, ಇಥಿಯೋಪಿಯಾದ ಗೆಡಿಯೋನ್ ತೈಮೊಥೆವೋಸ್ ಹೆಸ್ಸೆಬಾನ್ ಭಾಗವಹಿಸಿದ್ದರು.



ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ವ್ಯಾಪಾರ, ತೈವಾನ್, ಇರಾನ್ ಯುದ್ಧ, ಇಂಧನ ಭದ್ರತೆ ಮತ್ತು ತಂತ್ರಜ್ಞಾನದ ಕುರಿತು ಗುರುವಾರ ಸುದೀರ್ಘ ಮಾತುಕತೆ ನಡೆಸಿದ್ದಾರೆ. ಉಭಯ ರಾಷ್ಟ್ರಗಳ ನಾಯಕರು ಸ್ಥಿರತೆ ಪ್ರದರ್ಶಿಸಿದರೂ, ತೈವಾನ್ ವಿಚಾರದಲ್ಲಿನ ತೀವ್ರ ಭಿನ್ನಾಭಿಪ್ರಾಯಗಳು ಉಭಯ ದೇಶಗಳ ನಡುವಿನ ಸಂಬಂಧದ ಸೂಕ್ಷ್ಮತೆಯನ್ನು ಮತ್ತೊಮ್ಮೆ ಜಗಜ್ಜಾಹೀರು ಮಾಡಿದವು.

ಕ್ಸಿ-ಟ್ರಂಪ್ ಬೀಜಿಂಗ್ ಶೃಂಗ ತೈವಾನ್ ವಿಚಾರ ರಣರಂಗ

» ಉಭಯ ನಾಯಕರ ನಡುವಿನ ಸಹಮತ ಮತ್ತು ಭಿನ್ನಾಭಿಪ್ರಾಯಗಳು



ಚೀನಾಗೆ ಭೇಟಿ ನೀಡಿದ ಅಮೆರಿಕದ ಮೊದಲ ಅಧ್ಯಕ್ಷ ಡೊನಾಲ್ಡ್ ಟ್ರಂಪ್

» ಕ್ಸಿ-ಟ್ರಂಪ್ ಐತಿಹಾಸಿಕ ಟೆಂಪಲ್ ಆಫ್ ಹೆವನ್‌ಗೆ ಭೇಟಿ, ಔತಣಕೂಟದಲ್ಲಿ ಭಾಗಿ

ಚೀನಾಗೆ ಬಂದ ಅಮೆರಿಕದ ಮೊದಲ ಅಧ್ಯಕ್ಷ

ಕಳೆದ ಹತ್ತು ವರ್ಷಗಳಲ್ಲಿ ಅಮೆರಿಕದ ಹಾಲಿ ಅಧ್ಯಕ್ಷರೊಬ್ಬರು ಚೀನಾಕ್ಕೆ ನೀಡುತ್ತಿರುವ ಮೊದಲ ಭೇಟಿ ಇದಾಗಿದ್ದು, ಗುರುವಾರ ಬೀಜಿಂಗ್‌ನ ಗ್ರೇಟ್ ಹಾಲ್ ಆಫ್ ದಿ ಪೀಪಲ್‌ನಲ್ಲಿ ಟ್ರಂಪ್ ಮತ್ತು ಜಿನ್‌ಪಿಂಗ್ ಎರಡು ಗಂಟೆಗಳಿಗೂ ಹೆಚ್ಚು ಕಾಲ ನೇರ ಮಾತುಕತೆ ನಡೆಸಿದರು. ಸುಂಕ ಸಮರ, ಕಾರ್ಯತಂತ್ರದ ಪೈಪೋಟಿ ಮತ್ತು ಜಾಗತಿಕ ವ್ಯವಸ್ಥೆಯ ಬಗ್ಗೆ ಇರುವ ವಿಭಿನ್ನ ದೃಷ್ಟಿಕೋನಗಳಿಂದ ಹದಗೆಟ್ಟಿರುವ ದ್ವಿಪಕ್ಷೀಯ ಸಂಬಂಧವನ್ನು ಸ್ಥಿರಗೊಳಿಸಲು ಉಭಯ ರಾಷ್ಟ್ರಗಳು ಈ ಮೂಲಕ ಪ್ರಯತ್ನಿಸಿದವು.

ವ್ಯಾಪಾರ, ಆರ್ಥಿಕ ಸಂಬಂಧಗಳು

ಶೃಂಗಸಭೆಯ ಕಾರ್ಯಸೂಚಿಯಲ್ಲಿ ವ್ಯಾಪಾರಕ್ಕೆ ಹೆಚ್ಚಿನ ಒತ್ತು ನೀಡಲಾಗಿತ್ತು. ಅಕ್ಟೋಬರ್‌ನಲ್ಲಿ ಮಾಡಿಕೊಂಡಿದ್ದ ತಾತ್ಕಾಲಿಕ ವ್ಯಾಪಾರ ಒಪ್ಪಂದ ಪ್ರಗತಿಯಲ್ಲಿದೆ ಎಂದು ಕ್ಸಿ, ಟ್ರಂಪ್‌ಗೆ ತಿಳಿಸಿದರು. ಈ ಹಿಂದೆ ಚೀನಾದ ಸರಕುಗಳ ಮೇಲೆ ಅಮೆರಿಕದ ಸುಂಕಗಳು ಶೇ.145ರಷ್ಟು ಏರಿಕೆಯಾಗಿದ್ದು, ಈ ಸಕಾರಾತ್ಮಕ ಮಾತುಕತೆಗಳು ಬಿಕ್ಕಟ್ಟನ್ನು ತಗ್ಗಿಸಿವೆ.

ಟ್ರಂಪ್ ಲಾಬಿ

ತಾಂತ್ರಿಕವಲ್ಲದ ಸರಕುಗಳ ವಿನಿಮಯವನ್ನು ನಿರ್ವಹಿಸಲು ಮತ್ತು ಹೂಡಿಕೆಯ ಮೇಲೆ ಸರ್ಕಾರದ ಮಟ್ಟದ ವೇದಿಕೆಯನ್ನು ಸ್ಥಾಪಿಸಲು ಯುಎಸ್-ಚೀನಾ ವ್ಯಾಪಾರ ಮಂಡಳಿ ಮತ್ತು ಯುಎಸ್-ಚೀನಾ ಹೂಡಿಕೆ ಮಂಡಳಿಗಳ ರಚನೆಯ ಬಗ್ಗೆ ಉಭಯ ಸರ್ಕಾರಗಳು ಚರ್ಚಿಸಿದವು. ಏರೋಸ್ಪೇಸ್, ಕೃಷಿ ಮತ್ತು ಇಂಧನ ಕ್ಷೇತ್ರಗಳಲ್ಲಿನ ಒಪ್ಪಂದಗಳಿಗೆ ಮೊದಲ ಆದ್ಯತೆ ನೀಡಲಾಯಿತು. ಕಳೆದ ವರ್ಷದ ವ್ಯಾಪಾರ ಸಮರದಿಂದ ಉಂಟಾಗಿದ್ದ ಆರ್ಥಿಕ ಹಿನ್ನಡೆಯನ್ನು ಸರಿದೂಗಿಸಲು ಅಮೆರಿಕದ ಕೃಷಿ ಉತ್ಪನ್ನಗಳು ಮತ್ತು ಪ್ರಯಾಣಿಕ ವಿಮಾನಗಳನ್ನು ಚೀನಾ ಹೆಚ್ಚಿನ ಪ್ರಮಾಣದಲ್ಲಿ ಖರೀದಿಸುವಂತೆ ಟ್ರಂಪ್ ಒತ್ತಾಯಿಸಿದರು.



ಸುದ್ದಿ ಸಮಗ್ರ

ತೈವಾನ್: ತೀವ್ರ ಭಿನ್ನಾಭಿಪ್ರಾಯ

ತೈವಾನ್ ವಿಚಾರ ಮಾತುಕತೆಯಲ್ಲಿ ಅತ್ಯಂತ ವಿವಾದಾತ್ಮಕ ವಿಷಯವಾಗಿ ಹೊರಹೊಮ್ಮಿತು. ತೈವಾನ್ ವಿಷಯವನ್ನು ಸರಿಯಾಗಿ ನಿಭಾಯಿಸದಿದ್ದರೆ ಅದು ಉಭಯ ದೇಶಗಳ ನಡುವೆ ಸಂಘರ್ಷ ಮತ್ತು ಘರ್ಷಣೆಗೆ ಕಾರಣವಾಗಬಹುದು ಮತ್ತು ಇಡೀ ಸಂಬಂಧವನ್ನೇ ಅಪಾಯಕ್ಕೆ ತಳ್ಳಬಹುದು ಎಂದು ಕ್ಸಿ ಟ್ರಂಪ್‌ಗೆ ನೇರ ಎಚ್ಚರಿಕೆ ನೀಡಿದರು.

ಯುಎಸ್ ಮಿಲಿಟರಿ ನೆರವು; ಚೀನಾ ಕೆಂಡ

ತೈವಾನ್ ಅನ್ನು ಚೀನಾ ತನ್ನ ಭೂಭಾಗ ಎಂದು ಪ್ರತಿಪಾದಿಸುತ್ತಿದೆ ಮತ್ತು ತೈಪೆಗೆ ಅಮೆರಿಕ ನೀಡುತ್ತಿರುವ ಮಿಲಿಟರಿ ಬೆಂಬಲವನ್ನು ನಿರಂತರ ವಿರೋಧಿಸುತ್ತಿದೆ. ಡಿಸೆಂಬರ್‌ನಲ್ಲಿ ಟ್ರಂಪ್ ಅವರು ತೈವಾನ್‌ಗೆ 11 ಬಿಲಿಯನ್ ಡಾಲರ್ ಶಸ್ತ್ರಾಸ್ತ್ರ ಪ್ಯಾಕೇಜ್ ಅನ್ನು ಅನುಮೋದಿಸಿದ ನಂತರ ಉದ್ವಿಗ್ನತೆ ಹೆಚ್ಚಾಗಿದೆ. ಅಮೆರಿಕ ಮತ್ತು ತೈವಾನ್ ನಡುವಿನ ರಕ್ಷಣಾ ಸಂಬಂಧಗಳು ಗಟ್ಟಿಯಾಗುತ್ತಿರುವುದು ಚೀನಾದ ಕಳವಳಕ್ಕೆ ಕಾರಣವಾಗಿದೆ ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ತೈವಾನ್ ಕುರಿತು ಚರ್ಚಿಸಲಾಗಿದೆಯೇ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಲು ಟ್ರಂಪ್ ನಿರಾಕರಿಸಿದರು.

ಇರಾನ್ ವಿಚಾರದಲ್ಲಿ ಸಹಮತ

ಉಕ್ರೇನ್ ಯುದ್ಧ ಮತ್ತು ಕೊರಿಯನ್ ಪರ್ಯಾಯ ದ್ವೀಪದ ಬೆಳವಣಿಗೆಗಳ ಬಗ್ಗೆಯೂ ಉಭಯ ನಾಯಕರು ಅಭಿಪ್ರಾಯ ವಿನಿಮಯ ಮಾಡಿಕೊಂಡರು. ಇರಾನ್ ಎಂದಿಗೂ ಪರಮಾಣು ಅಸ್ತ್ರವನ್ನು ಹೊಂದಬಾರದು ಎಂಬ ವಿಷಯದಲ್ಲಿ ಇಬ್ಬರೂ ನಾಯಕರು ಸಹಮತ ವ್ಯಕ್ತಪಡಿಸಿರುವುದು ವಿಶೇಷ.

ಹಳೆ ಸಮಸ್ಯೆಗಳಿಗೆ ಸಿಗದ ಪರಿಹಾರ

ಆರೋಗ್ಯ, ಕೃಷಿ, ಪ್ರವಾಸೋದ್ಯಮ ಮತ್ತು ಕಾನೂನು ಜಾರಿಯಲ್ಲಿ ಸಹಕಾರವನ್ನು ವಿಸ್ತರಿಸಲು ಕ್ಸಿ ಕರೆ ನೀಡಿದರು. ಕ್ಸಿ-ಟ್ರಂಪ್ ಬೀಜಿಂಗ್‌ನ ಐತಿಹಾಸಿಕ ಟೆಂಪಲ್ ಆಫ್ ಹೆವನ್‌ಗೆ ಭೇಟಿ ನೀಡಿ ಔತಣಕೂಟದಲ್ಲಿ ಭಾಗವಹಿಸಿದರೂ, ತೈವಾನ್ ಮತ್ತು ತಂತ್ರಜ್ಞಾನ ನಿಯಂತ್ರಣದಂತಹ ಮೂಲಭೂತ ಭಿನ್ನಾಭಿಪ್ರಾಯಗಳು ಇನ್ನೂ ಬಗೆಹರಿಯದೆ ಉಳಿದಿವೆ.

ಇರಾನ್ ಯುದ್ಧ ಮತ್ತು ಹಾರ್ಮುಜ್ ಜಲಸಂಧಿ

ಜಾಗತಿಕ ಇಂಧನ ಕಾರಿಡಾರ್ ಆದ ಹಾರ್ಮುಜ್ ಜಲಸಂಧಿಯಲ್ಲಿ ಇರಾನ್ ಸಂಘರ್ಷದಿಂದ ಉಂಟಾಗಿರುವ ಹಡಗು ಸಂಚಾರದ ಅಡಚಣೆಯ ಬಗ್ಗೆ ಶೃಂಗಸಭೆಯಲ್ಲಿ ಚರ್ಚಿಸಲಾಯಿತು. ಇಂಧನ ಪೂರೈಕೆಯ ಸುಗಮ ಸಂಚಾರಕ್ಕಾಗಿ ಜಲಸಂಧಿಯು ಮುಕ್ತವಾಗಿರಬೇಕು ಎಂದು ಇಬ್ಬರೂ ನಾಯಕರು ಒಪ್ಪಿದ್ದಾರೆ. ಕೊಲ್ಲಿ ರಾಷ್ಟ್ರಗಳ ಮೇಲಿನ ಇಂಧನ ಅವಲಂಬನೆಯನ್ನು ತಗ್ಗಿಸಲು ಅಮೆರಿಕದ



ತೈಲವನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಲು ಕ್ಸಿ ಆಸಕ್ತಿ ವ್ಯಕ್ತಪಡಿಸಿದರು ಎಂದು ವಾಷಿಂಗ್ಟನ್ ತಿಳಿಸಿದೆ. ಇರಾನ್ ಬಿಕ್ಕಟ್ಟನ್ನು ಬಗೆಹರಿಸಲು ಚೀನಾ ಹೆಚ್ಚು ಸಕ್ರಿಯ ಪಾತ್ರ ವಹಿಸಬೇಕು ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಈ ಮೊದಲೇ ಒತ್ತಾಯಿಸಿದ್ದರು. ಚೀನಾ ಈ ಸಂಘರ್ಷದಲ್ಲಿ ರಾಜತಾಂತ್ರಿಕ ಮಧ್ಯಸ್ಥಿಕೆ ವಹಿಸಲು ಆಸಕ್ತಿ ತೋರಿದೆ.

ಪರಸ್ಪರ ಲಾಭದಾಯಕ ಸಂಬಂಧ ಎಂದ ಕ್ಸಿ!

ದ್ವಿಪಕ್ಷೀಯ ಆರ್ಥಿಕ ಸಂಬಂಧಗಳು ಪರಸ್ಪರ ಲಾಭದಾಯಕ ಎಂದು ಬಣ್ಣಿಸಿದ ಕ್ಸಿ, ಚೀನಾದ ಮಾರುಕಟ್ಟೆಯನ್ನು ಇನ್ನಷ್ಟು ಮುಕ್ತಗೊಳಿಸುವುದಾಗಿ ಭರವಸೆ ಇತ್ತರು. ಇದೇ ವೇಳೆ, ಚೀನಾದಿಂದ ಅಮೆರಿಕಕ್ಕೆ ಅಕ್ರಮ ರವಾನೆಯಾಗುತ್ತಿರುವ ಫೆಂಟಾನಿಲ್ ಪೂರ್ವಗಾಮಿ ರಾಸಾಯನಿಕಗಳ ಹರಿವನ್ನು ತಡೆಗಟ್ಟಲು ಎರಡೂ ದೇಶಗಳು ಒಮ್ಮತ ವ್ಯಕ್ತಪಡಿಸಿದವು.



ತಂತ್ರಜ್ಞಾನ ಸಹಕಾರ

ಅರೆವಾಹಕಗಳ (ಸೆಮಿಕಂಡಕ್ಟರ್) ರಫ್ತು ನಿಯಂತ್ರಣ ಮತ್ತು ಎಐ ಚಿಪ್‌ಗಳ ಲಭ್ಯತೆ, ಅಮೆರಿಕ-ಚೀನಾ ನಡುವಿನ ಪೈಪೋಟಿಯ ಪ್ರಮುಖ ವಿಷಯವಾಗಿ ಹೊರಹೊಮ್ಮಿದೆ. ಎನ್ವಿಡಿಯಾದ ಎಚ್200 ಕೃತಕ ಬುದ್ಧಿಮತ್ತೆ ಚಿಪ್‌ಗಳನ್ನು ಖರೀದಿಸಲು ಚೀನಾದ ಸುಮಾರು 10 ಕಂಪನಿಗಳಿಗೆ ವಾಷಿಂಗ್ಟನ್ ಅನುಮೋದನೆ ನೀಡಿದೆ ಎಂದು ರಾಯಿಟರ್ಸ್ ವರದಿ ಮಾಡಿದೆ. ಎನ್ವಿಡಿಯಾ ಸಿಇಒ ಜೆನ್ಸನ್ ಹುವಾಂಗ್ ಟ್ರಂಪ್ ನಿಯೋಗದಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು.

ಕಿರುಸುದ್ದಿ

ಇಂದಿನಿಂದ ಪ್ರಧಾನಿ ಪಂಚ ರಾಷ್ಟ್ರಗಳ ಪ್ರವಾಸ ಆರಂಭ

ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ ಮೇ 15ರಿಂದ 20ರವರೆಗೆ ಪಂಚ ರಾಷ್ಟ್ರಗಳಿಗೆ ಪ್ರವಾಸಗೈಯಲಿದ್ದು, ಮೊತ್ತ ಮೊದಲು ಮೇ 15ರಂದು ಯುಎಇಗೆ ಭೇಟಿ ಕೊಡಲಿದ್ದಾರೆ. ಉಭಯ ರಾಷ್ಟ್ರಗಳ ನಡುವಣ ವ್ಯೂಹಾತ್ಮಕ ಪಾಲುದಾರಿಕೆ ಬಲಪಡಿಸುವುದು ಪ್ರಧಾನಿಯ ಯುಎಇ ಭೇಟಿ ಹಿಂದಿನ ಆಶಯವಾಗಿದೆ. ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಝುಯೇದ್ ಅಲ್ ನಹ್ಯಾನ್‌ರನ್ನು ಭೇಟಿಯಾಗಿ ವ್ಯಾಪಾರ, ಹೂಡಿಕೆ, ಇಂಧನ ರಂಗದಲ್ಲಿ ಸಹಕಾರ, ತಂತ್ರಜ್ಞಾನ ಮತ್ತು ಸಂಸ್ಕೃತಿ ಹಾಗೂ ಜನ-ಜನ ಸಂಪರ್ಕ ಇತ್ಯಾದಿ ವಲಯಗಳಲ್ಲಿ ದ್ವಿಪಕ್ಷೀಯ ಬಾಂಧವ್ಯ ಕೊಂಡಿಗಳನ್ನು ಗಾಢಗೊಳಿಸುವ ಅವಕಾಶಗಳ ಕುರಿತು ಮತ್ತು ವಲಯದ ಸಮಸ್ಯೆಗಳ ಬಗ್ಗೆ ಉಭಯ ನಾಯಕರು ಚರ್ಚಿಸಲಿದ್ದಾರೆ ಎಂದು ವಿದೇಶಾಂಗ ಖಾತೆ ಕಾರ್ಯದರ್ಶಿ ಸಿಬಿ ಜಾರ್ಜ್ ವಿಶೇಷ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಪಳನಿಸ್ವಾಮಿ ಸೇರಿ 22 ಶಾಸಕರ ಅನರ್ಹತೆಗೆ ಆಗ್ರಹ

ಚೆನ್ನೈ: ಎಐಎಡಿಎಂಕೆ ಮುಖ್ಯಸ್ಥ ಎಡಪ್ಪಾಡಿ ಕೆ. ಪಳನಿಸ್ವಾಮಿ ಹಾಗೂ ಅವರ ಬೆಂಬಲಿಗ ಶಾಸಕರು ಪಕ್ಷದ ವಿಪ್ ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿರುವ ಸಿ.ವಿ. ಷಣ್ಮುಗಂ ಮತ್ತು ಎಸ್.ಪಿ. ವೇಲುಮಣಿ ನೇತೃತ್ವದ ಬಣ, ಅವರ ಅನರ್ಹತೆಗೆ ಗುರುವಾರ ಒತ್ತಾಯಿಸಿದೆ. ಬಣದ ವಿಪ್ ಸಿ. ವಿಜಯಭಾಸ್ಕರ್, ಸ್ಪೀಕರ್ ಜೆ.ಸಿ.ಡಿ. ಪ್ರಭಾಕರ್‌ರನ್ನು ಭೇಟಿ ಮಾಡಿ ದೂರು ಸಲ್ಲಿಸಿದ್ದಾರೆ. ಬುಧವಾರ ನಡೆದ ಸಿ. ಜೋಸೆಫ್ ವಿಜಯ್ ನೇತೃತ್ವದ ಟಿವಿಕೆ ಸರ್ಕಾರದ ವಿಶ್ವಾಸಮತ ಯಾಚನೆಯ ವೇಳೆ ಸರ್ಕಾರದ ಪರವಾಗಿ ಮತ ಚಲಾಯಿಸುವಂತೆ ನೀಡಿದ್ದ ಸೂಚನೆಯನ್ನು ಪಳನಿಸ್ವಾಮಿ ಸೇರಿದಂತೆ 22 ಶಾಸಕರು ಉಲ್ಲಂಘಿಸಿದ್ದಾರೆ, ಎಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

ಹರ್ಯಾಣ ಸ್ಥಳೀಯ ಚುನಾವಣೆ ಬಿಜೆಪಿ ಭಾರೀ ಗೆಲುವು, ಕಾಂಗ್ರೆಸ್ ಧೂಳಿಪಟ

ಚಂಡೀಗಢ: ಹರ್ಯಾಣದಲ್ಲಿ ನಡೆದ ಸ್ಥಳೀಯ ಚುನಾವಣೆಗಳಲ್ಲಿ ಬಿಜೆಪಿ ಭಾರೀ ಗೆಲುವು ಸಾಧಿಸಿದ್ದು, ಕಾಂಗ್ರೆಸ್ ಧೂಳಿಪಟವಾಗಿದೆ.ಅಂಬಾಲದಲ್ಲಿ 20ಸ್ಥಾನಗಳಲ್ಲಿ ಬಿಜೆಪಿ 16 ಸ್ಥಾನಗಳಲ್ಲಿ ಗೆದ್ದು ವಿಕ್ರಮ ಸಾಧಿಸಿದ್ದರೆ, ಕಾಂಗ್ರೆಸ್ 3ಸ್ಥಾನ ಗಳಿಸಿದೆ. ಬಿಜೆಪಿಯ ಅಕ್ಷಿತಾ ಸೈನಿ ಮೇಯರ್ ಚುನಾವಣೆಯಲ್ಲಿಗೆದ್ದಿದ್ದಾರೆ. ಪಂಚ್‌ಕುಲದಲ್ಲಿ ಬಿಜೆಪಿ 17ಸ್ಥಾನಗಳಲ್ಲಿ ಗೆದ್ದರೆ, ಕಾಂಗ್ರೆಸ್ 3ಸ್ಥಾನಗಳಲ್ಲಿ ಗೆದ್ದಿದೆ.ಸೋನಿಪತ್, ರಿವಾರಿಗಳಲ್ಲೂ ಬಿಜೆಪಿ ಭಾರೀ ಗೆಲುವು ಸಾಧಿಸಿದೆ.ಒಟ್ಟು 7ನಗರ ಪಾಲಿಕೆಗಳಲ್ಲಿ ಬಿಜೆಪಿ 6ರಲ್ಲಿ ಗೆದ್ದಿದೆ.

ಮಮತಾ ವಕೀಲಿ ಲೈಸನ್ಸ್ ಕೇಳಿದ ಬಾರ್ ಕೌನ್ಸಿಲ್

ಕೋಲ್ಕತ್ತಾ: ಇತ್ತೀಚಿನ ಪಶ್ಚಿಮ ಬಂಗಾಳದಲ್ಲಿ ನಡೆದ ಚುನಾವಣೋತ್ತರ ಹಿಂಸಾಚಾರದ ಕುರಿತು ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಗುರುವಾರ ಕಲ್ಕತ್ತಾ ಹೈಕೋರ್ಟ್‌ನಲ್ಲಿ ಖುದ್ದಾಗಿ ವಾದ ಮಂಡಿಸಿದರು. ಅವರ ಪರವಾನಗಿ ಮತ್ತು ವಕೀಲಿ ವೃತ್ತಿಜೀವನದ ಬಗ್ಗೆ ಭಾರತೀಯ ಬಾರ್ ಕೌನ್ಸಿಲ್(ಬಿಸಿಐ) ಮಾಹಿತಿ ಸಲ್ಲಿಸುವಂತೆ ತನ್ನ ಪಶ್ಚಿಮ ಬಂಗಾಳ ಘಟಕಕ್ಕೆ ಸೂಚಿಸಿದೆ. ಅಲ್ಲದೆ, ಮಮತಾ ಮುಖ್ಯಮಂತ್ರಿಯಾಗಿದ್ದಾಗ ಅವರ ವಕೀಲಿ ಪರವಾನಗಿ ರದ್ದಿನಲ್ಲಿ ಇಡಲಾಗಿತ್ತೇ ಎಂದು ಪ್ರಶ್ನಿಸಿದೆ.



ವಕೀಲರ ಕೋಟು ಧರಿಸಿ ನ್ಯಾಯಾಲಯಕ್ಕೆ ಆಗಮಿಸಿದ ಮಮತಾ, ತೀವ್ರ ಘೋಷಣೆಗಳ ನಡುವೆಯೇ ವಾದ ಮಂಡಿಸಿದರು. ರಾಜ್ಯದಲ್ಲಿ ಬಿಜೆಪಿ ಕಾರ್ಯಕರ್ತರಿಂದ ಹಿಂಸಾಚಾರ ನಡೆಯುತ್ತಿದೆ ಎಂದು ಆರೋಪಿಸಿದ ಅವರು, 10 ಮಂದಿ ಕೊಲೆಯಾದವರ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದರು. ಪೊಲೀಸರ ಸಮ್ಮುಖದಲ್ಲೇ ಮನೆ ಮತ್ತು ಕಚೇರಿಗಳನ್ನು ಲೂಟಿ ಮಾಡಲಾಗುತ್ತಿದೆ ಎಂದು ದೂರಿದ್ದಾರೆ. ಜನರ ರಕ್ಷಣೆಗೆ ತುರ್ತು ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದು, ಬಂಗಾಳ ಬುಲ್ಡೋಜರ್ ರಾಜ್ಯವಲ್ಲ ಎಂದು ಪ್ರತಿಪಾದಿಸಿದರು.

ಸೋಲು ಜೀರ್ಣಿಸಲಾಗುತ್ತಿಲ್ಲ: ಮಮತಾರ ಕಾನೂನು ಹೋರಾಟವನ್ನು ಟಿಎಂಸಿ ಶ್ಲಾಘಿಸಿದ್ದರೆ, ಮಮತಾರಿಗೆ ಸೋಲನ್ನು ಜೀರ್ಣಿಸಿಕೊಳ್ಳಲಾಗುತ್ತಿಲ್ಲ ಎಂದು ಬಿಜೆಪಿ ಟೀಕಿಸಿದೆ. ಎನ್‌ವಿ ಸುಭಾಷ್ ಸೇರಿ ಬಿಜೆಪಿ ಮುಖಂಡರು ಮಮತಾ ನಡೆಯನ್ನು ರಾಜಕೀಯ ಪ್ರೇರಿತ ಎಂದು ಬಣ್ಣಿಸಿದ್ದಾರೆ.

ತೈವಾನ್ ವಿಚಾರದಲ್ಲಿ ಬಹಳ ಎಚ್ಚರಿಕೆ ಇರಲಿ

ಬೀಜಿಂಗ್: ತೈವಾನ್ ವಿಷಯವನ್ನು ಸರಿಯಾಗಿ ನಿಭಾಯಿಸದಿದ್ದರೆ ಅಮೆರಿಕ ಮತ್ತು ಚೀನಾ ನಡುವೆ ಭಿನ್ನಾಭಿಪ್ರಾಯಗಳಷ್ಟೇ ಅಲ್ಲ ಸಂಘರ್ಷಗಳೂ ಉಂಟಾಗಬಹುದು ಎಂದು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಎಚ್ಚರಿಕೆ ನೀಡಿದ್ದಾರೆ.

ತೈವಾನ್ ಬಗ್ಗೆ ತಲೆ ಹಾಕದಂತೆ ಟ್ರಂಪ್‌ಗೆ ಕ್ಸಿ ಎಚ್ಚರಿಕೆ

ಬೀಜಿಂಗ್‌ನಲ್ಲಿ ಗುರುವಾರ ನಡೆದ ಉಭಯ ನಾಯಕರ ವ್ಯಾಪಕ ಮಾತುಕತೆಯಲ್ಲಿ ಇರಾನ್ ಯುದ್ಧ, ಇಂಧನ ಭದ್ರತೆ, ವ್ಯಾಪಾರ, ಸುಂಕ, ತಂತ್ರಜ್ಞಾನ ಮತ್ತು ತೈವಾನ್ ಸೇರಿದಂತೆ ಹಲವು ಪ್ರಮುಖ ವಿಷಯಗಳು ಚರ್ಚೆಗೆ ಬಂದವು. ಸುಮಾರು ಎರಡು ಗಂಟೆಗಳ ಕಾಲ ನಡೆದ ಮೊದಲ ಸುತ್ತಿನ ಮಾತುಕತೆ ಬಳಿಕ ಟ್ರಂಪ್ ಅವರು ಕ್ಸಿ ಜಿನ್‌ಪಿಂಗ್ ಮತ್ತು ಅವರ ಪತ್ನಿಯನ್ನು ಸೆಪ್ಟೆಂಬರ್ 24ರಂದು ವೈಟ್‌ಹೌಸ್‌ಗೆ ಆಹ್ವಾನಿಸಿದರು. ಆದರೆ, ಚೀನಾ-ಅಮೆರಿಕ ಸಂಬಂಧಗಳಲ್ಲಿ ತೈವಾನ್ ಪ್ರಶ್ನೆಯೇ ಅತ್ಯಂತ ಪ್ರಮುಖ ವಿಷಯ ಎಂದು ಕ್ಸಿ ಒತ್ತಿ ಹೇಳಿದರು.

ಈ ವಿಷಯವನ್ನು ಸರಿಯಾಗಿ ನಿಭಾಯಿಸಿದರೆ ದ್ವಿಪಕ್ಷೀಯ ಸಂಬಂಧಗಳಲ್ಲಿ ಒಟ್ಟಾರೆ ಸ್ಥಿರತೆ ಇರುತ್ತದೆ. ಇಲ್ಲದಿದ್ದರೆ ಎರಡೂ ದೇಶಗಳು ಘರ್ಷಣೆ ಹಾಗೂ ಸಂಘರ್ಷಗಳತ್ತ ಸಾಗಬಹುದು, ಇದರಿಂದ ಸಂಬಂಧಗಳು ಗಂಭೀರ ಅಪಾಯಕ್ಕೆ ಸಿಲುಕಬಹುದು ಎಂದು ಅವರು ಎಚ್ಚರಿಸಿದರು. ತೈವಾನ್ ವಿಚಾರದಲ್ಲಿ ಅಮೆರಿಕ ಅತ್ಯಂತ ಎಚ್ಚರಿಕೆಯಿಂದ ನಡೆದುಕೊಳ್ಳಬೇಕು ಎಂದೂ ಜಿನ್‌ಪಿಂಗ್ ಸೂಚಿಸಿದರು.

ಭಾರತದ ಸರಕು ನೌಕೆಗೆ ದಾಳಿ: ಎಂಇಎ ಖಂಡನೆ

ಹೊಸದಿಲ್ಲಿ: ಒಮಾನ್ ಸಮುದ್ರ ಪ್ರದೇಶದಲ್ಲಿ ಸಂಚರಿಸುತ್ತಿದ್ದ ಭಾರತದ ಧ್ವಜ ಹೊಂದಿದ್ದ ಎಂಎಸ್‌ವಿ ಹಾಜಿ ಅಲಿ ಎಂಬ ಸರಕು ನೌಕೆಯ ಮೇಲೆ ಕ್ಷಿಪಣಿ ದಾಳಿ ನಡೆಸಿ ಅದನ್ನು ಮುಳುಗಿಸಿರುವುದನ್ನು ಭಾರತೀಯ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಗುರುವಾರ ತೀವ್ರವಾಗಿ ಖಂಡಿಸಿದೆ.

ಸೋಮಾಲಿಯಾದ ಬೆರ್ಬೆರಾ ಬಂದರಿನಿಂದ ಶಾರ್ಜಾಕ್ಕೆ ಜಾನುವಾರುಗಳನ್ನು ಹೊತ್ತೊಯ್ಯುತ್ತಿದ್ದ ಈ ಹಡಗಿನ ಮೇಲೆ ಮೇ 13ರಂದು ಸ್ಥಳೀಯ ಕಾಲಮಾನ ಬೆಳಗಿನ ಜಾವ 3:30ರ ಸುಮಾರಿಗೆ ಡ್ರೋನ್ ಅಥವಾ ಕ್ಷಿಪಣಿ ದಾಳಿ ನಡೆದಿದೆ. ಒಮಾನ್‌ನ ಲಿಮಾ ಬಳಿ ನಡೆದ ಈ ದಾಳಿಯಿಂದಾಗಿ ಹಡಗಿನಲ್ಲಿ ಸ್ಫೋಟ ಮತ್ತು ಅಗ್ನಿ ಅವಘಡ ಸಂಭವಿಸಿ, ಅದು ಸಮುದ್ರದಲ್ಲಿ ಮುಳುಗಿದೆ. ಒಮಾನ್ ಕರಾವಳಿ ರಕ್ಷಣಾ ಪಡೆ ತಕ್ಷಣ ಕಾರ್ಯಪ್ರವೃತ್ತರಾಗಿ ಹಡಗಿನಲ್ಲಿದ್ದ ಎಲ್ಲಾ 14 ಭಾರತೀಯ ನಾವಿಕರನ್ನು ಲೈಫ್‌ಬೋಟ್‌ಗಳ ಮೂಲಕ ರಕ್ಷಿಸಿದೆ. ಇದಕ್ಕಾಗಿ ಒಮಾನ್ ಅಧಿಕಾರಿಗಳಿಗೆ ಭಾರತ ಸರ್ಕಾರ ಕೃತಜ್ಞತೆ ಸಲ್ಲಿಸಿದೆ.

ರಾಜತಾಂತ್ರಿಕ ಪ್ರತಿಕ್ರಿಯೆ: ವಿದೇಶಾಂಗ ಇಲಾಖೆಯ ವಕ್ತಾರ ರಣಧೀರ್ ಜೈಸ್ವಾಲ್, ನಾವಿಕರನ್ನು ಗುರಿಯಾಗಿಸಿಕೊಂಡಿರುವುದು ಅಸ್ವೀಕಾರಾರ್ಹ ಎಂದಿದ್ದಾರೆ. ದಿಲ್ಲಿಯಲ್ಲಿ ಬ್ರಿಕ್ಸ್ ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆ ನಡೆಯುತ್ತಿರುವಾಗಲೇ ಈ ಘಟನೆ ಸಂಭವಿಸಿದೆ. ಅಡೆತಡೆಯಿಲ್ಲದ ಸಮುದ್ರ ವ್ಯಾಪಾರಕ್ಕೆ ಒತ್ತು ನೀಡಿರುವ ವಿದೇಶಾಂಗ ಸಚಿವ ಎಸ್.ಜೈಶಂಕರ್ ಪಶ್ಚಿಮ ಏಷ್ಯಾದ ಸಮುದ್ರ ಮಾರ್ಗಗಳಲ್ಲಿನ ಕಾನೂನುಬಾಹಿರ ಕೃತ್ಯಗಳು ಜಾಗತಿಕ ವ್ಯಾಪಾರದ ಅಡಿಪಾಯಕ್ಕೆ ಬೆದರಿಕೆಯೊಡ್ಡುತ್ತಿವೆ ಎಂದು ಎಚ್ಚರಿಸಿದ್ದಾರೆ.

ಭಾರತ-ಪಾಕ್: ಹೊಸಬಾಳೆ ನಿಲುವಿಗೆ ನರಾವಣೆ ಸಹಮತ

ಹೊಸದಿಲ್ಲಿ: ಭಾರತ, ಪಾಕಿಸ್ತಾನದ ಜನಸಾಮಾನ್ಯರ ನಡುವಣ ಬಲಿಷ್ಠ ಬಾಂಧವ್ಯವು, ಉಭಯ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಬಾಂಧವ್ಯ ಸುಧಾರಿಸಲು ನೆರವಾಗಲಿದೆ ಎಂದು ಭಾರತೀಯ ಸೇನಾ ಮಾಜಿ ಮುಖ್ಯಸ್ಥ (ನಿವೃತ್ತ) ಮನೋಜ್ ಮುಕುಂದ್ ನರಾವಣೆ ಅಭಿಪ್ರಾಯಪಟ್ಟಿದ್ದಾರೆ ಮತ್ತು ಈ ನಿಟ್ಟಿನಲ್ಲಿ ಆರೆಸ್ಸೆಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರ ನಿಲುವನ್ನು ಸಮರ್ಥಿಸಿದ್ದಾರೆ.

ಮಿತ್ರರಾಗಲು ಸಾಧ್ಯ: ಗಡಿಯ ಎರಡೂ ಬದಿಯ ಸಾಮಾನ್ಯ ಜನರಿಗೆ ರಾಜಕೀಯ ಅನಗತ್ಯ. ಸಾಮಾನ್ಯ ಜನರಿಗೇನಿದ್ದರೂ ರೋಟಿ, ಕಪಡಾ ಮತ್ತು ಮಕಾನ್ (ಆಹಾರ, ಬಟ್ಟೆ, ಸೂರು)ಮಾತ್ರ ಅಗತ್ಯ. ಎರಡೂ ರಾಷ್ಟ್ರಗಳ ಜನಸಾಮಾನ್ಯರ ಮಧ್ಯೆ ಸ್ನೇಹ ಬೆಳೆದಲ್ಲಿ, ಎರಡೂ ರಾಷ್ಟ್ರಗಳು ಮಿತ್ರರಾಗಲು ಸಾಧ್ಯವಿದೆ. ಹಾಗಾಗಿ ಇದೇ ಸರಿಯಾದ ವಿಚಾರ. ಜನ-ಜನ ಸಂಪರ್ಕ ತೀರಾ ಮುಖ್ಯ ಎಂದು ನರಾವಣೆ ಹೇಳಿದ್ದಾರೆ. ಆ ರಾಷ್ಟ್ರದ ಪಾಲಿಗೆ ಬಾಗಿಲು ಮುಚ್ಚಕೂಡದು, ಬದಲಾಗಿ ಮಾತುಕತೆಗೆ ಸದಾ ಸಿದ್ಧರಿರಬೇಕೆಂದು ಹೊಸಬಾಳೆ ಅಭಿಪ್ರಾಯಿಸಿದ್ದರು.

ಹತ್ತು ದಿನಗಳ ಕಾಂಗ್ರೆಸ್ ರಾಜಕೀಯ ಪ್ರಹಸನಕ್ಕೆ ಕೊನೆಗೂ ತೆರೆ

ವಿ.ಡಿ. ಸತೀಶನ್ ಕೇರಳದ ನೂತನ ಸಿಎಂ

ತಿರುವನಂತಪುರಂ: ಕೇರಳದ ನೂತನ ಮುಖ್ಯಮಂತ್ರಿ ಆಯ್ಕೆಗಾಗಿ ಕಳೆದ 10 ದಿನಗಳಿಂದ ನಡೆಯುತ್ತಿದ್ದ ರಾಜ ಕೀಯ ಪ್ರಹಸನಕ್ಕೆ ಕೊನೆಗೂ ತೆರೆ ಬಿದ್ದಿದ್ದು, ಕಾಂಗ್ರೆಸ್ ಹೈಕಮಾಂಡ್ ವಿ.ಡಿ. ಸತೀಶನ್ ಅವರನ್ನು ಮುಖ್ಯಮಂತ್ರಿ ಸ್ಥಾನದ ಅಭ್ಯರ್ಥಿ ಎಂದು ಘೋಷಿಸಿದೆ.

ಮಾಜಿ ವಿರೋಧ ಪಕ್ಷದ ನಾಯಕ ಸತೀಶನ್ (61)ಅವರನ್ನು ಕಾಂಗ್ರೆಸ್ ಹೈಮಾಂಡ್ ತನ್ನ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಆಯ್ಕೆ ಮಾಡಿದೆ. ತನ್ನ ಆಯ್ಕೆಯ ಕೆ.ಸಿ.ವೇಣುಗೋಪಾಲ್‌ರನ್ನು ಮುಖ್ಯಮಂತ್ರಿಯಾಗಿಸುವ ಕಾಂಗ್ರೆಸ್ ಹೈಕಮಾಂಡಿನ ಲೆಕ್ಕಾಚಾರ ತಪ್ಪಿದೆ. ಕಾಂಗ್ರೆಸ್ ಕಾರ್ಯಕರ್ತರು, ಮುಸ್ಲಿಂ ಲೀಗ್ ಮತ್ತು ಇತರ ಗುಂಪುಗಳು ಕೆ.ಸಿ.ವೇಣುಗೋಪಾಲ್‌ರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಹೇರುವ ಯತ್ನದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದವು. 2026ರ ವಿಧಾನಸಭಾ ಚುನಾವಣೆಯಲ್ಲಿ 140 ಸ್ಥಾನಗಳ ಪೈಕಿ ಯುಡಿಎಫ್ 102 ಸ್ಥಾನ(ಕಾಂಗ್ರೆಸ್ 63, ಮುಸ್ಲಿಂ ಲೀಗ್ 22, ಇತರ 14)ಗಳೊಂದಿಗೆ ಭರ್ಜರಿ ಜಯ ಸಾಧಿಸಿ ಅಧಿಕಾರಕ್ಕೆ ಬಂದಿದೆ.



ದೈವೇಚ್ಛೆ ಎಂದ ಸತೀಶನ್: ಮುಖ್ಯಮಂತ್ರಿ ಸ್ಥಾನಕ್ಕೆ ತಾವು ಆಯ್ಕೆಯಾಗಿರುವುದನ್ನು ವೈಯಕ್ತಿಕ ಸಾಧನೆ ಎಂದು ಭಾವಿಸುವುದಿಲ್ಲ. ಇದು ದೈವೇಚ್ಛೆ ಎಂದುಕೊಳ್ಳುತ್ತೇನೆ. ಎಲ್ಲರನ್ನೂ ಜತೆಗೂಡಿಸಿ ಮುಂದುವರಿಯುವುದಾಗಿ ತಿಳಿಸಿದ ಸತೀಶನ್, ಆಡಳಿತದಲ್ಲಿ ಸಾಮೂಹಿಕ ಪ್ರಯತ್ನಕ್ಕೆ ಕರೆ ನೀಡಿದ್ದಾರೆ. ರಾಹುಲ್ ಗಾಂಧಿ ಮತ್ತು ಯುಡಿಎಫ್ ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸಿದರು.

ರಾಜ್ಯಪಾಲರಿಗೆ ಹಕ್ಕು ಮಂಡಿಸಿದ ಸತೀಶನ್: ಶಾಸಕಾಂಗ ಪಕ್ಷದ ಸಭೆಯ ನಂತರ ಸತೀಶನ್, ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್‌ರನ್ನು ಭೇಟಿ ಮಾಡಿ ಸರ್ಕಾರ ರಚಿಸಲು ಹಕ್ಕು ಮಂಡಿಸಿದ್ದಾರೆ.

ಕೇರಳದಲ್ಲಿ ಮಾತ್ರ ವಿಳಂಬ

ಇತ್ತೀಚೆಗೆ ಚುನಾವಣೆ ನಡೆದ ಪಂಚರಾಜ್ಯಗಳ ಪೈಕಿ ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳ ಆಯ್ಕೆಯಾಗಿ ಅವರು ಅಧಿಕಾರ ಸ್ವೀಕರಿಸಿದ್ದರೂ, ಕೇರಳದಲ್ಲಿ ಸಿಎಂ ಆಯ್ಕೆ ಪ್ರಕ್ರಿಯೆಯಲ್ಲಿ ವಿಳಂಬ ಉಂಟಾಗಿದ್ದುದು ಕಾಂಗ್ರೆಸ್ ಕಾರ್ಯಕರ್ತರು ಮತ್ತು ಮಿತ್ರಕೂಟದ ಪಕ್ಷಗಳಲ್ಲಿ ತೀವ್ರ ಅಸಮಾಧಾನಕ್ಕೆ ಕಾರಣವಾಗಿತ್ತು.

ಯಾರು ವಿ.ಡಿ. ಸತೀಶನ್? ಕೊಚ್ಚಿ ಬಳಿಯ ತೇವರ ನೆಟ್ಟೂರು ಮೂಲದ ವಿ.ಡಿ.ಸತೀಶನ್ 1964ರ ಮೇ 31ರಂದು ದಾಮೋದರ ಮೆನನ್-ವಿಲಾಸಿನಿ ಅಮ್ಮ ದಂಪತಿ ಸುಪುತ್ರರಾಗಿ ಜನಿಸಿದರು. ಕಾನೂನು ಪದವಿ ಪಡೆದಿರುವ ಸತೀಶನ್ ಅವರು ಪೆರಾವೂರು ಕ್ಷೇತ್ರದಿಂದ ಈ ಬಾರಿ ಆಯ್ಕೆಯಾಗಿದ್ದಾರೆ.

72 ಮಂದಿಗೆ ಗಾಯ, 170 ಜಾನುವಾರುಗಳ ಸಾವು

ಉ.ಪ್ರದೇಶ: ಬಿರುಗಾಳಿ ಮಳೆಗೆ 111 ಜನರು ಬಲಿ

ಲಖನೌ: ಉತ್ತರ ಪ್ರದೇಶದ ಹಲವಾರು ಜಿಲ್ಲೆಗಳಲ್ಲಿ ಬುಧವಾರ ಸಂಜೆ ಸಂಭವಿಸಿದ ಭೀಕರ ಬಿರುಗಾಳಿ, ಗುಡುಗು ಸಹಿತ ಮಳೆ ಮತ್ತು ಸಿಡಿಲಿನ ಅಬ್ಬರಕ್ಕೆ ಕನಿಷ್ಠ 111 ಜನರು ಬಲಿಯಾಗಿದ್ದು, 72 ಮಂದಿ ಗಾಯಗೊಂಡಿದ್ದಾರೆ. ಬುಧವಾರ ಕಂಡುಬಂದ ಹವಾಮಾನ ವೈಪರೀತ್ಯದಿಂದ ರಾಜ್ಯಾದ್ಯಂತ 227 ಮನೆಗಳು ಜಖಂಗೊಂಡಿದ್ದು, 170 ಜಾನುವಾರುಗಳು ಮೃತಪಟ್ಟಿವೆ ಎಂದು ಪರಿಹಾರ ಆಯುಕ್ತರ ಕಚೇರಿ ಗುರುವಾರ ತಿಳಿಸಿದೆ.

ಭಾರೀ ವೇಗದಲ್ಲಿ ಬೀಸಿದ ಗಾಳಿಯಿಂದಾಗಿ ಮರಗಳು ಮತ್ತು ವಿದ್ಯುತ್ ಕಂಬಗಳು ನೆಲಕ್ಕುರುಳಿದ್ದು, ವಾಹನಗಳು ಜಖಂಗೊಂಡಿವೆ, ಹಲವೆಡೆ ರಸ್ತೆ ಸಂಚಾರ ಸ್ಥಗಿತಗೊಂಡಿದೆ. ಜಿಲ್ಲಾವಾರು ಮಾಹಿತಿ ಪ್ರಕಾರ, ಭದೋಹಿಯಲ್ಲಿ 16, ಪ್ರಯಾಗ್‌ರಾಜ್‌ನಲ್ಲಿ 17 ಮತ್ತು ಫತೇಪುರ್‌ನಲ್ಲಿ 9 ಮಂದಿ ಮೃತಪಟ್ಟಿದ್ದಾರೆ. ಪ್ರತಾಪ್‌ಗಢ, ಕಾನ್ಪುರ ದೇಹತ್ ಮತ್ತು ದೇವರಿಯಾ ಜಿಲ್ಲೆಗಳಲ್ಲೂ ಸಾವು-ನೋವುಗಳು ವರದಿಯಾಗಿವೆ.

ಪರಿಹಾರ ಕಾರ್ಯಾಚರಣೆ

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ್ದು, ಮೃತರ ಕುಟುಂಬಗಳಿಗೆ 24 ಗಂಟೆಗಳ ಒಳಗಾಗಿ ಹಣಕಾಸಿನ ನೆರವು ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದಾರೆ. ಬಾರಾಬಂಕಿ, ಬಹ್ರೈಚ್ ಮತ್ತು ಉನ್ನಾವೊ ಸೇರಿದಂತೆ ಬಾಧಿತ 19 ಜಿಲ್ಲೆಗಳಿಗೆ ಹಣಕಾಸು ನೆರವು ಒದಗಿಸಲು ಸರ್ಕಾರ ಕ್ರಮ ಕೈಗೊಂಡಿದೆ.

ಬಂಟ್ವಾಳ ತಾಲೂಕಿನ ಸರಕಾರಿ ಶಾಲೆಗಳಿಗೆ ಮಕ್ಕಳ ದಾಖಲಾತಿ

ಇಂದಿನಿಂದ ಚಾಲನೆ: ಮಾಲತಿ



ಬಂಟ್ವಾಳ: 2026–27 ರ ಶೈಕ್ಷಣಿಕ ಸಾಲಿಗೆ ಬಂಟ್ವಾಳ ತಾಲೂಕಿನ ಸರಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಜಾಗೃತಿ ಆಂದೋಲನಕ್ಕೆ ಮೇ 15 ರಂದು ಬ್ಲಾಕ್ ಮಟ್ಟದಲ್ಲಿ ಚಾಲನೆ ನೀಡಲಾಗುವುದು ಎಂದು ಬಂಟ್ವಾಳ ಕ್ಷೇತ್ರ ಪ್ರಭಾರ ಶಿಕ್ಷಣಾಧಿಕಾರಿ ಮಾಲತಿ ಅವರು ತಿಳಿಸಿದ್ದಾರೆ

ಗುರುವಾರ ಬಂಟ್ವಾಳ ಪ್ರೆಸ್ ಕ್ಲಬ್ ನಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅವರು ಮೇ 18 ರಂದು ಹೋಬಳಿ ಮಟ್ಟ ಹಾಗೂ ಮೇ 20 ರಂದು ಕ್ಲಸ್ಟರ್ ಮಟ್ಟದಲ್ಲೂ ಈ ಆಂದೋಲನ ನಡೆಯಲಿದೆ.ಕಳೆದ ನವೆಂಬರ್ ನಲ್ಲೇ ಮಕ್ಕಳ ದಾಖಲಾತಿ ಕಾರ್ಯ ಚಟುವಟಿಕೆ ಆರಂಭವಾಗಿದ್ದು, ಮೇ 28 ರವರೆಗೆ ಮುಂದುವರಿಯಲಿದೆ ಎಂದರು.

ಮಕ್ಕಳ ದಾಖಲಾತಿ ಆಂದೋಲನದ ಬಗ್ಗೆ ಶಿಕ್ಷಕರು, ಪೋಷಕರು ಹಾಗೂ ಎಸ್ ಡಿಎಂಸಿ ಸಭೆಗಳಲ್ಲಿ ಜಾಗೃತಿ ಮೂಡಿಸಲಾಗಿದ್ದು, ಮನೆ, ಮನೆ, ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿ ಒಂದನೇ ತರಗತಿಗೆ ದಾಖಲಾಗುವ ವಯೋಮಾನದ ಮಕ್ಕಳ ಮಾಹಿತಿ ಪಡೆದುಕೊಂಡಿದ್ದಾರೆಯಲ್ಲದೆ ಸರಕಾರಿ ಶಾಲೆಯಲ್ಲಿ ಸರಕಾರದಿಂದ ಮಕ್ಕಳಿಗೆ ಸಿಗುವಂತ ಸೌಲಭ್ಯಗಳ ಕುರಿತು ವಿವಿಧ ರೀತಿಯಲ್ಲಿ ಪ್ರಚಾರವನ್ನು ಹಮ್ಮಿಕೊಂಡಿದ್ದಾರೆ. ಮಕ್ಕಳ ದಾಖಲಾತಿ ಹೆಚ್ಚಳಕ್ಕಾಗಿ ದಾನಿಗಳು ಹಾಗೂ ಎಸ್ ಡಿಎಂಸಿ ವತಿಯಿಂದ ಎಲ್ ಕೆಜಿ ತರಗತಿ ಆರಂಭ, ಕಲಿಕಾ ಸಾಮಗ್ರಿಗಳ ವಿತರಣೆಗೆ ಯೋಜನೆಯನ್ನು ಹಾಕಿಕೊಳ್ಳಲಾಗಿದೆ ಎಂದರು.

ಬಂಟ್ವಾಳ ವಲಯದಲ್ಲಿ 42 ಕಿರಿಯ, 152 ಹಿರಿಯ ಪ್ರಾಥಮಿಕ ಶಾಲೆಗಳಿದ್ದು, 39 ಪ್ರೌಢ ಶಾಲೆಗಳು ಸೇರಿ ಒಟ್ಟು 233 ಶಾಲೆಗಳಿವೆ. 2025–26ನೇ ಸಾಲಿನಲ್ಲಿ ಬಂಟ್ವಾಳ ತಾಲೂಕಿನಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 16 ಸರಕಾರಿ ಶಾಲೆಗಳು ಶೇ.100 ಫಲಿತಾಂಶ ಪಡೆದಿದೆ. ಈಗಾಗಲೇ ತಾಲೂಕಿನ ಮೂರು ಶಾಲೆಗಳಲ್ಲಿ ಸರಕಾರದ ವತಿಯಿಂದಲೇ ಎಲ್.ಕೆ.ಜಿ, ಯು.ಕೆ.ಜಿ. ಆರಂಭಿಸಲಾಗಿದೆ. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ 60 ಶಾಲೆಗಳಿಗೆ ಎಲ್.ಕೆ.ಜಿ. ತರಗತಿ ಮಂಜೂರಾಗಿದೆ. ಇವುಗಳಲ್ಲಿ 28 ಶಾಲೆಗಳಿಗೆ ತಲಾ 1 ಲಕ್ಷ ರೂ ಅನುದಾನ ಬಿಡುಗಡೆ ಆಗಿದೆ. ಸರಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆಯಾಗದಂತೆ ಈ ವರ್ಷ ಕ್ರಮ ಕೈಗೊಳ್ಳಲಾಗುತ್ತದೆ ಎಂದವರು ಶಿಕ್ಷಣಾಧಿಕಾರಿ ಮಾಲತಿ ಅವರು ಮಾಹಿತಿ ನೀಡಿದರು.

ತಾಲೂಕಿನ ವಾಮದಪದವು, ಕುರ್ನಾಡು, ಕನ್ಯಾನ, ಸಿದ್ಧಕಟ್ಟೆಗಳಲ್ಲಿ ನ್ಯಾಶನಲ್ ಸ್ಕಿಲ್ ಕ್ವಾಲಿಫಿಕೇಶನ್ ಫ್ರೇಮ್ ವರ್ಕ್ ಶಾಲೆಗಳಿವೆ. ಇಲ್ಲಿ ಕೌಶಲ್ಯಾಧಾರಿತ ಶಿಕ್ಷಣ ಒದಗಿಸಲಾಗುತ್ತದೆ. ಕಲಿಕೆ, ಉದ್ಯೋಗ ಸಿದ್ಧತೆ ಹಾಗೂ ವಿಭಿನ್ನ ವೃತ್ತಿಪರ ಕಲಿಕೆಗಳಿಗೆ ಇದು ಅನುಕೂಲಕರವಾಗಿದೆ. ಬಂಟ್ವಾಳ ವಲಯದಲ್ಲಿ 6 ಪಿಎಂಶ್ರೀ ಶಾಲೆಗಳಿವೆ. ಇವು ರಾಷ್ಟ್ರೀಯ ಶಿಕ್ಷಣ ನೀತಿಯಡಿ ಮೇಲ್ದರ್ಜೆಗೇರಿಸಲಾದ ಶಾಲೆಗಳಾಗಿವೆ ಎಂದವರು ವಿವರಿಸಿದರು. ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಸಚಿನ್ ಕುಮಾರ್ ಮಾತನಾಡಿ ಸರಕಾರಿ ಶಾಲೆಗಳಿಂದು ಗುಣಮಟ್ಟದ ಶಿಕ್ಷಣಕ್ಕೆ ಪೂರಕವಾದ ವಾತಾವರಣವನ್ನು ಹೊಂದಿದೆ. ದಾಖಲಾತಿ ಆಂದೋಲನದ ಮೂಲಕ ಪೋಷಕರು ಶಾಲೆ ಸೇರ್ಪಡೆಗೆ ಸಹಕರಿಸಬೇಕು ಎಂದರು.

ಬಿ.ಆರ್.ಸಿ. ವಿದ್ಯಾ ಜಿಲ್ಲಾ ವಯಸ್ಕರ ಶಿಕ್ಷಣ ಸಮನ್ವಯಾಧಿಕಾರಿ ಫಾತಿಮಾ ಬಿ, ಪೂರಕ ಮಾಹಿತಿ ನೀಡಿದರು. ಇಸಿಒಗಳಾದ ರಮಾನಂದ ನೂಜಿಪ್ಪಾಡಿ, ಸುಧಾ ಮತ್ತು ಪ್ರತಿಮಾ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮುಲ್ಕಿ ಬಿಲ್ಲವ ಸಂಘದಿಂದ ಪುಸ್ತಕ ವಿತರಣೆ

ಮುಲ್ಕಿ: ಬಿಲ್ಲವ ಸಮಾಜ ಸೇವಾ ಸಂಘದ ಆಶ್ರಯದಲ್ಲಿ ಮುಲ್ಕಿ ಬಿಲ್ಲವ ಸಮಾಜ ಸೇವಾ ಸಂಘದ ವ್ಯಾಪ್ತಿಯ 3ನೇ ತರಗತಿಯಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ವಿತರಣೆ ಸಮಾರಂಭ ಮೇ 16 ರ ಶನಿವಾರ ಬೆಳಿಗ್ಗೆ 10 ಗಂಟೆಗೆ ಮುಲ್ಕಿ ಬಿಲ್ಲವ ಸಂಘದ ಶ್ರೀ ನಾರಾಯಣಗುರು ಸಭಾಗೃಹದಲ್ಲಿ ನಡೆಯಲಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುಲ್ಕಿ ಬಿಲ್ಲವ ಸಮಾಜ ಸೇವಾ ಸಂಘದ ಅಧ್ಯಕ್ಷ ವಾಮನ್ ಕೋಟ್ಯಾನ್ ನಡಿಕುದ್ರು ವಹಿಸಲಿದ್ದಾರೆ ಉದ್ಯಮಿ. ಸಮಾಜ ಸೇವಕ ಪ್ರಭಾಕರ್ ಪೂಜಾರಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

BEFORE THE NOMINEE OF DEPUTY REGISTRAR OF CHITS, III ZONE, MARGOSA ROAD, MALLESWARAM, AT BANGALORE.
Dispute No. DRB-III/ CHITS/137/2025-26,

BETWEEN: MARGADARSI CHITS (KARNATAKA) PVT. LTD., Registered Office at Plot No. 212, Opp. Gate No. 9. of Palace Ground, Bellary Main Road, Sadashiva Nagar, BANGALORE-560 080.
Branch: BANASHANKARI
Represented by its Foreman & Branch Manager, **Mr. K. BALACHANDRAN.** .... **DISPUTANT**

AND: Mr. J. RANGEGOWDA & ORS.
1. **Mr. J. RANGEGOWDA,** S/o Mr. Jayaramanna, Major, First Division Asst. No. 558B, 5th Floor, Annex Building, Gate No. 3, VidhanaSoudha, BENGALURU - 560 001.
2. **Mr. R. BALAKRISHNA,** S/o Mr. M. P. Ramaswamy, Major, Superintendent (Administration), Dy. Director of Land Records, 2nd Floor, D. C. Office Complex, MANGALURU - 570 004.
3. **Mr. P. PURUSHOTHAM,** S/o Mr. Puttaswamy, Major, Second Division Asst., Dept. of Survey Settlement And Land Records, K. R. Circle, BENGALURU-560 001.
6. **Ms. LAKSHMAMMA,** W/o Mr. Jayaramanna, Major, Site # 22, D No. 171, 1st Cross, 1st Main, Doddabidarakallu, BENGALURU - 560 073.
7. **Mr. H. D. SHIVANNA,** S/o Mr. DoddaChowdappa, Major, S No. 22, D No. 171, 1st Cross, 1st Main, Doddabidarakallu, BENGALURU-560 073.
8. **Mr. L. E. MADHU,** S/o Mr. E. R. Eshwarappa, Major, Land Surveyor, Dept. of Survey, Settlement & Land Records, K. R. Circle, BENGALURU-560 001. ....**OPPONENTS.**

SUIT NOTICE BY PAPER PUBLICATION TO OPPONENT Nos. 1, 2, 3, 6, 7 & 8

WHEREAS, the Disputant has filed the above dispute U/s 64 (1) of The Chit Funds Act, 1982 before The Deputy Registrar of Chits, III Zone, Bangalore for recovery of a sum of **Rs. 2,88,925/-** along with interest at 24% p.a. and the Court Costs from the Opponents and the above dispute has been referred to me for adjudication and disposal.

Notice sent to Opponent Nos. 1, 2, 3, 6, 7 & 8 by S.P.A.D. have been returned unserved. Therefore, the Opponent Nos. 1, 2, 3, 6, 7 & 8 named above are therefore hereby directed to appear before me at the Branch Office of the Disputant Company at Banashankari, at Site # 287, IInd Floor, Banashankari LayOut, 3rd Stage, 4th Phase, 7th Block, Bangalore-560 085 on 3-6-2026 at 3-00pm with all relevant documents failing which the above dispute will be decided as per law, in their absence. Given Under my hand & seal on 13-05-2026.

S. Devaraj
Nominee of Deputy Registrar of Chits, III Zone, Bangalore.
ADVOCATE FOR DISPUTANT:
K. R. DINAKAR, ADVOCATE
66, 4th Cross, Ashok Nagar, Near N. R. Colony, BANGALORE-560 050. Mob: 94485 39699.

BRFORE THE NOMINEE OF DEPUTY REGISTRAR OF CHITS, III ZONE, MARGOSA ROAD, MALLESWARAM, AT BANGALORE.
Dispute No. DRB-III/ CHITS/136/2025-26.

BETWEEN: MARGADARSI CHITS (KARNATAKA) PVT. LTD., Registered Office at Plot No. 212, Opp. Gate No. 9 of Palace Ground, Bellary Main Road, Sadashiva Nagar, BANGALORE-560 080.
Branch: BANASHANKARI
Represented by its Foreman & Branch Manager, **Mr. K. BALACHANDRAN.** .... **DISPUTANT**

AND:
Mr. M. V. RAVIKUMAR & ORS.
3. **Mr. R. BALAKRISHNA,** S/o Mr. M. P. Ramaswamy, Major, Assistant Director, Land Records, Dpt. Of Survey, 2nd Floor, DC Office Complex, MANGALURU-575 004.
4. **Ms. G. R. PREETHI,** D/o Mr. Range Gowda, Major, Techer Trainer, Azim Premji Foundation, # 134, Doddakanneli, Next to WIPRO Office, Sarjapura Road, BENGALURU - 560 035.
5. **Mr. J. RANGEGOWDA,** S/o Mr. Jayaramanna, Major, First Division Asst., Survey Settlement And Land Records, K. R. Circle, BENGALURU - 560 001. ....**OPPONENTS.**

SUIT NOTICE BY PAPER PUBLICATION TO OPPONENT Nos. 3, 4 & 5.

WHEREAS, the Disputant has filed the above dispute U/s 64 (1) of The Chit Funds Act, 1982 before The Deputy Registrar of Chits, III Zone, Bangalore for recovery of a sum of **Rs.1,40,863/-** along with interest at 24% p.a. and the Court Costs from the Opponents and the above dispute has been referred to me for adjudication and disposal.

Notice sent to Opponent **Nos. 3, 4 & 5** by S.P.A.D. have been returned unserved. Therefore, the Opponent **Nos. 3, 4 & 5** named above are therefore hereby directed to appear before me at the Branch Office of the Disputant Company at Banashankari, at Site # 287, IInd Floor, Banashankari LayOut, 3rd Stage, 4th Phase, 7th Block, Bangalore-560 085 **on 03-06-2026 at 3-00PM** with all relevant documents failing which the above dispute will be decided as per law, in their absence.

Given Under my hand & seal on 13-05-2026.

S. Devaraj
Nominee of Deputy Registrar of Chits, III Zone, Bangalore.
ADVOCATE FOR DISPUTANT:
K. R. DINAKAR, ADVOCATE
66, 4th Cross, Ashok Nagar, Near N. R. Colony, BANGALORE-560 050.
Mob: 94485 39699.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ – 590018, ಕರ್ನಾಟಕ, ಭಾರತ

ಸಂ.: ವಿ.ತಾ.ವಿ./ಬೆ/ಸ್ಥಾ.ಅ./2026–27/ಐ.ಎಫ್.ಟಿ.ಸಂ.23/675 ದಿನಾಂಕ: 13–05–2026

ಅಲ್ಪಾವಧಿ ಟೆಂಡರ್ ಪ್ರಕಟಣೆ
ದ್ವಿ–ಲಕೋಟೆ ಪದ್ಧತಿ (ಕೆಪಿಪಿ ಪೋರ್ಟಲ್ ಮೂಲಕ)

ಕುಲಸಚಿವರು, ವಿತಾವಿ, ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಫರ್ಮ್ / ಏಜೆನ್ಸಿದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ಪ್ರಕಾರ ಕೆಪಿಪಿ ಪೋರ್ಟಲ್ ಮೂಲಕ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕಾಮಗಾರಿಗಳ ಹೆಸರು: 1) ವಿತಾವಿಯ ಯುಬಿಟಿಡಿ ಇಂಜಿನಿಯರಿಂಗ್ ಕಾಲೇಜ್ ದಾವಣಗೆರೆಯಲ್ಲಿ 75 ವರ್ಷದ ಪ್ಲಾಟಿನಂ ಜುಬಿಲಿ ಸಮಾರಂಭದ ಸಂದರ್ಭದಲ್ಲಿ ಗಣ್ಯರು, ಮುಖ್ಯ ಅತಿಥಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಉಪಹಾರ, ತಿಂಡಿ, ಮಧ್ಯಾಹ್ನ ಭೋಜನ ಒದಗಿಸುವ ಮೊತ್ತ ರೂ. 61,91,000/– (ತೆರಿಗೆ ರಹಿತ) ಮತ್ತು 2) ವಿತಾವಿಯ ಯುಬಿಟಿಡಿ ಇಂಜಿನಿಯರಿಂಗ್ ಕಾಲೇಜ್ ದಾವಣಗೆರೆಯಲ್ಲಿ ಪ್ಲಾಟಿನಂ ಜುಬಿಲಿ ಸಮಾರಂಭದ ಕಾರ್ಯಕ್ರಮಕ್ಕೆ ವೇದಿಕೆಯ ಸೆಟ್‌ಅಪ್ ಜರ್ಮನ್ ಟೆಂಟ್, ವೇದಿಕೆಯ ವಿನ್ಯಾಸ, ಆಸನ ವ್ಯವಸ್ಥೆ, ಗೋಡೆಗಳಿಗೆ ಎಲ್.ಇ.ಡಿ. ಬೆಳಕಿನ ವ್ಯವಸ್ಥೆ ಮತ್ತು ಸೌಂಡ್ ಸಿಸ್ಟಮ್ ವ್ಯವಸ್ಥೆಯನ್ನು ಒದಗಿಸುವ ಮೊತ್ತ ರೂ. 96,66,000/– (ತೆರಿಗೆ ರಹಿತ). ಇತರೆ ಮಾಹಿತಿಗಳನ್ನು **https://kppp.kanataka.gov.in** ವೆಬ್‌ಸೈಟ್ ಮೂಲಕ ದಿನಾಂಕ: **13–05–2026** ರಿಂದ ಪಡೆದುಕೊಳ್ಳಬಹುದು.

ಸಹಿ/– ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ
ವಾಸಾಸಂಇ/ಬೆಳಗಾವಿ/248/ಅಡ್ವರ್ಟೋರ್/2026–27

ಬೆಂಗಳೂರು ದಕ್ಷಿಣ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಬೊಮ್ಮನಹಳ್ಳಿ ವಲಯ–2, ಹೆಚ್‌ಎಸ್‌ಆರ್ ವಿಭಾಗ, ಹೆಚ್‌ಎಸ್‌ಆರ್ ಲೇಔಟ್, ಬಿಡಿಎ ಕಾಂಪ್ಲೆಕ್ಸ್, ಬೆಂಗಳೂರು–560102.

ಸಂಖ್ಯೆ:ಬೆಂದನಪಾ/ಕಾಅ/ಹೆಚ್‌ಎಸ್‌ಆರ್‌ಡಿ/ಟೆಂಡರ್–04/2026–27 (2ನೇ ಕರೆ) ದಿನಾಂಕ: 14–05–2026

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ದ್ವಿ–ಲಕೋಟೆ ಟೆಂಡರ್) (ಜೆಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ವಲಯ–2, ಹೆಚ್‌ಎಸ್‌ಆರ್ ವಿಭಾಗ, ಬೆಂದನಪಾ, ಬೆಂಗಳೂರು ಇವರು ಈ ಕೆಳಕಂಡ ಕೆಲಸಕ್ಕಾಗಿ ಬೆಂದನ ಪಾಲಿಕೆಯಲ್ಲಿ ನೋಂದಾಯಿತರಾದ ಅಥವಾ ಕೆಪಿಡಬ್ಲ್ಯೂಡಿ / ಸಿಪಿಡಬ್ಲ್ಯೂಡಿ / ಬಿಡಬ್ಲ್ಯೂಎಸ್‌ಎಸ್‌ಬಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ನೋಂದಣಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ಬೊಮ್ಮನಹಳ್ಳಿ ವಲಯ–2 ರಲ್ಲಿನ ವಿವಿಧ ಸ್ಥಳಗಳಲ್ಲಿ ಹೌಸ್ ಕೀಪಿಂಗ್ ಮತ್ತು ಭದ್ರತಾ ಸಿಬ್ಬಂದಿಯನ್ನು ನೇಮಕ ಮಾಡುವುದು. (2ನೇ ಕರೆ) – ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 295.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 2,95,000.00

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜೆಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **15–05–2026** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ: **20–05–2026** ರಂದು ಬೆಳಿಗ್ಗೆ **11.00** ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೆಚ್‌ಎಸ್‌ಆರ್ ವಿಭಾಗ, ಹೆಚ್‌ಎಸ್‌ಆರ್ ಲೇಔಟ್, ಬಿಡಿಎ ಕಾಂಪ್ಲೆಕ್ಸ್, ಬೆಂಗಳೂರು – **560102** ಇಲ್ಲಿ ನಡೆಯುವುದು. 3) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **23–05–2026** ರಂದು **16.00** ಗಂಟೆಗೆ ಅಥವಾ ಮುಂಚಿತವಾಗಿ. 4) ಟೆಂಡರ್‌ಗಳನ್ನು ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **25–05–2026** ರಂದು **16.30** ಗಂಟೆಯ ನಂತರ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೆಚ್‌ಎಸ್‌ಆರ್ ವಿಭಾಗ ಇಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಹೆಚ್‌ಎಸ್‌ಆರ್ ವಿಭಾಗ, ಬೆಂದನಪಾ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರ–571313.

ಅಲ್ಪಾವಧಿ ಇ–ಪ್ರಕ್ಯೂರ್‌ಮೆಂಟ್–ಟೆಂಡರ್
ಪ್ರಕಟಣೆ ಸಂಖ್ಯೆ–04/2026–27, ದಿನಾಂಕ :– 13–05–2026 (ದ್ವಿಲಕೋಟೆ ಪದ್ಧತಿ)
★★★★

ಈ ಕಛೇರಿಯಿಂದ ಉಲ್ಲೇಖ ರೀತ್ಯಾ ಅಧಿಸೂಚನೆಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆಯಲ್ಲಿ ಚಾಮರಾಜನಗರ ತಾಲ್ಲೂಕಿನ ಶಿಕ್ಷಣ ಇಲಾಖೆಯ ಅನುದಾನ ಯೋಜನೆಯ ಲೆಕ್ಕಶೀರ್ಷಿಕೆಯಡಿ ಅನುಮೋದನೆಯಾದ ಕಾಮಗಾರಿಗಳಿಗೆ KW-3 ರೀತ್ಯಾ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್ ಪ್ರಕಟಣೆಯಲ್ಲಿರುವ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್ ಲೈನ್‌ನಲ್ಲಿ ಸಲ್ಲಿಸಲು ದಿನಾಂಕ:– 14–05–2026 ರಿಂದ ದಿನಾಂಕ: 02–06–2026 ರವರೆಗೆ ಸಂಜೆ 16.00 ಘಂಟೆಯವರೆಗೆ ಹಾಗೂ ಟೆಂಡರ್ ಬಗ್ಗೆ ಸ್ಪಷ್ಟೀಕರಣ/ವಿಚಾರಿಸಿ ಮಾಹಿತಿ ಪಡೆಯಲು ಅಂತಿಮ ದಿನಾಂಕ: 25–05–2026 ರ ಸಂಜೆ 16.00 ಘಂಟೆಯಾಗಿದ್ದು, ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:–04–06–2026ರ ಸಂಜೆ 17.00 ಘಂಟೆಯ ನಂತರ ಹಾಗೂ ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ ಆರ್ಥಿಕ ಬಿಡ್ ತೆರೆಯಲಾಗುವುದು. ಟೆಂಡರ್ ಫಾರಂ ಬೆಲೆ ಇ–ಪ್ರಕ್ಯೂರ್‌ಮೆಂಟ್‌ನಂತೆ ಸಲ್ಲಿಸಬೇಕು. ಸದರಿ ಕಾಮಗಾರಿಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ಕಾಮಗಾರಿ ಹೆಸರು/ಪ್ಯಾಕೇಜ್ ಸಂಖ್ಯೆ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಟೆಂಡರ್‌ಗಿಟ್ಟ ಇ–ಪ್ರೊಕ್ಯೂರ್ ಮೆಂಟ್ ಮೊಬಲಗು (ರೂ.ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ)	ಗುತ್ತಿಗೆದಾರರ ಅರ್ಹತೆ
01.	ಕೊಳ್ಳೆಗಾಲ ಸರ್ಕಾರಿ ನ್ಯಾ.ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗ್ರಂಥಾಲಯ ಕೊಠಡಿ ನಿರ್ಮಾಣ ಮತ್ತು ಸುತ್ತಗೋಡೆ ನಿರ್ಮಾಣ ಕಾಮಗಾರಿ (02ನೇ ಕರೆ)	75.00	-	62297.00	3ನೇ ದರ್ಜೆ ಮತ್ತು ಮೇಲ್ಪಟ್ಟು

ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್‌ಸೈಟ್‌ನಲ್ಲಿ ಪಡೆಯಬಹುದು **https://kppp.karnataka.gov.in** ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರ (ಫೋನ್ ನಂ. 08226-223019) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.
ಮೊಬೈಲ್ ಸಂಖ್ಯೆ :– ಸ.ಇಂ. 8073339806

ಸಹಿ/– ಕಾರ್ಯಪಾಲಕ ಅಭಿಯಂತರರು
ಪಂ.ರಾ.ಇಂ. ವಿಭಾಗ, ಚಾಮರಾಜನಗರ

ಸಂ : ವಾಸಾಸಂಇ : ಚಾನಗರ : 108 : 2026–27

CHANGE OF NAME

I, **SHAKUNTHALA** B, W/o Ganesh Kamath, Residing at Pucchekere House, Manchi Village and Post, Bantwal Taluk, D.K. District, Karnataka hereby states that my name is wrongly entered as **SHAKUNTHALA B** W/o Radhakrishna in my Driving License Should be changed as **SHAKUNTHALA B** W/o Ganesh Kamath vide Affidavit dated 14/05/2026 sworn before Notary Smt. Keshavi Girish at Bantwal.

ಪುತ್ತೂರು ಮಾರುಕಟ್ಟೆ ಧಾರಣೆ
14-05-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	440 - 470
ಚೋಲ್ ಅಡಿಕೆ	525 - 550
ಡಬಲ್ ಚೋಲ್	525 - 550
ಹೊಸ ಪಟೋರ	355 - 405
ಹಳೆ ಪಟೋರ	375 - 405
ಹೊಸ ಉಳ್ಳಿ	140 - 300
ಹಳೆ ಉಳ್ಳಿ	130 - 300
ಹೊಸ ಕೋಕಾ	325 - 345
ಹಳೆ ಕೋಕಾ	325 - 345
ಹೊಸ ಕರಿಗೋಟು	265 - 295
ಹಳೆ ಕರಿಗೋಟು	265 - 295
ಹಸಿ ಕೊಕ್ಕೋ	70 - 105
ಒಣ ಕೊಕ್ಕೋ	270 - 320

ಕಾಳುಮೆಣಸು ಧಾರಣೆ

ಕಾಳುಮೆಣಸು	450 - 690

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	255.00
ಆರ್‌ಎಸ್‌ಎಸ್ 2	211.00
ಸ್ಕ್ರಾಪ್ 1	151.50
ಸ್ಕ್ರಾಪ್ 2	140.00

ಕರ್ನಾಟಕ ಸರ್ಕಾರ
ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್
ಉಪನಿರ್ದೇಶಕರು (ಆಡಳಿತ) ರವರ ಕಾರ್ಯಾಲಯ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,
ಕೊಡಿಯಾಲ್‌ಬೈಲ್, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ 575 003.
Phone: 0824 2492337 email: dknddahvs@gmail.com
ಸಂಖ್ಯೆ: ಉನಿಮಂ/ಪಪಾಇ/ಎ–2/ವಿವ–2/2026–27/156 ದಿನಾಂಕ: 14.05.2026

ಇ–ಟೆಂಡರ್ ಪ್ರಕಟಣೆ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಪಶುವೈದ್ಯಕೀಯ ಸಂಸ್ಥೆಗಳಿಗೆ ಅವಶ್ಯವಿರುವ Veterinary Haemotology Analyser ಪೂರೈಸುವ ಸಂಬಂಧ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ದಿನಾಂಕ: 30/05/2026 ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕವಾಗಿರುತ್ತದೆ. ಟೆಂಡರ್‌ನ ಹೆಚ್ಚಿನ ವಿವರಗಳನ್ನು ಹಾಗೂ ಟೆಂಡರ್ ದಸ್ತಾವೇಜುಗಳನ್ನು http://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.

ಸಹಿ/– ಉಪನಿರ್ದೇಶಕರು (ಆಡಳಿತ),
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,
ಮಂಗಳೂರು, ದಕ್ಷಿಣ ಕನ್ನಡ.
DIPR/DK/KSMCA/207/ 26-27 dt. 14.05.2026

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಕುಂದಾಪುರ ವಿಭಾಗ, ಕುಂದಾಪುರ
ದೂರವಾಣಿ: (ಕಛೇರಿ) 08254–230349 ಫ್ಯಾಕ್ಸ್: 232720
ಈ–ಮೇಲ್: kpurforest@yahoo.com, dcfknd@aranya.gov.in
ಸಂ.ಸ.ಅ.ಸಂ./ವಿವ–04/ಇ–ಟೆಂಡರು/2026–27 ದಿನಾಂಕ: 05–05–2026

ಸಂಕ್ಷಿಪ್ತ ಇ–ಟೆಂಡರ್ ಅಧಿಸೂಚನೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಕುಂದಾಪುರ ಉಪ ವಿಭಾಗದಲ್ಲಿ 2026–27ನೇ ಸಾಲಿನಲ್ಲಿ K-SHORE ಯೋಜನೆಯಡಿ ನದಿ ತೀರದ ನೆಡುತೋಪು ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದ ಪೂರಕ ಕೆಲಸಗಳನ್ನು ಕೈಗೊಳ್ಳಲು ನೋಂದಾಯಿತ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ಇ–ಟೆಂಡರನ್ನು ದಿನಾಂಕ: 18–05–2026 ರಂದು ಸಂಜೆ 4.00 ರವರೆಗೆ ಆಹ್ವಾನಿಸಲಾಗಿದೆ.

ಒಂದು ವೇಳೆ ಸದ್ರಿ ದಿನಾಂಕದಂದು ಯಾವುದೇ ಟೆಂಡರ್ ಬಾರದೇ ಇದ್ದಲ್ಲಿ, ಇದೇ ಕಾಮಗಾರಿಗಳಿಗೆ ಮತ್ತು ಈ ಟೆಂಡರ್ ಅಧಿಸೂಚನೆಯಲ್ಲಿ ಇರುವ ಎಲ್ಲಾ ಷರತ್ತುಗಳನ್ನು ಒಳಗೊಂಡಂತೆ ಮರು ಟೆಂಡರನ್ನು ದಿನಾಂಕ: 05–06–2026 ರಂದು ಸಂಜೆ 4.00 ವರೆಗೆ ನಡೆಸಲಾಗುವುದು.

ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ತಾಂತ್ರಿಕ ಸಹಾಯಕರು, ಕುಂದಾಪುರ ವಿಭಾಗ, ಕುಂದಾಪುರ. ದೂರವಾಣಿ ಸಂ: 08254: 230349 ಫ್ಯಾಕ್ಸ್: 232720

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ತಾಂತ್ರಿಕ ಸಹಾಯಕರು,
ಕುಂದಾಪುರ ವಿಭಾಗ, ಕುಂದಾಪುರ.
ವಾಸಾಇ/ಸನಿಉ/ಕೆಎಸ್‌ಎಂಸಿಎ/91/ 26-27 ದಿ: 14-05.2026

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಕಾರುಣ್ಯ ಪ್ಲಸ್ (ನಂ.KN-623) ಡ್ರಾ ಮೇ 14ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
PH 725834 (VAIKKOM)

Consolation Prize Rs.5,000/-
PA 725834 PB 725834 PC 725834 PD 725834
PE 725834 PF 725834 PG 725834 PJ 725834
PK 725834 PL 725834 PM 725834

2nd Prize Rs.30,00,000/- [30 Lakhs]
PJ 786477 (KATTAPPANA)

3rd Prize Rs.5,00,000/- [5 Lakhs]
PJ 465382 (CHITTUR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0510 1255 1652 2353 3573 4016 4240 5577 6022 7162 7190 7840 8675 9016 9023 9031 9079 9154 9678

5th Prize Rs.2,000/-
1157 2595 4741 4973 7537 7691

6th Prize Rs.1,000/-
0287 0517 0711 0800 1791 1877 3029 3041 3055 3643 3689 4171 4824 4859 5220 5585 5838 5877 6297 7971 8669 8709 9754 9768 9876

7th Prize Rs.500/-
0039 0065 0075 0200 0204 0705 1036 1339 1436 1465 1529 1585 1641 1814 2062 2077 2303 2476 2507 2530 2556 2578 2612 2664 2779 3304 3394 3419 3473 3504 3597 3683 3819 3850 4364 4433 4678 4878 4921 4927 4946 4972 4985 5059 5121 5353 5416 5593 5661 5804 5828 5879 6032 6281 6301 6326 6400 6644 6692 6698 6770 7132 7145 7760 8052 8290 8707 9243 9254 9308 9345 9351 9488 9655 9753 9980

8th Prize Rs.200/-
0087 0181 0383 0386 0439 0512 0610 0658 1077 1162 1238 1586 1602 1821 1856 2082 2090 2159 2255 2297 2347 2376 2497 2913 2971 3040 3064 3066 3093 3192 3371 3455 3661 4484 4614 4811 4877 4991 5000 5045 5135 5226 5320 5547 5579 5580 5821 6000 6040 6153 6382 6458 6519 6589 6595 6670 6919 6951 6997 7152 7191 7226 7250 7322 7587 7624 7918 7949 8024 8183 8192 8589 8656 8744 8757 8841 8919 9116 9251 9623 9712 9799 9865 9877

9th Prize Rs.100/-
0059 0104 0134 0218 0260 0266 0286 0378 0471 0569 0606 0643 0647 0651 0704 0738 0834 0837 0959 1186 1304 1328 1463 1532 1555 1603 1695 1700 1721 1735 1794 1804 1912 2097 2164 2231 2240 2272 2280 2339 2517 2655 2901 3043 3084 3147 3216 3305 3444 3495 3499 3622 3703 3712 3827 3843 3880 3947 3971 3982 4156 4233 4281 4403 4427 4457 4527 4535 4554 4671 4847 4912 4975 5011 5016 5052 5062 5083 5136 5277 5412 5422 5435 5471 5488 5507 5521 5556 5602 5762 5830 6038 6043 6077 6083 6089 6496 6656 6820 6823 6865 6971 7126 7267 7303 7325 7332 7407 7427 7452 7488 7504 7548 7565 7647 7764 7773 7872 7894 7921 8040 8043 8113 8145 8212 8214 8350 8399 8478 8602 8617 8619 8679 8692 8756 8800 8834 8899 8988 9098 9127 9140 9179 9277 9304 9305 9413 9440 9465 9507 9618 9624 9717 9803 9811 9971

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN : U31401KA2002SGC030437)
ಅಧೀಕ್ಷಕ ಅಭಿಯಂತರರು (ವಿ), ಟೆಂಡರಿಂಗ್ & ಪ್ರೊಕ್ಯೂರ್‌ಮೆಂಟ್, ಗೋಪನಕೊಪ್ಪ, ಹುಬ್ಬಳ್ಳಿ – 580 023, ದೂ. : 94482 77602.
ಮಿಂಚಂಚೆ : seetp.hescom@gmail.com, seetp@hescom.co.in

ಸಂಖ್ಯೆ : ಹು.ವಿ.ಸ.ಕಂ.ನಿ./ಅ.ಇಂ.(ಟಿ&ಪಿ)/ಇ–(7)/ಎ.ಇ.ಇ.–2/2026–27/ ಸಿ.ವೈ.ಎಸ್.–1460 ದಿನಾಂಕ : 13–05–2026

ಟೆಂಡರ್ ಆಹ್ವಾನಿಸುವ ಅಧಿಸೂಚನೆ

ಅಧೀಕ್ಷಕ ಅಭಿಯಂತರರು (ವಿ), (ಟೆಂಡರಿಂಗ್ & ಪ್ರೊಕ್ಯೂರಮೆಂಟ್), ಹು.ವಿ.ಸ.ಕಂ.ನಿ., ಹುಬ್ಬಳ್ಳಿ, ಇವರು ಈ ಕೆಳಕಂಡ ಸಾಮಗ್ರಿಗಳನ್ನು ತಯಾರಿಸಿ ಪೂರೈಸಲು ಇ.–ಪ್ರೊಕ್ಯೂರಮೆಂಟ್ ಕಟ್ಟೆಯಡಿ, ದ್ವಿ–ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ.

Particulars : 1) ಸಿ–ಟೈಪ್ ವೆಡ್ಜ್ ಕನೆಕ್ಟರ್ ಪೂರೈಕೆ ಮಾಡುವುದು. Enq.No. : HESCOM/2026-27/IND0174, 2) ಟ್ರಾನ್ಸ್ ಫಾರ್ಮರ್ ಪ್ರೊಟೆಕ್ಷನ್ ಬೂಟ್‌ಗಳನ್ನು ಪೂರೈಕೆ ಮಾಡುವುದು. Enq.No. : HESCOM/2026-27/IND0176, 3) ಪೊಟೆನ್ಷಿಯಲ್ ಡಿಟೆಕ್ಟರ್‌ಗಳನ್ನು ಪೂರೈಕೆ ಮಾಡುವುದು. Enq.No. : HESCOM/2026-27/IND0177.

ಹೆಚ್ಚಿನ ಮಾಹಿತಿಗಾಗಿ www.kppp.karnataka.gov.in ವೆಬ್‌ಸೈಟ್‌ನ್ನು ದಿನಾಂಕ : 14–05–2026 ಅಥವಾ ನಂತರದಲ್ಲಿ ಸಂಪರ್ಕಿಸಬಹುದು.

ಸಹಿ/– ಅಧೀಕ್ಷಕ ಅಭಿಯಂತರರು (ವಿ),
ಟೆಂಡರ್ & ಪ್ರೊಕ್ಯೂರಮೆಂಟ್,
ಹು.ವಿ.ಸ.ಕಂ.ನಿ., ನವನಗರ, ಹುಬ್ಬಳ್ಳಿ.
ಡಿಐಪಿಆರ್/ಧಾರವಾಡ/173/ಮಣಿಪಾಲ್/2026–27

ಪಟ್ಟಣ ಪಂಚಾಯತ್, ಕಡಬ
ನಂ: ಕ.ಪ.ಪಂ/ಜೆ.ಇ/ಪ.ಪಂ.ನಿ/ಟೆ.ಪ್ರ/02/2026–27 ದಿನಾಂಕ: 06–05–2026

ಟೆಂಡರು ಪ್ರಕಟಣೆ

ಕಡಬ ಪಟ್ಟಣ ಪಂಚಾಯತ್ ನ 2026–27ನೇ ಸಾಲಿನ ಪಟ್ಟಣ ಪಂಚಾಯತ್ ನಿಧಿಯಡಿ ಕಡಬ ಪಟ್ಟಣ ಪಂಚಾಯತ್ ವ್ಯಾಪ್ತಿಯ ರಸ್ತೆ ಬದಿ ಕಾಡು ಹಾಗೂ ಮಳೆನೀರು ಚರಂಡಿಯ ಹೂಳೆತ್ತಿ ರಸ್ತೆಗಳನ್ನು ದುರಸ್ಥಿಪಡಿಸುವ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆ ನೋಂದಾಯಿತ ಅರ್ಹ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ನಿರ್ಧಿಷ್ಟ ಟೆಂಡರ್ ದಸ್ತಾವೇಜಿನಲ್ಲಿ (Standard tender document KW1) ಮುಖಾಂತರ ಟೆಂಡರ್ ನ್ನು ಆಹ್ವಾನಿಸಲಾಗಿದೆ.

(1) ಟೆಂಡರಿನ ದಾಸ್ತಾವೇಜುಗಳನ್ನು ಮುಖ್ಯಾಧಿಕಾರಿ ಪಟ್ಟಣ ಪಂಚಾಯತ್, ಕಡಬ ಇವರ ಕಛೇರಿಯಿಂದ ದಿನಾಂಕ: 21/05/2026 ರ ಒಳಗೆ ಕೆಳಗೆ ಕಾಣಿಸಿದ ಪ್ರಕಾರ ಮರುಪಾವತಿ ಮಾಡಲಾಗದ ಶುಲ್ಕವನ್ನು ಕಛೇರಿಯಲ್ಲಿ ಪಾವತಿ ಮಾಡಿ ಪಡೆಯತಕ್ಕದ್ದು. (2) ಇ.ಎಂ.ಡಿ ಮೊಬಗಲನ್ನು ಕಡ್ಡಾಯವಾಗಿ ಟೆಂಡರು ಫಾರಂ ಅರ್ಜಿಯೊಂದಿಗೆ ಡಿ.ಡಿ / ನಗದಾಗಿ ಮಾತ್ರ ಪಾವತಿಸುವುದು (3) ಟೆಂಡರುಗಳು ಮುಖ್ಯಾಧಿಕಾರಿ ಪಟ್ಟಣ ಪಂಚಾಯತ್, ಕಡಬ ಇವರಿಗೆ ದಿನಾಂಕ: 22/05/2026 ರ ಸಂಜೆ 4:00 ಗಂಟೆಯೊಳಗೆ ಸೇರುವಂತೆ ಸಲ್ಲಿಸತಕ್ಕದ್ದು. ಅದೇ ದಿನ ಸಂಜೆ 5:00 ಗಂಟೆಗೆ ಹಾಜರಿರುವ ಎಲ್ಲ ಗುತ್ತಿಗೆದಾರರ ಸಮಕ್ಷಮದಲ್ಲಿ ತೆರೆಯಾಲಾಗುವುದು. ಒಂದು ವೇಳೆ ನಿಗದಿಪಡಿಸಲಾದ ದಿನದಂದು ರಜೆಯಿದ್ದಲ್ಲಿ, ಟೆಂಡರ್ ರನ್ನು ಮಾರನೇಯ ಕಛೇರಿ ದಿನದಂದು ಅದೇ ಸಮಯ ತೆರೆಯಲಾಗುವುದು. (4) ಹೆಚ್ಚಿನ ವಿವರಗಳು ಹಾಗೂ ಶರ್ತಗಳನ್ನು ಟೆಂಡರ್ ದಾಸ್ತಾವೇಜ್‌ನಲ್ಲಿ ನೀಡಲಾಗಿದೆ. (5) ಟೆಂಡರ್ ಫಾರಂ ದರ ರೂ. 500.00 + GST (6) ಜಿ.ಎಸ್.ಟಿ ತೆರಿಗೆ (18%) ಪ್ರತ್ಯೇಕ ಪಾವತಿಸಲಾಗುವುದು. ಗುತ್ತಿಗೆದಾರರು ಟೆಂಡರ್ ಶೆಡ್ಯೂಲ್ ನಲ್ಲಿ GST ಯನ್ನು ಹೊರತುಪಡಿಸಿದ ದರವನ್ನು ನಮೊದಿಸುವುದು.

ಹೆಚ್ಚಿನ ವಿವರಗಳನ್ನು ಕಛೇರಿ ಕೆಲಸದ ಸಮಯದಲ್ಲಿ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು. ಅಥವಾ ನಗರ ಪಂಚಾಯತನ ಅಧಿಕೃತ ವೆಬ್‌ಸೈಟ್ www.kadabatown.mrc.gov.in ನಲ್ಲಿ ಪಡೆಯಬಹುದು.

ಸಹಿ/– ಶ್ರೀಮತಿ ತಮನ್ನಾ ಜಬೀನ್, ಅಧ್ಯಕ್ಷರು, ಪಟ್ಟಣ ಪಂಚಾಯತ್, ಕಡಬ
ಸಹಿ/– ಶ್ರೀಮತಿ ಲೀಲಾವತಿ ಇ, ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ್, ಕಡಬ
DIPR/DK/KSMCA/205/26-27 dt.14.05.26

ಲೋಕೋಪಯೋಗಿ ಇಲಾಖೆ, ತುಮಕೂರು.
ಕ್ರ.ಸಂ:ಕಾಇಂ:ಲೋಇವಿ:ತುಮ:ಕಿಇಂ–3: ಟೆಂಡರ್ 12:2026–27. ದಿನಾಂಕ:12–05–2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ. 12/2026–27 ದಿನಾಂಕ 12–05–2026

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: **12/2026–27** ದಿನಾಂಕ **12–05–2026** ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ **5054–80–190–0–01–132** ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ–ಬಂಡವಾಳ ವೆಚ್ಚ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 01 ಕಾಮಗಾರಿಗೆ KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಮೊತ್ತ **ರೂ. 117.34 ಲಕ್ಷಗಳು** ಇ.ಎಂ.ಡಿ ಮೊತ್ತ **ರೂ. 2,00,000/–** ಅರ್ಹ ಗುತ್ತಿಗೆದಾರರು 3ನೇ ದರ್ಜೆ ಮೇಲ್ಪಟ್ಟು, **ಕಾಲಾವಧಿ: 09 ತಿಂಗಳು,** ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟಿಕರಣಗಳಿಗೆ ಕೊನೆ **ದಿನಾಂಕ ಮತ್ತು ವೇಳೆ: 18–05–2026 ರ 17–00 ಗಂಟೆಗೆ,** KPPP-Portal ಮೂಲಕ ಟೆಂಡರ್ ಅನ್ನು **ದಿನಾಂಕ 12–05–2026** ರಿಂದ **19–05–2026** ರ **16–00 ಗಂಟೆವರೆಗೆ** ಪಡೆಯಬಹುದಾಗಿದೆ. ಟೆಂಡರ್ ಅನ್ನು ಸ್ವೀಕರಿಸಲು ಕೊನೆಯ **ದಿನಾಂಕ ಮತ್ತು ವೇಳೆ: 19–05–2026 ರ 16–00 ಗಂಟೆವರೆಗೆ,** ತಾಂತ್ರಿಕ ಬಿಡ್‌ಅನ್ನು ತೆರೆಯುವ **ದಿನಾಂಕ ಮತ್ತು ವೇಳೆ: 20–05–2026ರ 16–30 ಗಂಟೆಗೆ,** ಆರ್ಥಿಕ ಬಿಡ್ ಅನ್ನು ತೆರೆಯುವ **ದಿನಾಂಕ ಮತ್ತು ವೇಳೆ: 21–05–2026ರ 17–00 ಗಂಟೆಗೆ,** ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:**https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ. ಸದರಿ ಟೆಂಡರ್ ಪ್ರಕಟಣೆಯಲ್ಲಿ ಆಗುವಂತಹ ಮುಂದಿನ ಬದಲಾವಣೆಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು

ಸಹಿ/– ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ ವಿಭಾಗ
ತುಮಕೂರು.
DIPR/TUM/RO-31/26-27/Oysters

ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ
ಕೋಲಾರ – 563101
e-mail: eepwdkolar07@gmail.com website: www.kpwd.gov.in e-portal: http://kppp.karnataka.gov.in
ದೂರವಾಣಿ ಸಂಖ್ಯೆ: 08152–222022

ಇ–ಟೆಂಡರ್ ಪ್ರಕಟಣೆ– ಕೆಡಬ್ಲ್ಯು –2,3&4 ಈ ಕಛೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ–04/2026–27 ದಿನಾಂಕ: 13.05.2026

ಕೋಲಾರ ಜಿಲ್ಲೆ ಲೋಕೋಪಯೋಗಿ ಇಲಾಖೆ ಮಾಲೂರು ಹಾಗೂ ಶ್ರೀನಿವಾಸಪುರ ತಾಲ್ಲೂಕು ವ್ಯಾಪ್ತಿಯಲ್ಲಿ **ಲೆಕ್ಕಶೀರ್ಷಿಕೆ: 8443–ಠೇವಣಿ ವಂತಿಗೆ ಮತ್ತು 5054–ಜಿಲ್ಲಾ ಮತ್ತು ಇತರೆ ರಸ್ತೆಗಳ ಸುಧಾರಣೆ** ಅಡಿಯಲ್ಲಿ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಅಂದಾಜು ಮೊತ್ತ: ಕನಿಷ್ಟ– ರೂ.50.00 ಲಕ್ಷಗಳು ಹಾಗೂ ಗರಿಷ್ಟ– ರೂ.150.00 ಲಕ್ಷಗಳು ಇ.ಎಂ.ಡಿ **ಮೊತ್ತವನ್ನು ಕೆ.ಪಿ.ಪಿ ಪೋರ್ಟಲ್ ನಲ್ಲಿ ನಮೂದಿಸಿರುತ್ತಾರೆ,** ಕಾಲಾವಧಿ : 06 ತಿಂಗಳು ನಿರ್ವಹಿಸಲು **ಕೆಡಬ್ಲ್ಯು–2,3&4 ರ ಕಾಮಗಾರಿಗೆ ಅರ್ಹ ನೊಂದಾಯಿತ ಸಿವಿಲ್ ಗುತ್ತಿಗೆದಾರರಿಂದ** ಕೆಪಿಪಿಪಿ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು **ಕೆಡಬ್ಲ್ಯು–2,3&4** ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಕೆಪಿಪಿ ಪೋರ್ಟಲ್ **(Viz., http://kppp.karnataka.gov.in)** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಕೆಪಿಪಿಪಿ ಪೋರ್ಟಲ್‌ನಲ್ಲಿ **ದಿನಾಂಕ: 27.05.2026 ರಂದು ಸಂಜೆ 16.00 ಗಂಟೆ ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ.** ಸ್ವೀಕೃತವಾದ ಟೆಂಡರ್‌ಗಳನ್ನು **ದಿನಾಂಕ: 29.05.2026 ರಂದು ಬೆಳಿಗ್ಗೆ 11.30 ಗಂಟೆಯ ನಂತರ ಕೆಪಿಪಿಪಿ ಪೋರ್ಟಲ್‌ನಲ್ಲಿ ತೆರೆಯಲಾಗುವುದು.** ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಕೆಪಿಪಿಪಿ ಪೋರ್ಟಲ್‌ನಲ್ಲಿ **(Viz., http://kppp.karnataka.gov.in)** ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ. **ವಿಶೇಷ ಸೂಚನೆ:** ಸದರಿ ನೋಟಿಫಿಕೇಶನ್‌ಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಲೋ.ಇ. ಕೋಲಾರ ವಿಭಾಗ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:70/ಕೆಎಸ್‌ಎಂಸಿಎ/2026–27

ಕಿರುಸುದ್ದಿ

ಮೇ 19ರಂದು ಅತಿಥಿ ಬೋಧಕರ ನೇಮಕಾತಿ

ಕಾಸರಗೋಡು: ಭೀಮನಡಿಯುಲ್ಲಿರುವ ವೆಸ್ಟ್ ಎಳೇರಿ ಸರ್ಕಾರಿ (ಮಹಿಳಾ) ಐಟಿಐನಲ್ಲಿ ಡ್ರಾಫ್ಟ್ಸ್‌ಮೆನ್ ಸಿವಿಲ್ ಟ್ರೇಡ್‌ನಲ್ಲಿ ಖಾಲಿಯಿರುವ ಎರಡು ಹುದ್ದೆಗಳಿಗೆ ಅತಿಥಿ ಬೋಧಕರ ನೇಮಕಾತಿಯು ಮೇ 19ರಂದು ಬೆಳಗ್ಗೆ 10.30ಕ್ಕೆ ನಡೆಯಲಿದೆ. ಎಸ್‌ಸಿ ಮತ್ತು ಎಸ್‌ಟಿ ವರ್ಗಕ್ಕೆ ಒಂದು ಮತ್ತು ಸಾಮಾನ್ಯ ವರ್ಗಕ್ಕೆ ಒಂದು ಹುದ್ದೆ ಖಾಲಿಯಿದೆ. ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಪದವಿ ಅರ್ಹತೆ ಇರುವ ಮತ್ತು ಒಂದು ವರ್ಷದ ಕೆಲಸದ ಅನುಭವ ಅಥವಾ ಡಿಪ್ಲೊಮಾ ಮತ್ತು ಡ್ರಾಫ್ಟ್ಸ್‌ಮೆನ್ ಸಿವಿಲ್ ಟ್ರೇಡ್‌ನಲ್ಲಿ ಎರಡು ವರ್ಷಗಳ ಕೆಲಸದ ಅನುಭವ ಅಥವಾ ಎನ್‌ಟಿಸಿ, ಎನ್‌ಎಸಿ ಜೊತೆಗೆ ಮೂರು ವರ್ಷಗಳ ಅನುಭವ ಇರಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 0467 2341666 ಕರೆ ಮಾಡಬಹುದು.

ಮೇ 17-ಜೂ.15: ಸಾಮೂಹಿಕ ಶ್ರೀಮದ್ ಭಗವದ್ಗೀತಾ ಪಠಣ

ಮಂಗಳೂರು:ಏ ನಗರದ ಪಿ. ಟಿ. ರಸ್ತೆಯಲ್ಲಿರುವ ಶ್ರೀಕೃಷ್ಣ ಮಂದಿರದಲ್ಲಿ ಅಧಿಕಮಾಸದ ಪ್ರಯುಕ್ತ ಮೇ 17 ರಿಂದ ಜೂನ್ 15 ರ ತನಕ ಪ್ರತಿದಿನ ಸಾಯಂಕಾಲ 5.15ಕ್ಕೆ ಸಾರ್ವಜನಿಕರಿಂದ ಸಾಮೂಹಿಕವಾಗಿ ಸಂಪೂರ್ಣ ಶ್ರೀಮದ್ ಭಗವದ್ಗೀತೆಯ 18 ಅಧ್ಯಾಯದ ಪಠಣ ಹಾಗೂ ನಿರಂತರ ಅಖಂಡ ತುಪ್ಪದ ನಂದಾ ದೀಪ ಮತ್ತು ಶ್ರೀ ದೇವರಿಗೆ ತುಳಸಿ ದಳದಿಂದ ಸಹಸ್ರನಾಮಾರ್ಚನೆ ನೆರವೇರಿಸಲಾಗುವುದು. ಈ ಮಹತ್ಕಾರ್ಯದಲ್ಲಿ ಸಾರ್ವಜನಿಕರು ಅತ್ಯಧಿಕ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಶ್ರೀಕೃಷ್ಣ ಮಂದಿರದ ಆಡಳಿತ ಮಂಡಳಿ ಪತ್ರಿಕಾ ಪ್ರಕಟಣೆಯ ಮೂಲಕ ವಿನಂತಿಸಲಾಗಿದೆ.

ಸ್ವಯಂ ಪ್ರೇರಿತ ರಕ್ತದಾನ ಶಿಬಿರ

ಕುಂದಾಪುರ: ಸ್ಪಂದನ ಯುವಕ ಸಂಘ ಮಂಕಿ ಗುಜ್ಜಾಡಿ ಇವರ ಆಶ್ರಯದಲ್ಲಿ ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ ಕುಂದಾಪುರ ಘಟಕ ಇವರ ಸಹಯೋಗದೊಂದಿಗೆ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಗುಜ್ಜಾಡಿ ಮಂಕಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಭಾನುವಾರ ಜರಗಿತು. ಡಾ. ಮಧುಕರ್ ದೇವಾಡಿಗ ಶಿಬಿರವನ್ನು ಉದ್ಘಾಟಿಸಿ ಶುಭ ಹಾರೈಸಿದರು. ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಸದಸ್ಯ ರಾಜೇಶ ಕಾರಂತ್, ಗುಜ್ಜಾಡಿ ಗ್ರಾಪಂ ಮಾಜಿ ಅಧ್ಯಕ್ಷ ತಮ್ಮಯ್ಯ ದೇವಾಡಿಗ, ಸಂಘದ ಅಧ್ಯಕ್ಷರು, ಸದಸ್ಯರು, ರೆಡ್‌ಕ್ರಾಸ್ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು. ಅಕ್ಷಯ್ ಮಂಕಿ ಸ್ವಾಗತಿಸಿದರು. ಕಿಶೋರ್ ದೇವಾಡಿಗ ವಂದಿಸಿದರು.

ಮೇ 29: ಶಿಕ್ಷಕ ಹುದ್ದೆಗೆ ಸಂದರ್ಶನ

ಕಾಸರಗೋಡು: ಬೇತೂರುಪ್ಪಾರ ಸರ್ಕಾರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಎಚ್‌ಎಸ್‌ಎಸ್‌ಟಿ ಇಂಗ್ಲಿಷ್, ಮಲೆಯಾಳಂ, ಎಚ್‌ಎಸ್‌ಎಸ್‌ಟಿ ಜೂನಿಯರ್ ಹಿಂದಿ ಮತ್ತು ಇತಿಹಾಸ ಹುದ್ದೆಗಳಿಗೆ ಶಿಕ್ಷಕರ ನೇಮಕಾತಿಗಾಗಿ ಸಂದರ್ಶನವು ಮೇ 29ರಂದು ಬೆಳಗ್ಗೆ 10 ಗಂಟೆಗೆ ಶಾಲಾ ಕಚೇರಿಯಲ್ಲಿ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 9446588226 ಕರೆ ಮಾಡಬಹುದು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಕಟೀಲು ದಿ| ಸದಾನಂದ ಆಸ್ರಣ್ಣ ಸ್ಮರಣಾರ್ಥ ಪತ್ನಿ ಮತ್ತು ಮಕ್ಕಳು – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
2. ಮಂಜುನಾಥ್, 'ಆದಿಶಕ್ತಿ ನಿಲಯ', ನಿರಾಳ, ವಾಮಂಜೂರು.
3. ಸತೀಶ್ ಎಂ. ಶೆಟ್ಟಿ, 'ದೇವಿಕೃಪಾ', ಪೆರ್ನಾಲ್, ಮಂಚಕಲ್ – ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.
4. ಅಶೋಕ್ ಕೆ. ಶೆಟ್ಟಿ, ಬೆಲೊಟ್ಟುಗುತ್ತು, ಕುಕ್ಕುಂದೂರು, ಕಾರ್ಕಳ (ತಾ).
5. ನಾರಾಯಣ ಶೆಟ್ಟಿಗಾರ್, 'ಸಂಗೀತ ನಿವಾಸ', ಅಶ್ವತ್ಥಪುರ, ತೆಂಕಮಿಜಾರು.
6. ವಾಸು ಆಚಾರ್ಯ, ನಿಡೂರುಬೈಲು, ಪೇತ್ರಿ ವಯಾ ಬ್ರಹ್ಮಾವರ.
7. ಗಂಗಾಧರ ಶೆಟ್ಟಿ, ಪತ್ನಿ, ಮಕ್ಕಳು, ಅವರಾಲು ಕಂಕಣಗುತ್ತು ವಯಾ ಪಡುಬಿದ್ರಿ.

ಶ್ರೀ ಧರ್ಮಸ್ಥಳ ಮೇಳ
ಸೌಡದಲ್ಲಿ
ಶ್ರೀ ಮಲ್ಲಿಕಾ ಜಯಶೀಲ ಕುಲಾಲ್, ಮಾಲಾಡಿ ಕೆರಣ್ಣನ ಮನೆ

ಶ್ರೀ ಸಾಲಿಗ್ರಾಮ ಮೇಳ
ಹೊಸಕೊಪ್ಪ, ಸೌಳ್ಳಾಡು ಶ್ರೀ ಕೋಟೇಶ್ವರ ಸ್ವಾಮಿಯ ಪುನರ್ ಪ್ರತಿಷ್ಠಾ ಮಹೋತ್ಸವ ಪ್ರಯುಕ್ತ ಬಯಲಾಟ
ವೀರ ಬರ್ಬರೀಕ- ತರಣೀಸೇನ

ಶ್ರೀ ಪೆರ್ಡೂರು ಮೇಳ
ಮೇ 16:ಕುಂದಾಪುರದಲ್ಲಿ ಜೋಡಾಟ

ಶ್ರೀ ಹನುಮಗಿರಿ ಮೇಳ
ಅಜೆಕಾರಿನಲ್ಲಿ

ಶ್ರೀ ಪಾವಂಜೆ ಮೇಳ
ಸಂತೆಗುಡ್ಡೆ ಬಾರ್ಕೂರು ಕುಚ್ಚೂರಿನಲ್ಲಿ
ಪಾಪಣ್ಣ ವಿಜಯ, ಗುಣಸುಂದರಿ



ಕರಿಯಂಗಳ ಗ್ರಾಮದ ಪಲ್ಲಿಪಾಡಿ ಶ್ರೀ ಕೊಡಮಣಿತ್ತಾಯ, ಅಣ್ಣಪ್ಪ ಪಂಜುರ್ಲಿ ಹಾಗೂ ಕಲ್ಲುರ್ಟಿ ದೈವಗಳ ಚರಿತ್ರೆ, ಆಚರಣೆ ಮತ್ತು ಕ್ಷೇತ್ರ ಮಹಿಮೆಯನ್ನೊಳಗೊಂಡ ಪುಸ್ತಕವನ್ನು ಗುತ್ತಿನವರಾದ ನರೇಶ್ ಪೂಂಜ ಬಿಡುಗಡೆಗೊಳಿಸಿದರು. ಪ್ರಧಾನ ಅರ್ಚಕ ವೆಂಕಟೇಶ್ ತುಂಗ, ಚಂದ್ರಹಾಸ ಪಲ್ಲಿಪಾಡಿ, ಪುಸ್ತಕದ ಸಂಪಾದಕ ರಾಜಮಣಿ ರಾಮಕುಂಜ, ಸ್ಥಳೀಯ ಹಿರಿಯರಾದ ಶ್ರೀಧರ ಮೂಲ್ಯ, ಸುಂದರ ಮೂಲ್ಯ, ಶೇಖರ ಟಿ. ಅಂಚನ್, ಶ್ರೀಧರ ಆಚಾರ್ಯ, ಕಿಶೋರ್ ಪಲ್ಲಿಪಾಡಿ, ರಾಜ್ ಕೋಟ್ಯಾನ್ ಉಪಸ್ಥಿತರಿದ್ದರು.

ಮೇ 17: ಬನ್ನಂಜೆ ಬಾಬು ಅಮೀನ್ ಜಾನಪದ ಪ್ರಶಸ್ತಿ ಪ್ರದಾನ ಸಮಾರಂಭ

ಉಡುಪಿ: ಯುವವಾಹಿನಿ ಉಡುಪಿ ಘಟಕದ ಆಶ್ರಯದಲ್ಲಿ ಮೇ 17 ರಂದು ಬನ್ನಂಜೆ ಬಾಬು ಅಮೀನ್ ಜಾನಪದ ಪ್ರಶಸ್ತಿ ಪ್ರದಾನ ಸಮಾರಂಭವು ಉಡುಪಿ ಚಿಟ್ಪಾಡಿಯ ಲಕ್ಷ್ಮೀ ಟ್ರೇಡ್ ಸೆಂಟರ್‌ನ ಲಕ್ಷ್ಮೀ ಸಭಾಭವನದಲ್ಲಿ ಜರಗಲಿದೆ ಎಂದು ಯುವವಾಹಿನಿ ಉಡುಪಿ ಘಟಕದ ಅಧ್ಯಕ್ಷ ವಿನೋದ್ ಮಂಚಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾನಪದ ವಿದ್ವಾಂಸ ಪ್ರಶಸ್ತಿಯನ್ನು ಡಾ.ಅಭಯ ಕುಮಾರ್ ಅವರಿಗೆ ನೀಡಲಾಗುವುದು. ಜಾನಪದ ಕಲಾವಿದ ಪ್ರಶಸ್ತಿಯನ್ನು ಚಿತ್ರಕಲಾ ಶಿಕ್ಷಕ ಶೇಖರ ಪೂಜಾರಿಯವರಿಗೆ ನೀಡಲಾಗುವುದು. ಡಾ.ಅಭಯ ಕುಮಾರ್ ಅವರು, ಕನ್ನಡ ಪ್ರಾಧ್ಯಾಪಕರಾಗಿ, ಸಂಶೋಧಕರಾಗಿ, ಜಾನಪದ ವಿದ್ವಾಂಸರಾಗಿ ಗುರುತರ ಸಾಧನೆ ಮಾಡಿದ್ದಾರೆ ಎಂದರು.

ಉಡುಪಿ ಯುವವಾಹಿನಿಯು ಸಾಹಿತಿ ಮುದ್ದು ಮೂಡುಬೆಳ್ಳೆ ಅವರ ಅಧ್ಯಕ್ಷತೆಯ ಆಯ್ಕೆ ಸಮಿತಿಯಿಂದ ವಿವಿಧ ವಿಭಾಗಗಳಲ್ಲಿ ಸೇವೆ ಸಲ್ಲಿಸುತ್ತಿರುವ ಗಣ್ಯರ ವಿವರಗಳನ್ನು ಕಲೆ ಹಾಕಿ ಆಯ್ಕೆ ಪ್ರಕ್ರಿಯೆಯನ್ನು ನಡೆಸಿದೆ. ಪ್ರಶಸ್ತಿಯು ತಲಾ 12000 ನಗದಿನೊಂದಿಗೆ ಪ್ರಶಸ್ತಿ ಫಲಕ ಹಾಗೂ ಸ್ಮರಣಿಕೆಯನ್ನು ಹೊಂದಿದೆ. ಪ್ರಶಸ್ತಿ ಪ್ರದಾನವನ್ನು ಹಿರಿಯ ಸಾಹಿತಿಗಳಾದ ಅಂಶುಮಾಲಿ ಮಣಿಪಾಲ ನೆರವೇರಿಸಲಿದ್ದಾರೆ. ಅಭಿನಂದನಾ ಭಾಷಣವನ್ನು ಪ್ರಾಧ್ಯಾಪಕ ಡಾ. ದುಗ್ಗಪ ಕಜೆಕಾರ್ ಮಾಡಲಿದ್ದು, ಯುವವಾಹಿನಿ ಕೇಂದ್ರ ಸಮಿತಿಯ ಅಧ್ಯಕ್ಷ ಅಶೋಕ್ ಕುಮಾರ್ ಪಡ್ಡು ಮೊದಲಾದವರು ಭಾಗವಹಿಸಲಿದ್ದಾರೆ. ಹಾಗೂ 2021ನೇ ಸಾಲಿನಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃ ತ ಜಾನಪದ ವಿದ್ವಾಂಸರಾದ ಬನ್ನಂಜೆ ಬಾಬು ಅಮೀನ್ ಕಾರ್ಯಕ್ರಮದಲ್ಲಿ ಗೌರವ ಉಪಸ್ಥಿತರಿರುತ್ತಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಯುವವಾಹಿನಿ ಘಟಕದ ಮಾಜಿ ಅಧ್ಯಕ್ಷ, ಪ್ರಶಸ್ತಿ ಪ್ರದಾನ ಕಾರ್ಯಕ್ರಮದ ಸಂಚಾಲಕ ಭಾಸ್ಕರ ಸುವರ್ಣ, ರಘುನಾಥ ಮಾಬೆನ್, ಸಂತೋಷ್ ಕುಮಾರ್ ಹಾಗೂ ಕಾರ್ಯದರ್ಶಿ ವೀಕ್ಷಿತ್ ಉಪಸ್ಥಿತರಿದ್ದರು.

ಮಡಿಕೇರಿಯಲ್ಲಿ ಹೋಂಸ್ಟೇ ಕುರಿತು ಮಹತ್ವದ ಸಭೆ | ಉಪವಿಭಾಗಾಧಿಕಾರಿ ನಿತಿನ್ ಚಕ್ಕಿ ಸೂಚನೆ

ಎನ್‌ಒಸಿ ಪಡೆದು ಕಡ್ಡಾಯ ನೋಂದಣಿ

ಮಡಿಕೇರಿ: ಜಿಲ್ಲೆಯಲ್ಲಿ ಅಕ್ರಮ ಮತ್ತು ಅನಧಿಕೃತ ಹೋಂಸ್ಟೇಗಳ ಪತ್ತೆ ಹಾಗೂ ಪ್ರವಾಸಿಗರ ಸುರಕ್ಷತೆಗಾಗಿ ಪ್ರವಾಸೋದ್ಯಮ, ಪೊಲೀಸ್ ಮತ್ತು ಕಂದಾಯ ಇಲಾಖೆಯ ಜಂಟಿ ಆಶ್ರಯದಲ್ಲಿ ಸರ್ವೆ ಕಾರ್ಯ ಆರಂಭಗೊಂಡಿದ್ದು, ನೋಂದಣಿ ಆಗದೆ ಇರುವ ಹೋಂಸ್ಟೇ ಮಾಲಕರು ಕಾಲಮಿತಿಯಲ್ಲಿ ಸ್ಥಳೀಯ ಪೊಲೀಸ್ ಠಾಣೆ, ನಗರಸಭೆ, ಪುರಸಭೆ ಅಥವಾ ಗ್ರಾಮ ಪಂಚಾಯತ್‌ನಿಂದ ನಿರಾಕ್ಷೇಪಣಾ ಪ್ರಮಾಣ ಪತ್ರ (ಎನ್‌ಒಸಿ) ಪಡೆದು ಪ್ರವಾಸೋದ್ಯಮ ಇಲಾಖೆಯಲ್ಲಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳಬೇಕು, ತಪ್ಪಿದಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಉಪ ವಿಭಾಗಾಧಿಕಾರಿ ಹಾಗೂ ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕ ನಿತಿನ್ ಚಕ್ಕಿ ಅವರು ಎಚ್ಚರಿಸಿದ್ದಾರೆ.

ನಗರದ ಉಪ ವಿಭಾಗಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಹೋಂಸ್ಟೇ/ ಬೆಡ್ ಮತ್ತು ಬ್ರೇಕ್ ಫಾಸ್ಟ್/ ಹೋಟೆಲ್‌ಗಳ ಸುರಕ್ಷತೆ ಕುರಿತು ಭಿತ್ತಿಪತ್ರ ಬಿಡುಗಡೆ ಮಾಡಿ ಹೋಂಸ್ಟೇಗಳ ಮಾಲಕರು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು.

ಅಧಿಕಾರಿಗಳುಹೋಂ–ಸ್ಟೇಗಳಸರ್ವೇನಡೆಸುವ ಸಂದರ್ಭದಲ್ಲಿ ಮಾಲಕರು ಸರಿಯಾದ ಮಾಹಿತಿ ನೀಡಬೇಕು. ಈ ಹಿಂದೆ ಹೋಂ–ಸ್ಟೇ ನಡೆಸುತ್ತಿದ್ದು, ಪ್ರಸ್ತುತ ಸ್ಥಗಿತಗೊಳಿಸಿರುವ ಹೋಂ–ಸ್ಟೇಗಳ ಮಾಹಿತಿಯನ್ನು ಮಾಲಕರು ಕಡ್ಡಾಯವಾಗಿ ನೀಡಬೇಕು. ಜಿಲ್ಲೆಯಲ್ಲಿ ಯಾವುದೇ ವಾಣಿಜ್ಯ ಅಥವಾ ಅನಧಿಕೃತ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಮತ್ತು ಪ್ರವಾಸಿಗರ ಸುರಕ್ಷತೆಗಾಗಿ ಸರ್ಕಾರ ಹಲವು ಕ್ರಮ ಕೈಗೊಳ್ಳಲಾಗಿದ್ದು, ಹೋಂಸ್ಟೇಗಳ ಮಾಲಕರು ಕಡ್ಡಾಯವಾಗಿ ಕರ್ನಾಟಕ ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಣಿ ಮಾಡಿಸಿಕೊಳ್ಳಬೇಕು, ಸಾಧ್ಯವಾದಷ್ಟು ಸ್ಥಳೀಯ ಜನರನ್ನು ಉದ್ಯೋಗಕ್ಕೆ ತೆಗೆದುಕೊಳ್ಳಬೇಕು ಮತ್ತು ಸ್ಥಳೀಯ ವ್ಯಾಪಾರಿಗಳಿಂದ ಖರೀದಿ ಮಾಡಬೇಕು, ನೋಂದಣಿ ಪ್ರಮಾಣಪತ್ರ ಮತ್ತು ಪರವಾನಗಿಗಳನ್ನು ಮುಖ್ಯ ಪ್ರವೇಶದ್ವಾರದಲ್ಲಿ ಸ್ಪಷ್ಟವಾಗಿ ಪ್ರದರ್ಶಿಸಬೇಕು, ನೋಂದಾಣಿ ಮತ್ತು ಅನುಮತಿ ಇಲ್ಲದೆ ಕಾರ್ಯಾಚರಣೆ ನಡೆಸುವುದು ಕಾನೂನು ಬಾಹಿರ. ಅಂತಹ ಪ್ರಕರಣಗಳು ಕಂಡು ಬಂದಲ್ಲಿ ಪ್ರವಾಸೋದ್ಯಮ ಇಲಾಖೆಯ ಗಮನಕ್ಕೆ ತರಬೇಕು ಎಂದು ನಿತಿನ್ ಚಕ್ಕಿ ಅವರು ಹೇಳಿದರು.

ಹೋಂಸ್ಟೆ/ ರೆಸಾರ್ಟ್ ಯಾವುದೇ ಅಕ್ರಮ ಚಟುವಟಿಕೆಗಳು ಕಂಡು ಬಂದಲ್ಲಿ ತಕ್ಷಣ ಪೊಲೀಸ್ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆಗೆ ಮಾಹಿತಿ ನೀಡಬೇಕು, 1 ರಿಂದ 6 ಕೊಠಡಿಗಳು ಮಾತ್ರ ಇರಬೇಕು, ಗರಿಷ್ಠ 12 ಹಾಸಿಗೆಗಳು, ಒಂದು ಕೊಠಡಿಯಲ್ಲಿ ಗರಿಷ್ಠ ಮೂರು ಹಾಸಿಗೆಗಳು ಮಾತ್ರ ಇರಬೇಕು, ಕೊಠಡಿಗಳು ಮಾಲೀಕರ ಮನೆಯಲ್ಲಿಯೇ ಅಥವಾ ಅದೇ ಆಸ್ತಿಯಲ್ಲಿರುವ ಪ್ರತ್ಯೇಕ ಕಾಟೇಜ್‌ನಲ್ಲಿ ಇರಬೇಕು, ಬಾಡಿಗೆಗೆ ಅಥವಾ ಲೀಸ್ ಪಡೆದ ಆಸ್ತಿಗಳಲ್ಲಿ ಹೋಂಸ್ಟೇ ನಡೆಸಲು ಅವಕಾಶ ಇರುವುದಿಲ್ಲ ಎಂದು ನಿತಿನ್ ಚಕ್ಕಿ ಅವರು ಮಾಹಿತಿ ನೀಡಿದರು.

ಪ್ರತಿಯೊಂದು ಅತಿಥಿ ಕೊಠಡಿಗೂ ಶೌಚಾಲಯ ಇರಬೇಕು, ಟೈಮ್ ಶೇರ್ ಆಧಾರದಲ್ಲಿ ಕೊಠಡಿಗಳನ್ನು ಬಾಡಿಗೆಗೆ ನೀಡಬಾರದು, ಸೌಲಭ್ಯಗಳು, ಶುಲ್ಕಗಳು, ಚಟುವಟಿಕೆಗಳು ಮತ್ತು ಸೇವೆಗಳ ವಿವರಗಳನ್ನು ಸ್ಪಷ್ಟವಾಗಿ ತಿಳಿಸಬೇಕು, ಮುದ್ರಿತ ದರಪಟ್ಟಿ ಇರಬೇಕು, ಬೆಳಗಿನ ಉಪಹಾರ ಕಡ್ಡಾಯವಾಗಿ ನೀಡಬೇಕು, ಹೆಚ್ಚುವರಿ ಊಟಗಳಿಗೆ ಶುಲ್ಕ ಪಡೆಯಬಹುದು ಎಂದು ಉಪ ವಿಭಾಗಾಧಿಕಾರಿ ಅವರು ಸಲಹೆ ಮಾಡಿದರು.

ಸ್ಥಳೀಯ ಪ್ರವಾಸಿ ಸ್ಥಳಗಳಿಗೆ ಸಾರಿಗೆ–ಸಂಪರ್ಕ ಒದಗಿಸುವಂತಾಗಬೇಕು. ಸೂರ್ಯಾಸ್ತದ ನಂತರ ಹೊರಗಿನ ಚಟುವಟಿಕೆಗಳಿಗೆ ಅಗತ್ಯ ಅನುಮತಿ ಎನ್‌ಒಸಿ ಮತ್ತು ಸುರಕ್ಷತಾ ಕ್ರಮಗಳನ್ನು ಪಾಲಿಸಬೇಕು, ಮೊಬೈಲ್ ನೆಟ್‌ವರ್ಕ್ ದುರ್ಬಲವಾಗಿದ್ದರೆ ಲ್ಯಾಂಡ್ ಲೈನ್, ವೈ–ಫೈ, ಫೋನ್ ಸೌಲಭ್ಯ ಒದಗಿಸಬೇಕು ಎದು ಉಪ ವಿಭಾಗಾಧಿಕಾರಿ ಅವರು ಹೇಳಿದರು.

ಎಲ್ಲಾ ಸಿಬ್ಬಂದಿಯ ಹಿನ್ನೆಲೆಯನ್ನು ಸ್ಥಳೀಯ ಪೊಲೀಸ್ ಮೂಲಕ ಪರಿಶೀಲಿಸಬೇಕು ಮತ್ತು ದಾಖಲೆ ಜತನವಾಗಿರಬೇಕು. ತುರ್ತು ಸಹಾಯ ಸಂಖ್ಯೆಗಳನ್ನು ಪ್ರದರ್ಶಿಸಬೇಕು, ಪ್ರತಿಯೊಂದು ಹೋಂಸ್ಟೇಯೂ ದಾಖಲಾತಿ ಪುಸ್ತಕಗಳನ್ನು ನಿರ್ವಹಿಸಬೇಕು, ಕರ್ನಾಟಕ ರಾಜ್ಯ ಪೊಲೀಸ್ ಎಸ್‌ಒಎಸ್ ಆಪ್‌ನ ಕ್ಯೂಆರ್ ಕೋಡ್ ಪ್ರದರ್ಶಿಸಬೇಕು ಮತ್ತು ಅತಿಥಿಗಳಿಗೆ ಆಪ್ ಬಳಸಲು ತಿಳಿಸುವುದು, ಮಾಲೀಕರು ಮತ್ತು ಸಿಬ್ಬಂದಿ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ನಡೆಸುವ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು ಎಂದು ತಿಳಿಸಿದರು.

ಹೋಂಸ್ಟೇಗಳಲ್ಲಿ 24 ಗಂಟೆ ಕಾರ್ಯನಿರ್ವಹಿಸುವ ಮತ್ತು 30 ದಿನಗಳ ಬ್ಯಾಕಪ್ ಹೊಂದಿರುವ ಸಿಸಿಟಿವಿ ಅವಡಿಸಿರಬೇಕು ಎಂದು ನಿತಿನ್ ಚಕ್ಕಿ ಅವರು ಸಲಹೆ ನೀಡಿದರು.

ಸಭೆಯಲ್ಲಿ ಡಿವೈಎಸ್‌ಪಿಗಳಾದ ಸೂರಜ್, ಮಹೇಶ್ ಕುಮಾರ್, ಅಬಕಾರಿ ಉಪ ಆಯುಕ್ತ ನಾಗೇಶ್ ಕುಮಾರ್, ತಾ.ಪಂ.ಇಒ ಶೇಖರ್, ತಹಶೀಲ್ದಾರ್ ಶ್ರೀಧರ್, ಸಂಜನಾ, ಹೋಂಸ್ಟೇ ಅಸೋಸಿಯೇಷನ್ ಅಧ್ಯಕ್ಷ ಮೋಂತಿ ಗಣೇಶ್, ಕೂರ್ಗ್ ಹೋಂಸ್ಟೆ ಸಂಸ್ಥೆಯ ಉಪಾಧ್ಯಕ್ಷ ಅಬೆಕಲ್ಲು ನವೀನ್, ಟೂರ್ ಮತ್ತು ಟ್ರಾವೆಲ್ ಸಂಸ್ಥೆಯ ವಸಂತ್, ಪ್ರಥಮ ದರ್ಜೆ ಸಹಾಯಕ ಎಂ.ಡಿ.ಸಂದೇಶ್, ಪ್ರವಾಸೋದ್ಯಮ ಇಲಾಖೆಯ ಸಮಾಲೋಚಕ ಜತಿನ್ ಬೋಪಣ್ಣ, ಇತರರು ಇದ್ದರು.



ಹೋಂಸ್ಟೇ ಸುರಕ್ಷತೆ ಕುರಿತ ಭಿತ್ತಪತ್ರ ಬಿಡುಗಡೆಗೊಳಿಸಲಾಯಿತು.

ಅನಧಿಕೃತ ಹೋಂಸ್ಟೇಗಳ ಮಾಹಿತಿ ನೀಡಿ

ಅನಧಿಕೃತವಾಗಿ ನಡೆಸುತ್ತಿರುವಂತಹ ಹೋಂ–ಸ್ಟೇಗಳ ಬಗ್ಗೆ ಹಾಗೂ ಹೋಂ–ಸ್ಟೇ ನೋಂದಣಿ ಮಾಡಿಕೊಳ್ಳುವ ಬಗ್ಗೆ ಸಾರ್ವಜನಿಕರು ದೂರು, ಮಾಹಿತಿ ಇದ್ದಲ್ಲಿ ಅವುಗಳ ವಿವರಗಳನ್ನು ಪತ್ರ ಮುಖೇನ ಉಪ ನಿರ್ದೇಶಕರ ಕಚೇರಿ, ಪ್ರವಾಸೋದ್ಯಮ ಇಲಾಖೆ, ಸ್ಟುವರ್ಟ್ ಹಿಲ್ ರಸ್ತೆ, ಮಡಿಕೇರಿ, ಕೊಡಗು ಜಿಲ್ಲೆ–571201 ದೂ: 08272–200519 ಇ–ಮೇಲ್: ddkodagu-tourism@gmail.com ಅಥವಾ ಜಿಲ್ಲಾ ಪೊಲೀಸ್ ವರಿಷ್ಠಾಧಿಗಳ ಕಚೇರಿ ದೂರವಾಣಿ ಸಂಖ್ಯೆ : 08272–229000– ಇ–ಮೇಲ್ : dcmcr@ksp. gov.in ಅಥವಾ spmcr@ksp.gov.in ಗೆ ತಿಳಿಸಬಹುದು.

ಪರ್ಕಳದಲ್ಲಿ ಮೇ 17ರಂದು 'ಕಲಾ ಕೌಸ್ತುಭ' ಸಂಭ್ರಮ: ಸಾಂಸ್ಕೃತಿಕ ವೈಭವ, ಸಮನ್ವಯ ಸಭೆ

ಉಡುಪಿ: ಪರ್ಕಳದ ಮಂಗಳ ಕಲಾ ಸಾಹಿತ್ಯ ವೇದಿಕೆಯ 23ನೇ ವರ್ಷದ ವಾರ್ಷಿಕ ಸಂಭ್ರಮದ ಅಂಗವಾಗಿ 'ಕಲಾ ಕೌಸ್ತುಭ' ಕಾರ್ಯಕ್ರಮವು ಮೇ 17ರ ಭಾನುವಾರ ಪರ್ಕಳದ ಶ್ರೀ ವಿಶ್ವೇಶ್ವರ ಸಭಾಭವನದಲ್ಲಿ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರುಗಲಿದೆ ಎಂದು ವೇದಿಕೆಯ ಅಧ್ಯಕ್ಷ ನಟರಾಜ ಪರ್ಕಳ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಉದ್ಘಾಟನೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು

ಅಂದು ಮಧ್ಯಾಹ್ನ 3.30ಕ್ಕೆ ಉಡುಪಿ ನಗರಸಭೆಯ ಮಾಜಿ ಅಧ್ಯಕ್ಷೆ ಸುಮಿತ್ರಾ ಆರ್. ನಾಯಕ್ ಅವರು ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ನಂತರ 3.45ಕ್ಕೆ ಭಾಗವತ ಗಣೇಶ ಆಚಾರ್ಯ ಬಿಲ್ಲಾಡಿ ಅವರಿಂದ 'ಯಕ್ಷ–ಗಾನ ವೈಭವ' ಕಾರ್ಯಕ್ರಮ ನಡೆಯಲಿದೆ. ಸಂಜೆ 6.15ಕ್ಕೆ ಮರ್ಣೆಯ ಶ್ರೀ ಮಹಾಲಿಂಗೇಶ್ವರ ನಾಟ್ಯ ತಂಡದ ಕಲಾವಿದರಿಂದ ದೀಕ್ಷಾ ಗುಂಡುಪಾದೆ ಅವರ ನಿರ್ದೇಶನದಲ್ಲಿ 'ಧರೆಗಿಳಿದ ಜಗನ್ಮಾತೆ' ಭಕ್ತಿಪ್ರಧಾನ ನೃತ್ಯರೂಪಕ ಹಾಗೂ ರಾತ್ರಿ 7.15ಕ್ಕೆ ಕಾರ್ಕಳದ ಡೆನ್ನಾನ ಕಲಾವಿದರಿಂದ 'ಡೆನ್ನಾನ' ಎಂಬ ತುಳು ಜಾನಪದ ಶೈಲಿಯ ಹಾಸ್ಯ ನಾಟಕ ಪ್ರದರ್ಶನಗೊಳ್ಳಲಿದೆ.

ಗಣ್ಯರ ಉಪಸ್ಥಿತಿ ಮತ್ತು ಸನ್ಮಾನ

ಸಂಜೆ 4.45ಕ್ಕೆ ನಡೆಯುವ ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವೇದಿಕೆಯ ಅಧ್ಯಕ್ಷ ನಟರಾಜ ಪರ್ಕಳ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಪ್ರಮೋದ್ ಮಧ್ವರಾಜ್, ಆಕಾಶವಾಣಿಯ ನಿವೃತ್ತ ಸಹಾಯಕ ನಿರ್ದೇಶಕಿ ಡಾ. ಮಾಲತಿ ಆರ್. ಭಟ್, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸುಬ್ರಮಣ್ಯ ಜಿ. ಭಟ್ ಕುರ್ಯ, ಅಂತಾರಾಷ್ಟ್ರೀಯ ಮಯೂರ ವಿದ್ಯಾರತ್ನ ಪ್ರಶಸ್ತಿ ಪುರಸ್ಕೃತ ಶಿಕ್ಷಕಿ ವಂದನಾ ರೈ ಕಾರ್ಕಳ, ಡಿಜಿಟಲ್ ಕ್ರಿಯೇಟರ್ ಸಂಧ್ಯಾ ಕಾಮತ್ ಹಾಗೂ ಮಾಜಿ ನಗರಸಭಾ ಸದಸ್ಯ ಮಹೇಶ್ ಠಾಕೂರ್ ಪರ್ಕಳ ಭಾಗವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಗಣಪತಿ ವಿಗ್ರಹ ತಯಾರಕ ದೇವರಾಜ್ ನಾಯಕ್ ಸಣ್ಣಕ್ಕಿಬೆಟ್ಟು ಹಾಗೂ ಅಂತಾರಾಷ್ಟ್ರೀಯ ಪ್ರಶಸ್ತಿ ವಿಜೇತ ಛಾಯಾಗ್ರಾಹಕ ನಿಧೀಶ್ ಕುಮಾರ್ ಪರ್ಕಳ ಅವರಿಗೆ ಗೌರವ ಸನ್ಮಾನ ನಡೆಯಲಿದೆ.

ಸುದ್ದಿಗೋಷ್ಠಿಯಲ್ಲಿ ಸಹ ಸಂಚಾಲಕ ಗೋಪಿ ಹಿರೇಬೆಟ್ಟು, ಉಪಾಧ್ಯಕ್ಷ ರಾಜೇಶ್ ನಾಯಕ್ ಸಣ್ಣಕ್ಕಿಬೆಟ್ಟು, ಗಣೇಶ್ ಸಣ್ಣಕ್ಕಿಬೆಟ್ಟು, ಕೋಶಾಧಿಕಾರಿ ಸಂದೀಪ್ ನಾಯ್ಕ ಕಬ್ಯಾಡಿ ಮೊದಲಾದವರು ಉಪಸ್ಥಿತರಿದ್ದರು.

ಸ್ಥಳೀಯ ಸಂಘ-ಸಂಸ್ಥೆಗಳ ಸಮನ್ವಯ ಸಭೆ

ವಿಶೇಷವಾಗಿ ಅಂದು ಬೆಳಿಗ್ಗೆ 10 ಗಂಟೆಗೆ ಸ್ಥಳೀಯ ಸಂಘ–ಸಂಸ್ಥೆಗಳ ಸಮನ್ವಯ ಸಭೆಯನ್ನು ಏರ್ಪಡಿಸಲಾಗಿದೆ. ಉಡುಪಿ ಜಿಲ್ಲಾಧಿಕಾರಿ ಸ್ವರೂಪ ಟಿ. ಕೆ. ಅವರು ಸಭೆಯನ್ನು ಉದ್ಘಾಟಿಸಲಿದ್ದಾರೆ. ಅಂಬಾಭವಾನಿ ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ಪ್ರಭಾಕರ ಶೆಟ್ಟಿ ಕಬ್ಯಾಡಿ ಅಧ್ಯಕ್ಷತೆ ವಹಿಸಲಿದ್ದು, ಸಂವರ್ಧನಾ ಸಮಿತಿಯ ಸಂಯೋಜಕ ಮನೋಹರ ಮಠದ ಪ್ರಚಾರಕ್ ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಲಯನ್ಸ್ ಕ್ಲಬ್ ಜಿಲ್ಲಾ ಗವರ್ನರ್ ಸಪ್ನ ಸುರೇಶ್, ಮಹೇಶ್ ಠಾಕೂರ್ ಹಾಗೂ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷ ಗಣೇಶ್ ಹೆಬ್ಬಾರ್ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಕಾಸರಗೋಡು ಜಿಲ್ಲಾ ಮಟ್ಟದ ಎರಡನೇ ಹಂತದ ಓರಿಯೆಂಟೇಶನ್ ತರಗತಿ



ಕಾಸರಗೋಡು: ಜಿಲ್ಲೆಯ ಎಲ್ಲಾ ಕುಟುಂಬಶ್ರೀ ಸಿಡಿಎಸ್‌ಗಳನ್ನು ಐಎಸ್‌ಒ ಪ್ರಮಾಣೀಕರಿಸುವ ಉದ್ದೇಶದಿಂದ ಎರಡನೇ ಹಂತದ ಐಎಸ್‌ಒ ಪ್ರಮಾಣೀಕರಣಕ್ಕಾಗಿ ಜಿಲ್ಲಾ ಮಟ್ಟದ ಓರಿಯಂಟೇಶನ್ ತರಗತಿಯನ್ನು ಮಂಗಳವಾರ ಜಿಲ್ಲಾ ಮಾಹಿತಿ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಯಿತು.

ಕಾರ್ಯಕ್ರಮವನ್ನು ಕುಟುಂಬಶ್ರೀ ಜಿಲ್ಲಾ ಮಿಷನ್ ಸಂಯೋಜಕ ರತೀಶ್ ಪಿಲಿಕೋಡ್ ಉದ್ಘಾಟಿಸಿದರು. ಸಹಾಯಕ ಜಿಲ್ಲಾ ಮಿಷನ್ ಸಂಯೋಜಕ ಕಿಶೋರ್‌ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಮಾಹಿತಿ ಅಧಿಕಾರಿ ಎಂ.ಮಧುಸೂದನನ್ ಮುಖ್ಯ ಅತಿಥಿಯಾಗಿದ್ದರು. ಕಿಲಾ ಫ್ಯಾಕಲ್ಟಿಯ ಐಎಸ್‌ಒ ವ್ಯವಸ್ಥಾಪಕ ರಶೀದ್ ತರಗತಿಗಳನ್ನು ನಡೆಸಿದರು.

ಕಳೆದ ವರ್ಷ ಮೊದಲ ಹಂತದ ಓರಿಯಂಟೇಶನ್‌ನಲ್ಲಿ 26 ಸಿಡಿಎಸ್‌ಗಳು ಐಎಸ್‌ಒ ಪ್ರಮಾಣೀಕರಣವನ್ನು ಪಡೆದಿದ್ದವು. ಈ ಹಂತದಲ್ಲಿ ಉಳಿದ 16 ಸಿಡಿಎಸ್‌ಗಳು ಪ್ರಮಾಣೀಕರಣವನ್ನು ಸಾಧಿಸುವುದರೊಂದಿಗೆ ಜಿಲ್ಲೆಯ ಕುಟುಂಬಶ್ರೀ ವ್ಯವಸ್ಥೆಗಳು ಶೇಕಡಾ 100ರಷ್ಟು ಐಎಸ್‌ಒ ಸ್ಥಾನಮಾನವನ್ನು ತಲುಪಲಿವೆ.

ಪುತ್ತಿಗೆ, ಚೆಂಗಳ, ಮಧೂರು, ಬದಿಯಡ್ಕ, ಪನತ್ತಡಿ, ಕಲ್ಲಾರ್, ಕೋಡೋಂಬೇಳೂರು, ಬಲಾಲ್, ಬೇಡಡ್ಕ, ಕಾರಡ್ಕ, ಮುಳಿಯಾರು, ಕುಂಬ್ಡಾಜೆ, ವಳ್ಳಿಕೆರೆ – ಪೆರಿಯ, ಕಾಞಂಗಾಡ್ 1, ಕಾಞಂಗಾಡ್ 2 ಮತ್ತು ಕಾಸರಗೋಡಿನಲ್ಲಿರುವ ಸಿಡಿಎಸ್‌ಗಳನ್ನು ಈ ಹಂತದಲ್ಲಿ ಅಂತಾರಾಷ್ಟ್ರೀಯ ಗುಣ ಮಟ್ಟಕ್ಕೆ ನವೀಕರಿಸಲಾಗುತ್ತಿದೆ. ಐಎಸ್‌ಒ ಪ್ರಮಾಣೀಕರಣವು ಕಚೇರಿ ಕಾರ್ಯಾಚರಣೆಗಳನ್ನು ಹೆಚ್ಚು ಪಾರದರ್ಶಕವಾಗಿಸಲು ಮತ್ತು ಜನರಿಗೆ ಸೇವೆಗಳನ್ನು ವೇಗವಾಗಿ ಒದಗಿಸಲು ಸಹಾಯ ಮಾಡುತ್ತದೆ. ಪ್ರತಿ ಸಿಡಿಎಸ್‌ನಿಂದ ಅಧ್ಯಕ್ಷರು, ಸದಸ್ಯ ಕಾರ್ಯದರ್ಶಿ, ಲೆಕ್ಕಪತ್ರಗಾರ ಮತ್ತು ತಾಂತ್ರಿಕ ವಿಷಯಗಳಲ್ಲಿ ಪರಿಣತಿ ಹೊಂದಿರುವ ಪ್ರತಿನಿಧಿಗಳು ಓರಿಯಂಟೇಶನ್ ತರಗತಿಯಲ್ಲಿ ಭಾಗವಹಿಸಿದ್ದರು.

ಕುಟುಂಬಶ್ರೀ ಮಿಷನ್ ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕಿ ಎಂ.ರೇಷ್ಮಾ ಸ್ವಾಗತಿಸಿ, ಬ್ಲಾಕ್ ಸಂಯೋಜಕಿ ರಮ್ಯಾಮೋಲ್ ವಂದಿಸಿದರು.

ಸಾರಲತಾ ಐಟಿ ಸೊಲ್ಯೂಷನ್ಸ್, ಸರಳಾ ಬಾಬುರಾವ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ನಡೆಯಲಿದೆ

ಮೇ 18: ಕೊಡವೂರಿನಲ್ಲಿ ಉದ್ಯೋಗ ಮೇಳ

ಉಡುಪಿ: ಯುವಕರಿಗೆ ಉದ್ಯೋಗ, ಇಂಟರ್ನ್ ಶಿಪ್ ಮತ್ತು ವೃತ್ತಿ ಮಾರ್ಗದರ್ಶನ ಒದಗಿಸುವ ಉದ್ದೇಶದಿಂದ ಮೇ 18ರಂದು ಉಡುಪಿ ಜಿಲ್ಲೆಯ ಕೊಡವೂರಿನಲ್ಲಿ ಬೃಹತ್ ಉದ್ಯೋಗ ಮೇಳ ನಡೆಯಲಿದೆ.

ಈ ಕಾರ್ಯಕ್ರಮವನ್ನು ಸಾರಲತಾ ಐಟಿ ಸೊಲ್ಯೂಷನ್ಸ್ ಮತ್ತು ಸರಳಾ ಬಾಬುರಾವ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ, ಶ್ರೀ ಶಂಕರ ನಾರಾಯಣ ದೇವಸ್ಥಾನ ಮತ್ತು ತೆಂಕನಿಡಿಯೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಯೋಗದಲ್ಲಿ ಆಯೋಜಿಸಲಾಗಿದೆ ಎಂದು ಉದ್ಯೋಗ ಮೇಳದ ಅಧ್ಯಕ್ಷೆ ಡಾ. ದಿವ್ಯರಾಣಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮ್ಯಾನೇಜ್‌ಮೆಂಟ್, ಇಂಜಿನಿಯರಿಂಗ್, ಉತ್ಪಾದನಾ ವಲಯ, ಆರೋಗ್ಯ ಸೇವೆ, ಹೋಟೆಲ್, ಬ್ಯಾಂಕಿಂಗ್ ಮತ್ತು ಹಣಕಾಸು, ಮಾರಾಟ ಮತ್ತು ಮಾರುಕಟ್ಟೆ, ತಾಂತ್ರಿಕ ಸೇವೆಗಳು, ಲಾಜಿಸ್ಟಿಕ್ಸ್ ಹಾಗೂ ಸೇವಾ ವಲಯ, ಕೌಶಲ್ಯ ವಿವಿಧ ಕ್ಷೇತ್ರಗಳ 60 ಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳು ಈ ಉದ್ಯೋಗ ಮೇಳದಲ್ಲಿ ಭಾಗವಹಿಸಲಿವೆ.

ಪದವಿ, ಡಿಪ್ಲೊಮಾ, ಇಂಜಿನಿಯರಿಂಗ್, ಐಟಿಐ, ಪಿಯುಸಿ, ಎಸ್‌ಎಸ್‌ಎಲ್‌ಸಿ ಹಾಗೂ ವಿವಿಧ ಕೌಶಲ್ಯ ಆಧಾರಿತ, ಅರ್ಹತೆ ಹೊಂದಿದ ಅಭ್ಯರ್ಥಿಗಳಿಗೆ 6,000 – ಕ್ಕೂ ಹೆಚ್ಚು ಉದ್ಯೋಗಾವಕಾಶಗಳು ಲಭ್ಯವಾಗಲಿವೆ. ಹೊಸ ಅಭ್ಯರ್ಥಿಗಳು ಹಾಗೂ ಅನುಭವ ಹೊಂದಿದವರಿಗೆ ಸಮಾನ ಅವಕಾಶಗಳು ದೊರೆಯಲಿದೆ.

https://forms.gle/Zvx4Bm-wCdYSch1ZF6A ಗೂಗಲ್ ಲಿಂಕ್ ಮೂಲಕ ನೋಂದಣಿ ಮಾಡಿಕೊಳ್ಳಬಹುದು. ಅಥವಾ ಮೇ 18ರಂದು ಬೆಳಗ್ಗೆ 9 ಗಂಟೆಯಿಂದ 4 ರವರೆಗೆ ಕೊಡವೂರಿನ ಶ್ರೀ ಶಂಕರ ನಾರಾಯಣ ದೇವಸ್ಥಾನದ ಸಮೀಪದ ವಿಪ್ರಶ್ರೀ ಸಭಾಭವನಕ್ಕೆ ನೇರವಾಗಿ ಭೇಟಿ ನೀಡಿ ಭಾಗವಹಿಸಬಹುದು. ಅಭ್ಯರ್ಥಿಗಳು ಕನಿಷ್ಠ 5 ರಿಂದ 7 ಪ್ರತಿಗಳ ಸಿವಿ ಹಾಗೂ ಐಡಿ ಕಾರ್ಡ್ ತರಬೇಕು ಎಂದು ತಿಳಿಸಿದ್ದಾರೆ.

ಉದ್ಯೋಗ ಮೇಳದ ಕಾರ್ಯದರ್ಶಿ ರೇವತಿ ನಾದ್ದಿರಿ ಮಾತನಾಡಿ, ಮೇ 18ರಂದು ನಡೆಯುವ ಉದ್ಘಾಟಣಾ ಕಾರ್ಯಕ್ರಮದಲ್ಲಿ ಸ್ಪೀಕರ್ ಯು.ಟಿ ಖಾದರ್, ಮಣಿಪಾಲ ಮಾಹೆಯ ಸಹ ಕುಲಾಧಿಪತಿ ಹೆಚ್.ಎಸ್ ಬಲ್ಲಾಳ್, ಪ್ರಸಾದ್ ರಾಜ್ ಕಾಂಚನ್, ಹೆಚ್.ಪಿ.ಆರ್ ಗ್ರೂಪ್ ನ ಅಧ್ಯಕ್ಷ ಹರಿಪ್ರಸಾದ್ ರೈ, ನಗರಸಭೆ ಆಯುಕ್ತ ಮಹಾಂತೇಶ್ ಹಂಗರಗಿ, ಶ್ರೀನಿವಾಸ್ ಯುನಿವರ್ಸಿಟಿಯ ಡೈರೆಕ್ಟರ್ ಡಾ. ದಿವ್ಯಾ ರಾಣಿ ಪ್ರದೀಪ್ ಮೊದಲಾದವರು ಭಾಗವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಾತ್ವಿಕ್ ಎಸ್ ಆಚಾರ್ಯ, ಧ್ರುವ್ ರಾಜ್ ಮೊದಲಾದವರು ಉಪಸ್ಥಿತರಿದ್ದರು.



ಅರ್ಹತೆ ಹೊಂದಿದ ಅಭ್ಯರ್ಥಿಗಳಿಗೆ 6,000 – ಕ್ಕೂ ಹೆಚ್ಚು ಉದ್ಯೋಗಾವಕಾಶಗಳು ಲಭ್ಯವಾಗಲಿವೆ.

ಶಾಸಕ ಗುರುರಾಜ್ ಶೆಟ್ಟಿ ಗಂಟಿಹೊಳೆ ಜನ್ಮದಿನಾಚರಣೆ

ಸಿಹಿ, ಗಿಡ ವಿತರಿಸಿ ಆಚರಣೆ

ಕುಂದಾಪುರ : ಬೈಂದೂರು ಶಾಸಕ ಗುರುರಾಜ್ ಶೆಟ್ಟಿ ಗಂಟಿಹೊಳೆ ಅವರ ಜನುಮದಿನದ ಪ್ರಯುಕ್ತ ಬಿಜೆಪಿ ತ್ರಾಸಿ ಮಹಾಶಕ್ತಿ ಕೇಂದ್ರದ ಬಿಜೆಪಿ ಕಾರ್ಯಕರ್ತರು ತ್ರಾಸಿ ಸರ್ಕಲ್‌ನಲ್ಲಿ ಸಿಹಿ ಹಂಚಿ, ಗಿಡ ವಿತರಿಸಿ ಜನ್ಮ ದಿನವನ್ನು ಮಂಗಳವಾರ ವಿಶಿಷ್ಟವಾಗಿ ಆಚರಿಸಿದರು.

ಬೈಂದೂರು ಶಾಸಕ ಗುರುರಾಜ್ ಶೆಟ್ಟಿ ಗಂಟಿಹೊಳೆ ಅವರು ಕೇಕ್ ಕತ್ತರಿಸಿ, ಬಿಜೆಪಿ ಕಾರ್ಯಕರ್ತರು ಹಾಗೂ ಸಾರ್ವಜನಿಕರಿಗೆ ಸಿಹಿ ಹಂಚಿ, ಗಿಡಗಳನ್ನು ವಿತರಿಸಿದರು. ಜನ್ಮ ದಿನವನ್ನು ವಿಶಿಷ್ಟವಾಗಿ ಆಚರಿಸಿದ ಬಿಜೆಪಿ ಕಾರ್ಯಕರ್ತರು ಹಾಗೂ ಅಭಿಮಾನಿಗಳಿಗೆ ಅವರು ಕೃತಜ್ಞತೆ ಸಲ್ಲಿಸಿದರು.

ಬೈಂದೂರು ಮಂಡಲ ಬಿಜೆಪಿ ಉಪಾಧ್ಯಕ್ಷ ಮಿಥುನ್ ದೇವಾಡಿಗ, ಬಿಜೆಪಿ ತ್ರಾಸಿ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ರವೀಂದ್ರ ಖಾರ್ವಿ ಹೊಸಪೇಟೆ, ಅಲ್ಪಸಂಖ್ಯಾತ ಮೋರ್ಚಾದ ಅಂತೋನಿ ಡಿಸೋಜ, ಪಾಂಡುರಂಗ ತ್ರಾಸಿ, ಬಿಜೆಪಿ ಮುಖಂಡರಾದ ರಾಜು ಮೂಜಾರಿ, ರಾಜೇಂದ್ರ ಶೇರುಗಾರ್ ಗಂಗೊಳ್ಳಿ, ಚಂದ್ರ ಖಾರ್ವಿ ಲೈಟ್‌ಹೌಸ್, ಗಂಗೊಳ್ಳಿ ಗ್ರಾಪಂ ಸದಸ್ಯರು, ವಿವಿಧ ಮೋರ್ಚಾಗಳ ಪದಾಧಿಕಾರಿಗಳು, ಮುಖಂಡರು, ಅಭಿಮಾನಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.



ಕಿರುಸುದ್ದಿ

ಇಂದಿನಿಂದ 'ಮೊನಾಲಿಸಾ-ಈಸ್ ಇನ್ ಟ್ರಬಲ್' ಪ್ರೀಮಿಯರ್ ಶೋ

• **ಮಂಗಳೂರು:** ರಾಘವೇಂದ್ರ ಸ್ಟುಡಿಯೋ ಪ್ರೆಸೆಂಟ್ಸ್ ಹಾಗೂ ಕೋಸ್ಟಲ್ ಫಿಲಂಸ್ ಸಹಯೋಗದಲ್ಲಿ ನಿರ್ಮಾಣವಾಗಿರುವ ಕನ್ನಡ ಟೆಲಿಚಿತ್ರ 'ಮೊನಾಲಿಸಾ-ಈಸ್ ಇನ್ ಟ್ರಬಲ್' ಪ್ರೀಮಿಯರ್ ಪ್ರದರ್ಶನ ಮೇ 15ರಿಂದ 17ರವರೆಗೆ ಮಂಗಳೂರಿನ ಭಾರತ್ ಸಿನೆಮಾಸ್‌ನಲ್ಲಿ ನಡೆಯಲಿದೆ ಎಂದು ಚಿತ್ರ ನಿರ್ದೇಶಕ ಬೃಂದಾವನ್ ಎನ್. ಶೆಟ್ಟಿ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಯುವ ಪ್ರತಿಭೆಗಳಿಗೆ ಉತ್ತಮ ಸಂದೇಶ ನೀಡುವ ಕಥಾ ಹಂದರ ಹೊಂದಿರುವ ಚಿತ್ರವು ಥ್ರಿಲ್ಲರ್, ಸಸ್ಪೆನ್ಸ್ ಅಂಶಗಳನ್ನು ಒಳಗೊಂಡಿದೆ. ಸುಮಾರು 50 ನಿಮಿಷಗಳ ಈ ಟೆಲಿಚಿತ್ರ ಪ್ರೇಕ್ಷಕರಿಗೆ ಹೊಸ ಅನುಭವ ನೀಡಲಿದೆ. ಚಿತ್ರದ ಕಥೆಯನ್ನು ಶ್ರೇಯಸ್ ಕುಮಾರ್ ಫರಂಗಿಪೇಟೆ ಬರೆದಿದ್ದು, ಮಂಗಳೂರಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಚಿತ್ರೀಕರಣಗೊಂಡಿದೆ. ರಂಗಿತರಂಗ ಖ್ಯಾತಿಯ ಕಾರ್ತಿಕ್ ಎ.ಆರ್., ಯಜ್ಞೇಶ್ ಬರ್ಕೆ ಈ ಟೆಲಿಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ ಎಂದು ಅವರು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಶ್ರೇಯಸ್ ಕುಮಾರ್ ಫರಂಗಿಪೇಟೆ, ನಿರ್ಮಾಪಕ ನ್ಯಾಯವಾದಿ ನವೀನ್ ಕುಮಾರ್ ಶೆಟ್ಟಿ, ನಟಿ ವಿನುತಾ ಸಿ.ನಾಯಕ್, ನ್ಯಾಯವಾದಿ ಪ್ರಸಾದ್ ಪಾಲನ್, ದಿನೇಶ್ ಕೋಟ್ಯಾನ್, ದೇವಿ ಪ್ರಸಾದ್ ಕೊಂಚಾಡಿ, ಅಭಿನವ್ ಉಪಸ್ಥಿತರಿದ್ದರು.

ಇಂದಿನಿಂದ ವಿಂಟೇಜ್ ವೈಬ್ಸ್ ವಸ್ತು ಪ್ರದರ್ಶನ

• **ಮಂಗಳೂರು:** ಸಿಟಿ ಸೆಂಟರ್ ನೇತೃತ್ವ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಫಿಲಾಟೆಲಿಕ್ ಮತ್ತು ನುಮಿಸ್ ಮೆಟಿಕ್ಸ್ ಅಸೋಸಿಯೇಶನ್ ಸಹಭಾಗಿತ್ವದಲ್ಲಿ ಮೇ 15ರಿಂದ 17ರವರೆಗೆ ಮೂರು ದಿನಗಳ ವಿಂಟೇಜ್ ವೈಬ್ಸ್ ವಸ್ತು ಪ್ರದರ್ಶನ ನಡೆಯಲಿದೆ ಎಂದು ಅಸೋಸಿಯೇಶನ್ ಅಧ್ಯಕ್ಷ ಪ್ರಭಾಕರ ಕಾಮತ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಈ ಕಾರ್ಯಕ್ರಮಕ್ಕೆ ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ. ಪುರಾತನ ನಾಣ್ಯ, ಕರೆನ್ಸಿ, ಅಂಚೆ ಚೀಟಿಗಳು, ಗಡಿಯಾರಗಳು, ವಸ್ತುಶಿಲ್ಪಗಳ ಜತೆಗೆ ಸುಮಾರು 19 ಬಗೆಯ ಸಂಗ್ರಹ ವಸ್ತುಗಳನ್ನು ಪ್ರದರ್ಶನಕ್ಕಿಡಲಾಗುವುದು. ಪುರಾತನ ಜಗತ್ತಿನ ವಿಸ್ಮಯಗಳಿಂದ ಕೂಡಿದ ಅಪರೂಪವಾದ ವಸ್ತು ಪ್ರದರ್ಶನ ಸಿಟಿ ಸೆಂಟರ್ ಮಾಲ್‌ನ ನೆಲ ಅಂತಸ್ತಿನಲ್ಲಿ ಜರುಗಲಿದೆ ಎಂದರು. ಮಕ್ಕಳಿಗೆ ಗತಕಾಲದ ವಸ್ತುಗಳನ್ನು ತೋರಿಸಿ ಅದರ ಮಹತ್ವವನ್ನು ತಿಳಿಸಲು ಪೋಷಕರಿಗೆ ಸುವರ್ಣಾವಕಾಶವಾಗಿದೆ. ಸಾಮಾಜಿಕ ಜಾಲತಾಣದಲ್ಲಿ ಮಾತ್ರ ನೋಡಿದ ಕೆಲವು ವಸ್ತುಗಳನ್ನು ಹತ್ತಿರದಿಂದ ನೋಡುವ ಅವಕಾಶ ಇದಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಅಸೋಸಿಯೇಶನ್ ಕಾರ್ಯದರ್ಶಿ ಸಂತೋಷ್ ಪ್ರಭು, ನಮಸ್ತೆ ಮಂಗಳೂರು ಮುಖ್ಯಸ್ಥ ಕಿರಣ್ ಶೆಣೈ, ಸಿಟಿ ಸೆಂಟರ್ ಮ್ಯಾನೇಜರ್ ನಿತಿತ್, ವೈಶಾಲಿ, ಶ್ರೀನಿವಾಸ ರಾವ್ ಉಪಸ್ಥಿತರಿದ್ದರು.

ಲಾರಿ-ಬೈಕ್ ಡಿಕ್ಕಿ: ಬಿಬಿಎ ವಿದ್ಯಾರ್ಥಿ ಮೃತ್ಯು

ಕಾಸರಗೋಡು: ಲಾರಿ ಡಿಕ್ಕಿ ಹೊಡೆದು ಬೈಕ್ ಸವಾರನಾದ ವಿದ್ಯಾರ್ಥಿ ಸಾವನ್ನಪ್ಪಿದ ದಾರುಣ ಘಟನೆ ನಡೆದಿದೆ.

ಉದುಮ ಕೋಟೆಕುನ್ನಿನ ನಸೀರ್ ಮತ್ತು ರಸೀನಾ ದಂಪತಿಯ ಪುತ್ರ ಲುಕ್ಮಾನ್ (22) ಮೃತಪಟ್ಟ ದುರ್ದೈವಿ. ಮಂಗಳೂರಿನ ಶ್ರೀದೇವಿ ಕಾಲೇಜಿನ ಪ್ರಥಮ ವರ್ಷ ಬಿಬಿಎ ವಿದ್ಯಾರ್ಥಿಯಾದ ಲುಕ್ಮಾನ್ ಜಿಮ್‌ಗೆ ಹೋಗಿ ಬೈಕ್‌ನಲ್ಲಿ ಬುಧವಾರ ರಾತ್ರಿ ಮನೆಗೆ ಹಿಂತಿರುಗುತ್ತಿದ್ದ ವೇಳೆ ಪಾಲಕುನ್ನು ಪೇಟೆಗೆ ತಲುಪಿದಾಗ ಕಾಸರಗೋಡು ಭಾಗದಿಂದ ಸರಕು ಹೇರಿಕೊಂಡು ಬರುತ್ತಿದ್ದ ಲಾರಿ ಬೈಕ್‌ಗೆ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿತು.

ಗಂಭೀರ ಗಾಯಗೊಂಡ ಲುಕ್ಮಾನ್ ಅವರನ್ನು ತಕ್ಷಣ ಆಸ್ಪತ್ರೆಗೆ ಸಾಗಿಸಲಾಗಿತ್ತಾದರೂ ಪ್ರಾಣ ಉಳಿಸಲು ಸಾಧ್ಯವಾಗಲಿಲ್ಲ. ಬೇಕಲ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಆರಂಭಿಸಿದ್ದಾರೆ. ಮೃತರು ಹೆತ್ತವರ ಹೊರತಾಗಿ ಸಹೋದರ, ಸಹೋದರಿಯರಾದ ನೌಮಾನ್, ಸಫ್ರಾನ್, ಫಾತಿಮಾ ಅವರನ್ನು ಅಗಲಿದ್ದಾರೆ.

ಕೊಠಡಿಯಲ್ಲಿ ಕೂಡಿಹಾಕಿ ಪಟಾಕಿ ಸ್ಫೋಟ: ಯುವಕನಿಗೆ ಗಂಭೀರ ಗಾಯ: ಸ್ನೇಹಿತನ ವಿರುದ್ಧ ಕೇಸು

• **ಬದಿಯಡ್ಕ:** ಯುವಕನನ್ನು ಕೊಠಡಿಯೊಳಗೆ ಕೂಡಿ ಹಾಕಿದ ಬಳಿಕ ಮಾಲೆ ಪಟಾಕಿ ಸ್ಫೋಟಿಸಿದ್ದು, ಇದರಿಂದ ಯುವಕ ಗಂಭೀರ ಗಾಯಗೊಂಡಿರುವುದಾಗಿ ದೂರಲಾಗಿದೆ. ಮಲ್ಲ ಜೋಕೆಮೂಲೆ ನಿವಾಸಿ ಎಂ.ಅಭಿಲಾಷ್ (32) ಗಂಭೀರ ಗಾಯಗೊಂಡಿದ್ದು, ಅವರನ್ನು ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಘಟನೆಗೆ ಸಂಬಂಧಿಸಿ ಅಭಿಲಾಷ್ ನೀಡಿದ ದೂರಿನಂತೆ ಸ್ನೇಹಿತನಾದ ಮುಳ್ಳೇರಿಯದ ಪ್ರಣವ್ ಎಂಬಾತನ ವಿರುದ್ಧ ಬದಿಯಡ್ಕ ಪೊಲೀಸರು ಕೇಸು ದಾಖಲಿಸಿಕೊಂಡಿದ್ದಾರೆ. ಏಪ್ರಿಲ್ 15ರಂದು ರಾತ್ರಿ 10 ಗಂಟೆಯಿಂದ 16ರಂದು ಬೆಳಗ್ಗೆ 8 ಗಂಟೆ ಮಧ್ಯೆ ಅಭಿಲಾಷ್‌ರನ್ನು ಮನೆಯೊಂದರ ಕೊಠಡಿಯೊಳಗೆ ಕೂಡಿ ಹಾಕಿದ ಬಳಿಕ ಅವರ ಸಮೀಪಕ್ಕೆ ಮಾಲೆ ಪಟಾಕಿ ಹಚ್ಚಿ ಎಸೆದಿರುವುದಾಗಿ ಪೊಲೀಸರು ದಾಖಲಿಸಿಕೊಂಡ ಪ್ರಕರಣದಲ್ಲಿ ತಿಳಿಸಲಾಗಿದೆ.

ಪುತ್ರ ನಾಪತ್ತೆ: ತಂದೆ ದೂರು

• **ಕಾಸರಗೋಡು:** ಯುವಕ ನಾಪತ್ತೆಯಾದ ಬಗ್ಗೆ ನೀಡಿದ ದೂರಿನಂತೆ ನೀಲೇಶ್ವರ ಪೊಲೀಸರು ಕೇಸು ದಾಖಲಿಸಿಕೊಂಡಿದ್ದಾರೆ. ಮಡಿಕೈ ಚದುರಕ್ಕಿನಾರ್ ಶಮ್ಮಾ ಒಳವಳ ಎಂಬವರ ಪುತ್ರ ಜ್ಯೂಲಿಲ್ ಸೆಬಾಸ್ಟಿಯನ್ (24) ನಾಪತ್ತೆಯಾದ ಯುವಕ. ಮಂಗಳವಾರ ರಾತ್ರಿ 8 ಗಂಟೆಗೆ ಮನೆಯಿಂದ ಹೋದ ಪುತ್ರ ಆ ಬಳಿಕ ವಾಪಸಾಗಲಿಲ್ಲ ಎಂದು ತಂದೆ ನೀಲೇಶ್ವರ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಮೇ 24 ರಂದು ಕುಂಜಾರಿಗಿರಿಯಲ್ಲಿ ಪುನರ್ ಪ್ರತಿಷ್ಠಾ ದಿನಾಚರಣೆ

• **ಮುಲ್ಕಿ:** ಸಮೀಪದ ಕೊಲಕಾಡಿಯ ಕುಂಜಾರಿಗಿರಿ ಶ್ರೀ ಮಹಾಲಿಂಗೇಶ್ವರ ಶಾಸ್ತಾವು ದೇವಸ್ಥಾನದಲ್ಲಿ ಮೇ 24 ರಂದು ಪುನರ್‌ಪ್ರತಿಷ್ಠಾ ದಿನಾಚರಣೆ ನಡೆಯಲಿದೆ. ಮೇ 24 ರ ರವಿವಾರ ಬೆಳಗ್ಗೆ 8ಕ್ಕೆ ಗಣಹೋಮ, ನವಕ ಪ್ರಧಾನ ಹೋಮ,10 ಕ್ಕೆ ಸಿಯಾಳ ಅಭಿಷೇಕ,10.30ಕ್ಕೆ ಕಲಶಾಭಿಷೇಕ,ಮಧ್ಯಾಹ್ನ ಮಹಾಪೂಜೆ, ಅನ್ನಸಂತರ್ಪಣೆ, ರಾತ್ರಿ 7 ರಿಂದ 9-30ರವರೆಗೆ ಭಜನೆ ಕಾರ್ಯಕ್ರಮ, 9ಕ್ಕೆ ರಂಗಪೂಜೆ ಮತ್ತು ಪ್ರಸಾದ ವಿತರಣೆ,ರಾತ್ರಿ 9-30ಕ್ಕೆ ಅಣ್ಣಪ್ಪ ಪಂಜುರ್ಲಿಯ ತಂಬಿಲ ಸೇವೆ ಮತ್ತು ಪ್ರಸಾದ ವಿತರಣೆ ನಡೆಯಲಿದೆ.




ರಾಮನಗರ ಜಿಲ್ಲಾ ಮಾವು ಮತ್ತು ತೋಟದ ಬೆಳೆಗಾರರ ಮಾರಾಟ ಸಂಘ ಹಾಗೂ ತೋಟಗಾರಿಕೆ ಇಲಾಖೆಯ ಸಹಯೋಗದಲ್ಲಿ ಉಡುಪಿಯ ದೊಡ್ಡಣಗುಡ್ಡೆ ರೈತ ಸೇವಾ ಕೇಂದ್ರದ ಆವರಣದಲ್ಲಿ ಆಯೋಜಿಸಲಾಗಿರುವ ನಾಲ್ಕು ದಿನಗಳ ಮಾವು ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಸಂಸದ ಕೋಟ ಶ್ರೀನಿವಾಸ ಪೂಜಾರಿ ಉದ್ಘಾಟಿಸಿದರು.

ಕಾಸರಗೋಡು ಜಿಲ್ಲೆಯಲ್ಲಿ 20,675 ಮಂದಿ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರು

ಇಂದು ಎಸ್‌ಎಸ್‌ಎಲ್‌ಸಿ ಫಲಿತಾಂಶ

• **ಕಾಸರಗೋಡು:** ಕೇರಳ ಎಸ್‌ಎಸ್‌ಎಲ್‌ಸಿ ಫಲಿತಾಂಶ ಮೇ 15ರಂದು ಪ್ರಕಟವಾಗಲಿದ್ದು, ಇದಕ್ಕೆ ಸಂಬಂಧಿಸಿ ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಮಾಹಿತಿ ಒದಗಿಸಲು ಇಲಾಖೆ ಅಗತ್ಯ ಸಿದ್ಧತೆ ಪೂರ್ಣಗೊಳಿಸಿದೆ.

keralaresults.nic.in, results.kite.kerala.gov.in, keralapareekshabhavan.in, sslcexam.kerala.gov.in, examresults.kerala.gov.in ಎಂಬ ವೆಬ್‌ಸೈಟ್‌ಗಳ ಮೂಲಕ ಸಂಬಂಧಪಟ್ಟವರು ಫಲಿತಾಂಶ ಪರಿಶೀಲಿಸಬಹುದು.



ಕಾಸರಗೋಡು ಜಿಲ್ಲೆಯಲ್ಲಿ ಈ ಬಾರಿ 20,675 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿದ್ದಾರೆ. ಕಾಸರಗೋಡು ಶೈಕ್ಷಣಿಕ ಉಪ ಜಿಲ್ಲೆಯಲ್ಲಿ (14 ಸ್ಪೆಷಲ್ ಶಾಲೆಗಳು ಮತ್ತು 56 ತಾಂತ್ರಿಕ ಶಾಲೆಗಳು) ಒಟ್ಟು 11,476 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ. 81 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಿತು. ಪರೀಕ್ಷೆ ಬರೆದವರಲ್ಲಿ 5,488 ಹುಡುಗರು ಮತ್ತು 5,988 ಹುಡುಗಿಯರು ಸೇರಿದ್ದಾರೆ.

ಜಿಲ್ಲೆಯಲ್ಲಿ ಅತೀ ಹೆಚ್ಚು ವಿದ್ಯಾರ್ಥಿಗಳು ನಾಯನ್ಮಾರಮೂಲೆ ಟಿಐಎಚ್‌ಎಸ್ ಶಾಲೆಯಲ್ಲಿ 785ಮಂದಿ ಪರೀಕ್ಷೆ ಬರೆದಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಅತೀ ಹೆಚ್ಚು ವಿದ್ಯಾರ್ಥಿಗಳು ಕುಂಬಳೆ ಜಿಎಚ್‌ಎಸ್‌ಎಸ್ ಶಾಲೆಯಲ್ಲಿ 556 ಮಂದಿ ಪರೀಕ್ಷೆ ಬರೆದಿದ್ದಾರೆ. ಜಿಎಚ್‌ಎಸ್‌ಎಸ್ ಶಾಲೆಗಳಲ್ಲಿ ಮೂಡಂಬೈಲ್ ಶಾಲೆಯಲ್ಲಿ ಕನಿಷ್ಠ 17 ಮಂದಿ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ.

ಅನುದಾನಿತ ಶಾಲೆಗಳಲ್ಲಿ ಅತಿ ಹೆಚ್ಚು 785 ವಿದ್ಯಾರ್ಥಿಗಳು ಟಿಐಎಚ್‌ಎಸ್‌ಎಸ್ ನಾಯಮಾರ್ ಮೂಲೆಯಲ್ಲಿ ಹಾಗೂ ಕನಿಷ್ಠ 25 ವಿದ್ಯಾರ್ಥಿಗಳು ಎಚ್‌ಎಚ್‌ಎಸ್‌ಐಬಿಎಚ್‌ಎಸ್ ಎಸ್ ಎಡನೀರ್ ಶಾಲೆಯಲ್ಲಿ 25 ಮಂದಿ ಪರೀಕ್ಷೆ ಬರೆದಿದ್ದಾರೆ.

ಕಾಞಂಗಾಡ್ ಉಪಜಿಲ್ಲೆಯಲ್ಲಿ (ತಾಂತ್ರಿಕ ಶಾಲೆಗಳು ಮತ್ತು ಜ್ಯೋತಿ ಭವನ ಶ್ರವಣದೋಷ ಶಾಲೆ ಸೇರಿದಂತೆ) ಒಟ್ಟು 9,199 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ. ಈ ಪೈಕಿ 4,714 ಹುಡುಗರು ಮತ್ತು 4,485 ಹುಡುಗಿಯರು ಪರೀಕ್ಷೆ ಬರೆದಿದ್ದಾರೆ. ದುರ್ಗಾ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಅತಿ ಹೆಚ್ಚು 542 ಮಂದಿ ವಿದ್ಯಾರ್ಥಿಗಳು ಮತ್ತು ಸಿಎಚ್‌ಎಂಕೆಎಸ್‌ಎಚ್‌ಎಸ್‌ಎಸ್ ಪೆರುಂಬಟ್ಟದಲ್ಲಿ ಕನಿಷ್ಠ 19 ಮಂದಿ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ.

ರಾಜ್ಯದಲ್ಲೇ ಮೊದಲ ಕೇಂದ್ರ । ಪಿಲಾತಬೆಟ್ಟು ಗ್ರಾ.ಪಂ. ವ್ಯಾಪ್ತಿಯ ನಯನಾಡಿನಲ್ಲಿ ಆರಂಭ

ಜೀವನೋಪಾಯ ಸೇವಾ ಕೇಂದ್ರ

• **ಬಂಟ್ವಾಳ:** ದೀನ್ ದಯಾಳ್ ಅಂತ್ಯೋದಯ ಯೋಜನೆ, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಸಂಜೀವಿನಿ ಕೆಎಸ್‌ಆರ್‌ಎಲ್‌ಪಿಎಸ್ ಅಡಿಯಲ್ಲಿ ಬೆಳಕು ಸಂಜೀವಿನಿ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟ, ಪಿಲಾತಬೆಟ್ಟು ಇವುಗಳ ಆಶ್ರಯದಲ್ಲಿ ಮಹಿಳಾ ಕಿಸಾನ್ ಸಶಕ್ತೀಕರಣ ಪರಿಯೋಜನೆ - ಸಮಗ್ರ ಕೃಷಿ ಸಮೂಹ ಯೋಜನೆಯಡಿ 'ಜೀವನೋಪಾಯ ಸೇವಾ ಕೇಂದ್ರ'ದ ಉದ್ಘಾಟನಾ ಕಾರ್ಯಕ್ರಮ ಪಿಲಾತಬೆಟ್ಟು ಗ್ರಾಮ ಪಂಚಾಯತ್ ವ್ಯಾಪ್ತಿಯ ನಯನಾಡಿನಲ್ಲಿ ಗುರುವಾರ ನಡೆಯಿತು.

ಬಂಟ್ವಾಳ ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಸಚಿನ್ ಕುಮಾರ್ ಅವರು ಜೀವನೋಪಾಯ ಸೇವಾ ಕೇಂದ್ರವನ್ನು ಉದ್ಘಾಟಿಸಿ, ಹಿಟ್ಟಿನ ಗಿರಣಿ ಘಟಕ ಹಾಗೂ ತೆಂಗಿನ ನಾರು ಸಂಸ್ಕರಣಾ ಯಂತ್ರಗಳನ್ನು ಲೋಕಾರ್ಪಣೆಗೊಳಿಸಿದರು.

ಬಳಿಕ ಮಾತನಾಡಿದ ಅವರು, ರಾಜ್ಯದಲ್ಲೇ ಮೊದಲಿಗೆ ಆರಂಭಗೊಂಡಿರುವ ಈ ಜೀವನೋಪಾಯ ಸೇವಾ ಕೇಂದ್ರವು ಚಟುವಟಿಕೆಗಳಲ್ಲಿಯೂ ಮಾದರಿಯಾಗಬೇಕು, ಗ್ರಾಮೀಣ ಮಹಿಳೆಯರ ಸ್ವಾವಲಂಬಿ ಬದುಕಿಗೆ ಹಾಗೂ ಆರ್ಥಿಕ ಸಬಲೀಕರಣಕ್ಕೆ ಇಂತಹ ಕೇಂದ್ರಗಳು ಮಹತ್ವದ ವೇದಿಕೆಯಾಗಲಿವೆ ಎಂದು ಹೇಳಿದರು.



ಸಂಜೀವಿನಿ- ಎನ್‌ಆರ್‌ಎಲ್‌ಎಂ ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರಾದ ಹರಿಪ್ರಸಾದ್ ಮಾತನಾಡಿ, ಸಮಗ್ರ ಕೃಷಿ ಸಮೂಹ ಯೋಜನೆಯಡಿ ಆರಂಭವಾದ ಈ ಸೇವಾ ಕೇಂದ್ರವು ಮಹಿಳಾ ರೈತರಿಗೆ ಕೃಷಿ ಆಧಾರಿತ ಉದ್ಯಮ, ಮೌಲ್ಯವರ್ಧನೆ, ಉತ್ಪನ್ನಗಳ ಸಂಸ್ಕರಣೆ ಹಾಗೂ ಮಾರುಕಟ್ಟೆ ಸಂಪರ್ಕಕ್ಕೆ ಸಹಕಾರಿಯಾಗಲಿದೆ ಎಂದರು.

ಪಿಲಾತಬೆಟ್ಟು ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟದ ಅಧ್ಯಕ್ಷರಾದ ಶಶಿಕಲಾ ಪಿ. ರಾವ್ ಅವರು ಅಧ್ಯಕ್ಷತೆ ವಹಿಸಿದ್ದರು

ಪಿಲಾತಬೆಟ್ಟು ಗ್ರಾ.ಪಂ. ಆಡಳಿತಾಧಿಕಾರಿ ನಾರಾಯಣ್ ಭಟ್, ಮಾಜಿ ಪಂಚಾಯತ್ ಅಧ್ಯಕ್ಷೆ ಶಾರದಾ, ಮಾಜಿ ಪಂಚಾಯತ್ ಸದಸ್ಯರಾದ ಲಕ್ಷ್ಮೀ ನಾರಾಯಣ ಹೆಗ್ಡೆ , ನೆಲ್ವಿಸ್ಟರ್ ಪಿಂಟೋ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಗೀತಾ ಹೆಗ್ಡೆ, ಬಂಟ್ವಾಳ ಸಂಜೀವಿನಿ ಎನ್‌ಆರ್‌ಎಲ್‌ಎಂ ಕೃಷಿಯೇತರ ತಾಲೂಕು ವ್ಯವಸ್ಥಾಪಕ ಪ್ರದೀಪ್ ಕಾಮತ್, ಕೃಷಿ ತಾಲೂಕು ವ್ಯವಸ್ಥಾಪಕರಾದ ಸಾಂಘವಿ, ಗ್ರಾಮ ಪಂಚಾಯತ್ ಸಿಬ್ಬಂದಿಗಳು, ಒಕ್ಕೂಟದ ಪದಾಧಿಕಾರಿಗಳು, ಸಂಜೀವಿನಿ ಸಿಬ್ಬಂದಿಗಳು ಹಾಗೂ ಸಮಗ್ರ ಕೃಷಿ ಸಮೂಹದ ಸದಸ್ಯರು ಉಪಸ್ಥಿತರಿದ್ದರು.

ಒಕ್ಕೂಟದ ಮುಖ್ಯ ಪುಸ್ತಕ ಬರಹಗಾರರಾದ ಸೀತಾ ಕಾರ್ಯಕ್ರಮ ನಿರೂಪಿಸಿದರು. ಬಿ.ಸಿ. ಸಖಿ ಅನುರಾಧ ಸ್ವಾಗತಿಸಿದರು. ಸುಜಾತಾ ಪ್ರಾರ್ಥಿಸಿದರು. ಜಯಂತಿ ವಂದಿಸಿದರು.

> **ಮಹಿಳೆಯರು ಸರ್ಕಾರದ ಯೋಜನೆಗಳು ಹಾಗೂ ಅನುದಾನಗಳನ್ನು ಸಮರ್ಪಕವಾಗಿ ಬಳಸಿಕೊಂಡು ಸಣ್ಣ ಮಟ್ಟದಲ್ಲಿ ಆರಂಭಿಸಿದ ಉದ್ಯಮಗಳನ್ನು ಮುಂದಿನ ದಿನಗಳಲ್ಲಿ ದೊಡ್ಡ ಮಟ್ಟದ ಸ್ವಉದ್ಯೋಗ ಘಟಕವನ್ನಾಗಿ ಬೆಳೆಸಬೇಕು.**
> ■ **ತುಂಗಪ್ಪ ಬಂಗೇರ, ಮಾಜಿ ಸದಸ್ಯ ಜಿಲ್ಲಾ ಪಂಚಾಯತ್**

ಪುತ್ತೂರು ತಾಲೂಕು ಮಟ್ಟದಲ್ಲಿ ದಾಖಲಾತಿ ಆಂದೋಲನ: ಬಿಇಒ

• **ಪುತ್ತೂರು:** ಸರಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿಯನ್ನು ಹೆಚ್ಚಿಸುವ ದೃಷ್ಟಿಯಿಂದ ಪುತ್ತೂರು ತಾಲೂಕು ಮಟ್ಟದಲ್ಲಿ ದಾಖಲಾತಿ ಆಂದೋಲನವನ್ನು ಆಯೋಜಿಸಲಾಗುತ್ತಿದ್ದು, ತಾಲೂಕಿನಲ್ಲಿ ಕಳೆದ ವರ್ಷಕ್ಕಿಂತ ಶೇ.5ರಷ್ಟು ಅಧಿಕ ಸರಕಾರಿ ಶಾಲೆಗೆ ದಾಖಲಾತಿಯ ಗುರಿ ಹೊಂದಲಾಗಿದೆ ಎಂದು ಪುತ್ತೂರು ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿ ವಿಷ್ಣುಪ್ರಸಾದ್ ಸಿ. ತಿಳಿಸಿದರು.

ಅವರು ಗುರುವಾರ ಪುತ್ತೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಶಿಕ್ಷಣದಿಂದ ಯಾವುದೇ ಮಗು ವಂಚಿತವಾಗಬಾರದು ಹಾಗೂ ಸರಕಾರಿ ಶಾಲೆಗಳಲ್ಲಿ ದಾಖಲಾತಿಯನ್ನು ಹೆಚ್ಚಿಸುವ ದೃಷ್ಟಿಯಿಂದ ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಸರಕಾರಿ ಶಾಲೆಗಳಲ್ಲಿ ಸಿಗುವ ಗುಣಮಟ್ಟದ ಶಿಕ್ಷಣದ ಜತೆಗೆ ವಿವಿಧ ಸೌಲಭ್ಯಗಳ ಕುರಿತು ಪೋಷಕರ ಮನವೊಲಿಸಿ ಮಕ್ಕಳನ್ನು ಸರಕಾರಿ ಶಾಲೆಗಳಿಗೆ ಸೇರಿಸುವ ಪ್ರಯತ್ನ ಮಾಡಲಾಗುತ್ತಿದೆ. ರಾಜ್ಯದ ಆಯ್ದ 15 ಜಿಲ್ಲೆಗಳಲ್ಲಿ ದ್ವಿಭಾಷಾ ಬೋಧನಾ ಕಲಿಕೆಯನ್ನು ಸರಕಾರ ಜಾರಿ ಮಾಡಿದ್ದು, ದ.ಕ. ಜಿಲ್ಲೆಯ ಎಲ್ಲಾ ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ದ್ವಿಭಾಷಾ ಬೋಧನೆ ಅನುಷ್ಠಾನಗೊಳ್ಳಲಿದೆ. ಈ ಬಾರಿ ತಾಲೂಕಿನಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಮಕ್ಕಳ ಸಾಧನೆ ಉತ್ತಮವಾಗಿದ್ದು, ಶೇ.98.58 ಉತ್ತೀರ್ಣತೆ ದಾಖಲಾಗಿದೆ. ಸರಕಾರಿ ಶಾಲೆಗಳ ಫಲಿತಾಂಶದಲ್ಲಿ ಶೇ.96 ತೇರ್ಗಡೆ ದಾಖಲಾಗಿದ್ದು, 23ರ ಪೈಕಿ 14 ಸರಕಾರಿ ಶಾಲೆಗಳು ಶೇ.100 ಉತ್ತೀರ್ಣತೆ ದಾಖಲಿಸಿವೆ ಎಂದು ಅವರು ಹೇಳಿದರು.

ತಾಲೂಕಿನ 23 ಸರಕಾರಿ ಶಾಲೆಗಳಲ್ಲಿ ಸರಕಾರದ ವತಿಯಿಂದಲೇ ಎಲ್‌ಕೆಜಿ-ಯುಕೆಜಿ ತರಗತಿಗಳನ್ನು ನಡೆಸಲಾಗುತ್ತಿದ್ದು, 2 ಕೆಪಿಎಸ್ ಶಾಲೆಗಳು, 3 ಪಿಎಂಶ್ರೀ ಶಾಲೆಗಳು ಕಾರ್ಯಾಚರಿಸುತ್ತಿವೆ. 210 ಶಿಕ್ಷಕರ ಕೊರತೆ ಇದ್ದು, ಅದನ್ನು ಜೂನ್ ಪ್ರಾರಂಭದಲ್ಲೇ ಅತಿಥಿ ಶಿಕ್ಷಕರ ನೇಮಕದ ಮೂಲಕ ಭರ್ತಿ ಮಾಡಲಾಗುತ್ತದೆ. ಸರಕಾರಿ ಶಾಲೆಗಳ ಕಟ್ಟಡಗಳ ದುರಸ್ತಿಗೆ ಸಂಬಂಧಿಸಿ ರೂ.90 ಲಕ್ಷ ಮೊತ್ತದ ಕ್ರಿಯಾ ಯೋಜನೆ ಕಳುಹಿಸಲಾಗಿದ್ದು, 52 ಕೊಠಡಿಗಳ ದುರಸ್ತಿಯ ಬೇಡಿಕೆ ಇದೆ ಎಂದು ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪ್ರಭಾರ ಕ್ಷೇತ್ರ ಸಮನ್ವಯಾಧಿಕಾರಿ ನವೀನ್ ಸ್ಟೀಫನ್, ಪ್ರಭಾರ ದೈಹಿಕ ಶಿಕ್ಷಣ ಪರಿವೀಕ್ಷಕ ಚಕ್ರಪಾಣಿ ಎ.ವಿ, ಶಿಕ್ಷಣ ಸಂಯೋಜಕ ಹರಿಪ್ರಸಾದ್ ಉಪಸ್ಥಿತರಿದ್ದರು.

ಕೊಡವೂರು ದೇವಸ್ಥಾನದಲ್ಲಿ ಮಹಾರುದ್ರಯಾಗ

ಅದ್ದೂರಿ ಹೊರೆಕಾಣಿಕೆ ಮೆರವಣಿಗೆ



• **ಉಡುಪಿ:** ಕೊಡವೂರು ಶಂಕರನಾರಾಯಣ ದೇವಸ್ಥಾನದಲ್ಲಿ ಪ್ರಸಾದ್ ರಾಜ್ ಕಾಂಚನ್ ನೇತೃತ್ವದಲ್ಲಿ ಲೋಕ ಕಲ್ಯಾಣಾರ್ಥ, ನಾಡಿನ ಜನರ ಸುಭಿಕ್ಷೆಗಾಗಿ ಮೇ 19ರವರೆಗೆ ನಡೆಯಲಿರುವ ಮಹಾರುದ್ರಯಾಗದ ಪ್ರಯುಕ್ತ ಅದ್ದೂರಿ ಹಸಿರು ಹೊರೆಕಾಣಿಕೆ ಮೆರವಣಿಗೆ ಗುರುವಾರ ಸಂಜೆ ಅದ್ದೂರಿಯಾಗಿ ನಡೆಯಿತು.

ಮಲ್ಪೆ ಅಯ್ಯಪ್ಪ ಮಂದಿರದಲ್ಲಿ ಬ್ರಹ್ಮಶ್ರೀ ಆನಂದ ಸಿದ್ಧ ಪೀಠದ ಸಂಸ್ಥಾಪಕರಾದ ಶ್ರೀ ಮಹರ್ಷಿ ಆನಂದ ಗುರೂಜಿ ಪೂಜೆ ಸಲ್ಲಿಸಿ, ಬಳಿಕ ಕೇಸರಿ ಬಾವುಟ ಹಾರಿಸುವುದರ ಮೂಲಕ ಹಸಿರು ಹೊರೆ ಕಾಣಿಕೆ ಮೆರವಣಿಗೆಗೆ ಚಾಲನೆ ನೀಡಿದರು.

ಬಳಿಕ ಆರಂಭಗೊಂಡ ವೈಭವದ ಮೆರವಣಿಗೆ ಕೊಡುವೂರು ದೇವಸ್ಥಾನಕ್ಕೆ ಬಂದು ತಲುಪಿತು. ಮೆರವಣಿಯುದ್ದಕ್ಕೂ ಕೊಂಬು, ವಾದ್ಯ, ನಾಸಿಕ್ ಬ್ಯಾಂಡ್, ಡೋಲು, ಯಕ್ಷಗಾನ ವೇಷಧಾರಿಗಳು, ತಟ್ಟಿರಾಯ, ಕಲ್ಲಡ್ಕ ಗೊಂಬೆಗಳು, ಕೀಲು ಕುದುರೆ, ಹುಲಿವೇಷಧಾರಿ, ಕುಣಿತ ಭಜನೆ ಹಾಗೂ ವಿವಿಧ ಆಕರ್ಷಕ ಟ್ಯಾಬ್ಲೋಗಳು, ಜಾನಪದ ಕಲಾವಿದರು ಗಮನಸೆಳೆದರು. ಕಲಶ ಕೈ ಹಿಡಿದುಕೊಂಡು ರಸ್ತೆಯುದ್ದಕ್ಕೂ ಸಾಗಿಬಂದ ಮಹಿಳೆಯರು ಮೆರವಣಿಗೆಗೆ ಮತ್ತಷ್ಟು ಮೆರುಗು ನೀಡಿದರು.

ಮಹಾ ರುದ್ರಯಾಗ ಸಮಿತಿಯ ಕಾರ್ಯಾಧ್ಯಕ್ಷ ಪ್ರಸಾದ್ ರಾಜ್ ಕಾಂಚನ್, ಉದ್ಯಮಿ ಹರಿಯಪ್ಪ ಕೋಟ್ಯಾನ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನಕರ ಹೇರೂರು, ಕೊಡವೂರು ಶಂಕರನಾರಾಯಣ ದೇವಸ್ಥಾನದ ಅಧ್ಯಕ್ಷ ಪ್ರಕಾಶ್ ಜಿ. ಕೊಡವೂರು, ಮಹಾರುದ್ರ ಯಾಗ ಸಮಿತಿಯ ಪ್ರಧಾನ ಸಂಚಾಲಕ ತಾರನಾಥ ಪೂಜಾರಿ, ಕೆ. ಕೃಷ್ಣಮೂರ್ತಿ ಆಚಾರ್ಯ, ಸಂಚಾಲಕರಾದ ನಂದಕಿಶೋರ್ ಕೆಮ್ಮಣ್ಣು ರಮೇಶ್ ತಿಂಗಳಾಯ, ಜಯ ಕೊಡವೂರು, ಶ್ರೀಜಿತ್ ಕೊಡವೂರು, ಪ್ರಖ್ಯಾತ್ ಶೆಟ್ಟಿ, ಯತೀಶ್ ಕರ್ಕೇರಾ ಮೊದಲಾದ ಗಣ್ಯರು ಉಪಸ್ಥಿತರಿದ್ದರು.

ಶ್ರೀಕ್ಷೇತ್ರ ಹನುಮಗಿರಿ, ಅಮರಗಿರಿಗೆ ಶೃಂಗೇರಿ ಶ್ರೀಗಳ ಭೇಟಿ

ಪ್ರಾಮಾಣಿಕವಾಗಿ ಕೆಲಸ ಮಾಡುವುದು ಧರ್ಮ

• **ಈಶ್ವರಮಂಗಲ:** ಗಡಿಯಲ್ಲಿ ಸೈನಿಕರು ದೇಶ ಸಂರಕ್ಷಣೆಯನ್ನು ಮಾಡುತ್ತಿರುವುದರಿಂದ ನಾವು ಸುರಕ್ಷಿತವಾಗಿದ್ದೇವೆ. ದೇಶದ ಒಳಗಿರುವವರು ತಮ್ಮ ಜವಾಬ್ದಾರಿಯ ಭಾಗವಾಗಿ ಸಾವಧಾನ ಮತ್ತು ಶ್ರದ್ಧೆಯಿಂದ ತಮ್ಮ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುವುದು ಧರ್ಮವಾಗಿದೆ. ಇದರಿಂದ ದೇಶ ಸುಭಿಕ್ಷೆಯಾಗುತ್ತದೆ. ಧರ್ಮ ಮತ್ತು ಸೈನಿಕರು ದೇಶದ ಎರಡು ಕಣ್ಣುಗಳು ಎಂದು ಶೃಂಗೇರಿ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ಹೇಳಿದರು.

ಅವರು ಹನುಮಗಿರಿ ಶ್ರೀ ಕೋದಂಡರಾಮ ಪಂಚಮುಖಿ ಆಂಜನೇಯ ಕ್ಷೇತ್ರ ಮತ್ತು ಅಮರಗಿರಿಗೆ ಭೇಟಿ ನೀಡಿ ಧರ್ಮ ಸಂದೇಶವನ್ನು ನೀಡಿದರು. ದೇವರ ಸ್ಮರಣೆ, ಸಂಕೀರ್ತನೆ, ಭಜನೆ ಮುಂತಾದವುಗಳಿಂದ ಪುಣ್ಯ ದೊರೆಯುತ್ತದೆ, ಸನಾತನ ಹಿಂದೂ ಧರ್ಮದ ಬಗ್ಗೆ ಅಧ್ಯಯನ ಮಾಡಿದಾಗ ಹಲವು ವಿಷಯಗಳು ತಿಳಿಯುತ್ತವೆ. ಇವುಗಳನ್ನು ಸಮಾಜಕ್ಕೆ ತಿಳಿಸುವ ಕಾರ್ಯ ಆಗಬೇಕು. ಧರ್ಮದ ಆಚರಣೆ ಜೊತೆ ರಕ್ಷಣೆ ಪ್ರತಿಯೊಬ್ಬರ ಕರ್ತವ್ಯ ಕೂಡ ಹೌದು. ಮಕ್ಕಳನ್ನು ಧಾರ್ಮಿಕ ಚಿಂತನೆಯಲ್ಲಿ ತೊಡಗಿಸಿಕೊಳ್ಳುವ ಅನಿವಾರ್ಯತೆ ಇದೆ ಎಂದರು.

ಬ್ರಹ್ಮಶ್ರೀ ಕುಂಟಾರು ರವೀಶ್ ತಂತ್ರಿ ಉಪಸ್ಥಿತರಿದ್ದರು. ಹನುಮಗಿರಿ ಧರ್ಮಶ್ರೀ ಪ್ರತಿಷ್ಠಾನದ ಮಹಾಪೋಷಕ ಜಿ.ಕೆ. ಮಹಾಬಲೇಶ್ವರ ಭಟ್ ಮತ್ತು ನಾರಾಯಣಿ ಅಮ್ಮನವರು ಫಲ ಪುಷ್ಪ ನೀಡಿ ಗೌರವಿಸಿದರು. ಅಮರ ಗಿರಿಯ ಬಗ್ಗೆ ಹಸ್ತಕ್ಷರ ನೀಡಿ ಸಂತಸ ವ್ಯಕ್ತಪಡಿಸಿದರು. ನ್ಯಾಯವಾದಿ ಮಹೇಶ್ ಕಜೆ ಕಾರ್ಯಕ್ರಮ ನಿರ್ವಹಿಸಿದರು. ಸಂಜೆ ಕ್ಷೇತ್ರದಲ್ಲಿ ಕುಣಿತ ಭಜನೆಗೆ ನಿವೃತ್ತ ಶಿಕ್ಷಕ ನಾರಾಯಣ ಭಟ್ ಚಾಲನೆ ನೀಡಿದರು.

ಅಮರಗಿರಿಯಲ್ಲಿ ಶೃಂಗೇರಿ ಶ್ರೀಗಳನ್ನು ಪೂರ್ಣಕುಂಭ, ವೇದಘೋಷದೊಂದಿಗೆ ಸ್ವಾಗತಿಸಲಾಯಿತು. ಕನ್ನಡ್ಕ ನಾಗರಾಜ್ ಭಟ್ ಅವರು ಶ್ರೀಗಳ ಧೂಳಿ ಪೂಜೆ ನೆರವೇರಿಸಿದರು. ಕೋದಂಡ ರಾಮ ಕ್ಷೇತ್ರದಲ್ಲಿ, ಪಂಚಮುಖಿ ಆಂಜನೇಯ ಕ್ಷೇತ್ರದಲ್ಲಿ ಪೂಜೆ ನೆರವೇರಿಸಿದರು. ಕ್ಷೇತ್ರದ ಆಡಳಿತ ಧರ್ಮದರ್ಶಿ ನನ್ಯ ಅಚ್ಚುತ ಮೂಡೆತ್ತಾಯ ಅವರು ಕ್ಷೇತ್ರದ ಬಗ್ಗೆ ಮಾಹಿತಿ ನೀಡಿದರು. ಧರ್ಮದರ್ಶಿಗಳಾದ ಶಿವರಾಮ್ ಪಿ., ಶಿವರಾಮ್ ಶರ್ಮ, ಪ್ರಮುಖರಾದ ಶ್ರೀಕೃಷ್ಣ ಭಟ್ ಮುಂಡ್ಯ, ನಾಗಪ್ಪ ಗೌಡ ಬೊಮ್ಮೆಟ್ಟಿ, ಭರತೇಶ್ ರೈ ಮುಡಾಯೂರು, ನಿತ್ಯಾನಂದ ಭಟ್ ಮೂನಡ್ಕ, ನಹುಷ್, ಆರ್.ಸಿ. ನಾರಾಯಣ, ಸೀತಾರಾಮ ರೈ ಕೆದಂಬಾಡಿಗುತ್ತು, ರವಿ ಕಿರಣ್ ಶೆಟ್ಟಿ, ಸವಿತಾ ರೈ ನೆಲ್ಲಿತ್ತಡ್ಕ, ಜಯಾನಂದ ಕುಳ, ನವೀನ್ ಕುಕ್ಕುಡೇಲು, ತೇಜಸ್ವಿನಿ, ರಾಜೇಂದ್ರ ರೈ, ಕಮಲಾಕ್ಷ ಅನಡ್ಕ, ಸೀತಾರಾಮ ರೈ, ಆನಂದ್ ರೈ ಸಾಂತ್ಯ, ರಾಮಣ್ಣ ನಾಯ್ಕ, ರಾಕೇಶ್, ಸುನಿಲ್ ಹನುಮಗಿರಿ ಮತ್ತಿತರರು ಉಪಸ್ಥಿತರಿದ್ದರು.



ರಾಷ್ಟ್ರ ಧ್ವಜ ಅನಾವರಣ
ಮಾಜಿ ಸೈನಿಕ ಪ್ರವೀಣ್ ನೀರಲಿಕೆ ನೀಡಿದ ರಾಷ್ಟ್ರ ಧ್ವಜವನ್ನು ಶೃಂಗೇರಿ ಶ್ರೀಗಳು ಅಮರಗಿರಿಯಲ್ಲಿ ಯೋಧನ ಸ್ಮಾರಕದಲ್ಲಿ ಅನಾವರಣಗೊಳಿಸಿದರು.

ಮನೆಗಳಿಗೆ ಗ್ಯಾಸ್ ಸಂಪರ್ಕ, ಮೋಟಾರು ವಾಹನಗಳಿಗೆ ಸಿಎನ್‌ಜಿ ವಿತರಣೆ ಕುರಿತು ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಭೆ

ಪೈಪ್‌ಲೈನ್ ಕಾಮಗಾರಿ ಶೀಘ್ರ ಮುಗಿಯಲಿ: ಸಂಸದ ಕೋಟ

• **ಉಡುಪಿ:** ಮನೆ ಮನೆಗೆ ಪೈಪ್‌ಲೈನ್ ಮೂಲಕ ಪಿ.ಎನ್.ಜಿ ಗ್ಯಾಸ್ ಸಂಪರ್ಕ ನೀಡುವ ಪೈಪ್‌ಲೈನ್ ಕಾಮಗಾರಿಯನ್ನು ಶೀಘ್ರವಾಗಿ ಮುಕ್ತಾಯಗೊಳಿಸುವುದರೊಂದಿಗೆ ಉಡುಪಿ ನಗರದ ಸಾರ್ವಜನಿಕರಿಗೆ ಗ್ಯಾಸ್ ಸಂಪರ್ಕ ಒದಗಿಸಬೇಕು ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಸೂಚನೆ ನೀಡಿದರು.

ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮನೆ ಮನೆಗೂ ಪೈಪ್ ಲೈನ್ ಮೂಲಕ ಗ್ಯಾಸ್ ಸಂಪರ್ಕ ಹಾಗೂ ಮೋಟಾರು ವಾಹನಗಳಿಗೆ ಸಿಎನ್.ಜಿ. ವಿತರಣೆಗೆ ಸಂಬಂಧಿಸಿದಂತೆ ನಡೆದ ಪ್ರಗತಿ ಪರಿಶೀಲನ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಮನೆ ಮನೆಗೆ ಎಲ್.ಪಿ.ಜಿ ಗ್ಯಾಸ್ ಸಂಪರ್ಕ ನೀಡುವ ಕಾಮಗಾರಿಯನ್ನು ಕಳೆದ 10 ವರ್ಷಗಳಿಂದ ಕೈಗೊಳ್ಳಲಾಗುತ್ತಿದ್ದು, ಇದುವರೆಗೆ ಕಾಮಗಾರಿ ಪೂರ್ಣಗೊಂಡಿಲ್ಲ. ಮುಂದಿನ ಜೂನ್ ಒಳಗಾಗಿ ಪೈಪ್‌ಲೈನ್ ಕಾಮಗಾರಿ ಮುಗಿಸುವುದರೊಂದಿಗೆ ಸಾರ್ವಜನಿಕರಿಗೆ ಗ್ಯಾಸ್ ಸಂಪರ್ಕ ಒದಗಿಸಲು ಮುಂದಾಗಬೇಕು ಎಂದರು.



ಮನೆ ಮನೆಗೆ ಪೈಪ್‌ಲೈನ್ ಮೂಲಕ ಪಿಎನ್‌ಜಿ ಗ್ಯಾಸ್ ಸಂಪರ್ಕ ಪಡೆಯಲು ಆಸಕ್ತರಿರುವ ಸಾರ್ವಜನಿಕರಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಕುರಿತ ಮಾಹಿತಿಯನ್ನು ಬ್ಯಾನರ್, ಕರಪತ್ರ ಹಾಗೂ ಸೋಷಿಯಲ್ ಮೀಡಿಯಾ ಮೂಲಕ ಪ್ರಚುರ ಪಡಿಸುವಂತೆ ಅನಿಲ ಕಂಪೆನಿ ಪ್ರತಿನಿಧಿಗಳಿಗೆ ತಿಳಿಸಿದ ಅವರು, ಜಿಲ್ಲೆಯ ನಗರ ಸಭಾ ವ್ಯಾಪ್ತಿಯಲ್ಲಿ ಅಂದಾಜು 35000 ಮನೆಗಳಿಗೆ ಅನಿಲ ಸರಬರಾಜು ಆಗಬೇಕಾಗಿದ್ದು ಪ್ರಸ್ತುತ 1500 ಮನೆಗಳಿಗೆ ಪೈಪ್‌ಲೈನ್ ಸಿದ್ಧವಾಗಿರುವುದಾಗಿ ಸಭೆಗೆ ಮಾಹಿತಿ ನೀಡಿದರು.

ಜಿಲ್ಲೆಗೆ ಹೆಚ್ಚುವರಿಯಾಗಿ ಸಿಎನ್.ಜಿ ಗ್ಯಾಸ್ ಸಾಗಾಣಿಕೆ ಮಾಡಲು 4 ಜಂಬೋ ವಾಹನವನ್ನು ಒದಗಿಸಿದ್ದಲ್ಲಿ ಸಮಸ್ಯೆ ನಿವಾರಣೆಯಾಗಲಿದೆ. ಈ ಬಗ್ಗೆ ಕ್ರಮವಹಿಸುವಂತೆ ಅನಿಲ ಕಂಪನಿಗಳಿಗೆ ತಿಳಿಸಿದರು.

ಪಣಂಬೂರಿನ ಎಟಿಜಿಎಲ್ ಟರ್ಮಿನಲ್‌ವರೆಗೆ ಪೈಪ್‌ಲೈನ್ ಅಳವಡಿಸುವ ಕೆಲಸ ಈ ತಿಂಗಳ ಅಂತ್ಯದ ವೇಳೆಗೆ ಪೂರ್ಣಗೊಳ್ಳಲಿದ್ದು, ನಂತರ, ಲೈನ್ ಚಾರ್ಜ್ ಮಾಡಲು ಅನುಮೋದನೆಗಾಗಿ ಅರ್ಜಿಯನ್ನು ಸಲ್ಲಿಸಲಾಗುತ್ತದೆ. ಅವರ ಅನುಮತಿ ಪಡೆದ ನಂತರ, ಎಟಿಜಿಎಲ್ ಸಿದ್ಧತೆಗೆ ಒಳಪಟ್ಟು ಅನಿಲವನ್ನು ವಿಧಿಸಲಾಗುತ್ತದೆ ಮತ್ತು ಪೂರೈಕೆಯನ್ನು ಪ್ರಾರಂಭಿಸಬಹುದು ಎಂದು ಸಭೆಗೆ ಗೇಲ್ ಸಂಸ್ಥೆಯವರು ತಿಳಿಸಿದರು.


ಜಿಲ್ಲೆಯಲ್ಲಿ ಪ್ರಸ್ತುತ 11 ಸಿಎನ್‌ಜಿ ವಿತರಣಾ ಘಟಕವಿದ್ದು ಹೊಸದಾಗಿ ಮುನಿಯಾಲು, ಎರ್ಮಾಳು ಪ್ರದೇಶದಲ್ಲಿ ಹೊಸ ಸಿಎನ್‌ಜಿ ವಿತರಣಾ ಘಟಕ ಮಂಜೂರು ಮಾಡಲು ಪತ್ರ ಬರೆದಿರುವುದಾಗಿದೆ ಸಂಸದರು ತಿಳಿಸಿದರು.

ಸಿಎನ್‌ಜಿ ಗ್ಯಾಸ್ ವಿತರಕರು ಮೆಸ್ಕಾಂ ಬಿಲ್‌ಗಳನ್ನು ಮರುಪಾವತಿಸಲು ಅದಾನಿ ಕಂಪೆನಿಯವರು 3 ರಿಂದ 4 ತಿಂಗಳು ವಿಳಂಬ ಮಾಡುತ್ತಿದ್ದಾರೆಂದು ದೂರು ಬಂದಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳಲು ಅನಿಲ ಕಂಪೆನಿಯವರಿಗೆ ಸಂಸದರು ಸೂಚಿಸಿದರು.

ಜಿಲ್ಲಾಧಿಕಾರಿ ಸ್ವರೂಪ ಟಿ. ಕೆ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕ ರವೀಂದ್ರ, ಅದಾನಿ ಹಾಗೂ ಗೇಲ್ ಕಂಪನಿ ಪದಾಧಿಕಾರಿಗಳು ಮತು ಸಿಎನ್‌ಜಿ ವಿತರಣಾ ಬಂಕ್ ಮಾಲಕರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಎಫ್‌ಐಎಫ್‌ಒ ನಿಯಮ ಪಾಲಿಸಿ

ಪ್ರಸ್ತುತ ಸಮಾರಂಭಗಳು ಹೆಚ್ಚಾಗಿರುವ ಹಿನ್ನೆಲೆ, ಬೇಡಿಕೆಗೆ ಅನುಗುಣವಾಗಿ ಸಿಎನ್‌ಜಿ ಗ್ಯಾಸ್ ಪೂರೈಕೆಗೆ ಈಗಿರುವ 17 ಟ್ರಕ್‌ಗಿಂತ ಹೆಚ್ಚು ವಾಹನ ನೀಡಬೇಕೆಂದು ಸಿಎನ್‌ಜಿ ಗ್ಯಾಸ್ ವಿತರಕರು ಸಭೆಯ ಗಮನಕ್ಕೆ ತಂದರು, ಇದಕ್ಕೆ ಪ್ರತಿಕ್ರಿಯಿಸಿದ ಸಂಸದರು ಅದಾನಿ ಮತ್ತು ಗೇಲ್ ಕಂಪನಿಯವರು ಹೊಂದಾಣಿಕೆಯಿಂದ ಕೆಲಸ ನಿರ್ವಹಿಸುವಂತೆ, ಜಿಲ್ಲೆಗೆ 10 ಹೆಚ್ಚುವರಿ ಲೋಡ್ ಗಳ ಸಿ.ಎನ್.ಜಿ. ಒದಗಿಸಲು ಕ್ರಮ ವಹಿಸುವಂತೆ ಹಾಗೂ ಇಂಧನವನ್ನು ಲೋಡ್ ಮಾಡುವಾಗ ಎಫ್‌ಐಎಫ್‌ಒ ನಿಯಮವನ್ನು ಪಾಲಿಸುವಂತೆ ಸೂಚಿಸಿದರು.



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ	12	8	4	0	16	+1.065
ಗುಜರಾತ್	12	8	4	0	16	+0.551
ಹೈದರಾಬಾದ್	12	7	5	0	14	+0.331
ಪಂಜಾಬ್	11	6	4	1	13	+0.428
ಚೆನ್ನೈ	11	6	5	0	12	+0.185
ರಾಜಸ್ಥಾನ	11	6	5	0	12	+0.082
ದಿಲ್ಲಿ	12	5	7	0	10	-0.993
ಕೆಕೆಆರ್	11	4	6	1	9	-0.198
ಮುಂಬೈ	10	3	7	0	6	-0.649
ಲಖನೌ	11	3	8	0	6	-0.907

ಕಿರುಸುದ್ದಿ

ಜೂ. ಹಾಕಿ ತಂಡಕ್ಕೆ ಫ್ರೆಡೆರಿಕ್ ಕೋಚ್

ಹೊಸದಿಲ್ಲಿ: ರಾಷ್ಟ್ರೀಯ ಜೂನಿಯರ್ ಪುರುಷರ ಹಾಕಿ ತಂಡದ ಮುಖ್ಯ ಕೋಚ್ ಆಗಿ ಫ್ರೆಂಚ್ ಆಟಗಾರ ಫ್ರೆಡೆರಿಕ್ ಸೋಯೆಜ್ ಅವರನ್ನು ನೇಮಕ ಮಾಡಿದೆ. ಎರಡು ಬಾರಿ ಒಲಿಂಪಿಕ್ ಪದಕ ವಿಜೇತ ಪಿ.ಆರ್. ಶ್ರೀಜೇಶ್ ಅವರಿಗೆ ದೊಡ್ಡ ಶಾಕ್ ನೀಡಿದೆ. ಮಾಜಿ ಸ್ಟಾರ್ ಗೋಲ್‌ಕೀಪರ್ ಆಗಿದ್ದ ಶ್ರೀಜೇಶ್ ಅವರನ್ನು ಕಳೆದ ವರ್ಷ ಚೆನ್ನೈ ಮತ್ತು ಮಧುರೈನಲ್ಲಿ ನಡೆದ ಎಫ್‌ಐಎಚ್ ಜೂನಿಯರ್ ವಿಶ್ವಕಪ್‌ನಲ್ಲಿ ಭಾರತ ಕಂಚಿನ ಪದಕ ಗೆಲ್ಲಲು ಕಾರಣರಾದ ನಂತರ, ಅವರ ಒಪ್ಪಂದದ ಅವಧಿ ಮುಗಿದ 17 ತಿಂಗಳ ನಂತರ ಅವರನ್ನು ಕೆಳಗಿಳಿಸಲಾಗಿದೆ. ಸಾಮಾಜಿಕ ಮಾಧ್ಯಮದಲ್ಲಿ ತಮ್ಮ ಅಧಿಕಾರಾವಧಿಯಲ್ಲಿ ಹಲವಾರು ಪಂದ್ಯಾವಳಿಗಳಲ್ಲಿ ಐದು ಪದಕಗಳನ್ನು ಗೆದ್ದಿದ್ದರೂ ತಮ್ಮ ಅಧಿಕಾರಾವಧಿ ಕೊನೆಗೊಂಡಿದೆ ಎಂದು ಶ್ರೀಜೇಶ್ ತಮ್ಮ ಹತಾಶೆ ಹೊರಹಾಕಿದ್ದಾರೆ. ಆದರೆ 2036 ರ ಒಲಿಂಪಿಕ್ ಕ್ರೀಡಾಕೂಟವನ್ನು ಆಯೋಜಿಸುವ ಭಾರತದ ಮಹತ್ವಾಕಾಂಕ್ಷೆಗಳಿಗೆ ಅನುಗುಣವಾಗಿ ಸುಸ್ಥಿರ ಉನ್ನತ-ಕಾರ್ಯಕ್ಷಮತೆಯ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವ ದೀರ್ಘಾವಧಿಯ ದೃಷ್ಟಿಕೋನವನ್ನು ಪರಿಗಣಿಸಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಹಾಕಿ ಇಂಡಿಯಾ ವಾದಿಸಿದೆ. ಯುರೋಪಿಯನ್ ಹಾಕಿಯಲ್ಲಿ ಅತ್ಯಂತ ಸಾಧನೆಗೈದ ತರಬೇತುದಾರರಲ್ಲಿ ಒಬ್ಬರಾದ ಸೋಯೆಜ್, ಫ್ರಾನ್ಸ್‌ಗೆ 15 ವರ್ಷ ಅಂತರರಾಷ್ಟ್ರೀಯ ಆಟಗಾರನಾಗಿ ಮತ್ತು 15 ವರ್ಷಗಳಿಗೂ ಹೆಚ್ಚು ಕಾಲ ಉನ್ನತ ಮಟ್ಟದಲ್ಲಿ ಮುಖ್ಯ ಕೋಚ್ ಆಗಿ ಮೂರು ದಶಕಗಳಿಗೂ ಹೆಚ್ಚು ಕಾಲದ ಗಣ್ಯ ತರಬೇತಿ ಅನುಭವವನ್ನು ಹೊಂದಿದ್ದಾರೆ.

ಪ್ರಜ್ಞಾನಂದಗೆ ಅಲಿರೆಝಾ ಎದುರಾಳಿ



ಹೊಸದಿಲ್ಲಿ: ಗ್ರ್ಯಾಂಡ್ ಚೆಸ್ ಟೂರ್‌ನ ಭಾಗವಾಗಿರುವ ಬುಕಾರೆಸ್ಟ್ ಸೂಪರ್ ಚೆಸ್ ಕ್ಲಾಸಿಕ್ ಟೂರ್ನಿಯ ಮೊದಲ ಸುತ್ತಿನಲ್ಲಿ ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್. ಪ್ರಜ್ಞಾನಂದ ಫ್ರಾನ್ಸ್‌ನ ಅಲಿರೆಝಾ ಫಿರೋಜ್ಜಾ ವಿರುದ್ಧ ಆಡಲಿದ್ದಾರೆ. ವಿಶ್ವ ಚಾಂಪಿಯನ್ ಡಿ. ಗುಕೇಶ್ ಈ ವರ್ಷದ ಕ್ಲಾಸಿಕಲ್ ಮಾದರಿಯಿಂದ ಹಿಂದೆ ಸರಿದ ಹಿನ್ನೆಲೆಯಲ್ಲಿ, ಟೂರ್ನಿಯಲ್ಲಿ ಭಾರತದಿಂದ ಏಕೈಕ ಆಟಗಾರನಾಗಿ ಪ್ರಜ್ಞಾನಂದ ಸ್ಪರ್ಧಿಸುತ್ತಿದ್ದಾರೆ. 10 ಆಟಗಾರರ ರೌಂಡ್-ರಾಬಿನ್ ಮಾದರಿಯ ಈ ಟೂರ್ನಿಯಲ್ಲಿ ಅವರಿಗೆ ಒಂಬತ್ತು ಸುತ್ತುಗಳಲ್ಲಿ ಐದು ಬಾರಿ ಬಿಳಿ ಗೂಟಗಳೊಂದಿಗೆ ಆಡಲು ಅವಕಾಶ ದೊರೆತಿದೆ. ಟೂರ್ನಿಯ ಒಟ್ಟು ಬಹುಮಾನ ಮೊತ್ತ 3.5 ಲಕ್ಷ ಅಮೆರಿಕನ್ ಡಾಲರ್ ಆಗಿದ್ದು, ಹೆಚ್ಚುವರಿಯಾಗಿ 1.25 ಲಕ್ಷ ಡಾಲರ್ ಬೋನಸ್ ಕೂಡ ಇದೆ. ಚಾಂಪಿಯನ್‌ಗೆ 1 ಲಕ್ಷ ಡಾಲರ್ ಬಹುಮಾನ ಸಿಗಲಿದೆ. ಏಪ್ರಿಲ್‌ನಲ್ಲಿ ನಡೆದ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಸಾಧಾರಣ ಪ್ರದರ್ಶನ ನೀಡಿದ್ದ ಪ್ರಜ್ಞಾನಂದ ಇದೀಗ ವಿಶ್ವ ರ‍್ಯಾಂಕಿಂಗ್‌ನ ನೇರ ಪಟ್ಟಿಯಲ್ಲಿ 16ನೇ ಸ್ಥಾನಕ್ಕೆ ಕುಸಿದಿದ್ದಾರೆ. ಈ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡಿ ಮರಳಿ ಲಯ ಕಂಡುಕೊಳ್ಳುವ ನಿರೀಕ್ಷೆಯಿದೆ. ಅಮೆರಿಕದ ಫ್ಯಾಬಿಯಾನೊ ಕಾರುವಾನಾ ಅಗ್ರ ಶ್ರೇಯಾಂಕಿತರಾಗಿ ಟೂರ್ನಿಗೆ ಪ್ರವೇಶಿಸಿದ್ದು, ಮೊದಲ ಸುತ್ತಿನಲ್ಲಿ ನೆದರ್‌ಲ್ಯಾಂಡ್ಸ್‌ನ ಜೋರ್ಡನ್ ವಾನ್ ಫೊರೆಸ್ಟ್ ಅವರನ್ನು ಎದುರಿಸಲಿದ್ದಾರೆ. ಇತ್ತೀಚೆಗೆ ನಡೆದ ಟೆ ಪೆ ಸೀಗೆಮನ್ ಟೂರ್ನಿಯಲ್ಲಿ ವಿಶ್ವ ನಂ. 1 ಮ್ಯಾಗ್ನಸ್ ಕಾರ್ಲ್‌ಸನ್ ಅವರನ್ನು ಸೋಲಿಸಿದ್ದ ವಾನ್ ಫೊರೆಸ್ಟ್ ಉತ್ತಮ ಫಾರ್ಮ್‌ನಲ್ಲಿದ್ದಾರೆ.ಗುಕೇಶ್ ಹಿಂದೆ ಸರಿದ ಬಳಿಕ ಅವರ ಸ್ಥಾನವನ್ನು ಉಜ್ಬೆಕಿಸ್ತಾನದ ಜಾವೋಖಿರ್ ಸಿಂದಾರೋವ್‌ಗೆ ನೀಡಲಾಗಿತ್ತು. ಬಳಿಕ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಅದ್ಭುತ ಪ್ರದರ್ಶನ ನೀಡಿದ ಸಿಂದಾರೋವ್, ಈ ವರ್ಷದ ಕೊನೆಯಲ್ಲಿ ಗುಕೇಶ್ ವಿರುದ್ಧ ವಿಶ್ವ ಚಾಂಪಿಯನ್‌ಶಿಪ್ ಸ್ಪರ್ಧೆಗೆ ಅರ್ಹತೆ ಗಿಟ್ಟಿಸಿಕೊಂಡರು.

ದಾಖಲೆಗಳ ಸುರಿಮಳೆಗೈದ ವಿರಾಟ್ | ಕೆಕೆಆರ್‌ಗೆ ಸೋಲು | ಆರ್‌ಸಿಬಿ ಪ್ಲೇಆಫ್ ಹಾದಿ ಸುಗಮ

ರಾಯ್ಪುರದಲ್ಲಿ ವಿರಾಟ್ ಕೊಹ್ಲಿ ನಂ.1 ಆಟ

ರಾಯ್ಪುರ: ನಂಬರ್ 1 ಸ್ಥಾನದ ಗುರಿಯಿಟ್ಟು ಕೊಂಡಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಲಖನೌ ಸೂಪರ್ ಜೇಂಟ್ಸ್ ತಂಡದ ವಿರುದ್ಧ ಸೋತಿತು. ಮುಂಬೈ ವಿರುದ್ಧವೂ ಬ್ಯಾಟಿಂಗ್ ಕುಸಿತ ಕಂಡ ನಂತರ ಕೊನೆಯ ಓವರ್ ಥ್ರಿಲ್ಲಿಂಗ್‌ನಲ್ಲಿ ಗೆದ್ದಿತ್ತು. ಇದೇ ಸಮಯದಲ್ಲಿ ಕೊಹ್ಲಿ ಎರಡು ಶೂನ್ಯ ಸುತ್ತಿದ್ದರು. ಅತ್ತ ಗೆಲ್ಲಬೇಕಿದ್ದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್ 193 ರನ್ ಗುರಿ ಕೊಟ್ಟಿತು. ದೊಡ್ಡ ಗುರಿ ಬೆನ್ನತ್ತಿದ ಆರ್‌ಸಿಬಿಗೆ ಆಸರೆ ಯಾರಾಗುತ್ತಾರೆ ಎಂಬ ಪ್ರಶ್ನೆ ಮೂಡುತ್ತಿದ್ದಂತೆ, ಅಬ್ಬರಿಸಿದರು ವಿರಾಟ್ ಕೊಹ್ಲಿ.

ಮೊದಲನೇ ಬಾಲ್‌ನಿಂದ ಪಂದ್ಯದ ಕೊನೆಯ ಬಾಲ್‌ವರೆಗೂ ಬ್ಯಾಟಿಂಗ್ ಮಾಡಿದ ವಿರಾಟ್ ಕೊಹ್ಲಿ ಅಜೇಯ ಶತಕ ಬಾರಿಸಿದರು. ಅವರ ಆಟಕ್ಕೆ ನಲುಗಿದ ಕೆಕೆಆರ್ ಪಂದ್ಯ ಮೇಲಿನ ಆಸೆಯನ್ನೇ ಬಿಟ್ಟಿತು. ಆರ್‌ಸಿಬಿ 19.1 ಓವರ್‌ಗಳಲ್ಲಿ 194 ರನ್ ಗಳಿಸಿತು.



ಅದರಲ್ಲಿ ವಿರಾಟ್ ಒಬ್ಬರೇ 105★ ರನ್ ಗಳಿಸಿದರು. ಪಡಿಕ್ಕಲ್ 39, ಪಾಟಿದಾರ್ 11 ರನ್ ಗಳಿಸಿದರು. ಕೆಕೆಆರ್ ಪರ ಕಾರ್ತಿಕ್ ತ್ಯಾಗಿ 3 ವಿಕೆಟ್ ಪಡೆದರು. ಇದಕ್ಕೂ ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್‌ಗೆ ಅಂಗ್ರಿಶ್ ರಘುವಂಶಿ(71) ಮತ್ತು ರಿಂಕು ಸಿಂಗ್ (49★) ರನ್ ಗಳಿಸಿ ಆಸರೆಯಾಗಿದ್ದರು. ನೂರು ರನ್ ಗಳಿಸಿದ ಕೊಹ್ಲಿ ಪಂದ್ಯದ ಹೀರೋ. ಎರಡು ಡಕ್ ನಂತರ ಅಬ್ಬರಿಸಿದ ಕಿಂಗ್ ಅನಿಸಿದರು. ಪಡಿಕ್ಕಲ್ ಕೊಹ್ಲಿಗೆ ತಕ್ಕ ಸಾಥ್ ಕೊಟ್ಟಿದ್ದೇ ದೊಡ್ಡ ಪಂದ್ಯದ ತಿರುವು. ಅಂಗ್ರಿಶ್, ರಿಂಕು ಮತ್ತು ತ್ಯಾಗಿ ಹೋರಾಟ ನಡೆಸಿದವರಾದರೆ, ಭುವನೇಶ್ವರ್ ಮತ್ತೊಮ್ಮೆ ಆಪದ್ಬಾಂಧವ ಅನಿಸಿದರು.

ಸಂಕ್ಷಿಪ್ತ ಸ್ಕೋರ್

ಕೆಕೆಆರ್ 20 ಓವರ್‌ಗಳಲ್ಲಿ 192/4: ರಘುವಂಶಿ 71, ರಿಂಕು 49★; ಭುವನೇಶ್ವರ್ 34/1
ಆರ್‌ಸಿಬಿ 19.1 ಬಾಲ್‌ಗಳಲ್ಲಿ 194/4: ಕೊಹ್ಲಿ 105★, ಪಡಿಕ್ಕಲ್ 39; ತ್ಯಾಗಿ 39/3

ಆರ್‌ಸಿಬಿ ತಂಡದ ದಾಖಲೆಗಳು

- ಕೆಕೆಆರ್ ವಿರುದ್ಧ ಅತಿ ಹೆಚ್ಚು ರನ್ ಚೇಸ್: 193
- ರಾಯ್ಪುರದಲ್ಲಿ ಅತಿ ಹೆಚ್ಚು ರನ್ ಚೇಸ್

ನಂಬರ್ 1 ಸ್ಥಾನಕ್ಕೆ ಆರ್‌ಸಿಬಿ

ಈ ಗೆಲುವಿನೊಂದಿಗೆ ತನ್ನ ನಂಬರ್ 1 ಪಟ್ಟ ಉಳಿಸಿಕೊಂಡ ಬೆಂಗಳೂರು ಬಹುತೇಕ ಪ್ಲೇಆಫ್‌ಗೇರಿದೆ. ಕೆಕೆಆರ್ ತಂಡ ಇನ್ನಷ್ಟು ಸಂಕಷ್ಟದಲ್ಲಿ ಸಿಲುಕಿಕೊಂಡಿದೆ. ಬೇಕಿರುವ 16 ಅಂಕ ಗಳಿಸಿರುವ ಆರ್‌ಸಿಬಿ ಇನ್ನೂ ಎರಡು ಪಂದ್ಯಗಳನ್ನು ಆಡಬೇಕಿದ್ದು, ಅದರಲ್ಲೂ ಗೆದ್ದರೆ ಟಾಪ್ 2ರಲ್ಲೇ ಉಳಿಯಲಿದೆ.

ಇನ್ನಷ್ಟು ದಾಖಲೆಗಳು

- ಕೆಕೆಆರ್‌ನೊಂದಿಗೆ 1126★ ರನ್ ಗಳಿಸಿರುವ ಕೊಹ್ಲಿ ಒಂದೇ ತಂಡದ ವಿರುದ್ಧ ಹೆಚ್ಚು ರನ್ ಮಾಡಿದವರ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿದ್ದಾರೆ.
- ಅತಿ ಹೆಚ್ಚು ಪಂದ್ಯಶ್ರೇಷ್ಠ ಆಟಗಾರ ಪ್ರಶಸ್ತಿ(21) ಜಂಟಿ ಮೂರನೇ ಸ್ಥಾನ
- ಒಂದೇ ತಂಡದ ವಿರುದ್ಧ 2 ಶತಕ

ಅತಿ ಹೆಚ್ಚು ಶತಕ

ವಿರಾಟ್ ಕೊಹ್ಲಿ ಐಪಿಎಲ್‌ನಲ್ಲಿ ಅತಿ ಹೆಚ್ಚು ಶತಕ ಬಾರಿಸಿದ ಆಟಗಾರರ ಪಟ್ಟಿಯಲ್ಲಿ ತಮ್ಮ ಅಗ್ರಸ್ಥಾನವನ್ನು ಇನ್ನಷ್ಟು ಭದ್ರಗೊಳಿಸಿದ್ದಾರೆ. ತಮ್ಮ 9ನೇ ಶತಕ ಬಾರಿಸಿದ ಅವರು, ಅಗ್ರಸ್ಥಾನದಲ್ಲೇ ರಾರಾಜಿಸುತ್ತಿದ್ದಾರೆ.

ಚೇಸಿಂಗ್ ವೇಳೆ ಅತಿ ಹೆಚ್ಚು ಶತಕ

ವಿರಾಟ್ ಕೊಹ್ಲಿ ಚೇಸಿಂಗ್ ಮಾಸ್ಟರ್ ಎಂಬ ಹೆಸರಿಗೆ ತಕ್ಕಂತೆ ಆಟವಾಡಿದರು. ಟಿ20ಯಲ್ಲಿ ಚೇಸಿಂಗ್ ವೇಳೆ ಶತಕ ಬಾರಿಸುವುದು ಸಾಮಾನ್ಯವಾಗಿ ಕಷ್ಟಕರ. ಆದರೆ ಕೊಹ್ಲಿ ಈ ಸಾಧನೆ ಮೂರು ಬಾರಿ ಮಾಡಿದ್ದಾರೆ. ಇದರೊಂದಿಗೆ ಬಟ್ಲರ್ ದಾಖಲೆ ಸರಿಗಟ್ಟಿದ್ದಾರೆ.

ಮನೀಶ್ ಕ್ಯಾಚ್ ಕಮಾಲ್

ಕನ್ನಡಿಗ ಮನೀಶ್ ಪಾಂಡೆ ಕ್ಯಾಚ್ ಮೂಲಕ ಗಮನ ಸೆಳೆದರು. ತ್ಯಾಗಿ ಎಸೆದ 18ನೇ ಓವರ್‌ನಲ್ಲಿ ಸ್ಟ್ರೈಕ್‌ನಲ್ಲಿದ್ದ ಟೀಮ್ ಡೇವಿಡ್ ಪಾಯಿಂಟ್‌ನತ್ತ ಬಾರಿಸಿದರು. ಲೋ ರೇಂಜ್‌ನಲ್ಲಿ ಶರವೇಗದೊಂದಿಗೆ ಹೊರಡುತ್ತಿದ್ದ ಬಾಲ್ ಅನ್ನು ಕ್ಯಾಚ್ ಮಾಡಿದ ಮನೀಶ್ ಪಾಂಡೆ ಸಂಪೂರ್ಣ ಗಾಳಿಯಲ್ಲೇ ಇದ್ದರು. ಕ್ಯಾಚ್‌ಗೆ ಕೊಹ್ಲಿ, ಡೇವಿಡ್ ಕೂಡ ಹೊಗಳಿದರು.

ದಾಖಲೆಗಳ ಸುರಿ ಮಳೆಗೈದ ಕೊಹ್ಲಿ

ಕೊಹ್ಲಿ ಶತಕ ದಾಖಲೆಗಳ ಸುರಿಮಳೆಗೈದಿತು. ವಿರಾಟ್ ಗಳಿಸುವ ಪ್ರತಿಯೊಂದು ರನ್‌ಗೂ ದಾಖಲೆಗಳು ಆಗುತ್ತಲೇ ಇರುತ್ತವೆ. ರಾಯ್ಪುರದ ಪಂದ್ಯವೂ ಇದಕ್ಕೆ ಸಾಕ್ಷಿ. ಶತಕ ಬಾರಿಸಿ ಗೆಲ್ಲಿಸಿದ ಕೊಹ್ಲಿ ಹತ್ತಾರು ಮೈಲಿಗಲ್ಲು ತಲುಪಿದ್ದಾರೆ.

ಕೆಕೆಆರ್ ವಿರುದ್ಧ ಅಬ್ಬರದ ಶತಕ

108 ನಿಮಿಷಗಳ ಕಾಲ ಬ್ಯಾಟಿಂಗ್ ಮಾಡಿದ ವಿರಾಟ್ ಕೊಹ್ಲಿ 105 ರನ್ ಗಳಿಸಿದರು. ಮೊದಲನೇ ಬಾಲ್‌ನಿಂದ ಕೊನೆಯ ಬಾಲ್‌ವರೆಗೆ ಒಟ್ಟು 60 ಬಾಲ್‌ಗಳನ್ನು ಎದುರಿಸಿದ ಕೊಹ್ಲಿ 11 ಬೌಂಡರಿ, 3 ಸಿಕ್ಸರ್‌ಗಳನ್ನು ಬಾರಿಸಿದರು. ಪಡಿಕ್ಕಲ್ 39 ರನ್ ಗಳಿಸಿದರು. ಕೆಕೆಆರ್ ಪವರ್‌ಪ್ಲೇನಲ್ಲಿ 56/2, ಆರ್‌ಸಿಬಿ 66/1 ಗಳಿಸಿತು. ಮಧ್ಯಮ ಓವರ್‌ಗಳಲ್ಲಿ ಕೆಕೆಆರ್ 97/1, ಆರ್‌ಸಿಬಿ 91 ರನ್ ಗಳಿಸಿತು. ಡೆತ್ ಓವರ್‌ನಲ್ಲಿ ಕೆಕೆಆರ್ 39ರನ್‌ಗೆ ನಿಂತರೆ, 5 ಬಾಲ್ ಉಳಿದಿರುವಂತೆ ಆರ್‌ಸಿಬಿ 37 ರನ್ ಗಳಿಸಿತು. 105 ಗಳಿಸಿದ ವಿರಾಟ್ ಕೊಹ್ಲಿ ಇತಿಹಾಸ ನಿರ್ಮಿಸಿದ್ದಾರೆ.



14 ಸಾವಿರ ರನ್

ವಿರಾಟ್ ಕೊಹ್ಲಿ ಟಿ20 ಕ್ರಿಕೆಟ್‌ನಲ್ಲಿ 14 ಸಾವಿರ ರನ್ ಪೂರೈಸಿದರು. ಇದಕ್ಕೂ ಹೆಚ್ಚಾಗಿ ಅತಿ ಕಡಿಮೆ ಇನ್ನಿಂಗ್ಸ್‌ಗಳಲ್ಲಿ ಇಷ್ಟೊಂದು ರನ್ ಮಾಡಿದ ಆಟಗಾರ ಎಂಬ ದೊಡ್ಡ ದಾಖಲೆಯನ್ನೂ ಕೊಹ್ಲಿ ಮಾಡಿದ್ದಾರೆ.

ಐಪಿಎಲ್: ಹೆಚ್ಚು ಶತಕ

- ವಿರಾಟ್ ಕೊಹ್ಲಿ 9
- ಬಟ್ಲರ್ 7
- ಕ್ರಿಸ್ ಗೇಲ್ 6
- ಕೆ. ಎಲ್. ರಾಹುಲ್ 6
- ಸಂಜು ಸ್ಯಾಮ್ಸನ್ 5





ವೇಗದ 14 ಸಾವಿರ ರನ್

ಆಟಗಾರ/ತೆಗೆದುಕೊಂಡ ಇನ್ನಿಂಗ್ಸ್

- ವಿರಾಟ್ 409★
- ಗೇಲ್ 423
- ಬಟ್ಲರ್ 468
- ಅಲೆಕ್ಸ್ ಹೇಲ್ಸ್ 505
- ಕೀರನ್ ಪೊಲಾರ್ಡ್ 633





ಚೇಸಿಂಗ್ ವೇಳೆ ಅತಿ ಹೆಚ್ಚು ಶತಕ

ಆಟಗಾರ/ಶತಕ

- ವಿರಾಟ್ 3★
- ಬಟ್ಲರ್ 3★
- ಸ್ಟೋಕ್ಸ್ 2





ಭಾರತ ಎ ತಂಡಕ್ಕೆ ವೈಭವ್ ಆಯ್ಕೆ





ಮುಂಬೈ: ಭಾರತ ಕ್ರಿಕೆಟ್ ಕ್ಷೇತ್ರದಲ್ಲಿ ಐತಿಹಾಸಿಕ ದಾಖಲೆಯೊಂದಾಗಿದ್ದು, 15 ವರ್ಷದ ವೈಭವ್ ಸೂರ್ಯವಂಶಿ ಭಾರತ ಎ ತಂಡಕ್ಕೆ ಆಯ್ಕೆಯಾಗಿದ್ದಾರೆ. ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ವಿಶ್ವ ಕ್ರಿಕೆಟ್ ಗಮನ ಸೆಳೆದಿರುವ ವೈಭವ್ ಸೂರ್ಯವಂಶಿ ಮತ್ತೊಮ್ಮೆ ಇತಿಹಾಸದ ಪುಟಗಳಲ್ಲಿ ಸೇರಿದ್ದಾರೆ.

ಮುಂದಿನ ತಿಂಗಳು ನಡೆಯಲಿರುವ ಭಾರತ ಎ, ಶ್ರೀಲಂಕಾ ಎ ಮತ್ತು ಅಫ್ಘಾನಿಸ್ತಾನ ಎ ತಂಡಗಳ ನಡುವಿನ ತ್ರಿಕೋನ ಏಕದಿನ ಸರಣಿಗೆ ಭಾರತ ತಂಡವನ್ನು ಪ್ರಕಟಿಸಲಾಗಿದ್ದು ತಂಡದಲ್ಲಿ ವೈಭವ್ ಅವರನ್ನು ಆಯ್ಕೆ ಮಾಡಲಾಗಿದೆ.

ಶ್ರೀಲಂಕಾ ಎ, ಅಫ್ಘಾನ್ ಎ ವಿರುದ್ಧದ ತ್ರಿಕೋನ ಸರಣಿಗೆ ತಂಡ ಪ್ರಕಟ

ತಂಡವನ್ನು ತಿಲಕ್ ವರ್ಮಾ ಮುನ್ನಡೆಸಲಿದ್ದು, ಅದರಲ್ಲಿ ಪ್ರಿಯಾಂಶ್ ಆರ್ಯ, ಪ್ರಭಸಿಮ್ರನ್ ಸಿಂಗ್ ಕೂಡ ಸೇರಿದ್ದಾರೆ. ಭಾರತ ಎ ತಂಡ ಅಲ್ಲಿ ಎರಡು ದಿನದ ಟೆಸ್ಟ್ ಪಂದ್ಯಗಳನ್ನೂ ಆಡಲಿದೆ. ರಿಯಾನ್ ಪರಾಗ್ ಉಪನಾಯಕರಾಗಿದ್ದಾರೆ. ಸರಣಿಯ ನಂತರ ಭಾರತ ಎ, ಶ್ರೀಲಂಕಾ ಎ ವಿರುದ್ಧ ಎರಡು ಬಹು-ದಿನದ (ರೆಡ್-ಬಾಲ್) ಪಂದ್ಯಗಳನ್ನು ಸಹ ಆಡಲಿದೆ. ಈ ಟೆಸ್ಟ್ ಪಂದ್ಯಗಳಿಗೆ ತಂಡವನ್ನು ನಂತರ ಪ್ರಕಟಿಸಲಾಗುವುದು ಎಂದು ಬಿಸಿಸಿಐ ತಿಳಿಸಿದೆ. ತ್ರಿಕೋನ ಸರಣಿಯು ಜೂನ್ 9 ರಂದು ಪ್ರಾರಂಭವಾಗಲಿದ್ದು, ಜೂನ್ 21 ರಂದು ಅಂತಿಮ ಪಂದ್ಯ ನಡೆಯಲಿದೆ. ಎಲ್ಲಾ ತಂಡಗಳು ಪರಸ್ಪರ ಎರಡು ಬಾರಿ ಮುಖಾಮುಖಿಯಾಗಲಿದ್ದು, ಅಗ್ರ ಎರಡು ತಂಡಗಳು ಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.

ಐಪಿಎಲ್ ಸ್ಟಾರ್‌ಗಳಿಗೆ ಅವಕಾಶ: ಐಪಿಎಲ್‌ನಲ್ಲಿ ರನ್ ಮಳೆ ಹರಿಸುತ್ತಿರುವ ಪ್ರಿಯಾಂಶ್ ಆರ್ಯ, ಆಯುಷ್ ಬಡೋನಿ ಮತ್ತು ಪ್ರಭಸಿಮ್ರನ್ ಸಿಂಗ್ ಅವರಂತಹ ಯುವ ಆಟಗಾರರನ್ನು ಸಹ ಏಕದಿನ ತ್ರಿಕೋನ ಸರಣಿಗೆ ಆಯ್ಕೆ ಮಾಡಲಾಗಿದೆ. ದೇಶಿ ಕ್ರಿಕೆಟ್‌ನಲ್ಲಿ ಮಿಂಚಿರುವ ಯಶ್ ಠಾಕೂರ್, ಯುದ್ಧವೀರ್ ಸಿಂಗ್, ಅನ್ಮೋಲ್ ಕಂಬೋಜ್ ಮತ್ತು ಅರ್ಷದ್ ಖಾನ್ ಅವರನ್ನೂ ಆಯ್ಕೆ ಮಾಡಲಾಗಿದೆ.

ಭಾರತ ತಂಡ

ತಿಲಕ್ ವರ್ಮಾ (ನಾಯಕ), ಪ್ರಿಯಾಂಶ್ ಆರ್ಯ, ವೈಭವ್ ಸೂರ್ಯವಂಶಿ, ರಿಯಾನ್ ಪರಾಗ್ (ಉಪನಾಯಕ), ಆಯುಷ್ ಬಡೋನಿ, ನಿಶಾಂತ್ ಸಿಂಧು, ಹರ್ಷ ದುಬೆ, ಸೂರ್ಯಾಂಶ್ ++++, ಪ್ರಭಸಿಮ್ರನ್ ಸಿಂಗ್ (ವಿಕೆಟ್ ಕೀಪರ್), ಕುಮಾರ್ ಕುಶಾಗ್ರ (ವಿಕೆಟ್ ಕೀಪರ್), ವಿಪ್ರಜ್ ನಿಗಮ್, ಯಶ್ ಠಾಕೂರ್, ಯುದ್ಧವೀರ್ ಸಿಂಗ್, ಅನ್ಮೋಲ್ ಕಂಬೋಜ್, ಅರ್ಷದ್ ಖಾನ್

ಸರಣಿ ವೇಳಾಪಟ್ಟಿ

- ಜೂನ್ 9: ಭಾರತ ಎ vs ಶ್ರೀಲಂಕಾ ಎ
- ಜೂನ್ 11: ಭಾರತ ಎ vs ಅಫ್ಘಾನಿಸ್ತಾನ ಎ
- ಜೂನ್ 13: ಅಫ್ಘಾನಿಸ್ತಾನ ಎ vs ಶ್ರೀಲಂಕಾ ಎ
- ಜೂನ್ 15: ಭಾರತ ಎ ವಿರುದ್ಧ ಶ್ರೀಲಂಕಾ ಎ
- ಜೂನ್ 17: ಭಾರತ ಎ vs ಅಫ್ಘಾನಿಸ್ತಾನ ಎ
- ಜೂನ್ 19: ಅಫ್ಘಾನಿಸ್ತಾನ ಎ vsಶ್ರೀಲಂಕಾ ಎ
- ಜೂನ್ 21: ಫೈನಲ್ ಪಂದ್ಯ

ಮುಂಬೈ ಇಂಡಿಯನ್ಸ್‌ಗೆ ಕಠಿಣ ಗುರಿ

ಧರ್ಮಶಾಲಾ: ಪ್ರಭಸಿಮ್ರನ್(57), ಓಮರ್‌ಝೈ(38) ಅವರ ಸ್ಫೋಟಕ ಬ್ಯಾಟಿಂಗ್ ನಡುವೆಯೂ ಕರಾರುವಾಕ್ ಬೌಲಿಂಗ್ ದಾಳಿ ಸಂಘಟಿಸಿದ ಶಾರ್ದೂಲ್ ಠಾಕೂರ್(39/4) ಪಂಜಾಬ್ ತಂಡಕ್ಕೆ ಕಡಿವಾಣ ಹಾಕಿದ ನಂತರ ಮುಂಬೈ ವಿರುದ್ಧದ ಪಂದ್ಯದಲ್ಲಿ ಶ್ರೇಯಸ್ ಪಡೆ ದೊಡ್ಡ ಗುರಿ ನಿರ್ಮಿಸಿದೆ.

ನಿಧಾನ ಆರಂಭ ಪಡೆದ ಪಂಜಾಬ್ ಮಧ್ಯಮ ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡಿತು. ಆದಾಗ್ಯೂ ಡೆತ್ ಓವರ್‌ನಲ್ಲಿ ಅಬ್ಬರಿಸಿ 60 ರನ್‌ಗಳಿಸಿದ ನಂತರ ಪಂಜಾಬ್ ಕಿಂಗ್ಸ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 200 ರನ್ ಗಳಿಸಿದೆ. ಮುಂಬೈ ಪರ ಶಾರ್ದೂಲ್ 4, ದೀಪಕ್ 2, ಬಾಷ್ ಮತ್ತು ರಾಜ್ ತಲಾ 1 ವಿಕೆಟ್ ಪಡೆದರು.

ಶಾರ್ದೂಲ್ ಕಮಾಲ್: ಟಾಸ್ ಗೆದ್ದ ಮುಂಬೈ ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ಸೂರ್ಯ ಮತ್ತು ಹಾರ್ದಿಕ್ ಇಲ್ಲದ ಕಾರಣದಿಂದಾಗಿ ಜಸ್‌ಪ್ರೀತ್ ಬೂಮ್ರಾ ತಂಡದ ನಾಯಕತ್ವ ನಿಭಾಯಿಸಿದರು. ಬರುತ್ತಿದ್ದಂತೆ



ಅತ್ತ ಪ್ರಿಯಾಂಶ್ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಆದರೆ ಅವರ ಆಟ 17 ರನ್‌ಗೆ ನಿಂತಿತು. ಮೂರನೇ ಕ್ರಮಾಂಕದಲ್ಲಿ ಬಂದ ಕೊನೊಲಿ ಸೆಟ್ ಆಗುವತ್ತ ಸಾಗಿದರು. ಅತ್ತ ಪ್ರಭಸಿಮ್ರನ್ ಅಬ್ಬರಿಸುತ್ತಿದ್ದಂತೆ ಪವರ್‌ಪ್ಲೇ ಮುಕ್ತಾಯವಾಯಿತು. ಪಂಜಾಬ್ 55 ರನ್‌ಗೆ 1 ವಿಕೆಟ್ ಕಳೆದುಕೊಂಡಿತು. ಮಧ್ಯಮ ಓವರ್‌ಗಳಲ್ಲಿ ಶಾರ್ದೂಲ್ ಠಾಕೂರ್ ಕರಾರುವಾಕ್ ದಾಳಿಯೊಂದಿಗೆ ಮಿಂಚಿದರು. ಅರ್ಧಶತಕ ಬಾರಿಸಿದ್ದ ಪ್ರಭಸಿಮ್ರನ್ ವಿಕೆಟ್ ಪಡೆದರು. ಕೊನೊಲಿ ಕೂಡ 21 ರನ್‌ಗೆ ವಿಕೆಟ್ ಒಪ್ಪಿಸಿದರು. ಶ್ರೇಯಸ್ ಅಯ್ಯರ್ ಬರುತ್ತಲೇ ಬೌಂಡರಿ ಬಾರಿಸಿ ಬೋಲ್ಡ್ ಆದರು. ಮುಂದಿನ ಓವರ್‌ನಲ್ಲಿ ಶಾರ್ದೂಲ್ ಸೂರ್ಯಾಂಶ್‌ಗೂ ಪೆವಿಲಿಯನ್ ಹಾದಿ ತೋರಿಸಿದರು. ಮಧ್ಯಮ ಓವರ್‌ಗಳಲ್ಲಿ ಪಂಜಾಬ್ 85 ರನ್ ಗಳಿಸುವಷ್ಟರಲ್ಲಿ 5 ವಿಕೆಟ್ ಕಳೆದುಕೊಂಡಿತು.

ಡೆತ್ ಓವರ್‌ನಲ್ಲಿ ಪಂಜಾಬ್ ಅಬ್ಬರ: ಕೊನೆಯ ಓವರ್‌ಗಳಲ್ಲಿ ಪಂಜಾಬ್ ಕಿಂಗ್ಸ್ ಅಬ್ಬರದ ಬ್ಯಾಟಿಂಗ್ ಮಾಡಿತು. ಅಜ್ಮತುಲ್ಲಾ ಓಮರ್‌ಝೈ ಬರುತ್ತಿದ್ದಂತೆ ಸ್ಫೋಟಕ ಬ್ಯಾಟಿಂಗ್ ಮಾಡಿದರು. 4 ಸಿಕ್ಸರ್ 2 ಬೌಂಡರಿ ಬಾರಿಸಿದ ಅವರು, 17 ಬಾಲ್ ಮಾತ್ರದಲ್ಲಿ 38 ರನ್ ಗಳಿಸಿದರು. ಪಂದ್ಯದ ತಿರುವೇ ಬದಲಾಯಿತು. ಸಾಮಾನ್ಯ ಸ್ಕೋರ್‌ನತ್ತ ಸಾಗುತ್ತಿದ್ದ ಪಂಜಾಬ್ ಅವರ ಬ್ಯಾಟಿಂಗ್ ನಿಂದಾಗಿ ದೊಡ್ಡ ಸ್ಕೋರ್‌ನತ್ತ ಸಾಗಿತು. ಅವರ ವಿಕೆಟ್ ಬಿದ್ದರೂ ಕೊನೆಯ ಓವರ್‌ಗಳಲ್ಲಿ ಬಾರ್ಟ್‌ಲೆಟ್ ಮತ್ತು ವಿಷ್ಣು ವಿನೋದ್ ಸ್ಫೋಟಕ ಬ್ಯಾಟಿಂಗ್ ಮಾಡಿ ಸ್ಕೋರ್ 200ರ ಗಡಿ ದಾಟಿಸಿದರು.

ಬ್ಯಾಡ್ಮಿಂಟನ್: ಸೇನ್, ಸಿಂಧು ಕ್ವಾರ್ಟರ್‌ಗೆ

ಬ್ಯಾಂಕಾಕ್: ಥೈಲ್ಯಾಂಡ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತೀಯ ತಾರೆಯರ ಅದ್ಭುತ ಪ್ರದರ್ಶನ ಮುಂದುವರಿದಿದೆ. ಪ್ರಮುಖ ಬ್ಯಾಡ್ಮಿಂಟನ್ ಕೂಟಗಳಲ್ಲಿ ಒಂದಾದ ಸೂಪರ್ 500 ಪಂದ್ಯಾವಳಿಯಲ್ಲಿ ಪಿ.ವಿ. ಸಿಂಧು ಮತ್ತು ಲಕ್ಷ್ಯ ಸೇನ್ ತಮ್ಮ ತಮ್ಮ ಪಂದ್ಯಗಳಲ್ಲಿ ನೇರ ಗೇಮ್‌ಗಳಲ್ಲಿ ಗೆದ್ದು ಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಿದ್ದಾರೆ.

ಎರಡು ಬಾರಿ ಒಲಿಂಪಿಕ್ ಪದಕ ವಿಜೇತೆ ಹಾಗೂ ಆರನೇ ಶ್ರೇಯಾಂಕಿತ ಪಿ. ವಿ. ಸಿಂಧು, ಡೆನ್ಮಾರ್ಕ್‌ನ ಅಮಾಲಿ ಶುಲ್ಜ್ ವಿರುದ್ಧ ಕೇವಲ 28 ನಿಮಿಷಗಳಲ್ಲಿ 21-13, 21-15 ಅಂತರದಲ್ಲಿ ಗೆಲುವು ಸಾಧಿಸಿದರು.

ಸೇನ್ ಪ್ರಾಬಲ್ಯ: ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಏಳನೇ ಶ್ರೇಯಾಂಕಿತ ಲಕ್ಷ್ಯ ಸೇನ್, ಚೀನಾದ ಝು ಶುವಾನ್ ಚೆನ್ ವಿರುದ್ಧ 21-12, 21-13 ಅಂತರದಲ್ಲಿ ಸುಲಭ ಜಯ ದಾಖಲಿಸಿದರು. 39 ನಿಮಿಷಗಳ ಕಾಲ ನಡೆದ ಈ ಪಂದ್ಯದಲ್ಲಿ ಲಕ್ಷ್ಯ ಸಂಪೂರ್ಣ ಮೇಲುಗೈ ಸಾಧಿಸಿದರು. ಕ್ವಾರ್ಟರ್ ಫೈನಲ್‌ನಲ್ಲಿ ಸಿಂಧುಗೆ ಜಪಾನ್‌ನ ಅಗ್ರ ಶ್ರೇಯಾಂಕಿತ ಹಾಗೂ ವಿಶ್ವ ನಂ. 3 ಅಕಾನೆ ಯಮಗುಚಿ ಸವಾಲಾಗಲಿದ್ದಾರೆ. ಲಕ್ಷ್ಯ ಸೇನ್, ಚೈನೀಸ್ ತೈಪೆಯ ಲೀ ಚಿಯಾ ಹಾವೊ ಮತ್ತು ಥೈಲ್ಯಾಂಡ್‌ನ ಕುನ್ಲಾವುತ್ ವಿಟಿಡ್ಸಾರ್ನ್ ನಡುವಿನ ಪಂದ್ಯದ ವಿಜೇತರನ್ನು ಎದುರಿಸಲಿದ್ದಾರೆ.

ಸಾತ್ವಿಕ್-ಚಿರಾಗ್ ಪಾರುಪತ್ಯ: ಪುರುಷರ ಡಬಲ್ಸ್‌ನಲ್ಲಿ ಅಗ್ರ ಶ್ರೇಯಾಂಕಿತ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿಯೂ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಇಟ್ಟಿದೆ. ಮಲೇಷಿಯಾದ ಬ್ರಯಾನ್ ಜೆರೆಮಿ ಗುಂಟಿಂಗ್ ಮತ್ತು ಮಹಮ್ಮದ್ ಹೈಕಲ್ ಜೋಡಿಯನ್ನು 21-12, 21-19 ಅಂತರದಲ್ಲಿ ಮಣಿಸಿದ ಭಾರತೀಯ ಜೋಡಿ ಮುಂದಿನ ಸುತ್ತಿನಲ್ಲಿ ಜಪಾನ್‌ನ ತಕುಮಿ ನೋಮುರಾ ಮತ್ತು ಯುಇಚಿ ಶಿಮೊಗಾಮಿ ಜೋಡಿಯನ್ನು ಎದುರಿಸಲಿದೆ.

ಇದೇ ವೇಳೆ ಯುವ ಆಟಗಾರ್ತಿ ದೇವಿಕಾ ಸಿಹಾಗ್ ಅಭಿಯಾನ ಅಂತ್ಯಗೊಂಡಿದೆ. ಥೈಲ್ಯಾಂಡ್‌ನ ಪಿಚಮೋನ್ ಒಪಾಟ್ನಿಪುತ್ ವಿರುದ್ಧ 21-23, 11-21 ಅಂತರದಲ್ಲಿ ಸೋತು ಅವರು ಟೂರ್ನಿಯಿಂದ ಹೊರಬಿದ್ದರು. ಇನ್ನೂ ದಿನದ ಬಳಿಕ ಮಾಜಿ ವಿಶ್ವ ನಂ. 1 ಕಿಡಂಬಿ ಶ್ರೀಕಾಂತ್, ಚೈನೀಸ್ ತೈಪೆಯ ಸು ಲಿ ಯಾಂಗ್ ವಿರುದ್ಧ ಸೆಣಸಲಿದ್ದಾರೆ.

ಸೂಪರ್ ಕಿಂಗ್ಸ್-ಲಖನೌ ಜೇಂಟ್ಸ್ ಪಂದ್ಯ ಇಂದು

ಲಖನೌ: ಲಯದಲ್ಲಿರುವ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಸೋಲಿನ ಸುಳಿಯಲ್ಲಿ ಸಿಲುಕಿಕೊಂಡಿರುವ ಲಖನೌ ಸೂಪರ್ ಜೇಂಟ್ಸ್ ತಂಡಗಳು ಶುಕ್ರವಾರದ ಐಪಿಎಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಪ್ಲೇಆಫ್ ವಿಚಾರದಲ್ಲಿ ಚೆನ್ನೈಗಿದು ಮಹತ್ವದ ಪಂದ್ಯವಾಗಿರಲಿದೆ.

ಭಾನುವಾರ ನಡೆದ ಇಬ್ಬರ ನಡುವಿನ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಗೆಲುವು ಸಾಧಿಸಿದೆ. ಹಿಂದಿನ ಪಂದ್ಯಗಳಲ್ಲಿ ಸತತ ಗೆಲುವು ಸಾಧಿಸಿರುವ ಚೆನ್ನೈ ಸೂಪರ್ ಕಿಂಗ್ಸ್ ಸತತ ನಾಲ್ಕನೇ ಗೆಲುವಿನ ನಿರೀಕ್ಷೆಯಲ್ಲಿದೆ. ಇತ್ತ ಲಖನೌ ಸೂಪರ್ ಜೇಂಟ್ಸ್ ಪಂದ್ಯಾವಳಿಯ ನಾಲ್ಕನೇ ಗೆಲುವಿಗಾಗಿ ಪಂದ್ಯವನ್ನಾಡಲಿದೆ. ಪ್ಲೇಆಫ್ ವಿಚಾರದಲ್ಲಿ ಚೆನ್ನೈ ಈ ಪಂದ್ಯದಲ್ಲಿ ಗೆಲ್ಲಲೇಬೇಕಿದೆ. 12 ಅಂಕಗಳೊಂದಿಗೆ 5ನೇ ಸ್ಥಾನದಲ್ಲಿರುವ ಚೆನ್ನೈ ಸೂಪರ್ ಕಿಂಗ್ಸ್ ಗೆದ್ದರೆ, ಹೆಚ್ಚಿನ ಅವಕಾಶ ಪಡೆಯಲಿದೆ. ಇತ್ತ ಲಖನೌ ಗೌರವ ವಿದಾಯಕ್ಕಾಗಿ ಆಡಲಿದೆ. ಕಳೆದುಕೊಳ್ಳಲು ಲಖನೌ ಕಡೆ ಏನು ಇಲ್ಲ. ಇದೇ ಸಮಯದಲ್ಲಿ



ಚೆನ್ನೈಗೆ ಮತ್ತೊಂದು ಗಾಯದ ಸಮಸ್ಯೆ ಎದುರಾಗಿದ್ದು ಪಂದ್ಯಗಳಲ್ಲಿ ಮಿಂಚುತ್ತಿದ್ದ ಜಿಮಿ ಓವರ್‌ಟನ್ ಹೊರಬಿದ್ದಿದ್ದಾರೆ. ಪಂದ್ಯ ಲಖನೌನ ಏಕಾನಾ ಕ್ರೀಡಾಂಗಣದಲ್ಲಿ ನಡೆಯಲಿದೆ.


ಪ್ಲೇಆಫ್ ಲೆಕ್ಕಾಚಾರ: ಐದನೇ ಸ್ಥಾನದಲ್ಲಿರುವ ಚೆನ್ನೈ ಗೆದ್ದರೆ 14 ಅಂಕಗಳನ್ನು ಹೊಂದಲಿದ್ದು, ನಾಲ್ಕನೇ ಸ್ಥಾನಕ್ಕೇರುವ ಅವಕಾಶ ಪಡೆಯಲಿದೆ. ಸದ್ಯ ಸನ್‌ರೈಸರ್ಸ್ ಹೈದರಾಬಾದ್ ಕೂಡ ಅಷ್ಟೇ ಅಂಕಗಳನ್ನು ಹೊಂದಿದ್ದು ಮೂರನೇ ಸ್ಥಾನದಲ್ಲಿದೆ. ಹೆಚ್ಚಿನ ರನ್‌ರೇಟ್ ಚೆನ್ನೈಗೆ ಅವಕಾಶವನ್ನು ಭದ್ರ ಮಾಡಿಕೊಡಲಿದೆ. ಉಳಿದ ಪಂದ್ಯಗಳಲ್ಲಿ ಚೆನ್ನೈ ಎಲ್ಲಾದರಲ್ಲೂ ಗೆಲ್ಲಬೇಕಿದೆ. 1 ಸೋತರು ಬೇರೆ ತಂಡಗಳ ಮೇಲೆ ಅವಲಂಬಿತವಾಗಬೇಕಿದೆ.

ಪಿಚ್: ಲಖನೌನ ಏಕಾನಾ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಆರ್‌ಸಿಬಿ ಹಾಗೂ ಲಖನೌ ನಡುವೆ ಇತ್ತೀಚೆಗೆ ನಡೆದ ಪಂದ್ಯದಲ್ಲಿ ದೊಡ್ಡ ಸ್ಕೋರ್ ಮೂಡಿಬಂದಿತ್ತು. ಚೇಸಿಂಗ್ ಆಗಿರಲಿಲ್ಲ. ಎರಡನೇ ಇನ್ನಿಂಗ್ಸ್‌ನಲ್ಲಿ ಇಬ್ಬನಿ ಕಾಟವಿದ್ದು, ಮೊದಲು ಬೌಲಿಂಗ್ ಮಾಡುವ ತಂಡಕ್ಕೆ ಲಾಭ.

ಪದಬಂಧ

ರಾಜಾ ಸಂಗಮೇಶ ಹಿರೇಮಠ

5984



ಎಡದಿಂದ ಬಲಕ್ಕೆ
1.ಬೌದ್ಧರ ಮೂರು ಪವಿತ್ರ ಗ್ರಂಥಗಳು (4)
4.ಕೆನ್ನೆ-ಕಪೋಲ (3)
5.ಹುಣ್ಣಿಮೆಯ ಚಂದಿರನೀತ (5)
7.ಕಡಿದಾದ ಕೊರಕಲು ಕಣಿವೆ (3)
8.ಹಲ್ಲಿನಿಂದ ಕಡಿಯು (2)
9.ಮಂತ್ರೋಪದೇಶವನ್ನು ತಿರುಗಿ ಮಾಡುತ್ತಿದ್ದಾರೆ (2)
12.ಪಾಕದ ನಡುವೆ ಹೊಗಳುಭಟನಿದ್ದಾನೆ (3)
13.ಲಲಿತವಿದ್ಯೆಗಳನ್ನು ಆರಾಧಿಸುವವನು (5)
16.ಧಣಿಯು ತರಿಸಿದ ಕೊತ್ತಂಬರಿಬೀಜ (3)
17.ಭಾರತದಲ್ಲಿ ಲೋಕಸಭೆ-ರಾಜ್ಯಗಳಲ್ಲಿ ವಿಧಾನಸಭೆ (4)

ಮೇಲಿನಿಂದ ಕೆಳಕ್ಕೆ
1.ದೈತ್ಯರ ಮೂರು ಊರುಗಳನ್ನು ನಾಶಮಾಡಿದವನು (5)
2.ಗಣಪತಿಗೆ ನೈವೇದ್ಯವಾಗಿ ಪ್ರಸಿದ್ಧ ಈ ಮೋದಕ (3)
3.ಗಡಬಡಿಸಿ ತಿರುಗಿದ್ದು ಈ ಉತ್ತರದಿಕ್ಕಿನೆಡೆಗೆ (3)
5.ವಸ್ತುವಿನಿಂದ ಬೇರ್ಪಟ್ಟ ಒಂದು ಭಾಗ (2)
6.ದಯಾಮಯಿ ತಲೆಕೆಳಗಾಗಿದ್ದಾನೆ (4)
7.ಊರಿಂದೂರಿಗೆ ಸಂಚರಿಸುತ್ತಿರುವವ (4)
10.ಸೊಡರುಗಳನ್ನು ಹೊತ್ತಿಸಿ ಮಾಡುವ ಪೂಜೆ (5)
11.ಸುಲಭವಾಗಿ ಮೋಸಕ್ಕೊಳಗಾಗುವ ಪ್ರಾಣಿ (2)
14.ನೇತಾಡುವಂತಿರುವ ಕಿವಿಯ ಆಭರಣ (3)
15.ಮಣ್ಣು ಎತ್ತಲು ಬಳಸುವ ಸಾಧನ (3)

5983 ಉತ್ತರ

ಎಡದಿಂದ ಬಲಕ್ಕೆ:
1.ಮೃದುಯಾನ
3.ನರಮೇಧ 5.ಕಸರತ್ತು
8.ಮೂಲಪ್ರತಿ 10.ಹಡಗು
11.ಮೇದಿನಿ 12.ಚಂಪಕ
14.ಮಾನಿನಿ 16.ಕುಜವಾರ
17.ಪರಿಪಾಕ

ಮೇಲಿನಿಂದ ಕೆಳಕ್ಕೆ :
2.ಯಾವಾರ 4.ರಸಾಲ
6.ಸನಾದಿ 7.ಹತ್ತು
8.ಮೂಗು 9.ಪ್ರತಾಪ
11.ಮೇಲುಮುಸುಕು
13.ಚಂದ್ರಕಲಾಪ
14.ಮಾತುಗಾರ
15.ನಿಯಾಮಕ

ಸೇವೆಯನ್ನೇ ಪರಮ ಧ್ಯೇಯವಾಗಿಸಿದ ಮಹಾಮಾತೆಯ ದರುಶನದಿಂದ ಪುನೀತರಾಗಲಿದ್ದಾರೆ ಭಕ್ತಜನ

ಬಂದರು ನಗರಿಗೆ ಮತ್ತೆ ಬರುತ್ತಿದ್ದಾರೆ 'ಅಮ್ಮ'....

▸ ಸುರೇಶ್ ಡಿ. ಪಳ್ಳಿ



ಬೋಳೂರಿನಲ್ಲಿರುವ ಬ್ರಹ್ಮಸ್ಥಾನಂ ಕ್ಷೇತ್ರ



ಮಂಗಳೂರು: 'ಅಮ್ಮ' ಎಂದರೆ ಯಾರಿಗೆ ಗೊತ್ತಿಲ್ಲ ಹೇಳಿ? ವಿಶ್ವದಾದ್ಯಂತ ಮಾನವೀಯ ಮತ್ತು ಸಮಾಜ ಸೇವೆಗಳ ಮೂಲಕ ಕರುಣಾಮಯಿಯಾಗಿ ಕೋಟ್ಯಂತರ ಭಕ್ತರ ಹೃದಯದಲ್ಲಿ ಸ್ಥಾನ ಪಡೆದ ಸದ್ಗುರು ಶ್ರೀ ಮಾತಾ ಅಮೃತಾನಂದಮಯಿ ದೇವಿಯವರ ಪಾದಸ್ಪರ್ಶ ಕಡಲ ನಗರಿ ಮಂಗಳೂರಿಗೆ ಮತ್ತೊಮ್ಮೆ ಆಗಲಿದೆ. ಏಳು ವರ್ಷಗಳ ಬಳಿಕ ಅವರು ಬಂದರು ನಗರಿಗೆ ಬರುತ್ತಿದ್ದಾರೆ.

ಮೇ 28 ಮತ್ತು 29ರಂದು ನಗರದ ಬೋಳೂರಿನಲ್ಲಿರುವ ಮಾತಾ ಅಮೃತನಂದಮಯಿ ಮಠದ ಆವರಣದಲ್ಲಿ 'ಬ್ರಹ್ಮಸ್ಥಾನಂ ಮಹೋತ್ಸವ– ಅಮೃತ ಸಂಗಮ 2026' ಕಾರ್ಯಕ್ರಮ ವೈಭವದಿಂದ ನಡೆಯಲಿದ್ದು, ಎರಡು ದಿನಗಳ ಕಾರ್ಯಕ್ರಮದಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಲಿದ್ದಾರೆ. ಬೆಳಗ್ಗೆ 8 ಗಂಟೆಯಿಂದಲೇ ವಿವಿಧ ಕಾರ್ಯಕ್ರಮ ಆರಂಭವಾಗಲಿದ್ದು, 'ಅಮೃತಾಲಿಂಗನ' ಅಮ್ಮನ ಅಪ್ಪುಗೆಯ ಆಶೀರ್ವಾದವೂ ದೊರೆಯಲಿದೆ. ಉದಯಾಸ್ತಮಾನ ಪೂಜೆಯ ಜೊತೆಗೆ ಅಮ್ಮನ ದಿವ್ಯ ಸಂದೇಶವನ್ನು ಹತ್ತಿರದಿಂದ ಆಲಿಸುವ ಸದವಕಾಶ ಜನತೆಗೆ ದೊರೆಯಲಿದೆ. ಅತ್ಯಂತ ಶಿಸ್ತು, ಸ್ವಚ್ಛತೆಗೆ ಆದ್ಯತೆ ನೀಡುವ ಮೂಲಕ ಅಚ್ಚುಕಟ್ಟಾಗಿ ಕಾರ್ಯ ನಡೆಯುವ ನಿಟ್ಟಿನಲ್ಲಿ ಸಂಘಟಕರು ಮುತುವರ್ಜಿ ವಹಿಸಿದ್ದಾರೆ.

'ಅಮೃತ ಸಂಗಮ'ದ ಯಶಸ್ಸಿಗೆ ಸಕಲ ಸಿದ್ಧತೆಗಳು ಆರಂಭಗೊಂಡಿವೆ. ಅತ್ಯಂತ ಯಶಸ್ವಿಯಾಗಿ ಕಾರ್ಯಕ್ರಮ ಆಯೋಜಿಸುವತ್ತ ಕಾರ್ಯೋನ್ಮುಖರಾಗಿದ್ದೇವೆ. ವಿವಿಧ ಸಮಿತಿಗಳ ನೇತೃತ್ವದಲ್ಲಿ ಅಚ್ಚುಕಟ್ಟಿನಿಂದ ವ್ಯವಸ್ಥೆಗಳು ನಡೆಯುವಲ್ಲಿ ಒತ್ತು ನೀಡಿದ್ದೇವೆ. ಅಮ್ಮನ ಕಾರ್ಯಕ್ರಮದಲ್ಲಿ, ಇದು ನಮ್ಮ ಕಾರ್ಯಕ್ರಮ ಎಂದುಕೊಂಡು ಸೇವಾ ಮನೋಭಾವದಿಂದ ಪಾಲ್ಗೊಳ್ಳುವವರೇ ಹೆಚ್ಚು ಎನ್ನುತ್ತಾರೆ ಮಾತಾ ಅಮೃತಾನಂದಮಯಿ ಸೇವಾ ಸಮಿತಿ ಮಂಗಳೂರು ಇದರ ಅಧ್ಯಕ್ಷ ಸುರೇಶ್ ಅಮೀನ್ ಅವರು.

ಆಧ್ಯಾತ್ಮಿಕ ನಾಯಕಿಯಷ್ಟೇ ಅಲ್ಲ

ಮಾತಾ ಅಮೃತಾನಂದಮಯಿ ಕೇವಲ ಆಧ್ಯಾತ್ಮಿಕ ನಾಯಕಿಯಷ್ಟೇ ಅಲ್ಲ; ಮಾನವೀಯ ಸೇವೆಯ ಪ್ರತೀಕವೂ ಹೌದು. ಬಡವರು, ನಿರ್ಗತಿಕರಿಗೆ, ಸಂಕಷ್ಟದಲ್ಲಿರುವವರಿಗೆ ಸದಾ ನೆರವಾಗುತ್ತಾ ಬಂದವರು. ಅವರ ಉಚಿತ ಆರೋಗ್ಯ ಸೇವೆಯ ಮಹತ್ ಕಾರ್ಯದಿಂದಾಗಿ ಲಕ್ಷಾಂತರ ಮಂದಿ ಹೊಸ ಬದುಕು ಕಟ್ಟಿಕೊಂಡಿದ್ದಾರೆ. ಕಷ್ಟ ಕೋಟಲೆಯಿಂದ ಬದುಕೇ ಕೊನೆಯಾಯಿತು ಎಂದುಕೊಂಡು ಬಂದ ನೊಂದ ಹೃದಯಗಳಿಗೆ ಅಮ್ಮ ಅಮೃತ ಸಂಜೀವಿನಿಯಾಗಿದ್ದಾರೆ. ಅಮ್ಮನ ಅಪ್ಪುಗೆಯ ಆಶೀರ್ವಾದ ಪಡೆದು, ಅವರ ಸಾಂತ್ವನದ ಮಾತುಗಳನ್ನು ಆಲಿಸಿ ಹೊಸ ಬದುಕು ಕಟ್ಟಿಕೊಂಡ ಮಂದಿಗೆ ಲೆಕ್ಕವಿಲ್ಲ. ಅಂತಹ ದೈವೀ ಶಕ್ತಿಯ ಅಮ್ಮ ಮಂಗಳೂರಿಗೆ ಆಗಮಿಸುತ್ತಿರುವುದರಿಂದ ಅಮ್ಮನ ಅನುಯಾಯಿಗಳಲ್ಲಿ ಸಂಭ್ರಮ ಮನೆ ಮಾಡಿದೆ. ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳಿಂದ ಭಕ್ತರು ಅಮ್ಮನನ್ನು ಕಾಣಲು ಆಗಮಿಸಲಿದ್ದಾರೆ.

'ಅಮ್ಮನವರ ಆಗಮನ ಮತ್ತು ಅಮಲ ಭಾರತ ಸ್ವಚ್ಛತಾ ಅಭಿಯಾನ ಮಂಗಳೂರಿನಲ್ಲಿ ಮಹತ್ತರ ಬದಲಾವಣೆ ತಂದಿದೆ. ಅಮ್ಮ ಮಂಗಳೂರಿಗೆ ಬರುತ್ತಾರೆಂದರೆ ಅದೆಷ್ಟೋ ಮಂದಿ ಅವರಿಗಾಗಿ ದೂರದ ಊರುಗಳಿಂದ ಬರುತ್ತಾರೆ ಎನ್ನುತ್ತಾರೆ ಸೇವಾ ಸಮಿತಿಯ ಪ್ರಮುಖರಲ್ಲೊಬ್ಬರಾದ ಡಾ.ದೇವದಾಸ್ ಪುತ್ರನ್ ಅವರು.

ಮಂಗಳೂರು ಪ್ರಿಯವಾದ ಊರು



ಮಂಗಳೂರೆಂದರೆ ಅಮ್ಮನವರಿಗೆ ಅತ್ಯಂತ ಪ್ರಿಯವಾದ ಸ್ಥಳಗಳಲ್ಲೊಂದು. ಇಲ್ಲಿನ ಭಕ್ತರ, ಸೇವಾರ್ಥಿಗಳ ನಿಸ್ವಾರ್ಥ ಸಮರ್ಪಣಾ ಭಾವದ ಸೇವೆ ಹಾಗೂ ಪರಿಶುದ್ಧ ಭಕ್ತಿಯು ಅಮ್ಮನವರಿಗೆ ಇಲ್ಲಿನ ಸಾರ್ವಜನಿಕರ ಹಿತದೃಷ್ಟಿಯಿಂದ ಮಾನವೀಯ ಸೇವಾ ಯೋಜನೆಗಳನ್ನು ಅನುಷ್ಠಾನಗೊಳಿಸಲು ಪ್ರೇರಣೆಯಾಗಿರಬಹುದು. ಇಲ್ಲಿನ ಭಕ್ತರು ಅಮ್ಮನ ಅಪ್ಪುಗೆಯ ಅನುಗ್ರಹ ಪಡೆದ ಪರಿಣಾಮ ತಮ್ಮ ಜೀವನದಲ್ಲಿ ಮಹತ್ವದ ಪರಿಣಾಮಗಳಾಗಿರುವ ಬಗ್ಗೆ ಅನುಭವಗಳನ್ನು ಹಂಚಿಕೊಳ್ಳುವಾಗ ಸಂತೃಪ್ತಿ ಮೂಡುತ್ತದೆ.

■ ಸ್ವಾಮಿನಿ ಮಂಗಳಾಮೃತ ಪ್ರಾಣ, ಮಾತಾ ಅಮೃತಾನಂದಮಯಿ ಮಠ, ಮಂಗಳೂರು



ಈ ಹಿಂದೆ ಮಾತಾ ಅಮೃತಾನಂದಮಯಿಯವರು ಮಂಗಳೂರಿಗೆ ಆಗಮಿಸಿದ್ದಾಗ ಮಠದಲ್ಲಿ ಸಂಭ್ರಮ

ಸೇವೆಯ ಸಂದೇಶ ಸಾರಿದವರು

ಪ್ರೀತಿ ಮತ್ತು ನಿಸ್ವಾರ್ಥ ಸೇವೆಯೇ ಜೀವನದ ನಿಜವಾದ ಮಾರ್ಗ ಎಂಬ ಸಂದೇಶವನ್ನು ಜಗತ್ತಿಗೆ ಸಾರಿದ ಅಮ್ಮನವರ ಆದರ್ಶವನ್ನು ವಿಶ್ವದಾದ್ಯಂತ ಕೋಟ್ಯಂತರ ಸಂಖ್ಯೆಯ ಭಕ್ತರು ಪಾಲಿಸುತ್ತಿದ್ದಾರೆ. ಪ್ರೀತಿ, ಕರುಣೆ, ಸಹಾನುಭೂತಿ ಮತ್ತು ನಿಸ್ವಾರ್ಥ ಸೇವೆಯನ್ನು ಜಗದಗಲ ಪಸರಿಸಿದವರು ಅವರು. ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಕೊಡುಗೆಗಳು, ಅನಾಥರು, ವೃದ್ಧರು, ನಿರ್ಗತಿಕರಿಗೆ ಯೋಜನೆಗಳು, ವಿದ್ಯಾರ್ಥಿವೇತನ, ಪ್ರಾಕೃತಿಕ ವಿಕೋಪಗಳು ಸಂಭವಿಸಿದಾಗ ನೀಡಿದ ನೆರವು, ಶೈಕ್ಷಣಿಕ ಸೇವೆ, ಮನೆ ನಿರ್ಮಾಣ ಕಾರ್ಯಗಳು, ಉಚಿತ ಆರೋಗ್ಯ ಶಿಬಿರಗಳು, ಸಾವಿರಾರು ಮಂದಿಗೆ ಲಕ್ಷಾಂತರ ರೂಪಾಯಿ ವೆಚ್ಚದ ಶಸ್ತ್ರಚಿಕಿತ್ಸೆಗಳು...ಹೀಗೆ ನೂರಾರು ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಬಡವರ ಪಾಲಿನ ಆಶಾ ಕಿರಣವಾದ 'ಅಮ್ಮ' ಮಂಗಳೂರಿಗೆ ಮತ್ತೆ ಬರುತ್ತಿದ್ದಾರೆ. ಅವರ ಸ್ವಾಗತಕ್ಕಾಗಿ ಕಡಲ ತಡಿ ಸಜ್ಜಾಗಿದೆ.

ನಾಳೆ 'ಸ್ವಚ್ಛತಾ ಜಾಗೃತಿಯ ದಿಟ್ಟಹೆಜ್ಜೆ' ಮಾತಾ ಅಮೃತಾನಂದಮಯಿ ಸೇವಾ ಸಮಿತಿ ಮಂಗಳೂರು ಇದರ ನೇತೃತ್ವದಲ್ಲಿ ನಡೆದ 'ಅಮಲ ಭಾರತ' ಸ್ವಚ್ಛತಾ ಅಭಿಯಾನದ ಪರಿಚಯ

ಕಿರುಸುದ್ದಿ

ಪ್ರಶ್ನೆಪತ್ರಿಕೆಸೋರಿಕೆ: ಕೇಂದ್ರದಿಂದ ಕಠಿಣ ಕ್ರಮ

ಉಡುಪಿ: ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿರುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವ ದಿಟ್ಟ ನಿರ್ಧಾರವನ್ನು ಕೇಂದ್ರ ಸರ್ಕಾರ ಮಾಡಿದೆ ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು. ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ವಿಚಾರಕ್ಕೆ ಸಂಬಂಧಿಸಿ ಉಡುಪಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಶ್ನೆ ಪತ್ರಿಕೆ ಸೋರಿಕೆಯಾದ ವಿಚಾರ ತಿಳಿಯುತ್ತಿದಂತೆ ಕೇಂದ್ರಸರ್ಕಾರ ಪರೀಕ್ಷೆಯನ್ನು ರದ್ದುಗೊಳಿಸಿದೆ. ಮರು ಪರೀಕ್ಷೆ ಮಾಡುವ ಸಂದರ್ಭದಲ್ಲಿ ಯಾವುದೇ ಹೆಚ್ಚುವರಿ ಸುಂಕವನ್ನು ತೆಗೆದುಕೊಳ್ಳದೇ, ಹೊಸ ಸಮಸ್ಯೆಗಳಿಗೆ ಆಸ್ಪದ ನೀಡದಂತೆ ಕ್ರಮಕೈಗೊಳ್ಳುವ ಭರವಸೆಯನ್ನು ಕೇಂದ್ರಸರ್ಕಾರ ನೀಡಿದೆ. ಅಲ್ಲದೇ ತಪ್ಪಿತಸ್ಥರ ವಿರುದ್ಧ ಸಿಬಿಐ ತನಿಖೆ ನಡೆಸಿ, ನಿರ್ದಿಷ್ಟ ದಿನಾಂಕದಂದು ಮರುಪರೀಕ್ಷೆ ಮಾಡುವ ನಿರ್ಧಾರವನ್ನು ಕೇಂದ್ರ ಸರ್ಕಾರ ಕೈಗೊಂಡಿದೆ ಎಂದರು.

ಕಾಸರಗೋಡು ಜಿಲ್ಲೆಯಲ್ಲಿ ತೀವ್ರಗೊಳ್ಳುತ್ತಿದೆ ನಕಲಿ ಪೇಪರ್ ಕರೆನ್ಸಿ ವಿತರಣೆ

ಕಾಸರಗೋಡು: ಜಿಲ್ಲೆಯಲ್ಲಿ ನಕಲಿ ಪೇಪರ್ ಕರೆನ್ಸಿ ನೋಟುಗಳ ವಿತರಣೆ ವ್ಯಾಪಕಗೊಳ್ಳತೊಡಗಿದೆ. ಚಿಲ್ಡ್ರನ್ ಬ್ಯಾಂಕ್ ಆಫ್ ಇಂಡಿಯಾದ ಪೇಪರ್ ಕರೆನ್ಸಿಗಳನ್ನು ಅಸಲಿ ಕರೆನ್ಸಿ ರೂಪದಲ್ಲಿ ಜಿಲ್ಲೆಯಲ್ಲಿ ಕೆಲವರು ವಿತರಿಸತೊಡಗಿದ್ದಾರೆ.



ಇಂತಹ ಪೇಪರ್ ನೋಟುಗಳು ಮೇಲ್ನೋಟಕ್ಕೆ ಅಸಲಿ ಕರೆನ್ಸಿ ನೋಟುಗಳನ್ನೇ ಹೋಲುತ್ತಿದೆ. ಸರಿಯಾಗಿ ಪರಿಶೀಲಿಸಿದಲ್ಲಿ ಮಾತ್ರವೇ ಅವು ನಕಲಿ ಪೇಪರ್ ನೋಟುಗಳಾಗಿವೆಯೆಂಬುವುದು ಸ್ಪಷ್ಟಗೊಳ್ಳುತ್ತಿದೆ. ಕಾಸರಗೋಡು ಅಣಂಗೂರು ನಿವಾಸಿಯಾಗಿರುವ ಆಟೋ ಚಾಲಕನಿಗೆ 100 ರೂ. ಮುಖಬೆಲೆಯ ಪೇಪರ್ ನೋಟನ್ನು ಪ್ರಯಾಣಿಕನೋರ್ವ ನೀಡಿ ವಂಚಿಸಿದ್ದಾನೆ. ರಿಕ್ಷಾಚಾಲಕ ಆ ನೋಟ್‌ನ್ನು ಪರಿಶೀಲಿಸದೆ ಪಡೆದುಕೊಂಡಿದ್ದರು. ನಂತರ ಆ ನೋಟನ್ನು ಪರಿಶೀಲಿಸಿದಾಗ ಅದು ನಕಲಿ ಪೇಪರ್ ಕರೆನ್ಸಿಯಾಗಿದೆಯೆಂಬ ಅರಿವು ಉಂಟಾಗಿದೆ. ನಕಲಿ ಪೇಪರ್ ನೋಟುಗಳನ್ನು ಆಟೋಚಾಲಕರು ಮತ್ತಿತರರಿಗೆ ನೀಡಿ ವಂಚಿಸುತ್ತಿರುವುದು ಕಳೆದ ಕೆಲವು ದಿನಗಳಿಂದ ಹೆಚ್ಚಾಗುತ್ತಿದೆ. ಬಿಡುವಿಲ್ಲದೆ ಚಾಲಕರು ಬಾಡಿಗೆ ರೀತಿಯಲ್ಲಿ ಅವರ ಕೈಸೇರುತ್ತಿರುವ ನೋಟುಗಳನ್ನು ಸರಿಯಾಗಿ ಪರಿಶೀಲಿಸದೆ ಪಡೆಯುತ್ತಿದ್ದಾರೆ. ಆದ್ದರಿಂದ ಜನರು ಯಾವುದೇ ನೋಟುಗಳನ್ನು ಪಡೆಯುವ ಮೊದಲು ಅದನ್ನು ಸೂಕ್ಷ್ಮವಾದ ರೀತಿಯಲ್ಲಿ ಪರಿಶೀಲಿಸಿ ಅದು ಅಸಲಿ ನೋಟುಗಳಾಗಿವೆಯೋ ಎಂದು ಖಾತರಿಪಡಿಸಿದ ಬಳಿಕವಷ್ಟೇ ಪಡೆಯುಬೇಕೆಂಬ ಸಲಹೆಯನ್ನು ಪೊಲೀಸರು ನೀಡಿದ್ದಾರೆ.

ಆಳ್ವಾಸ್ ಇಂಜಿನಿಯರಿಂಗ್ ಕಾಲೇಜಿಗೆ ಸತತ 3ನೇ ಬಾರಿ ಎನ್‌ಬಿಎ ಮಾನ್ಯತೆ



ಮೂಡುಬಿದಿರೆ: ಆಳ್ವಾಸ್ ತಾಂತ್ರಿಕ ಮಹಾವಿದ್ಯಾಲಯದ ಕಂಪ್ಯೂಟರ್ ಸೈನ್ಸ್ ಆ್ಯಂಡ್ ಇಂಜಿನಿಯರಿಂಗ್ ಹಾಗೂ ಇಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಶನ್ ಇಂಜಿನಿಯರಿಂಗ್ ವಿಭಾಗಗಳಿಗೆ ಈ ಹಿಂದೆ ಲಭಿಸಿದ್ದ ರಾಷ್ಟ್ರೀಯ ಮಾನ್ಯತಾ ಮಂಡಳಿ (ಎನ್‌ಬಿಎ) ಮಾನ್ಯತೆಯನ್ನು ಮುಂದಿನ ಮೂರು ಶೈಕ್ಷಣಿಕ ವರ್ಷಗಳಿಗೆ ವಿಸ್ತರಿಸಲಾಗಿದೆ. ಇದೇ ವೇಳೆ, ಇನ್ಫರ್ಮೇಶನ್ ಸೈನ್ಸ್ ಆ್ಯಂಡ್ ಇಂಜಿನಿಯರಿಂಗ್ ವಿಭಾಗಕ್ಕೂ ಮೊದಲ ಬಾರಿಗೆ ಮುಂದಿನ ಮೂರು ಶೈಕ್ಷಣಿಕ ವರ್ಷಗಳ ಅವಧಿಗೆ ಎನ್‌ಬಿಎ ಮಾನ್ಯತೆ ದೊರೆತಿದೆ.

ಆಳ್ವಾಸ್ ಸಂಸ್ಥೆಗೆ ಸತತ ಮೂರನೇ ಬಾರಿ ಎನ್‌ಬಿಎ ಮಾನ್ಯತೆ ದೊರೆತಿರುವುದು ಶಿಕ್ಷಣದ ಗುಣಮಟ್ಟ, ಆಧುನಿಕ ಪ್ರಯೋಗಾಲಯ ಸೌಲಭ್ಯ, ಅನುಭವಸಂಪನ್ನ ಬೋಧಕ ವೃಂದ ಹಾಗೂ ಕೈಗಾರಿಕಾ ಸಂಪರ್ಕಗಳ ಶ್ರೇಷ್ಠತೆಯನ್ನು ಪ್ರತಿಬಿಂಬಿಸುತ್ತದೆ.

ಕಂಪ್ಯೂಟರ್ ಸೈನ್ಸ್ ಆ್ಯಂಡ್ ಇಂಜಿನಿಯರಿಂಗ್ ಹಾಗೂ ಇಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಶನ್ ಇಂಜಿನಿಯರಿಂಗ್ ವಿಭಾಗಗಳಿಗೆ 2025ರ ಜುಲೈ 1ರಿಂದ 2028ರ ಡಿಸೆಂಬರ್ 31ರವರೆಗೆ ಮಾನ್ಯತೆ ನೀಡಲಾಗಿದ್ದು, ಇನ್ಫರ್ಮೇಶನ್ ಸೈನ್ಸ್ ಆ್ಯಂಡ್ ಇಂಜಿನಿಯರಿಂಗ್ ವಿಭಾಗಕ್ಕೆ 2026ರ ಜನವರಿ 1ರಿಂದ 2028ರ ಡಿಸೆಂಬರ್ 31ರವರೆಗೆ ಮಾನ್ಯತೆ ಅನ್ವಯವಾಗಲಿದೆ.

ದೆಹಲಿಯ ಎನ್‌ಬಿಎ (ರಾಷ್ಟ್ರೀಯ ಮಾನ್ಯತಾ ಮಂಡಳಿಯ) ತಜ್ಞರ ತಂಡವು ಕಾಲೇಜಿನ ಇಂಜಿನಿಯರಿಂಗ್ ವಿಭಾಗಗಳ ಮೂಲಸೌಕರ್ಯ, ಬೋಧನೆ ಮತ್ತು ಕಲಿಕೆಯ ವಿಧಾನಗಳು, ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳು, ಪ್ರಕಟಣೆಗಳು, ಉದ್ಯಮಶೀಲ ಅಭಿವೃದ್ಧಿ ಚಟುವಟಿಕೆಗಳು, ವಿವಿಧ ರಾಜ್ಯ ಮತ್ತು ಕೇಂದ್ರ ಹಣಕಾಸು ಸಂಸ್ಥೆಗಳ ಅನುದಾನಗಳು, ವಿವಿಧ ಸಂಶೋಧನಾ ಸಂಸ್ಥೆಗಳು ಹಾಗೂ ಕೈಗಾರಿಕೆಗಳೊಂದಿಗೆ ಒಡಂಬಡಿಕೆಗಳನ್ನು ಪರಿಶೀಲಿಸಿ ಮೌಲ್ಯಮಾಪನ ನಡೆಸಿದೆ.

ಎನ್‌ಬಿಎ ಮಾನ್ಯತೆ ತಾಂತ್ರಿಕ ಶಿಕ್ಷಣದ ಗುಣಮಟ್ಟವನ್ನು ಅಳೆಯುವ ಪ್ರಮುಖ ಮಾನದಂಡವಾಗಿದ್ದು, ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿನ ಅವಕಾಶಗಳನ್ನು ಒದಗಿಸುತ್ತದೆ. ಎನ್‌ಬಿಎ ಮಾನ್ಯತೆ ಪಡೆದ ಕೋರ್ಸ್‌ಗಳಲ್ಲಿ ಅಭ್ಯಾಸ ಮಾಡಿದ ವಿದ್ಯಾರ್ಥಿಗಳಿಗೆ ಉದ್ಯೋಗ, ಉನ್ನತ ಶಿಕ್ಷಣ ಹಾಗೂ ವಿದೇಶಿ ವಿಶ್ವವಿದ್ಯಾಲಯಗಳ ಪ್ರವೇಶದಲ್ಲಿ ಹೆಚ್ಚುವರಿ ಮಾನ್ಯತೆ ದೊರೆಯುತ್ತದೆ. ಇದರೊಂದಿಗೆ ಶಿಕ್ಷಣದ ಗುಣಮಟ್ಟ, ಪಠ್ಯಕ್ರಮ, ಪ್ರಯೋಗಾಲಯ ಸೌಲಭ್ಯ, ಅಧ್ಯಾಪಕರ ಸಾಮರ್ಥ್ಯ ಹಾಗೂ ಕೈಗಾರಿಕಾ ಸಂಪರ್ಕಗಳನ್ನು ನಿರಂತರವಾಗಿ ಸುಧಾರಿಸಲು ಸಹಕಾರಿಯಾಗುತ್ತದೆ.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ, ಟ್ರಸ್ಟಿ ವಿವೇಕ್ ಆಳ್ವ, ಕಾಲೇಜಿನ ಪ್ರಾಂಶುಪಾಲ ಡಾ. ಪೀಟರ್ ಫೆರ್ನಾಂಡಿಸ್ ಅಭಿನಂದಿಸಿದ್ದಾರೆ.

ಗಾಂಜಾ ಮಾರಾಟ ಯತ್ನ: ಕುಖ್ಯಾತ ಆರೋಪಿ ಬಂಧನ

ಮಂಗಳೂರು: ಗಾಂಜಾ ಸಾಗಾಟ ಮತ್ತು ಮಾರಾಟಕ್ಕೆ ಯತ್ನಿಸುತ್ತಿದ್ದ ಕುಖ್ಯಾತ ಆರೋಪಿಯೊಬ್ಬನನ್ನು ಮಂಗಳೂರು ಪೊಲೀಸರು ಬಂಧಿಸಿದ್ದಾರೆ. ಉಳ್ಳಾಲ ಮುಕ್ಕಚೇರಿ ಹಿಲರಿಯ ನಗರ ನಿವಾಸಿ ಇರ್ಷಾದ್ ಅಲಿಯಾಸ್ ಇರ್ಷಾ (26) ಬಂಧಿತ ಆರೋಪಿ.



ಆರೋಪಿಯಿಂದ ಲಕ್ಷಾಂತರ ರೂ. ಮೌಲ್ಯದ ಗಾಂಜಾ ಹಾಗೂ ಇತರೆ ಸೊತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಕಾವೂರು ಪೊಲೀಸ್ ಠಾಣಾ ವ್ಯಾಪ್ತಿಯ ಮೇರಿಹಿಲ್ ಹ್ಯಾಲಿಪ್ಯಾಡ್ ಮೈದಾನದ ಬಳಿ ಬುಧವಾರ ಗಾಂಜಾ ಮಾರಾಟ ಮಾಡಲು ಸಾಗಿಸುತ್ತಿದ್ದ ಖಚಿತ ಮಾಹಿತಿ ಆಧರಿಸಿ ಪಣಂಬೂರು ಎಸಿಪಿ ತಂಡ ಹಾಗೂ ಕಾವೂರು ಠಾಣೆಯ ಜಂಟಿ ಪೊಲೀಸ್ ತಂಡ ದಾಳಿ ನಡೆಸಿ ಆರೋಪಿಯನ್ನು ವಶಕ್ಕೆ ಪಡೆದಿದೆ. ಬಂಧಿತನಿಂದ ಸುಮಾರು 3 ಕೆಜಿ 138 ಗ್ರಾಂ ಗಾಂಜಾ, ಕೃತ್ಯಕ್ಕೆ ಬಳಸಿದ ಮೊಬೈಲ್ ಫೋನ್ ಮತ್ತು ಸ್ಕೂಟರ್ ಸೇರಿದಂತೆ ಇತರೆ ಸೊತ್ತುಗಳನ್ನು ಪೊಲೀಸರು ವಶಪಡಿಸಿದ್ದಾರೆ. ಇರ್ಷಾದ್ ಹಳೆಯ ಅಪರಾಧ ಹಿನ್ನೆಲೆ ಹೊಂದಿದ್ದು, ಈ ಹಿಂದೆ ಆತನ ವಿರುದ್ಧ ಗಂಭೀರ ಪ್ರಕರಣಗಳು ದಾಖಲಾಗಿವೆ. ಉಳ್ಳಾಲ ಪೊಲೀಸ್ ಠಾಣೆಯಲ್ಲಿ ಕೊಲೆ ಯತ್ನ ಮತ್ತು ಆರ್ಮ್ಸ್ ಆಕ್ಟ್ ಅಡಿಯಲ್ಲಿ ಪ್ರಕರಣ, ಮಂಗಳೂರು ಸಿ.ಎಸ್.ಪಿ ಠಾಣೆಯಲ್ಲಿ ಎನ್‌ಡಿಪಿಎಸ್ ಕಾಯ್ದೆಯಡಿ ಮಾದಕ ವಸ್ತು ಮಾರಾಟ ಪ್ರಕರಣ, ಪ್ರಸ್ತುತ ಕಾವೂರು ಪೊಲೀಸ್ ಠಾಣೆಯಲ್ಲಿ ಆರೋಪಿ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಹೊಸ ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗಿದೆ ಎಂದು ಮಂಗಳೂರು ನಗರ ಪೊಲೀಸ್ ಕಮಿಷನರ್ ಕಚೇರಿ ಪ್ರಕಟಣೆ ತಿಳಿಸಿದೆ.

ಉಳ್ಳಾಲ: ನಕಲಿ ಪಾಸ್‌ಪೋರ್ಟ್ ಬಳಸಿ ಇಸ್ರೇಲ್‌ಗೆ ಹಾರಿದ ಮಹಿಳೆ

ಉಳ್ಳಾಲ: ಉಳ್ಳಾಲಬೈಲ್ ಮೂಲದ ಮಹಿಳೆಯೊಬ್ಬರ ದಾಖಲಾತಿಗಳನ್ನು ದುರುಪಯೋಗಪಡಿಸಿಕೊಂಡು ನಕಲಿ ಪಾಸ್‌ಪೋರ್ಟ್ ಪಡೆದು ವಿದೇಶಕ್ಕೆ ತೆರಳಿದ ಆರೋಪ ಸಂಬಂಧ ಉಳ್ಳಾಲ ಪೊಲೀಸ್ ಠಾಣೆಯಲ್ಲಿ ಸ್ವಯಂ ಪ್ರೇರಿತ ಪ್ರಕರಣ ದಾಖಲಾಗಿದೆ.

ಸಿ.ಎಸ್.ಬಿ. ಮಂಗಳೂರು ನಗರದ ಪೊಲೀಸ್ ನಿರೀಕ್ಷಕ ಗೋಪಾಲಕೃಷ್ಣ ಭಟ್ ಬಿ. ಅವರ ದೂರಿನ ಮೇರೆಗೆ ಪ್ರಕರಣ ದಾಖಲಾಗಿದ್ದು, ಯಶೋಧ ಕೇಶವ ಎಂಬವರ ಹೆಸರಿನಲ್ಲಿ ಅನ್ಯ ಮಹಿಳೆ ಪಾಸ್‌ಪೋರ್ಟ್ ಪಡೆದು ವಿದೇಶ ಪ್ರಯಾಣ ಮಾಡಿರುವ ಕುರಿತು ಮೇ 8ರಂದು ಪೊಲೀಸರಿಗೆ ಖಚಿತ ಮಾಹಿತಿ ದೊರಕಿತ್ತು.

ಪಾಸ್‌ಪೋರ್ಟ್ ಅಪ್ಲಿಕೇಶನ್ ಸಂಖ್ಯೆ ಬಿಎನ್‌ಎಕ್ಸ್067061521924 ಪರಿಶೀಲಿಸಿದ ವೇಳೆ ಅರ್ಜಿಯಲ್ಲಿ ನಮೂದಿಸಿದ್ದ ಹೆಸರು, ವಿಳಾಸ ಹಾಗೂ ಭಾವಚಿತ್ರದಲ್ಲಿ ವ್ಯತ್ಯಾಸ ಕಂಡುಬಂದಿದೆ. ತನಿಖೆಯಲ್ಲಿ ಪಾಸ್‌ಪೋರ್ಟ್‌ನಲ್ಲಿ ಬಳಸಿದ್ದ ಭಾವಚಿತ್ರವು ಫ್ರೀತಾ ಡಿ'ಸೋಜಾ ಎಂಬವರದ್ದು ಎಂದು ತಿಳಿದುಬಂದಿದೆ.

ಪಾಸ್‌ಪೋರ್ಟ್ ಸೇವಾ ಪೋರ್ಟಲ್ ದಾಖಲೆಗಳ ಪ್ರಕಾರ, ಅರ್ಜಿಯಲ್ಲಿ 'ಯಶೋಧ ಕೇಶವ' ಎಂದು ಕೈಬರಹದಲ್ಲಿ ನಮೂದಿಸಿ, ಅದರೊಂದಿಗೆ ಫ್ರೀತಾ ಡಿ'ಸೋಜಾ ಅವರ ಭಾವಚಿತ್ರ ಅಳವಡಿಸಲಾಗಿದ್ದು, ಯಶೋಧ ಎಂಬ ಹೆಸರಿನ ಸಹಿಯನ್ನೂ ಫ್ರೀತಾ ಡಿ'ಸೋಜಾ ಮಾಡಿರುವುದು ಪತ್ತೆಯಾಗಿದೆ.

ಇನ್ನಷ್ಟು ಪರಿಶೀಲನೆ ನಡೆಸಿದಾಗ, ಫ್ರೀತಾ ಡಿ'ಸೋಜಾ ಅವರು ಯಶೋಧ ಕೇಶವ ಅವರ ದಾಖಲೆಗಳಲ್ಲಿದ್ದ ವಿಳಾಸವನ್ನು ಬಳಸಿ ತಪ್ಪು ಮಾಹಿತಿ ನೀಡಿ ಅಕ್ರಮವಾಗಿ ಪಾಸ್‌ಪೋರ್ಟ್ ಪಡೆದುಕೊಂಡು, 2025ರ ಮಾರ್ಚ್ 17ರಂದು ಮುಂಬೈ ವಿಮಾನ ನಿಲ್ದಾಣದ ಮೂಲಕ ವಿದೇಶಕ್ಕೆ ತೆರಳಿರುವುದು ತಿಳಿದುಬಂದಿದೆ.


ಈ ಅಕ್ರಮಕ್ಕೆ ಉಳ್ಳಾಲ ನಿವಾಸಿ ಪ್ರೇಮ್ ಡಿ'ಸೋಜಾ ಸಹಕಾರ ನೀಡಿದ್ದಾನೆ ಎನ್ನಲಾಗಿದ್ದು, ಫ್ರೀತಾ ಡಿ'ಸೋಜಾ ಅವರನ್ನು ಇಸ್ರೇಲ್‌ಗೆ ಕಳುಹಿಸುವ ಉದ್ದೇಶದಿಂದ ಯಶೋಧ ಕೇಶವ ಅವರ ದಾಖಲಾತಿಗಳನ್ನು ಬಳಸಿ ಪಾಸ್‌ಪೋರ್ಟ್ ಸಿದ್ಧಪಡಿಸಿದ್ದಾನೆ ಎಂದು ಆರೋಪಿಸಲಾಗಿದೆ.

ಹಾಗೆಯೇ, ಯಶೋಧ ಕೇಶವ ಅವರು ತಮ್ಮ ದಾಖಲಾತಿಗಳನ್ನು ಫ್ರೀತಾ ಡಿ'ಸೋಜಾ ಅವರಿಗೆ ನೀಡಿ ನಕಲಿ ಪಾಸ್‌ಪೋರ್ಟ್ ಪಡೆಯಲು ಸಹಕರಿಸಿರುವ ಆರೋಪವೂ ಕೇಳಿಬಂದಿದೆ.

ಪ್ರಕರಣದಲ್ಲಿ ಫ್ರೀತಾ ಡಿ'ಸೋಜಾ, ಪ್ರೇಮ್ ಡಿ'ಸೋಜಾ ಹಾಗೂ ಯಶೋಧ ಕೇಶವ ಸೇರಿದಂತೆ ಇತರರ ವಿರುದ್ಧ ಉಳ್ಳಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಸೇತುವೆ ಕಾಮಗಾರಿ : ಫಲ್ಗುಣಿ ನದಿಗೆ ಹಾಕಿದ ಮಣ್ಣು

ಪರಿಸರ ಹೋರಾಟಗಾರರ ಆಕ್ರೋಶ



ಮಂಗಳೂರು: ಇಲ್ಲಿನ ಸುಲ್ತಾನ್ ಬತ್ತೇರಿ–ತಣ್ಣೀರ್‌ಬಾವಿ ಸಂಪರ್ಕಕ್ಕಾಗಿ ನಿರ್ಮಾಣಗೊಳ್ಳುತ್ತಿರುವ ಸೇತುವೆ ಕಾಮಗಾರಿಗೆ ಅನುಕೂಲವಾಗುವಂತೆ ಫಲ್ಗುಣಿ ನದಿಗೆ ಅಡ್ಡಲಾಗಿ ಹಾಕಿರುವ ಮಣ್ಣನ್ನು ಮಳೆಗಾಲದ ಮೊದಲು ತೆಗೆಯದಿದ್ದರೆ ಹಲವು ಪ್ರದೇಶಗಳು ಮುಳುಗಡೆಯಾಗಲಿದೆ. ಆದ್ದರಿಂದ ಆದಷ್ಟು ಶೀಘ್ರ ಮಣ್ಣನ್ನು ತೆರವುಗೊಳಿಸಬೇಕು ಎಂದು ರಾಷ್ಟ್ರೀಯ ಪರಿಸರ ಸಂರಕ್ಷಣಾ ಒಕ್ಕೂಟದ (ಎನ್‌ಇಸಿಎಫ್) ಸದಸ್ಯರು ಆಗ್ರಹಿಸಿದ್ದಾರೆ.

ಗುರುವಾರ ಸ್ಥಳಕ್ಕೆ ಭೇಟಿ ನೀಡಿದ ಎನ್‌ಇಸಿಎಫ್ ಸದಸ್ಯರು, ಸೇತುವೆ ನಿರ್ಮಾಣದ ಉದ್ದೇಶದಿಂದ ಹಾಕಿರುವ ಮಣ್ಣನ್ನು ತೆರವುಗೊಳಿಸುವಂತೆ ಆಗ್ರಹಿಸಿದರು. ಎನ್‌ಇಸಿಎಫ್ ಪ್ರಧಾನ ಕಾರ್ಯದರ್ಶಿ ಶಶಿಧರ್ ಶೆಟ್ಟಿ ಮಾತನಾಡಿ, ಸೇತುವೆ ನಿರ್ಮಾಣ ಕಾಮಗಾರಿಯ ಹೆಸರಿನಲ್ಲಿ ಮಂಗಳೂರು ಸ್ಮಾರ್ಟ್ ಸಿಟಿ ಅಧಿಕಾರಿಗಳು ನೇತ್ರಾವತಿ ಮತ್ತು ಫಲ್ಗುಣಿ ನದಿಗಳ ಸಹಜ ನೀರಿನ ಹರಿವಿಗೆ ಅಡ್ಡಿಪಡಿಸಿದ್ದಾರೆ. ಇದರಿಂದಾಗಿ ನೀರು ಹಿಮ್ಮುಖವಾಗಿ ಚಲಿಸಿ ಬೆಂಗ್ರೆ, ಕೊಟ್ಟಾರ, ಮಾಲೆಮಾರ್, ಕೂಳೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳು ಮಳೆಗಾಲದಲ್ಲಿ ಮುಳುಗಡೆಯಾಗುವ ಸಾಧ್ಯತೆ ಇದೆ ಎಂದರು.

ಮಣ್ಣು ತೆರವುಗೊಳಿಸುತ್ತೇವೆ: ಅರುಣ್ ಪ್ರಭ

ಸುಲ್ತಾನ್ ಬತ್ತೇರಿ ಭಾಗದಲ್ಲಿ ಸೇತುವೆಯ ಎಲ್ಲಾ ಪಿಲ್ಲರ್ ಕಾಮಗಾರಿಗಳು ಪೂರ್ಣಗೊಂಡಿವೆ. ಎಲ್ಲಾ ಕಾಮಗಾರಿ ಪೂರ್ಣಗೊಂಡ ಬಳಿಕ ಮಣ್ಣು ತೆರವುಗೊಳಿಸಲಾಗುವುದು ಎಂದು ಸ್ಮಾರ್ಟ್ ಸಿಡಿ ಎಂಡಿ ಅರುಣ್ ಪ್ರಭ ತಿಳಿಸಿದ್ದಾರೆ. ಸೇತುವೆ ನಿರ್ಮಾಣವಾಗುವಾಗ ಮಣ್ಣು ಹಾಕುವುದು ಸಾಮಾನ್ಯ. ಕಾಮಗಾರಿ ಮುಗಿಯುತ್ತಿದ್ದಂತೆ ಮಣ್ಣನ್ನು ತೆರವುಗೊಳಿಸಲೇ ಬೇಕಾಗುತ್ತದೆ. ಇದು ಸೇತುವೆ ನಿರ್ಮಾಣದಲ್ಲಿ ಅನುಸರಿಸುವ ವಿಧಾನ ಎಂದು ಸ್ಪಷ್ಟಪಡಿಸಿದರು.

ಶಾಲಾ ಕಾಲೇಜುಗಳಲ್ಲಿ ಹಿಜಾಬ್ ನಿಷೇಧ ಆದೇಶ ಹಿಂಪಡೆದ ಸರ್ಕಾರದ ನಿರ್ಧಾರಕ್ಕೆ ಶಾಸಕರು ಸೇರಿದಂತೆ ಬಿಜೆಪಿ ಮುಖಂಡರ ತೀವ್ರ ಆಕ್ರೋಶ

ಕಾಂಗ್ರೆಸ್‌ನಿಂದ ಶೈಕ್ಷಣಿಕ ಕ್ಷೇತ್ರದಲ್ಲೂ ಮುಂದುವರಿದ ಒಡೆದು ಆಳುವ ನೀತಿ

ಮಂಗಳೂರು: ಶಾಲಾ ಕಾಲೇಜುಗಳಲ್ಲಿ ಹಿಜಾಬ್ ನಿಷೇಧ ಕುರಿತ ಆದೇಶವನ್ನು ರಾಜ್ಯದ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಹಿಂಪಡೆದಿರುವುದನ್ನು ಬಿಜೆಪಿ ಶಾಸಕರು ಸೇರಿದಂತೆ ಹಲವು ಮಂದಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಶೈಕ್ಷಣಿಕ ಕೇಂದ್ರಗಳಲ್ಲಿ ಸಮಾನತೆ ಹಾಗೂ ಮಕ್ಕಳಲ್ಲಿ ಏಕತೆ ತರುವ ಉದ್ದೇಶದಿಂದ ಹಿಂದಿನ ಬಿಜೆಪಿ ಸರ್ಕಾರ ಜಾರಿಗೊಳಿಸಿದ್ದ ಶಿಸ್ತುಬದ್ಧ ಸಮವಸ್ತ್ರ ನಿಯಮವನ್ನು ರಾಜ್ಯ ಕಾಂಗ್ರೆಸ್ ಸರ್ಕಾರವು ಹಿಂಪಡೆಯುವ ಮೂಲಕ ಶಾಲಾ–ಕಾಲೇಜುಗಳ ಶೈಕ್ಷಣಿಕ ವಾತಾವರಣವನ್ನು ಹಾಳುಗೆಡವಲು ಮುಂದಾಗಿದೆ ಎಂದು ಮಂಗಳೂರಿನ ಉತ್ತರ ಮತ್ತು ದಕ್ಷಿಣ ಶಾಸಕರಾದ ಡಾ. ವೈ. ಭರತ್ ಶೆಟ್ಟಿ ಹಾಗೂ ಡಿ.ವೇದವ್ಯಾಸ ಕಾಮತ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.





ಸಮವಸ್ತ್ರದ ಮೂಲ ಉದ್ದೇಶವೇ ವಿದ್ಯಾರ್ಥಿಗಳಲ್ಲಿ ಜಾತಿ–ಮತ–ಭೇದ ಮರೆಸಿ ಸಮಾನತೆಯ ಭಾವ ಮೂಡಿಸುವುದು. ಆದರೆ ಓಲೈಕೆ ರಾಜಕಾರಣಕ್ಕಾಗಿ ರಾಜ್ಯ ಸರ್ಕಾರವೇ, ಧರ್ಮದ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ವಿಭಜಿಸುತ್ತಿರುವುದು ಎಷ್ಟು ಸರಿ? ಈ ಹಿಂದೆ ಉಂಟಾಗಿದ್ದ ಹಿಜಾಬ್ ವಿವಾದವು ಇನ್ನೂ ಸುಪ್ರೀಂಕೋರ್ಟ್‌ನಲ್ಲಿ ಬಾಕಿ ಇರುವಾಗಲೇ, ನ್ಯಾಯಾಂಗದ ಪ್ರಕ್ರಿಯೆಯನ್ನು ಕಡೆಗಣಿಸಿ ಹಿಜಾಬ್ ನಿಷೇಧವನ್ನು ಹಿಂಪಡೆದಿರುವುದು ನ್ಯಾಯಾಂಗ ನಿಂದನೆಯಾಗಿದೆ. ತನ್ನ ವೋಟ್ ಬ್ಯಾಂಕ್ ಗಾಗಿ ದೇಶದ ಸಮಗ್ರತೆ ಹಾಗೂ ಸಂವಿಧಾನವನ್ನು ಸಹ ಧಿಕ್ಕರಿಸುವ ಮಟ್ಟಕ್ಕೆ ಹೋಗುವ ಕಾಂಗ್ರೆಸ್‌ನದ್ದು ಎಂದಿಗೂ ಒಡೆದು ಆಳುವ ನೀತಿ ಎಂದವರು ಹೇಳಿದ್ದಾರೆ. ಹಿಜಾಬ್‌ಗೆ ಅವಕಾಶ ನೀಡಿ, ಕೇಸರಿ ಶಾಲ್‌ಗೆ ಅವಕಾಶ ನೀಡುವುದಿಲ್ಲ ಎಂದು ಹೇಳಿಕೆ ನೀಡಿ ನಮ್ಮದು ತುಘಲಕ್ ಮಾದರಿ ಆಡಳಿತ ಎಂಬುದನ್ನು ಸರ್ಕಾರವೇ ಸಾಬೀತು ಪಡಿಸಿದೆ. ರಾಜ್ಯದಲ್ಲಿ ಶಿಕ್ಷಕರ ಕೊರತೆ , ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಅಲಭ್ಯತೆ ಮೊದಲಾದ ಪ್ರಮುಖ ವಿಷಯಗಳ ಕುರಿತು ತಲೆಕೆಡಿಸಿಕೊಳ್ಳದ ಈ ಸರ್ಕಾರ ವಿದ್ಯಾರ್ಥಿಗಳಲ್ಲಿ ಪ್ರತ್ಯೇಕತೆ ಮೂಡಿಸುವ ಕೃತ್ಯಕ್ಕೆ ಕೈ ಹಾಕಿದೆ ಎಂದು ಶಾಸಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ದೇಶಾದ್ಯಂತ ಜನವಿಶ್ವಾಸ ಕಳೆದುಕೊಳ್ಳುತ್ತಿರುವ ಕಾಂಗ್ರೆಸ್ ಕನಿಷ್ಠ ಕರ್ನಾಟಕದಲ್ಲಾದರೂ ತನ್ನ ಮರ್ಯಾದೆ ಉಳಿಸಿಕೊಳ್ಳಲು ಹಿಜಾಬ್, ಎಸ್ ಐಆರ್, ಅಲ್ಪ ಸಂಖ್ಯಾತರ ಮೇಲಿನ ಕೇಸ್ ವಾಪಸ್ ನಂತಹ ಓಟ್ ಬ್ಯಾಂಕ್ ರಾಜಕಾರಣ ಆರಂಭಿಸಿದೆ. ರಾಜ್ಯದಲ್ಲಿ ಅಭಿವೃದ್ಧಿ, ಕಾನೂನು ಸುವ್ಯವಸ್ಥೆ ಕಾಪಾಡಲು ವಿಫಲವಾಗಿ ಇದೀಗ ಇಂತಹ ಕೃತ್ಯಕ್ಕೆ ಕೈ ಹಾಕಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಸರ್ಕಾರ ಆದೇಶ ಹಿಂಪಡೆಯಲಿ: ಸಂದೇಶ್ ಶೆಟ್ಟಿ ಆಗ್ರಹ

ಮಂಗಳೂರು: ಸಮಾನತೆಯ ದೃಷ್ಟಿಯಿಂದ ಶಾಲಾ ಕಾಲೇಜುಗಳಲ್ಲಿ ಹಿಜಾಬ್ ನಿಷೇಧ ಆದೇಶದ ಮೂಲಕ ಬಿಜೆಪಿ ಸರ್ಕಾರ ಹೊಸ ಬದಲಾವಣೆಗೆ ಮುಂದಾಗಿತ್ತು. ಈ ವಿವಾದ ಸುಪ್ರಿಂ ಕೋರ್ಟ್‌ನಲ್ಲಿದ್ದು, ಇನ್ನೂ ಇತ್ಯರ್ಥವಾಗಿಲ್ಲ. ಅಷ್ಟರಲ್ಲೇ ರಾಜ್ಯದ ಕಾಂಗ್ರೆಸ್ ಸರ್ಕಾರ ಆದೇಶ ಹಿಂಪಡೆಯುವ ಮೂಲಕ ತನ್ನದು ಅಲ್ಪಸಂಖ್ಯಾತ ಪರ ಓಲೈಕೆಯ ಸರ್ಕಾರ ಎಂಬುದನ್ನು ಸಾಬೀತುಪಡಿಸಿದೆ ಎಂದು ಬಿಜೆಪಿ ಮುಖಂಡ ಸಂದೇಶ್ ಶೆಟ್ಟಿ ಅರೆಬೆಟ್ಟು ಸರ್ಕಾರದ ಕ್ರಮವನ್ನು ಟೀಕಿಸಿದ್ದಾರೆ.




ಶಿಸ್ತುಬದ್ಧ ಸಮವಸ್ತ್ರ ನಿಯಮ ಜಾರಿಯಿಂದ ವಿದ್ಯಾರ್ಥಿಗಳಲ್ಲಿ ಏಕತೆ ಮೂಡಿಸಲು ಸಹಕಾರಿಯಾಗಿತ್ತು. ಆದರೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಶಾಲಾ ಕಾಲೇಜುಗಳಲ್ಲೂ ಮಕ್ಕಳಲ್ಲಿ ವೈಮನಸ್ಸು ಸೃಷ್ಟಿಸಲು ಪುಷ್ಠಿ ನೀಡಿರುವುದು ದುರದೃಷ್ಟಕರ. ಇಂತಹ ಬೆಳವಣಿಗೆ ಒಳ್ಳೆಯದಲ್ಲ ಎಂದವರು ಸರ್ಕಾರದ ವಿರುದ್ಧ ಕಿಡಿಕಾರಿದ್ದಾರೆ. ಶಿಕ್ಷಣ ಸಂಸ್ಥೆಗಳಲ್ಲಿ ಸಮಾನತೆ ಇರಬೇಕು. ಇಲ್ಲೂ ಒಡಕುಂಟು ಮಾಡುವುದು ಸರಿಯಲ್ಲ. ಮಕ್ಕಳು ಸೌಹಾರ್ದಯುತ ವಾಗಿ ಕಲಿಯುವ ವಾತಾವರಣ ನಿರ್ಮಾಣವಾಗಬೇಕು. ಈ ಉದ್ದೇಶದಿಂದಲೆ ಬಿಜೆಪಿ ಸರ್ಕಾರ ತರಗತಿಗಳಲ್ಲಿ ಹಿಜಾಬ್‌ಗೆ ಕಡಿವಾಣ ಹಾಕಲು ಮುಂದಾಗಿತ್ತು. ಆದರೆ ಕಾಂಗ್ರೆಸ್ ಸರ್ಕಾರ ಮತ್ತೆ ತನ್ನ ಧೋರಣೆ ಮುಂದುವರೆಸುವ ಮೂಲಕ ತಾರತಮ್ಯ ನೀತಿ ಮುಂದುವರಿಯಲು ಒತ್ತು ನೀಡಿದೆ. ಮುಂದಿನ ದಿನಗಳಲ್ಲಿ ಜನತೆ ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಸಂದೇಶ್ ಶೆಟ್ಟಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 33° 26°
ಉಡುಪಿ 34° 28°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಶುಕ್ರವಾರ 15, ಮೇ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



‘ಹೊಸದಿಗಂತ’ ವರದಿಗೆ ಸಿಎಂ ಕಚೇರಿಯಿಂದ ತುರ್ತು ಸ್ಪಂದನೆ



ಕೋಟ: ತಾತ್ಕಾಲಿಕ ಹೊಳೆ ದಂಡೆ ನಿರ್ಮಿಸಲು ಮುಂದಾದ ರೈತರು

ಕೆಲವು ತಾಸು ಸುರಿದ ಮಳೆಗೆ ಮಂಗಳೂರು ನಗರದ ಹಲವೆಡೆ ರಸ್ತೆಗಳಲ್ಲಿ ಕೃತಕ ನೆರೆ ಸೃಷ್ಟಿ!




ಗುರುವಾರ ಸಂಜೆ ಗುಡುಗು ಸಿಡಿಲ ಆರ್ಭಟದೊಂದಿಗೆ ಸುರಿದ ಧಾರಾಕಾರ ಮಳೆಯ ಪರಿಣಾಮ ಮಂಗಳೂರು ನಗರದ ಹಲವೆಡೆ ಕೃತಕ ನೆರೆ ಉಂಟಾಗಿತ್ತು. ಬಿಜೈ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣ ಸಮೀಪದ ರಸ್ತೆಯಲ್ಲಿ ಅಸಮರ್ಪಕ ಚರಂಡಿ ವ್ಯವಸ್ಥೆಯ ಪರಿಣಾಮ ರಸ್ತೆ ಸಂಪೂರ್ಣ ಮಳೆ ನೀರಿನಿಂದ ಆವೃತವಾಗಿತ್ತು. ಇದರ ಪರಿಣಾಮ ಕಾರು, ದ್ವಿಚಕ್ರ ವಾಹನ ಸವಾರರು ಹಾಗೂ ಪಾದಚಾರಿಗಳು ಪರದಾಟ ನಡೆಸುತ್ತಿರುವ ದೃಶ್ಯ ಕಂಡು ಬಂತು.

ಸುತ್ತಮುತ್ತ

ತಾತ್ಕಾಲಿಕ ತಡೆಗೋಡೆಗೆ ಕಾರು ಡಿಕ್ಕಿ: ಅಪಾಯದಿಂದ ಪ್ರಯಾಣಿಕರು ಪಾರು

ಬೆಳ್ತಂಗಡಿ: ರಸ್ತೆ ಕಾಮಗಾರಿ ಅಂಗವಾಗಿ ರಸ್ತೆ ಬದಿ ಹಾಕಲಾಗಿರುವ ತಾತ್ಕಾಲಿಕ ತಡೆಗೋಡೆಗೆ ಕಾರು ಡಿಕ್ಕಿ ಹೊಡೆದ ಪ್ರಕರಣ ಬುಧವಾರ ತಡರಾತ್ರಿ ನಡೆದಿದೆ. ಮಂಗಳೂರು–ವಿಲ್ಲುಪುರಂ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದ್ದು, ಮುಂಡಾಜೆಯ ಸನ್ಯಾಸಿಕಟ್ಟೆ ಶ್ರೀ ಪರಶುರಾಮ ದೇವಸ್ಥಾನದ ಮುಂಭಾಗದಿಂದ ಹಾದುಹೋಗುವ ರಸ್ತೆಯ ಒಂದು ಬದಿ ನೂತನ ಸೇತುವೆ ರಚನೆ ಕಾಮಗಾರಿ ನಡೆಯುತ್ತಿದ್ದು, ಇದು ಪೂರ್ಣಗೊಂಡಿಲ್ಲ. ಈ ರಸ್ತೆ ಮೂಲಕ ವಾಹನ ಸಂಚಾರ ನಡೆಸದಂತೆ ರಸ್ತೆ ಬದಿ ತಾತ್ಕಾಲಿಕ ತಡೆಗೋಡೆಯನ್ನು ಇರಿಸಲಾಗಿದೆ. ಚಾರ್ಮಾಡಿ ಕಡೆಯಿಂದ ಉಜಿರೆ ಕಡೆ ಹೋಗುತ್ತಿದ್ದ ಕಾರು ಇದಕ್ಕೆ ಡಿಕ್ಕಿಯಾಗಿದ್ದು, ಕಾರಿನ ಮುಂಭಾಗ ಜಖಂಗೊಂಡಿದೆ. ಕಾರಿನಲ್ಲಿದ್ದವರು ಅಪಾಯದಿಂದ ಪಾರಾಗಿದ್ದಾರೆ. ಬೆಳ್ತಂಗಡಿ ತಾಲೂಕಿನಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಿಂದ ರಸ್ತೆ ಕಾಮಗಾರಿ ಆಮೆಗತಿಯಲ್ಲಿದೆ.

7 ವಿದ್ಯುತ್ ಕಂಬ ಸೇರಿದಂತೆ ಅಂದಾಜು ಲಕ್ಷಾಂತರ ರೂ. ನಷ್ಟ

ಮುಲ್ಕಿ: ತಾಲೂಕು ವ್ಯಾಪ್ತಿಯಲ್ಲಿ ಮಂಗಳವಾರ ರಾತ್ರಿ ಸುರಿದ ಮಳೆಗೆ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ ಎಂದು ಅಧಿಕಾರಿಗಳ ಮೂಲಗಳು ತಿಳಿಸಿದೆ. ಹಾನಿಯಾದ ಸ್ಥಳಗಳಿಂದ ಅಧಿಕಾರಿಗಳ ತಂಡ ಭೇಟಿ ನೀಡುತ್ತಿದ್ದಾರೆ. ಮಂಗಳವಾರ ರಾತ್ರಿ ಸುರಿದ ಮಳೆಗೆ ಮುಲ್ಕಿ ಪರಿಸರದಲ್ಲಿ ಸುಮಾರು 7 ವಿದ್ಯುತ್ ಕಂಬಗಳಿಗೆ ಹಾನಿಯಾಗಿ, ಮೆಸ್ಕಾಂಗೆ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಡಾ. ರಂಜನಾ ಎಂಬವರ ಮನೆಯ ಆವರಣ ಗೋಡೆಗೆ ಹಾನಿಯಾಗಿ, ಅಪಾರ ನಷ್ಟ ಉಂಟಾಗಿದೆ. ಹಲವೆಡೆ ಮರಗಳು ಧರಾಶಾಹಿಯಾಗಿದೆ. ಕೂಡಲೇ ಸ್ಥಳಕ್ಕೆ ಆಗಮಿಸಿ ಮೆಸ್ಕಾಂ ಇಲಾಖೆಯ ಸಿಬ್ಬಂದಿಗಳು ಮರ ಹಾಗೂ ವಿದ್ಯುತ್ ಕಂಬ ತೆರವುಗೊಳಿಸುವ ಕಾರ್ಯ ನಡೆಸಿ, ವಿದ್ಯುತ್ ಸರಬರಾಜು ವ್ಯವಸ್ಥೆ ಸರಿಪಡಿಸಿದರು.

ಜನಗಣತಿ ಯಶಸ್ವಿ: ಮುಲ್ಕಿ ಮುಖ್ಯಾಧಿಕಾರಿಗೆ ದ.ಕ. ಜಿಲ್ಲಾಧಿಕಾರಿ ಪ್ರಶಂಸೆ

ಮುಲ್ಕಿ: ಭಾರತದ ಸರ್ಕಾರದ ವತಿಯಿಂದ ನಡೆಸಲಾಗುವ ಜನಗಣತಿ–2027ರ ಮೊದಲ ಹಂತವಾಗಿ ಮನೆಗಳ ಪಟ್ಟಿ ಮತ್ತು ವಸತಿ ಗಣತಿ ಕಾರ್ಯವನ್ನು ಕರ್ನಾಟಕ ರಾಜ್ಯದಲ್ಲಿ ಎಪ್ರಿಲ್ 1 ರಿಂದ 2026 15 ಮೇ 2026ರ ವರೆಗೆ ಕೈಗೊಳ್ಳಲು ಅವಧಿಯನ್ನು ನಿಗದಿಪಡಿಸಲಾಗಿದ್ದು, ಜಿಲ್ಲೆಯ 22 ಜನಗಣತಿ ಚಾರ್ಜ್‌ಗಳ ಪೈಕಿ ಮುಲ್ಕಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಮನೆಗಳ ಪಟ್ಟಿ ಮತ್ತು ವಸತಿ



ಗಣತಿ ಕಾರ್ಯವನ್ನು ಪ್ರಥಮವಾಗಿ ಯಶಸ್ವಿಯಾಗಿ ನಿಗದಿಪಡಿಸಿದ ಅವಧಿಗೂ ಮೊದಲೇ ಪೂರ್ಣಗೊಳಿಸಿರುವ ಬಗ್ಗೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ ಅಭಿನಂದಿಸಿದ್ದಾರೆ. ಅವರು ಮುಲ್ಕಿ ಪ.ಪಂ. ಮುಖ್ಯಾಧಿಕಾರಿ ಮಧುಕರ್ ಅವರ ಕರ್ತವ್ಯ ಶ್ರಮತೆಯನ್ನು ಶ್ಲಾಘಿಸಿ ಜನಗಣತಿ ಚಾರ್ಜ್ ಅಧಿಕಾರಿಯಾಗಿ ಮುಖ್ಯಾಧಿಕಾರಿ ಮಧುಕರ್ ತೋರಿದ ಆಸಕ್ತಿ, ಉತ್ಸಾಹ, ಪ್ರಾಮಾಣಿಕ ಪ್ರಯತ್ನ ಹಾಗೂ ಮೇಲ್ವಿಚಾರಣೆಯಿಂದ ಕಾರ್ಯ ಸಾಧ್ಯವಾಗಿದೆ. ಜನಗಣತಿ ಕಾರ್ಯದಲ್ಲಿ ಮುಖ್ಯಾಧಿಕಾರಿ ಹಾಗೂ ತಂಡ ನೀಡಿದ ಸಹಕಾರವನ್ನು ಜಿಲ್ಲಾಡಳಿತ ಹೃದಯ ತುಂಬಿ ಪ್ರಶಂಸಿಸುತ್ತದೆ. ನಿಮ್ಮ ಈ ಕಾರ್ಯ ಶೈಲಿಯು ಇತರರಿಗೂ ಮಾದರಿ. ತಾವು ತೋರಿದ ಆಸಕ್ತಿ ಮತ್ತು ಸಹಕಾರವು ಜಿಲ್ಲಾಡಳಿತದೊಂದಿಗೆ ಮುಂದಿನ ದಿನಗಳಲ್ಲಿ ಇದೇ ರೀತಿ ಇರಲೆಂದು ಆಶಿಸುತ್ತೇವೆ. ಎಂದು ಮುಲ್ಕಿ ಪಟ್ಟಣ ಪಂಚಾಯತ್‌ಗೆ ನೀಡಿರುವ ಪ್ರಶಂಸನೀಯ ಪತ್ರದಲ್ಲಿ ಡಿಸಿ ತಿಳಿಸಿದ್ದಾರೆ.

ಚುರುಕು ಪಡೆದ ಪೂರ್ವ ಮುಂಗಾರು
ಅಲ್ಲಲ್ಲಿ ವರ್ಷಧಾರೆ
ದ.ಕ., ಉಡುಪಿ ಜಿಲ್ಲೆಯಲ್ಲಿ ಉತ್ತಮ ಮಳೆ

ಮಂಗಳೂರು/ಉಡುಪಿ: ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಾದ್ಯಂತ ಗುರುವಾರ ಸಂಜೆ ಹಾಗೂ ರಾತ್ರಿ ಗುಡುಗು ಸಿಡಿಲ ಅಬ್ಬರದೊಂದಿಗೆ ಧಾರಾಕಾರ ಮಳೆಯಾಗಿದೆ. ಮಳೆಯ ಪರಿಣಾಮದಿಂದ ಸೆಕೆಯ ವಾತಾವರಣ ದೂರುವಾಗಿದ್ದು, ಮುಂದಿನ ಒಂದು ವಾರಗಳ ಕಾಲ ಪೂರ್ವ ಮುಂಗಾರು ಮಳೆ ಚುರುಕುಗೊಳ್ಳುವ ಸಾಧ್ಯತೆಯಿದೆ.

ದ.ಕ.ದ ಹಲವೆಡೆ ಮಳೆ

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ, ಸುಳ್ಯ, ಸುಬ್ರಹ್ಮಣ್ಯ, ಪುತ್ತೂರು, ಕಡಬ ಸಹಿತ ಹಲವೆಡೆ ಗ್ರಾಮೀಣ ಪ್ರದೇಶಗಳಲ್ಲಿ ಉತ್ತಮ ಮಳೆಯಾಗಿದೆ.

ಉಡುಪಿ ಜಿಲ್ಲೆಯಲ್ಲೂ ಮಳೆ

ಉಡುಪಿ ನಗರ, ಕಾಪು, ಕಾರ್ಕಳ, ಕುಂದಾಪುರ, ಹೆಬ್ರಿ ಭಾಗದಲ್ಲಿ ಗುರುವಾರ ಮುಂಗಾರು ಪೂರ್ವ ಮಳೆ ಸುರಿಯಿತು. ಗುಡುಗು, ಸಿಡಿಲು ಸಹಿತ ಮಳೆ ಧಾರಾಕಾರವಾಗಿ ಮಳೆ ಸುರಿಯಿತು.



ಮೇ 18ರವರೆಗೆ ಮಳೆ

ಹವಾಮಾನ ಇಲಾಖೆಯ ಮುನ್ಸೂಚನೆ ಪ್ರಕಾರ ಕರಾವಳಿ ಜಿಲ್ಲೆಗಳಾದ ಉಡುಪಿ ಹಾಗೂ ದಕ್ಷಿಣ ಕನ್ನಡದಲ್ಲಿ ಮೇ 18 ರವರೆಗೂ ಮಳೆಯಾಗುವ ಸಾಧ್ಯತೆ ಇದೆ. ಅಲ್ಲದೇ ಕೊಡಗು ಹಾಗೂ ಕಾಸರಗೋಡಿನಲ್ಲೂ ಅಲ್ಲಲ್ಲಿ ಸಾಮಾನ್ಯ ಮಳೆಯಾಗುವ ಸಾಧ್ಯತೆಯಿದೆ.

ಇಡೀ ನಗರಸಭಾ ವ್ಯಾಪ್ತಿಯಲ್ಲಿ ಮಳೆಯ ಸಿಂಚವಾಗದಿದ್ದರೂ, ಅಲ್ಲ ಲ್ಲಿ ಉತ್ತಮ ಮಳೆಯಾಯಿತು. ಉಡುಪಿ ನಗರ, ಮಣಿಪಾಲ, ಅಲೆವೂರು, ಸಂತೆಕಟ್ಟೆ, ಕಟಪಾಡಿ, ಕಾಪುಗಳಲ್ಲಿ ಉತ್ತಮ ಮಳೆಯಾಗಿದೆ. ಕೆಲವು ಕಡೆಗಳಲ್ಲಿ ಭಾರೀ ಗಾತ್ರದ ಮರ ಗಳು ಧರಾಶಾಹಿಯಾಗಿರುವುದು ಕಂಡು ಬಂತು. ಮಳೆ ಪ್ರಾರಂಭವಾಗುತಿದ್ದಂತೆ ವಿದ್ಯುತ್ ಕೂಡಾ ಕೈಕೊಟ್ಟಿತು. ಅನಿರೀಕ್ಷಿತವಾಗಿ ಮಳೆ ಸುರಿದಿದ್ದರಿಂದ ವಿವಿಧ ಕೆಲಸದ ಮೇಲೆ ನಗರದಲ್ಲಿದ್ದವರು ಮಳೆಗೆ ಒದ್ದೆಯಾದರು. ಕಳೆದ ಕೆಲವು ದಿನಗಳಿಂದ ಕರಾವಳಿ ಭಾಗದಲ್ಲಿ ಪ್ರತಿದಿನ ಅರ್ಧಗಂಟೆಗೂ ಅಧಿಕ ಕಾಲ ಸಂಜೆ ಮಳೆಯಾಗುತ್ತಿರುವ ಪರಿಣಾಮ ವ್ಯಾಪಾರ ಚಟುವಟಿಕೆಗೆ ಹಿನ್ನಡೆಯಾಗಿದೆ.

ಕೈಕೊಟ್ಟ ವಿದ್ಯುತ್

ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರ ಪ್ರದೇಶವಾದ ಬೆಳ್ತಂಗಡಿ, ಸುಳ್ಯ, ಸುಬ್ರಹ್ಮಣ್ಯ ಪರಿಸರದಲ್ಲಿ ಧಾರಾಕಾರ ಮಳೆಯ ಪರಿಣಾಮ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಿದ್ದು, ಉಡುಪಿ ಜಿಲ್ಲೆಯ ಹಲವು ಭಾಗದಲ್ಲೂ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಿದೆ.

ದೇಶಕ್ಕಾಗಿ ನಮೋ ಮಿತವ್ಯಯ ಕರೆ
ಕಾರು ಬಿಟ್ಟು ಸಾರಿಗೆ, ಆಟೋದಲ್ಲಿ ಪಯಣ
ದ.ಕ. ಬಿಜೆಪಿ ನಾಯಕರಿಂದ ಸಾಥ್




ಪುತ್ತೂರು: ಮಧ್ಯಪ್ರಾಚ್ಯ ದೇಶಗಳಲ್ಲಿ ನಡೆದ ಯುದ್ಧದ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿ ನೀಡಿರುವ ಮಿತವ್ಯಯ ಕರೆ ಪಾಲನೆ ಮಾಡುವ ನಿಟ್ಟಿನಲ್ಲಿ ಬಿಜೆಪಿ ದ.ಕ. ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಸೇರಿದಂತೆ ಪಕ್ಷದ ಪದಾಕಾರಿಗಳು ಮೇ 14ರಂದು ಸರಕಾರಿ ಸಾರಿಗೆ ಬಸ್‌ನಲ್ಲಿ ಪುತ್ತೂರಿಗೆ ಆಗಮಿಸಿದರು.

ಖಾಸಗಿ ಕಾರ್ಯಕ್ರಮ

ಪುತ್ತೂರು ಬಿಜೆಪಿ ನಗರ ಮಂಡಲದ ಪ್ರಧಾನ ಕಾರ್ಯದರ್ಶಿ ಶಶಿಧರ್ ನಾಯಕ್ ಅವರ ವಿವಾಹದ ಆತಿಥಿ ಸತ್ಕಾರಕ್ಕೆ ಮಂಗಳೂರು ಬಿಜೈ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಿಂದ ಸಾರಿಗೆ ಬಸ್‌ನಲ್ಲಿ ಪದಾಧಿಕಾರಿಗಳು ಸಾಮೂಹಿಕವಾಗಿ ಪುತ್ತೂರಿಗೆ ಆಗಮಿಸಿದರು. ಬಸ್ ನಿಲ್ದಾಣದಿಂದ ಆಟೋ ರಿಕ್ಷಾದಲ್ಲಿ ಆತಿಥಿ ಸತ್ಕಾರ ನಡೆಯಲಿರುವ ಕಲ್ಯಾಣ ಮಂಟಪಕ್ಕೆ ತೆರಳಿ ಅಲ್ಲಿಂದ ಆಟೋ ರಿಕ್ಷಾದಲ್ಲಿ ಬಸ್ ನಿಲ್ದಾಣಕ್ಕೆ ಆಗಮಿಸಿ ನಂತರ ಬಸ್‌ನಲ್ಲಿ ಮಂಗಳೂರಿಗೆ ನಿರ್ಗಮಿಸಿದರು. ಈ ಮೂಲಕ ದೇಶದ ಪ್ರಧಾನಿ ಕರೆಯನ್ನು ಬೆಂಬಲಿಸಿದ್ದಾರೆ. ಈ ಸಂದರ್ಭ ಸತೀಶ್ ಕುಂಪಲ ಮಾಧ್ಯಮದವರೊಂದಿಗೆ ಮಾತನಾಡಿದರು. »ಪುಟ 4

ಅನಾಥವಾಗಿ ಅಲ್ಲಲ್ಲಿ ಬಿದ್ದಿದೆ ಬ್ಯಾರಿಕೇಡ್‌ಗಳು
ಪುತ್ತೂರು ನಗರದಲ್ಲಿ ಕಾಣಬಹುದು ಈ ದೃಶ್ಯ | ಪೊಲೀಸ್ ಇಲಾಖೆಯ ನಿರ್ಲಕ್ಷ್ಯ

ಪುತ್ತೂರು: ಜಾತ್ರೆ, ಉತ್ಸವ, ಮೆರವಣಿಗೆ, ಗಣ್ಯಾತಿಗಣ್ಯರ ಭೇಟಿ ಮತ್ತಿತರ ಜನಜಂಗುಳಿ ಹೆಚ್ಚುವ ಸಂದರ್ಭಗಳಲ್ಲಿ ಸಂಚಾರ ನಿಯಂತ್ರಣಕ್ಕಾಗಿ ಸಂಚಾರಿ ಪೊಲೀಸರು ರಸ್ತೆಗಳಲ್ಲಿ ಬ್ಯಾರಿಕೇಡ್‌ಗಳನ್ನು ಇರಿಸುತ್ತಾರೆ. ಬದಲಿ ರಸ್ತೆಗಳನ್ನು ಬಳಸಲು, ರಸ್ತೆಗಳನ್ನು ತಾತ್ಕಾಲಿಕವಾಗಿ ಒನ್ ವೇ ಆಗಿ ಪರಿವರ್ತಿಸುವ ಸಂದರ್ಭಗಳಲ್ಲೂ ಬ್ಯಾರಿಕೇಡ್ ಬಳಕೆ ಅತ್ಯಗತ್ಯ. ಕಾರ್ಯಕ್ರಮಗಳು ಮುಗಿದ ಬಳಿಕ ಬ್ಯಾರಿಕೇಡ್‌ಗಳನ್ನು ಜೋಪಾನವಾಗಿ ಎತ್ತಿಡುವುದು ಸಂಚಾರಿ ಪೊಲೀಸರ ಕರ್ತವ್ಯದ ಭಾಗವೇ ಆಗಿದೆ. ಆದರೆ, ವಿಪರ್ಯಾಸವೆಂಬಂತೆ ಪುತ್ತೂರು ನಗರದ ಕೆಲ ಭಾಗಗಳಲ್ಲಿ ಇಂತಹ ಬ್ಯಾರಿಕೇಡ್‌ಗಳು ಅನಾಥವಾಗಿ ಬಿದುಕೊಂಡಿರುವುದು ಕಂಡು ಬರುತ್ತಿದೆ.




ಜಾತ್ರೆ ಕಳೆದು 1 ತಿಂಗಳು!

ಇತ್ತೀಚೆಗೆ ನಡೆದ ಪುತ್ತೂರು ಜಾತ್ರೆಯ ಸಂದರ್ಭ ವಾಹನಗಳ ಸಂಚಾರಕ್ಕೆ ಬದಲಿ ಮಾರ್ಗಗಳ ವ್ಯವಸ್ಥೆಗೆ ಅಲ್ಲಲ್ಲಿ ಬ್ಯಾರಿಕೇಡ್‌ಗಳನ್ನು ಹಾಕಲಾಗಿತ್ತು. ಪುತ್ತೂರು ಜಾತ್ರೆ ಮುಗಿದು ತಿಂಗಳಾಗುತ್ತಾ ಬಂದರೂ ಬ್ಯಾರಿಕೇಡ್‌ಗಳು ಮಾತ್ರ ರಸ್ತೆ ಬದಿ, ತೋಡಿನಲ್ಲಿ ಬಿದ್ದುಕೊಂಡಿದೆ. ಸಾವಿರಾರು ರೂ.ಗಳನ್ನು ವ್ಯಯಿಸಿ ಬ್ಯಾರಿಕೇಡ್‌ಗಳನ್ನು ಸಿದ್ಧಪಡಿಸಲಾಗುತ್ತದೆ. ಜೋಪಾನವಾಗಿಟ್ಟಲ್ಲಿ ವರ್ಷಗಟ್ಟಲೆ ಬಾಳಿಕೆ ಬರಬಲ್ಲ ಕಬ್ಬಿಣದ ಬ್ಯಾರಿಕೇಡ್‌ಗಳು ಪೊಲೀಸ್ ಇಲಾಖೆಯ ನಿರ್ಲಕ್ಷ್ಯದಿಂದ ಕೆಲ ವರ್ಷಗಳಲ್ಲೇ ತುಕ್ಕು ಹಿಡಿದು, ಚಕ್ರಗಳು ಉದುರಿ ನಿರುಪಯುಕ್ತವಾಗಿ ಬಿಡುತ್ತಿದೆ. ಪುತ್ತೂರು ನಗರದಲ್ಲಿ ಕಳೆದ ಕೆಲವು ದಿನಗಳಿಂದ ಮಳೆ, ಗಾಳಿಯ ವಾತಾವರಣವಿರುವುದರಿಂದ ಬ್ಯಾರಿಕೇಡ್‌ಗಳು ಮತ್ತಷ್ಟು ತುಕ್ಕು ಹಿಡಿಯಲು ಅನುಕೂಲಕರವಾಗಿದೆ. ಸಂಚಾರ ಸುವ್ಯಸ್ಥೆಗೆ ಪರಿಕರ ಖರೀದಿಸಲು ಸರಕಾರ ಪೊಲೀಸ್ ಇಲಾಖೆಗಳಿಗೆ ಅನುದಾನ ಒದಗಿಸುತ್ತದೆ. »ಪುಟ 4

ನಿಲ್ಲಿಸಿದ್ದ ಕಾರಿನ ಹಿಂಭಾಗಕ್ಕೆ ಸ್ಕೂಟರ್ ಡಿಕ್ಕಿ: ಇಬ್ಬರು ಗಂಭೀರ
ರಾಷ್ಟ್ರೀಯ ಹೆದ್ದಾರಿ 66ರಲ್ಲಿ ನಡೆದ ಘಟನೆ

ಮುಲ್ಕಿ: ರಾಷ್ಟ್ರೀಯ ಹೆದ್ದಾರಿ 66ರ ಕೋಲ್ನಾಡ್ ಕನ್ವೆನ್ಷನ್ ಹಾಲ್ ಬಳಿ ನಿಲ್ಲಿಸಿದ್ದ ಕಾರಿಗೆ ಸ್ಕೂಟರ್ ಡಿಕ್ಕಿಯಾಗಿ ಸ್ಕೂಟರ್ ಸವಾರ ಹಾಗೂ ಸಹ ಸವಾರಿಣಿ ಗಂಭೀರ ಗಾಯಗೊಂಡು ಮುಕ್ಕ ಆಸ್ಪತ್ರೆಗೆ ದಾಖಲಾಗಿದ್ದಾರೆ

ಗಾಯಗೊಂಡವರನ್ನು ಉಡುಪಿ ಜಿಲ್ಲೆಯ ಎರ್ಮಾಳ್ ನಿವಾಸಿ ಬದ್ರುದ್ದೀನ್ (30) ಮತ್ತು ಸುರ್ಘಾನಾ (26) ಎಂದು ಗುರುತಿಸಲಾಗಿದೆ ಗುರುವಾರ ಸಂಜೆ 4:30 ಸುಮಾರಿಗೆ ಉಡುಪಿ ಮಂಗಳೂರು ಕಡೆಗೆ ಹೋಗುತ್ತಿದ್ದ ಕಾರನ್ನು ಅದರ ಚಾಲಕ ಮಂಗಳೂರು ನಿವಾಸಿ ಭುಜಂಗ ಎಂಬವರು ಮುಲ್ಕಿ ಸಮೀಪದ ಕೋಲ್ನಾಡ್ ಕನ್ವೆನ್ಷನ್ ಹಾಲ್ ಎದುರುಗಡೆ ಇರುವ ಗೂಡಂಗಡಿಗೆ ಸೀಯಾಳ ಕುಡಿಯಲು ಹೆದ್ದಾರಿ ಬದಿ ನಿಲ್ಲಿಸಿ ತೆರಳಿದ್ದು ಈ ಸಂದರ್ಭ ಎರ್ಮಾಳ್ ಕಡೆಯಿಂದ ಮಂಗಳೂರು ಕಡೆಗೆ ಹೋಗುತ್ತಿದ್ದ ಸ್ಕೂಟರ್ ಅದರ ಸವಾರ ಬದ್ರುದ್ದೀನ್ ರವರ ನಿಯಂತ್ರಣ ತಪ್ಪಿ ನಿಲ್ಲಿಸಿದ್ದ ಕಾರಿನ ಹಿಂಭಾಗಕ್ಕೆ ಡಿಕ್ಕಿ ಹೊಡೆದಿದೆ. ಅಪಘಾತದ ತೀವ್ರತೆಗೆಗೆ ಸ್ಕೂಟರ್ ಸವಾರರು ಕಾರಿನ ಮೇಲೆ ಬಿದ್ದು ಗಾಯಗೊಂಡಿದ್ದಾರೆ. ಬಳಿಕ ಅವರನ್ನು ಮುಕ್ಕ ಆಸ್ಪತ್ರೆಗೆ ಸ್ಥಳೀಯರು ದಾಖಲಿಸಿದ್ದಾರೆ. ಮಂಗಳೂರು ಉತ್ತರ ಟ್ರಾಫಿಕ್ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ.


ಹೆಚ್ಚುತ್ತಿದೆ ವಾಹನ ಅಪಘಾತಗಳು, ಟ್ರಾಫಿಕ್ ಜಾಮ್ | ಸೂಕ್ತ ಕ್ರಮಕ್ಕೆ ನಗರವಾಸಿಗಳಿಂದ ಆಡಳಿತಕ್ಕೆ ಮನವಿ
ಬಿ.ಸಿ.ರೋಡ್‌ನಲ್ಲಿ ಅನಧಿಕೃತ ಬಸ್ ಶೆಲ್ಟರ್, ರಿಕ್ಷಾ ಪಾರ್ಕಿಂಗ್!

ಬಂಟ್ವಾಳ: ಇಲ್ಲಿನ ಬಿ.ಸಿ.ರೋಡು ಪೇಟೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಅವೈಜ್ಞಾನಿಕ ಮೇಲ್ಸೇತುವೆ ಒಂದೆಡೆಯಾದರೆ, ಕಿರಿದಾದ ಸರ್ವಿಸ್ ರಸ್ತೆಯಿಂದ ಉಂಟಾಗಿರುವ ವಾಹನ ನಿಲುಗಡೆ ಸಮಸ್ಯೆಗೆ ಹಲವು ವರ್ಷಗಳಿಂದ ಇನ್ನೂ ಮುಕ್ತಿ ಸಿಕ್ಕಿಲ್ಲ.

ರಾತ್ರೋ ರಾತ್ರಿ ನಿರ್ಮಾಣ

ಈ ನಡುವೆ ಬಿ.ಸಿ.ರೋಡು ಸರ್ವಿಸ್ ಬಸ್ ನಿಲ್ದಾಣ ಸಮೀಪದ ಶ್ರೀನಿವಾಸ್ ಆರ್ಕೇಡ್ ಎದುರು ಕಳೆದ ಐದಾರು ವರ್ಷಗಳ ಹಿಂದೆ ಕೇವಲ ಜಾಹೀರಾತು ಅಳವಡಿಸಲು ರಾತ್ರೋ ರಾತ್ರಿ ನಿರ್ಮಾಣಗೊಂಡ ಅನಧಿಕೃತ ಬಸ್ ಶೆಲ್ಟರ್ ಮತ್ತು ರಿಕ್ಷಾ ಪಾರ್ಕಿಂಗ್ ಹಲವು ಅಪಘಾತಗಳಿಗೆ ಕಾರಣವಾಗಿದೆ. ಈ ನಡುವೆ ಸರ್ವಿಸ್ ಬಸ್ ನಿಲ್ದಾಣದಿಂದ ಹೊರಡುವ ಪಾಣೆ ಮಂಗಳೂರು, ಮೂಡುಬಿದಿರೆ ಮತ್ತು ಮೆಲ್ಕಾರ್, ಮುಡಿಪು, ಸಾಲೆತ್ತೂರು ಕಡೆಗೆ ಸಂಚರಿಸುವ ಖಾಸಗಿ ಬಸ್ ಬಂದು ಮತ್ತೆ ಇಲ್ಲೇ ಕೆಲಹೊತ್ತು ಠಿಕಾಣಿ ಹೂಡುತ್ತಿದೆ. ಆದುದರಿಂದ ಇಲ್ಲಿನ ಮೆಡಿಕಲ್ ಸೇರಿದಂತೆ ಮಕ್ಕಳು ಮತ್ತು ಮಹಿಳೆಯರು ವೈದ್ಯರ ಕ್ಲಿನಿಕ್, ದಂತ ಮತ್ತು ಕಣ್ಣಿನ ವೈದ್ಯರ ಕ್ಲಿನಿಕ್ ಹಾಗೂ ಎಲ್ಐಸಿ ಕಚೇರಿ ಮತ್ತಿತರ ಮಳಿಗೆಗೆ ತೆರಳುವ ಅಪಾರ ಮಂದಿ ಗ್ರಾಹಕರು ಮತ್ತು ಅನಾರೋಗ್ಯ ಪೀಡಿತರು ವಾಹನದಲ್ಲಿ ಬರಲು ಹರಸಾಹಸ ಪಡುವಂತಾಗಿದೆ. ಈಗಾಗಲೇ ಇಲ್ಲಿನ ಅನಧಿಕೃತ ಬಸ್ ಶೆಲ್ಟರ್ ಮತ್ತು ರಿಕ್ಷಾ ನಿಲುಗಡೆಯಿಂದಾಗಿ ಹಲವಾರು ಅಪಘಾತಗಳಿಗೂ ಕಾರಣವಾಗಿದೆ. ಈ ಬಗ್ಗೆ ಕಳೆದ ವರ್ಷ ಪುರಸಭೆ ಸಾಮಾನ್ಯ ಸಭೆಯಲ್ಲಿ ಅನಧಿಕೃತ ಬಸ್ ಶೆಲ್ಟರ್ ತೆರವುಗೊಳಿಸುವಂತೆ ನಿರ್ಣಯ ಕೈಗೊಂಡಿದ್ದರೂ, ಯಾವುದೇ ಪ್ರಯೋಜನವಾಗಿಲ್ಲ ಎಂದು ನಾಗರಿಕರು ಆರೋಪಿಸಿದ್ದಾರೆ. »ಪುಟ 4





ಕ್ರಮದ ಭರವಸೆ

ಬಿ.ಸಿ. ರೋಡು ಪೇಟೆಯಲ್ಲಿ ನಿರ್ಮಾಣಗೊಂಡ ಈ ಅನಧಿಕೃತ ಬಸ್ ಶೆಲ್ಟರ್ ಮತ್ತು ರಿಕ್ಷಾ ಪಾರ್ಕಿಂಗ್‌ನಿಂದ ಆಗುವ ಸಮಸ್ಯೆ ಗಮನಕ್ಕೆ ಬಂದಿದ್ದು, ಇದನ್ನು ತೆರವುಗೊಳಿಸಿಯೇ ಸಿದ್ಧ ಎಂದು ಪುರಸಭೆ ಮುಖ್ಯಾಧಿಕಾರಿ ತೀರ್ಥಪ್ರಸಾದ್ ಅವರು ಮಾಧ್ಯಮದ ಮೂಲಕ ಭರವಸೆ ನೀಡಿದ್ದಾರೆ.

ಅವಕಾಶ ನೀಡಲ್ಲ

“ಬಸ್ ನಿಲ್ದಾಣದಿಂದ ಹೊರಟ ಖಾಸಗಿ ಬಸ್ ಮತ್ತೆ ಶ್ರೀನಿವಾಸ್ ಆರ್ಕೇಡ್ ವಾಣಿಜ್ಯ ಸಂಕೀರ್ಣ ಎದುರು ನಿಂತು ವಾಹನ ಸವಾರರು ಮತ್ತು ಪಾದಚಾರಿಗಳಿಗೆ ಅಡ್ಡಿಪಡಿಸಲು ಅವಕಾಶ ನೀಡುವುದಿಲ್ಲ.

● ಆದರ್ಶ್, ಸಂಚಾರಿ ಠಾಣೆ ಎಸ್ಸೈ

‘ಶ್ರೀ ಸಾಯಿ ಬೊಲ್ಪು’ ಅಭಿನಂದನಾ ಪುರಸ್ಕಾರ, ವಿದ್ಯಾರ್ಥಿವೇತನ ವಿತರಣೆ 2
ಕಾಸರಗೋಡು ಜಿಲ್ಲಾಸ್ಪತ್ರೆ: ಜೂ.1ರಿಂದ ರೋಗಿಗಳಿಗೆ ಉಪಾಹಾರ ಯೋಜನೆ ಜಾರಿ 3
ಕಾಸರಗೋಡು ಜಿಲ್ಲೆಯಲ್ಲಿ ನಡೆಯದ ಮುಂಗಾರು ಪೂರ್ವ ಸ್ವಚ್ಛತಾ ಕಾರ್ಯ 3
ಉಡುಪಿಯಲ್ಲಿ ಮಾವು ಮೇಳ: ವಿವಿಧ ತಳಿಗಳ ಹಣ್ಣಿನ ಸವಿಗೆ ಗ್ರಾಹಕರು ಫಿದಾ! 4

ಸುತ್ತಮುತ್ತ

ಇಂದಿನಿಂದ ಶ್ರೀ ಶಾಂಕರ ತತ್ವ ಪ್ರಸಾರ ಅಭಿಯಾನ

ಬಂಟ್ವಾಳ: ಶೃಂಗೇರಿ ಶ್ರೀ ಶಂಕರ ಮಠ ಶ್ರೀ ಶಾಂಕರ ತತ್ವ ಅಭಿಯಾನಂ, ಮಂಗಳೂರು ಕೋಟೆಕಾರು ಶ್ರೀ ಶಂಕರ ಸೇವಾ ಪ್ರತಿಷ್ಠಾನ ಹಾಗೂ ಬಂಟ್ವಾಳ ತಾಲೂಕು ಘಟಕ , ಮೆಲ್ಕಾರ್ ಅಖಿಲ ಕರ್ನಾಟಕ ಹಿರಿಯರ ಸೇವಾ ಪ್ರತಿಷ್ಠಾನ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಆಚಾರ್ಯ ಶ್ರೀ ಶಂಕರ ಭಗವತ್ಪಾದರ ಜಯಂತ್ಯುತ್ಸವದ ಅಂಗವಾಗಿ ಶ್ರೀ ಶಾಂಕರ ತತ್ವ ಪ್ರಸಾರ ಅಭಿಯಾನ ಕಾರ್ಯಕ್ರಮವು ಮೇ 15ರಿಂದ ಮೇ 21 ರವರೆಗೆ ನಡೆಯಲಿದೆ. ಮೇ 15ರಂದು ಸಂಜೆ ಕಾವಳಕಟ್ಟೆ ಜಯಪ್ರಕಾಶ್ ರಾವ್ ಅವರ ನಿವಾಸದಲ್ಲಿ ಕಾರ್ಯಕ್ರಮಕ್ಕೆ ಕೊಟೆಕಾರು ಶ್ರೀ ಶೃಂಗೇರಿ ಮಠದ ಧರ್ಮಾಧಿಕಾರಿ ಸತ್ಯಶಂಕರ ಬೊಳ್ಳಾವ ಅವರು ಚಾಲನೆ ನೀಡಲಿದ್ದಾರೆ .
ಮೇ 16ರಂದು ಬಿ.ಸಿ.ರೋಡ್ ನ ರಾಜ ಮಣಿ ರಾಮಕುಂಜ ಅವರ ನಿವಾಸದಲ್ಲಿ, ಮೇ 17ರಂದು ಕನ್ಯಾನಶಿವರಾಮ ರಾವ್ ಬರಿಕಟ್ಟೆಯಲ್ಲಿ, ಮೇ 18 ಕಲಾಶ್ರಯ ದಾಸಕೋಡಿಯಲ್ಲಿ, ಮೇ 19 ಫರಂಗಿಪೇಟೆ ಸೇವಾಂಜಲಿ ಪ್ರತಿಷ್ಠಾನದಲ್ಲಿ, ಮೇ 20ರಂದು ಪೊಳಲಿ ಶ್ರೀ ರಾಮಕೃಷ್ಣ ತಪೋವನದಲ್ಲಿ ಹಾಗೂ ಮೇ 21ರಂದು ಬಿ.ಸಿ.ರೋಡ್ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿಸಮಾರೋಪ ನಡೆಯಲಿದೆ ಎಂದು ಸಮಿತಿ ಪ್ರಕಟನೆ ತಿಳಿಸಿದೆ.

ಕುಡಾಳ್ ದೇಶಸ್ಥ ಆದ್ಯ ಗೌಡ್ ಬ್ರಾಹ್ಮಣ ಸಮಾಜದ ಸಮಾವೇಶ

ಮಂಗಳೂರು: ಕುಡಾಳ್ ದೇಶಸ್ಥ ಆದ್ಯ ಗೌಡ್ ಬ್ರಾಹ್ಮಣ ಸಮಾಜ ದ.ಕ. ಜಿಲ್ಲಾ ಸಂಘ ಇದರ ನೇತೃತ್ವದಲ್ಲಿ ಸಮಾಜದ ಸಮಾವೇಶವು ಮೇ 17ರಂದು ಬಿ.ಸಿ. ರೋಡ್‌ನ ಸ್ಪರ್ಶ ಕಲಾ ಮಂದಿರದಲ್ಲಿ ನಡೆಯಲಿದೆ. ಸಂಘದ ಅಧ್ಯಕ್ಷ ಪ್ರವೀಣ್ ಎಸ್. ದರ್ಬೆಯವರು ಸಮಾವೇಶದ ಅಧ್ಯಕ್ಷತೆ ವಹಿಸಲಿದ್ದಾರೆ. ಜವಾಹರ್‌ಲಾಲ್ ನೆಹರು ಮೆಡಿಕಲ್ ಕಾಲೇಜ್ ಪ್ರೊಫೆಸರ್, ಡಾ. ಮಾಧವ ಪ್ರಭು ಬೆಳಗಾವಿ ಸಮಾವೇಶ ಉದ್ಘಾಟಿಸಲಿದ್ದು, ಆರೆಸ್ಸೆಸ್ ಅಖಿಲ ಭಾರತೀಯ ಕಾರ್ಯಕಾರಿಣಿಯ ಆಮಂತ್ರಿತ ಸದಸ್ಯರಾದ ಕಜಂಪಾಡಿ ಸುಬ್ರಹ್ಮಣ್ಯ ಭಟ್‌ರವರು ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಗಿರ್‌ಗಾಂ ಗೌಡ್ ಬ್ರಾಹ್ಮಣ ಸಭಾದ ಅಧ್ಯಕ್ಷ ಮನೀಷ್ ದಾಭೋಳ್ಕರ್ ಗೌರವಾನ್ವಿತ ಅತಿಥಿಯಾಗಿ ಹಾಗೂ ಇನ್ನಿತರ ಗಣ್ಯರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ವಿವಿಧ ಕ್ಷೇತ್ರಗಳಲ್ಲಿ ಸ್ಮರಣೀಯ ಸೇವೆ ಸಲ್ಲಿಸಿದವರಿಗೆ 'ಸೇವಾ ಧ್ರುಮ್' ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಜತೆಗೇ, ಶಿಕ್ಷಣ ಮತ್ತು ಕ್ರೀಡೆಯಲ್ಲಿ ಉತ್ತಮ ಸಾಧನೆಗೈದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ವಿದ್ಯಾರ್ಥಿ ವೇತನ ವಿತರಣೆ ನಡೆಯಲಿದೆ. ಸಮಾಜ ಬಂಧುಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆಯಲಿವೆ.

ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರ

ನಿಡ್ಪಳ್ಳಿ: ಕರ್ನಾಟಕ ಸರ್ಕಾರದ ಆದೇಶದಂತೆ ನಿಡ್ಪಳ್ಳಿ ಗ್ರಾಮ ಪಂಚಾಯತ್ ಹಾಗೂ ಅರಿವು ಕೇಂದ್ರದ ವತಿಯಿಂದ ಮೇ 15ರಿಂದ 22ರವರೆಗೆ ಗ್ರಾಮೀಣ ಮಕ್ಕಳ ಬೇಸಿಗೆ ಶಿಬಿರ ನಡೆಯಲಿದೆ. ಶಿಬಿರವು ಬೆಳಗ್ಗೆ 10ರಿಂದ ಮಧ್ಯಾಹ್ನ 12.30ರವರೆಗೆ ನಡೆಯಲಿದ್ದು, ಗ್ರಾಮದ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಪಿಡಿಒ ಜಯಪ್ರಕಾಶ್ ತಿಳಿಸಿದ್ದಾರೆ.

ಮೇ 17: ಆತ್ಮಶಕ್ತಿಯಿಂದ ಆರೋಗ್ಯ ಶಿಬಿರ

ಮಂಗಳೂರು: ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ ಮಂಗಳೂರು ಇದರ ಎಲ್ಯಾರ್‌ಪದವು ಶಾಖೆಯ ದ್ವಿತೀಯ ವಾರ್ಷಿಕೋತ್ಸವದ ಪ್ರಯುಕ್ತ ಉಚಿತ ವೈದ್ಯಕೀಯ, ನೇತ್ರ ತಪಾಸಣಾ ಮತ್ತು ದಂತ ಚಿಕಿತ್ಸಾ ಶಿಬಿರ ಮೇ 17ರಂದು ಬೆಳಗ್ಗೆ 9.30ರಿಂದ ಅಪರಾಹ್ನ 12.30 ರವರೆಗೆ ಕೊಣಾಜೆಯ ಎಲ್ಯಾರ್ ಪದವು ಶರೂನ್ ಸ್ಟಕ್ಚರ್, ಹೋಲಿಕ್ರಾಸ್ ಚರ್ಚ್ ಬಳಿಯಲ್ಲಿ ಆಯೋಜಿಸಲಾಗಿದೆ. ಈ ವೈದ್ಯಕೀಯ ಶಿಬಿರದಲ್ಲಿ ಎ.ಜೆ. ಇನ್ಸ್ಟಿಟ್ಯೂಟ್ ಆಫ್ ಡೆಂಟಲ್ ಸಾಯನ್ಸಸ್ ಮಂಗಳೂರು ಇದರ ನುರಿತ ವೈದ್ಯರ ತಂಡದಿಂದ ಉಚಿತ ದಂತ ತಪಾಸಣೆ ಮತ್ತು ಸಲಹೆ ಮತ್ತು ಕಣಚೂರು ಮೆಡಿಕಲ್ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ನಾಟೆಕಲ್ ಇದರ ನುರಿತ ವೈದ್ಯರ ತಂಡದಿಂದ ಕಣ್ಣಿನ ತಪಾಸಣೆ, ಅಗತ್ಯವುಳ್ಳವರಿಗೆ ಕಣ್ಣಿನ ಪೊರೆಯ ಶಸ್ತ್ರ ಚಿಕಿತ್ಸೆ, ಮಧುಮೇಹ ತಪಾಸಣೆ ಇರಲಿದೆ. ಅಲ್ಲದೇ ಅಗತ್ಯವುಳ್ಳವರಿಗೆ ಉಚಿತ ಕನ್ನಡಕ ವಿತರಣೆ ಮಾಡಲಾಗುವುದು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ ಸಾಮಾನ್ಯ ಸೇವಾ ಕೇಂದ್ರ, ಮಂಗಳೂರು ಇವರ ವತಿಯಿಂದ ಆಯುಷ್ಮಾನ್ ಕಾರ್ಡ್ ಮತ್ತು ಇಶ್ರಮ್ ಕಾರ್ಡ್ ಉಚಿತ ನೊಂದಾವಣೆ ಜರಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಉಳ್ಳಾಲದಲ್ಲಿ 'ಶ್ರೀ ಸಾಯಿ ಬೊಲ್ಪು' ಅಭಿನಂದನಾ ಪುರಸ್ಕಾರ, ವಿದ್ಯಾರ್ಥಿವೇತನ ವಿತರಣಾ ಸಮಾರಂಭ

ಪಾಶ್ಚಾತ್ಯ ಸಂಸ್ಕೃತಿಯಿಂದ ನಮ್ಮತನ ಮರೆಯದಿರಿ: ಆಶಿಕ್

ಉಳ್ಳಾಲ: ಯಾವುದೇ ವಿಚಾರಗಳನ್ನ ತಿಳಿಯುವ ಕುತೂಹಲ ನಮ್ಮಲ್ಲಿ ಇಲ್ಲದಿದ್ದರೆ ಭವಿಷ್ಯದಲ್ಲಿ ನಾವು ಏನನ್ನೂ ಸಾಧಿಸಲು ಅಸಾಧ್ಯ. ಶಿಕ್ಷಣದೊಂದಿಗೆ ಮಕ್ಕಳಿಗೆ ಧಾರ್ಮಿಕತೆ, ಸಂಸ್ಕಾರಗಳ ಬಗ್ಗೆ ಕುತೂಹಲ ಮೂಡಿಸುವ ಕಾರ್ಯವನ್ನು ಪೋಷಕರು ಮಾಡಬೇಕಿದೆ. ಹೆತ್ತವರನ್ನ ಗೌರವಿಸದೆ ನಾವು ಜಗತ್ತಿನಲ್ಲಿ ಯಾವುದೇ ಉತ್ತಮ ಕಾರ್ಯಗಳನ್ನ ಮಾಡಲು ಸಾಧ್ಯವಿಲ್ಲವೆಂದು ಕೋಟೆಕಾರು, ಬೀರಿ ಗಣೇಶ ಮಂದಿರದ ಪ್ರಧಾನ ಕಾರ್ಯದರ್ಶಿ ಆಶಿಕ್ ಗೋಪಾಲಕೃಷ್ಣ ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ದಕ್ಷಿಣ ಕನ್ನಡ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ತೊಕ್ಕೊಟ್ಟಿನ ಶ್ರೀ ಸಾಯಿ ಪರಿವಾರ್ ಟ್ರಸ್ಟ್ ಆಶ್ರಯದಲ್ಲಿಕೊಲ್ಯದ ಸೌಂದರ್ಯ ಸಭಾಂಗಣದಲ್ಲಿ ಬುಧವಾರದಂದು ನಡೆದ 2026ನೇ ಸಾಲಿನ ಪ್ರತಿಭಾನ್ವಿತ ವಿಧ್ಯಾರ್ಥಿಗಳಿಗೆ 'ಶ್ರೀ ಸಾಯಿ ಬೊಲ್ಪು' ಅಭಿನಂದನಾ ಪುರಸ್ಕಾರ ಮತ್ತು ವಿದ್ಯಾರ್ಥಿವೇತನ ವಿತರಣಾ ಸಮಾರಂಭವನ್ನುದ್ದೇಶಿಸಿ ಅವರು ಮಾತನಾಡಿದರು.



ಹೊರ ಜಗತ್ತಿಗೆ ನಮ್ಮನ್ನ ತೋರಿಸಿಕೊಳ್ಳಲು ಪಾಶ್ಚಾತ್ಯ ಸಂಸ್ಕೃತಿ ಬೇಕೆ ಹೊರತು, ನಮ್ಮ ತನವನ್ನ ನಾವೆಂದಿಗೂ ಮರೆಯಬಾರದು. ಅಪೇಕ್ಷೆ ಇಲ್ಲದೆ ಮಾಡುವ ಸೇವೆಗಳು ಭಗವಂತನಿಗೆ ಸಲ್ಲುತ್ತೆ ಎಂಬ ಆದರ್ಶದೊಂದಿಗೆ ಸಾಯಿ ಪರಿವಾರ್ ಟ್ರಸ್ಟ್ ನಿರಂತರ ಜನಪರ ಸೇವೆಗಳಲ್ಲಿ ತೊಡಗಿಸಿಕೊಂಡಿರುವುದು ಶ್ಲಾಘನೀಯವೆಂದರು.

ಕೊಲ್ಯ ಶ್ರೀ ಮೂಕಾಂಬಿಕ ದೇವಸ್ಥಾನದ ಆಡಳಿತ ಸಮಿತಿ ಅಧ್ಯಕ್ಷ ಚಂದ್ರಹಾಸ್ ಪಂಡಿತ್ ಹೌಸ್ ಮಾತನಾಡಿ ಉನ್ನತ ಸ್ಥಾನಕ್ಕೇರಿದ ಎಷ್ಟೋ ಅಧಿಕಾರಿಗಳು ನಿವೃತ್ತರಾದ ಮೇಲೆ ಸಮಾಜಕ್ಕೆ ಕೊಡುಗೆ ನೀಡಿರುವ ನಿದರ್ಶನಗಳು ತೀರಾ ಕಡಿಮೆ. ಬಡ,ಮಧ್ಯಮ ವರ್ಗದವರೇ ಸೇವಾ ಕಾರ್ಯದಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುವುದಕ್ಕೆ ಸಾಯಿ ಪರಿವಾರ್ ಟ್ರಸ್ಟ್ ನಂತಹ ಸೇವಾ ಸಂಸ್ಥೆಗಳೇ ನಿದರ್ಶನವಾಗಿವೆ.ವಿದ್ಯಾರ್ಥಿಗಳು ಇಂದು ಸ್ವೀಕರಿಸಿರುವ ಅಭಿನಂದನೆಗೆ ಅರ್ಹವಾದ ಸಾಧನೆಯನ್ನು ಮಾಡಬೇಕಿದೆಯೆಂದರು.

ಮಾಡೂರು ಶ್ರೀ ಸಾಯಿ ಮಂದಿರದ ಆಡಳಿತ ಮೊಕ್ತೇಸರರಾದ ಕೆ.ಪಿ ಸುರೇಶ್ ಕಾರ್ಯಕ್ರಮ ಉದ್ಘಾಟಿಸಿದರು. ಉಳ್ಳಾಲ ಶ್ರೀ ಚೀರುಂಭ ಭಗವತಿ ಕ್ಷೇತ್ರದ ಆಡಳಿತ ಮೊಕ್ತೇಸರರಾದ ಸುರೇಶ್ ಭಟ್ನಗರ, ಕುತ್ತಾರು ಶ್ರೀ ರಾಜರಾಜೇಶ್ವರಿ ದೇವಸ್ಥಾನದ ಆಡಳಿತ ಸಮಿತಿ ಅಧ್ಯಕ್ಷ ಪವಿತ್ರ ಕುಮಾರ್ ಗಟ್ಟಿ ಕೊಲ್ಯ ಶ್ರೀ ಶಾರದಾ ಸೇವಾ ಟ್ರಸ್ಟ್ ನ ಅಧ್ಯಕ್ಷರಾದ ಮೋಹನ್ ಶೆಟ್ಟಿ ಕುಂಪಲ, ಕುಂಪಲ ಆಸರೆ ಬಳಗದ ಸ್ಥಾಪಕರಾದ ಸೂರಜ್ ಸಾಗರ್, ಶ್ರೀ ಸಾಯಿ ಪರಿವಾರ್ ಟ್ರಸ್ಟ್ ನ ಟ್ರಸ್ಟಿ ಗಣೇಶ್ ಅಂಚನ್, ಗೀತೇಶ್ ಕುತ್ತಾರು, ಧನಲಕ್ಷ್ಮಿ ಗಟ್ಟಿ ಪುರುಷೋತ್ತಮ ಕಲ್ಲಾಪು ಮೊದಲಾದವರು ಇದ್ದರು. ಪ್ರವೀಣ್.ಎಸ್.ಕುಂಪಲ ಸ್ವಾಗತಿಸಿ, ವಿಜೆ ಹರಿಪ್ರಸಾದ್ ನಿರೂಪಿಸಿದರು. ರಜನೀಶ್ ನಾಯ್ಕ್ ಅಭಿನಂದನಾ ಪತ್ರ ವಾಚಿಸಿದರು. ಕೃಷ್ಣ ಪೊನ್ನತ್ತೋಡು ವಂದಿಸಿದರು.

> **ಸಂಸ್ಕಾರ ಕಲಿಸಿ**
> ಹಿಂದಿನ ಕಾಲದಲ್ಲಿ ಪೋಷಕರು ತಮ್ಮ ಮಧ್ಯ ವಯಸ್ಸಲ್ಲಿ ಮೊಮ್ಮಕ್ಕಳ ಜೊತೆ ಮನೆಯಲ್ಲಿ ಸುಖೀ ಜೀವನ ಕಳೆಯುತ್ತಿದ್ದರು.ಆದರೆ ಇಂದು ಇಳಿ ವಯಸ್ಸಲ್ಲೂ ಪೋಷಕರು ಸೆಕ್ಯುರಿಟಿ ಗಾರ್ಡ್, ಮನೆಕೆಲಸ ಮಾಡುವ ಅನಿವಾರ್ಯತೆ ಬಂದೊದಗಿದೆ. ಹಿಂದೂ ಸಮಾಜದಲ್ಲೇ ಈ ವಿದ್ಯಮಾನ ಹೆಚ್ಚುತ್ತಿರುವುದು ಆತಂಕಕಾರಿ. ನಮ್ಮ ಮಕ್ಕಳಲ್ಲಿ ಹೆಚ್ಚುತ್ತಿರುವ ಸಂಸ್ಕಾರದ ಕೊರತೆಯೇ ಇದಕ್ಕೆ ಮೂಲ ಕಾರಣ ವಾಗಿದ್ದು,ಮಕ್ಕಳಿಗೆ ವಿದ್ಯೆಯೊಂದಿಗೆ ಉತ್ತಮ ಸಂಸ್ಕಾರವನ್ನು ಪೋಷಕರು ಕಲಿಸಬೇಕಿದೆ.
> ● **ಸುರೇಶ್ ಭಟ್ನಗರ**, ಆಡಳಿತ ಮೊಕ್ತೇಸರರು, ಶ್ರೀ ಚೀರುಂಭ ಭಗವತೀ ಕ್ಷೇತ್ರ

'ಹೊಸದಿಗಂತ' ವರದಿಗೆ ಮುಖ್ಯಮಂತ್ರಿ ಕಚೇರಿಯಿಂದ ತುರ್ತು ಸ್ಪಂದನೆ

ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಕೆಗೆ ಅವಕಾಶ

ಸುಳ್ಯ: 'ಹೊಸ ಪಡಿತರ ಚೀಟಿಗಾಗಿ ಅಲೆದಾಟ' ಎಂಬ ಶೀರ್ಷಿಕೆಯಡಿ ವಿಸ್ತೃತ ವರದಿಯನ್ನು 'ಹೊಸ ದಿಗಂತ' ಮೇ 7ಕ್ಕೆ ಪ್ರಕಟಿಸಿದ್ದು, ಈ ವರದಿಗೆ ಮುಖ್ಯಮಂತ್ರಿ ಕಚೇರಿ ತಕ್ಷಣವೇ ಸ್ಪಂದಿಸಿ ಮೇ 8ರಂದು ಹೊಸ ಪಡಿತರ ಚೀಟಿಗೆ ಅರ್ಜಿ ಸಲ್ಲಿಕೆಗೆ ಅವಕಾಶವನ್ನು ಕಲ್ಪಿಸಿರುವ ಕುರಿತು ಸರ್ಕಾರ ಆದೇಶ ಹೊರಡಿಸಿದೆ.



ಮುಖ್ಯಮಂತ್ರಿ ಕಚೇರಿಯು ಹೊಸ ಪಡಿತರ ಚೀಟಿಗೆ ಅರ್ಜಿ ಸಲ್ಲಿಸುವ ಅವಕಾಶ ಲಭ್ಯವಿಲ್ಲದಿರುವುದರಿಂದ ಜನರು ಸರ್ಕಾರದ ಸವಲತ್ತುಗಳಿಂದ ವಂಚಿತರಾಗಿರುವ ಕುರಿತು 'ಹೊಸ ದಿಗಂತ'ದಲ್ಲಿ ವರದಿ ಪ್ರಕಟವಾಗಿತ್ತು. ಇದನ್ನು ಗಮನಿಸಿದ ಮುಖ್ಯಮಂತ್ರಿಯವರ ಕಚೇರಿಯ ಕುಂದುಕೊರತೆ ವಿಭಾಗದ ವಿಶೇಷ ಕರ್ತವ್ಯಾಧಿಕಾರಿಗಳು ಪರಿಶೀಲಿಸಿ ವರದಿ ನೀಡುವಂತೆ ಸಂಬಂಧಿಸಿ ಅಧಿಕಾರಿಗಳಿಗೆ ಸೂಚಿಸಿದ್ದ ಬೆನ್ನಲ್ಲೇ ಅದರಂತೆ ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಿದಾಗ 2023ರ ಮಾರ್ಚ್ ಅಂತ್ಯದವರೆಗೆ ಹೊಸ ಪಡಿತರ ಚೀಟಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿದ್ದು, ನಂತರ ಸರ್ಕಾರದಿಂದ ಹೊಸ ಪಡಿತರ ಚೀಟಿಗೆ ತಂತ್ರಾಂಶದಲ್ಲಿ ಅವಕಾಶ ನೀಡದೇ ಇರುವುದರಿಂದ ಯಾವುದೇ ಅರ್ಜಿಗಳು ಸ್ವೀಕೃತವಾಗಿರುವುದಿಲ್ಲ. 2024–25ನೇ ಸಾಲಿನಲ್ಲಿ ಇ-ಶ್ರಮ ಕಾರ್ಡ್ ಹೊಂದಿದ ಕುಟುಂಬಗಳಿಗೆ, ಕೊರಗ ಕುಟುಂಬಗಳಿಗೆ ಹಾಗೂ ವೈದ್ಯಕೀಯ ನೆಲೆಯಲ್ಲಿ ಪಡಿತರ ಚೀಟಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿದ್ದು, ಇ-ಶ್ರಮ ಕಾರ್ಡ್ ಹೊಂದಿದ 49 ಕುಟುಂಬಗಳಿಗೆ, ಕೊರಗ ಜನಾಂಗದ 13 ಕುಟುಂಬಗಳಿಗೆ ಹಾಗೂ 2023ನೇ ಸಾಲಿನಲ್ಲಿ ತನಿಖೆಗೆ ಬಾಕಿ ಇದ್ದ 50 ಕುಟುಂಬಗಳಿಗೆ ಬಿಪಿಎಲ್ ಪಡಿತರ ಚೀಟಿ ವಿತರಿಸಲಾಗಿರುತ್ತದೆ ಎಂದು ಸುಳ್ಯ ತಾಲೂಕಿನ ತಹಶೀಲ್ದಾರರು ತಿಳಿಸಿದ್ದಾರೆ ಎಂದು ವಾರ್ತಾ ಇಲಾಖೆ ಮತ್ತು ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯ ಅಧಿಕಾರಿ ತಮ್ಮ ಅಧಿಕೃತ ಎಕ್ಸ್ ಖಾತೆಯಲ್ಲಿ ತಿಳಿಸಿದ್ದು, ಈ ಮೂಲಕ ತಾಲೂಕಿನ ಸೇರ್ಪಡೆಗೊಳಿಸಲು ಉಳಿಕೆಯಾಗಿರುವವರು ಕೂಡಲೇ ಸೇರಿಸಿಕೊಳ್ಳಲು ಅವಕಾಶವನ್ನು ಕಲ್ಪಿಸಿದಂತಾಗಿದೆ.

ಮೇ 17ರಂದು ಬಿ. ಹರಿಶ್ಚಂದ್ರ ಆಚಾರ್ಯರ 113ನೇ ಜನ್ಮದಿನೋತ್ಸವ

ಸಾಧಕರಿಗೆ ಪ್ರಶಸ್ತಿ ಪ್ರದಾನ, ಹಿರಿಯರಿಗೆ ಸನ್ಮಾನ

ಮಂಗಳೂರು: ಶ್ರೀ ಬಿ. ಹರಿಶ್ಚಂದ್ರ ಆಚಾರ್ಯ ಮೆಮೋರಿಯಲ್ ಟ್ರಸ್ಟ್ ನಿಂದ ವಿಶ್ವಬ್ರಾಹ್ಮಣ ಸಮುದಾಯದ ಸಮಗ್ರ ಏಳಿಗೆಗಾಗಿ ಅಹರ್ನಿಶಿ ದುಡಿದ ಹಿರಿಯ ಸಮಾಜ ಸೇವಕ ದಿ. ಬಿ. ಹರಿಶ್ಚಂದ್ರ ಆಚಾರ್ಯರ ಸಾಧನೆ ಹಾಗೂ ಅವರು ಸಮಾಜಕ್ಕಿತ್ತ ಕೊಡುಗೆ ಸಂಸ್ಮರಿಸುವ ಉದ್ದೇಶದಿಂದ ಬಿ. ಹರಿಶ್ಚಂದ್ರ ಆಚಾರ್ಯರ 113ನೇ ಜನ್ಮ ದಿನೋತ್ಸವವನ್ನು ಮೇ 17ಕ್ಕೆ ಅಪರಾಹ್ನ 3ಕ್ಕೆ ಮಂಗಳೂರು ರಥಬೀದಿ ಶ್ರೀ ಕಾಳಿಕಾಂಬಾ ವಿನಾಯಕ ದೇವಸ್ಥಾನದ ಗುರುಮಠ ಶ್ರೀ ಪಟ್ಟೆ ಲಿಂಗಪ್ಪಾಚಾರ್ಯ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ 2026ನೇ ಸಾಲಿನ 'ಬಿ. ಹರಿಶ್ಚಂದ್ರ ಆಚಾರ್ಯ ಸ್ಮಾರಕ ಪ್ರಶಸ್ತಿ'ಯನ್ನು ವಿಶ್ವಬ್ರಾಹ್ಮಣ ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡುತ್ತಿರುವ ಪ್ರಸಿದ್ಧ ಸ್ವರ್ಣೋದ್ಯಮಿ ಶ್ರೀಧರ ವಿ. ಆಚಾರ್ಯ, ಶ್ರೀನಿವಾಸ ಆರ್ನಮೆಂಟ್ಸ್, ಮುಂಬೈ ಅವರಿಗೆ ನೀಡಲಾಗುವುದು. ಸಮಾಜಕ್ಕೆ ಅಪಾರ ಸೇವೆ ಸಲ್ಲಿಸಿದ ಈರ್ವರು ಹಿರಿಯರಾದ ಬಿ. ಎ. ಆಚಾರ್ಯ ಮಣಿಪಾಲ ಹಾಗೂ ಮ. ಯೋಗೀಶ್ ಆಚಾರ್ ಅವರಿಗೆ ಗೌರವಾಭಿವಂದನೆ ಸಲ್ಲಿಸಲಾಗುವುದು. ಇದೇಸಂದರ್ಭ ಟ್ರಸ್ಟ್ ಸಮಾಜದ ಸಹಕಾರದೊಂದಿಗೆ ನಿರ್ಮಿಸಿ, ಇಪ್ಪತ್ತೆರಡು ವಿದ್ಯಾರ್ಥಿಗಳಿಗೆ ಉಚಿತ ಆಶ್ರಯ, ಆಹಾರ ನೀಡಿ ನಡೆಸುತ್ತಿರುವ 'ಆಶ್ರಯ ವಿದ್ಯಾರ್ಥಿಧಾಮ'ದ ದಶಮಾನೋತ್ಸವ ಪ್ರಾರಂಭ' ಸಂಭ್ರಮವನ್ನೂ ಆಚರಿಸಲಾಗುವುದು. ಸಂಜೆ 3ರಿಂದ 4.30ರ ವರೆಗೆ ವಿಶ್ವಕರ್ಮ ಕಲಾ ಪರಿಷತ್ ಮಂಗಳೂರು ಹಾಗೂ ಆಶ್ರಯ ವಿದ್ಯಾರ್ಥಿಧಾಮದ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ವೈವಿಧ್ಯ ಜರಗಲಿದೆ. ಸಭಾ ಕಾರ್ಯಕ್ರಮದಲ್ಲಿ ಶ್ರೀಮದ್‌ಜಗದ್ಗುರು ಆನೆಗುಂದಿ ಮಹಾಸಂಸ್ಥಾನ ಸರಸ್ವತೀ ಪೀಠಾಧೀಶ್ವರರಾದ ಪರಮಪೂಜ್ಯ ಜಗದ್ಗುರು ಅನಂತಶ್ರೀ ವಿಭೂಷಿತ ಕಾಳಹಸ್ತೇಂದ್ರ ಸರಸ್ವತೀ ಮಹಾಸ್ವಾಮಿಗಳವರು ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಲಿದ್ದಾರೆ. ಟ್ರಸ್ಟಿನ ಅಧ್ಯಕ್ಷ ಎಸ್. ವಿ. ಆಚಾರ್ಯರು ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ಕೈಗಾರಿಕೋದ್ಯಮಿ ಡಾ. ಜಿ. ರಾಮಕೃಷ್ಣ ಆಚಾರ್ ಉದ್ಘಾಟಿಸಲಿದ್ದಾರೆ. ಸಂಸದ ಕ್ಯಾ. ಬ್ರಿಜೇಶ್ ಚೌಟ, ಶಾಸಕ ಡಿ. ವೇದವ್ಯಾಸ ಕಾಮತ್, ಮಾಜಿ ವಿಧಾನಪರಿಷತ್ ಮುಖ್ಯ ಸಚೇತಕ ಕ್ಯಾ. ಗಣೇಶ್ ಕಾರ್ಣಿಕ್, ಮುಂಬೈ ವಿಶ್ವಕರ್ಮ ಅಸೋಸಿಯೇಷನ್ ಅಧ್ಯಕ್ಷ ರವೀಶ್ ಗಣಪಯ್ಯ ಆಚಾರ್ಯ, ಕೈಗಾರಿಕಾ ಹಾಗೂ ವಾಣಿಜ್ಯ ಇಲಾಖೆಯ ಜಂಟಿ ಆಯುಕ್ತ ಗೋಕುಲದಾಸ್ ನಾಯಕ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಶ್ರೀ ಕಾಳಿಕಾಂಬಾ ವಿನಾಯಕ ದೇವಸ್ಥಾನದ ಆಡಳಿತಾಧಿಕಾರಿ ಕೆ. ಉಮೇಶ ಆಚಾರ್ಯ, ಹಾಗೂ ಶ್ರೀ ಆನೆಗುಂದಿ ಸರಸ್ವತೀ ಪೀಠ ಪ್ರತಿಷ್ಠಾನದ ಅಧ್ಯಕ್ಷ ವಡೇರಹೋಬಳಿ ಶ್ರೀಧರ ಆಚಾರ್ಯ ಶುಭಾಶಂಸನೆಗೈಯಲಿದ್ದಾರೆ. ಬಿ. ಹರಿಶ್ಚಂದ್ರ ಆಚಾರ್ಯ ಟ್ರಸ್ಟಿನ ಸ್ಥಾಪಕಾಧ್ಯಕ್ಷ ಕೇಶವ ಬಿ. ಎಚ್., ವಿಶ್ವಕರ್ಮ ಒಕ್ಕೂಟದ ಉಪಾಧ್ಯಕ್ಷ ಅಲೆವೂರು ಯೋಗೀಶ ಆಚಾರ್ಯ, ವಿಶ್ವಕರ್ಮ ಸಹಕಾರ ಬ್ಯಾಂಕಿನ ಅಧ್ಯಕ್ಷ ಡಾ. ಎಸ್. ಆರ್. ಹರೀಶ್ ಆಚಾರ್ಯ, ಎಸ್. ಕೆ. ಜಿ. ಇಂಡಸ್ಟ್ರಿಯಲ್ ಕೋ ಆಪರೇಟಿವ್ ಸೊಸೈಟಿಯ ಅಧ್ಯಕ್ಷ ಪಿ. ಉಪೇಂದ್ರ ಆಚಾರ್ಯ, ಮುಂಬೈ ವಿಶ್ವಕರ್ಮ ಸೇವಾ ಸಮಿತಿಯ ಸ್ಥಾಪಕಾಧ್ಯಕ್ಷ ಶಾಂತಾರಾಮ ಆಚಾರ್ಯ ಕಿನ್ನಿಗೋಳಿ ಗೌರವ ಉಪಸ್ಥಿತಿ ಹೊಂದಲಿದ್ದಾರೆ. ಕರ್ನಾಟಕ ಸರ್ಕಾರದ ನಿವೃತ್ತ ಕಂದಾಯ ಕಾರ್ಯದರ್ಶಿ ಕೆ. ಎಸ್. ಪ್ರಭಾಕರ್ ಬಿ. ಹರಿಶ್ಚಂದ್ರ ಆಚಾರ್ಯ ಸಂಸ್ಮರಣಾ ಭಾಷಣಗೈಯಲಿದ್ದಾರೆ. ಸಾಂಸ್ಕೃತಿಕ ಸಂಘಟಕ ಜಿ. ಟಿ. ಆಚಾರ್ಯ ಮುಂಬೈ ಶ್ರೀಧರ ವಿ. ಆಚಾರ್ಯರ ಕುರಿತು ಅಭಿನಂದನಾ ಭಾಷಣ ಮಾಡಲಿ ದ್ದಾರೆ. ಈ ಸಂದರ್ಭ ಎಸ್ಸೆಸ್ಸೆಲ್ಸಿ, ಪಿಯು ಸಾಧಕ ವಿಶ್ವಕರ್ಮ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ರೇಮಂಡ್ ಡಿಕುನ್ಹಾ ಅವರ 'ಚುನ್ಯಾಚೊ ಫೊಂಡ್' ಕೃತಿ ಬಿಡುಗಡೆ



ಮಂಗಳೂರು: ಪತ್ರಕರ್ತ, ಸಾಹಿತಿ ರೇಮಂಡ್ ಡಿಕುನ್ಹಾ ತಾಕೋಡೆ ಅವರು ಬರೆದಿರುವ, ಕನ್ನಡ ಮತ್ತು ದೇವನಾಗರಿ ಲಿಪಿಯಲ್ಲಿರುವ ಕೊಂಕಣಿ ಕವನಗಳ ಸಂಕಲನ 'ಚುನ್ಯಾಚೊ ಫೊಂಡ್' ಕೃತಿಯು ಮಂಗಳೂರು ಪ್ರೆಸ್‌ಕ್ಲಬ್‌ನಲ್ಲಿ ಗುರುವಾರ ಬಿಡುಗಡೆಗೊಂಡಿತು.

ಕೃತಿ ಬಿಡುಗಡೆಗೊಳಿಸಿದ ಮೈಕಲ್ ಡಿ'ಸೋಜಾ ವಿಷನ್ ಕೊಂಕಣಿ ಸಂಸ್ಥಾಪಕ, ಸಮಾಜ ಸೇವಕ ಮೈಕಲ್ ಡಿಸೋಜ, ವಿಷನ್ ಕೊಂಕಣಿ ಸಂಸ್ಥೆಯ ಮುಖಾಂತರ ಮಾತೃಭಾಷೆಯಲ್ಲಿ ಕೃತಿ ಪ್ರಕಟಿಸುವ ಬರಹಗಾರರ ಪುಸ್ತಕವನ್ನು ಮುದ್ರಣ ಮಾಡಲು ಸಹಾಯ ಮಾಡುತ್ತಿದ್ದೇನೆ. ಈಗ ಬಿಡುಗಡೆಗೊಂಡಿರುವ ಪುಸ್ತಕ ಸಂಸ್ಥೆಯ 42ನೇ ಪುಸ್ತಕವಾಗಿದೆ. ಮುಂದಿನ ಐದು ವರ್ಷಗಳಲ್ಲಿ 100 ಪುಸ್ತಕಗಳನ್ನು ಹೊರತರುವ ಗುರಿ ಹೊಂದಲಾಗಿದೆ. ಕೃತಿ ರಚಿಸಿ ಮುದ್ರಿಸಲು ಅನುದಾನದ ಕೊರತೆ ಎದುರಿಸುತ್ತಿರುವ ಕೃತಿಕಾರರಿಗೆ ಸಹಾಯ ಮಾಡಲು ವಿಷನ್ ಕೊಂಕಣಿ ಸಹಾಯ ಮಾಡುತ್ತಿದೆ ಎಂದರು.

ವಿಷನ್ ಕೊಂಕಣಿ ಮುಖ್ಯಸ್ಥ ಮುಖ್ಯಸ್ಥ ಎಚ್.ಎಂ. ಪೆರ್ನಾಲ್(ಹೆನ್ರಿ ಮೆಂಡೋನ್ಸಾ) ಮಾತನಾಡಿ, ಮೈಕಲ್ ಡಿಸೋಜ ಅವರು, ಮೈಕಲ್ ಡಿಸೋಜಾ ವಿಷನ್ ಕೊಂಕಣಿ ಮೂಲಕ ಸಾಹಿತಿಗಳಿಗೆ ಸಹಾಯ ಮಾಡುತ್ತಿದ್ದಾರೆ. 40 ಲಕ್ಷಕ್ಕೂ ಮಿಕ್ಕಿದ ನೆರವಿನ ಪಂಚವಾರ್ಷಿಕ ಯೋಜನೆ ಇದಾಗಿದೆ. ನಮ್ಮಲ್ಲಿ ಪುಸ್ತಕ ಪ್ರಕಟಿಸುವವರು ಪುಸ್ತಕದ ಕರಡು ಪ್ರತಿ ಹಾಗೂ ಪಿಡಿಎಫ್ ಪ್ರತಿಯನ್ನು ಕಳುಹಿಸಿದರೆ ಆಯ್ಕೆ ಸಮಿತಿ ವತಿಯಿಂದ ಪರಾಮರ್ಶಿಸಿ ಪುಸ್ತಕ ಮುದ್ರಿಸಿಕೊಡಲಾಗುತ್ತದೆ ಎಂದರು.

ಕೃತಿಕಾರ ರೇಮಂಡ್ ಡಿಕುನಾ ತಾಕೊಡೆ, ಮೈಕಲ್ ಡಿಸೋಜಾರನ್ನು ಈ ಸಂದರ್ಭ ಸನ್ಮಾನಿಸಲಾಯಿತು. ಸಂಸ್ಥೆಯ ಪ್ರಮುಖರಾದ ಮೆಲ್ವಿನ್ ರೊಡ್ರಿಗಸ್, ಟೈಟಸ್ ನೊರೊನ್ಹಾ ದ.ಕ. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪುಷ್ಪರಾಜ್ ಬಿ. ಎನ್. ಪ್ರಧಾನ ಕಾರ್ಯದರ್ಶಿ ರಾಜೇಶ್ ಪೂಜಾರಿ ಇದ್ದರು. ಪತ್ರಕರ್ತ ಭಾಸ್ಕರ ರೈ ಕಟ್ಟ ನಿರೂಪಿಸಿದರು. ಪತ್ರಕರ್ತೆ ರಿಯಾನಾ ಡಿಕುನ್ಹಾ ವಂದಿಸಿದರು.

ಹಿರಿಯರ ಸೇವಾ ಪ್ರತಿಷ್ಠಾನದ ಕಾರ್ಯ ಮೌಲ್ಯಯುತ: ವಿಠಲ ರೈ ಅಭಿಪ್ರಾಯ



ಬಂಟ್ವಾಳ: ಹಿರಿಯರ ಸೇವಾ ಪ್ರತಿಷ್ಠಾನದ ಮೂಲಕ ನಡೆಸುತ್ತಿರುವ ಸೇವಾ ಕಾರ್ಯಗಳು ವಿಶೇಷ ಮೌಲ್ಯ ಹೊಂದಿದೆ ಎಂದು ಇರ್ದೆ ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷ ಬಿ. ವಿಠಲ ರೈ ಹೇಳಿದ್ದಾರೆ.

ಬೆಂದ್ರುತೀರ್ಥ ಕ್ಷೇತ್ರದಲ್ಲಿ ಜರಗಿದ ಅಖಿಲ ಕರ್ನಾಟಕ ಹಿರಿಯರ ಸೇವಾ ಪ್ರತಿಷ್ಠಾನ.ರಿ ಮೆಲ್ಕಾರ್ ಇದರ ಕೇಂದ್ರೀಯ ಸಮಿತಿಯ ಸಭೆ ಉದ್ಘಾಟಿಸಿ ಮಾತನಾಡಿದರು.

ಶಿವಾಜಿಯುವಸೇನೆಯಗೌರವಾಧ್ಯಕ್ಷರಾದ ಚಂದ್ರಹಾಸ ಮೂರೂರು ಬೆಂದ್ರುತೀರ್ಥದ ಇತಿಹಾಸದ ಬಗ್ಗೆ ಮಾಹಿತಿ ನೀಡಿದರು. ಬೆಂದ್ರುತೀರ್ಥ ಟ್ರಸ್ಟಿನ ಸದಸ್ಯ ಸುಬ್ರಹ್ಮಣ್ಯ ದೇವಕಾನ ತಿಳಿಸಿದರು. ಸಭಾಧ್ಯಕ್ಷತೆ ವಹಿಸಿದ್ದ ಹಿರಿಯರ ಸೇವಾ ಪ್ರತಿಷ್ಠಾನದ ಅಧ್ಯಕ್ಷರಾದ ಕೆಯ್ಯೂರು ನಾರಾಯಣ ಭಟ್ ಮಾತನಾಡಿ, ಮೆಲ್ಕಾರ್ ಶಂಕರಪತ್ತಿನ ಸಹಕಾರಿ ಸಂಘದ ಶಾಖೆಯನ್ನು ಹಿರಿಯರ ಸೇವಾಪ್ರತಿಷ್ಠಾನದನೇತೃತ್ವದಲ್ಲಿಪುತ್ತೂರಿನಲ್ಲಿ ತೆರೆಯಲಾಗುವುದು ಮತ್ತು ಮಂಚಿ ಗೋಶಾಲೆಯ ಮೇವಿನ ಅಭಿಯಾನಕ್ಕೆ ಎಲ್ಲರೂ ಸಹಕರಿಸಬೇಕೆಂದರು.

ಶಿವಾಜಿ ಯುವಸೇನೆ ಬೆಂದ್ರುತೀರ್ಥ ಪದಾಧಿಕಾರಿಗಳನ್ನು ಮತ್ತು ಸದಸ್ಯರನ್ನು ಹಿರಿಯರ ಸೇವಾ ಪ್ರತಿಷ್ಠಾನದಿಂದ ಗೌರವಿಸಲಾಯಿತು. ಶಿವಾಜಿ ಯುವ ಸೇನೆ ಅಧ್ಯಕ್ಷ ಧನ್ಯ ರಾಜ್. ಬಿ,ಕೆ.ಉದಯ ಶಂಕರ ರೈ ಪುಣಚ, ಭವಾನಿ ಶಂಕರ್ ಶೆಟ್ಟಿ ಪುತ್ತೂರು, ಖಜಾಂಜಿ ಅನಾರು ಕೃಷ್ಣಶರ್ಮ, ಈಶ್ವರ ಭಟ್ ಗುಂಡ್ಯಡ್ಕ, ಪುಷ್ಪರಾಜ ಶೆಟ್ಟಿ ಬೈರಮಜಲು, ಕೌಶಿಕ್ ಬಿ., ಕಾರ್ತಿಕ್, ವಿನೀತ್ ಕುಮಾರ್, ಆನಂದ ಮಣ್ಣಾಪು, ಶಿವಪ್ರಸಾದ ಎಂ ,ಮನೋಹರ ಬಾಳೆಹಿತ್ಲು, ಸತೀಶ ಆಚಾರ್ಯ, ವಿಠಲ ಆಚಾರ್ಯ ಮೊದಲಾದವರು ಇದ್ದರು. ಶಂಕರಿ ಶರ್ಮ ಪ್ರಾರ್ಥಿಸಿದರು. ಪ್ರತಿಷ್ಠಾನದ ಪುತ್ತೂರು ಘಟಕದ ಅಧ್ಯಕ್ಷ ಚಂದ್ರಶೇಖರ ಆಳ್ವ ಸ್ವಾಗತಿಸಿ, ಸಂಚಾಲಕ ಭಾಸ್ಕರ ಬಾರ್ಯ ವಂದಿಸಿದರು. ಪ್ರತಿಷ್ಠಾನದ ಕಾರ್ಯದರ್ಶಿ ದಿವಾಕರ ಆಚಾರ್ಯ ಗೇರುಕಟ್ಟೆ ಕಾರ್ಯಕ್ರಮ ನಿರೂಪಿಸಿದರು.

ತಲಪಾಡಿಯ ಶಾರದಾ ಪದವಿ ಕಾಲೇಜಿನಲ್ಲಿ ಹಣಕಾಸು ಜಾಗೃತಿ



ಮಂಗಳೂರು: ಇಲ್ಲಿನ ತಲಪಾಡಿಯ ಶಾರದಾ ಪದವಿ ಕಾಲೇಜಿನಲ್ಲಿ ಶಾರದಾ ಪದವಿ ಕಾಲೇಜು, ವಾಣಿಜ್ಯ ಮತ್ತು ನಿರ್ವಹಣಾ ವಿಭಾಗ ಮತ್ತು ಸಂಸ್ಥೆಯ ನಾವೀನ್ಯತಾ ಮಂಡಳಿ ಸಹಯೋಗದೊಂದಿಗೆ ಬಿಎಸ್‌ಇ ಪ್ರಮಾಣೀಕೃತ ಹಣಕಾಸು ಜಾಗೃತಿ ಕಾರ್ಯಕ್ರಮವನ್ನು ಕಾಲೇ ಜಿನ ಸೆಮಿನಾರ್ ಹಾಲ್‌ನಲ್ಲಿ ಗುರುವಾರ ಆಯೋಜಿಸಲಾಯಿತು.

ಈ ಅಧಿವೇಶನವು ವಿದ್ಯಾರ್ಥಿಗಳಲ್ಲಿ ಆರ್ಥಿಕ ಸಾಕ್ಷರತೆ ಮತ್ತು ವೈಯಕ್ತಿಕ ಹಣಕಾಸುಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವ ಗುರಿಯನ್ನು ಹೊಂದಿತ್ತು. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿ ಮಂಗಳೂರಿನ ರೋಶನಿ ನಿಲಯದ ಸಮಾಜ ಕಾರ್ಯ ಶಾಲೆಯ ಸಹಾಯಕ ಪ್ರಾಧ್ಯಾಪಕ ಡಾ. ಪ್ರಶಾಂತ್. ಅವರು ಹಣಕಾಸು ಯೋಜನೆ, ಉಳಿತಾಯ, ಹೂಡಿಕೆ ಅರಿವು ಮತ್ತು ಜವಾಬ್ದಾರಿಯುತ ಹಣಕಾಸು ನಿರ್ಧಾರ ತೆಗೆದುಕೊಳ್ಳುವಿಕೆಯನ್ನು ಎತ್ತಿ ತೋರಿಸುವ ಒಳನೋಟವುಳ್ಳ ಉಪನ್ಯಾಸ ನೀಡಿದರು. ಬಿಸಿಎ, ಬಿ.ಕಾಂ, ಬಿಬಿಎ ಮತ್ತು ಬಿ.ಎಸ್ಸಿ ಅನಿಮೇಷನ್‌ನ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು ಶಾರದಾ ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಮೀನಾ ಜೆ. ಪಣಿಕ್ಕರ್ ಅವರ ಮಾರ್ಗದರ್ಶನದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ವಾಣಿಜ್ಯ ಮತ್ತು ನಿರ್ವಹಣಾ ಸಂಯೋಜಕ ಕಾವ್ಯ ರಾವ್ ಮತ್ತು ಸಂಸ್ಥೆಯ ನಾವೀನ್ಯತಾ ಮಂಡಳಿಯ ಸಂಯೋಜಕಿ ಸಂಪ್ರೀತಾ ರೈ ಸಹಕರಿಸಿದರು.

ವಿದ್ಯುತ್ ಕಡಿತದ ಬಗ್ಗೆ ಪುತ್ತೂರು ಮೆಸ್ಕಾಂ ಜನಸಂಪರ್ಕ ಸಭೆಯಲ್ಲಿ ಗ್ರಾಹಕರಿಂದ ತೀವ್ರ ಆಕ್ರೋಶ

ಪುತ್ತೂರು: ತಂತಿ ಮೇಲೆ ಬೀಳುವ ಅಪಾಯದ ಮರಗಳನ್ನು ಗುರುತಿಸಿ ಮೊದಲೇ ತೆರವು ಮಾಡಿದರೆ ವಿದ್ಯುತ್ ನಿಲುಗಡೆ ತಪ್ಪಿಸಬಹುದು. ವಿದ್ಯುತ್ ಸಿಡಿಲು ಮಿಂಚಿಗೆ ಹೋಗುವುದು ಸಹಜ. ಮರ ಬಿದ್ದರೆ ಸರಿಪಡಿಸಲು ಸ್ವಲ್ಪ ಸಮಯ ಬೇಕಾಗುತ್ತದೆ. ಆದರೆ, ಯಾವುದೇ ಸಮಸ್ಯೆ ಇಲ್ಲದಾಗಲೂ ವಿದ್ಯುತ್ ನಿಲುಗಡೆ ಯಾಕೆ? ಆಧುನಿಕ ಕಾಲವಾದರೂ ಎರಡು ದಿನವಾದರೂ ವಿದ್ಯುತ್ ಮರು ಸಂಪರ್ಕ ಮಾಡುತ್ತಿಲ್ಲ ಯಾಕೆ ಎಂದು ಪ್ರಶ್ನೆಗಳ ಮೇಲೆ ಪ್ರಶ್ನೆಗಳು ಮೆಸ್ಕಾಂ ಜನಸಂಪರ್ಕ ಸಭೆಯಲ್ಲಿ ಕೇಳಿ ಬಂದಿದೆ.

ಪುತ್ತೂರು ಗ್ರಾಮಾಂತರ ಮತ್ತು ನಗರ ಉಪವಿಭಾಗದ ಮೆಸ್ಕಾಂ ಜನಸಂಪರ್ಕ ಸಭೆಯು ಬನ್ನೂರು ಮೆಸ್ಕಾಂ ಕಚೇರಿಯಲ್ಲಿ ಮಂಗಳೂರು ಮೆಸ್ಕಾಂ ವೃತ್ತ ಕಚೇರಿಯ ಅಧೀಕ್ಷಕ ಇಂಜಿನಿಯರ್ ಕೃಷ್ಣರಾಜ್ ಅಧ್ಯಕ್ಷತೆಯಲ್ಲಿ ನಡೆಯಿತು. ಸಿಡಿಲು ಬಂದ ಹೋಗುವುದು ಸಹಜ, ಮರ ಬಿದ್ದೂ ಹೋದರೂ ಎರಡು ದಿನ ವಿದ್ಯುತ್



ಇಲ್ಲದಿದ್ದರೂ ನಾವು ಕಾಯಬಹುದು. ಆದರೆ ಯಾವುದೇ ಸಮಸ್ಯೆ ಇಲ್ಲದಾಗಲೂ ವಿದ್ಯುತ್ ಕಡಿತ ಯಾಕೆ ಎಂದು ಕುಂಬ್ರದ ಸದಸ್ಯರೊಬ್ಬರು ಪ್ರಸ್ತಾಪಿಸಿದರು. ಉತ್ತರಿಸಿದ ಕಾರ್ಯಪಾಲಕ ಇಂಜಿನಿಯರ್ ರಾಮಚಂದ್ರ ಅವರು ಮೊನ್ನೆಯ ಮಳೆಗೆ ತೋಟದ ಬದಿಯಿಂದ ಹೋಗುವ ತಂತಿಗಳಲ್ಲಿ ಸುಮಾರು 200ಕ್ಕೂ ಮಿಕ್ಕಿ ವಿದ್ಯುತ್ ಕಂಬ ತುಂಡಾಗಿದೆ. ಮರುದಿನ ಕೇವಲ ಮರ ತೆರವು ಮಾಡುವ ಕೆಲಸವೇ ಆಗಿದೆ. ಪ್ರಾರಂಭದ ಮಳೆಗೆ ಸಮಸ್ಯೆ ಬರುವುದು ಸಹಜ. ಒಂದು ಸಲ ಅದು ದುರಸ್ತಿ ಆದರೆ ಮತ್ತೆ ಎಷ್ಟು ಮಳೆ ಬಂದರೂ ಸಮಸ್ಯೆ ಆಗುವುದಿಲ್ಲ, ಮೊದಲ ಮಳೆಗೆ 15 ದಿನ ಸೆಟ್‌ಅಪ್‌ಗೆ ಬೇಕಾಗುತ್ತದೆ ಎಂದು ಉತ್ತರಿಸಿದರು. ಈ ನಡುವೆ ಮೆಸ್ಕಾಂ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಇದೆ. ಇದ್ದವರು ತಮ್ಮ ಶಕ್ತಿ ಮೀರಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಕೃತಜ್ಞತೆಗಳು ಎಂಬ ಮೆಚ್ಚುಗೆಯನ್ನೂ ಗ್ರಾಹಕರು ವ್ಯಕ್ತಪಡಿಸಿದರು. ಪುತ್ತೂರು ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಉಮಾನಾಥ ಶೆಟ್ಟಿ, ಕಾರ್ಯನಿರ್ವಾಹಕ ಇಂಜಿನಿಯರ್ ರಾಮಚಂದ್ರ, ವಿಭಾಗ ಕಚೇರಿಯ ಲೆಕ್ಕಾಧಿಕಾರಿ ನಾರಾಯಣ್, ಗ್ರಾಮಾಂತರ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಶಿವಶಂಕರ್ ಉಪಸ್ಥಿತರಿದ್ದರು.

ಗೃಹ ಜ್ಯೋತಿ ಹೊಸ ಅರ್ಜಿ ಸ್ವೀಕಾರ

ಪಂಚ ಗ್ಯಾರೆಂಟಿ ಯೋಜನೆ ಅನುಷ್ಠಾನ ಸಮಿತಿ ಪುತ್ತೂರು ತಾಲೂಕು ಅಧ್ಯಕ್ಷ ಉಮಾನಾಥ್ ಶೆಟ್ಟಿ ಮಾತನಾಡಿ, ಈಗ ಹೊಸ ಅರ್ಜಿಗಳನ್ನು ನೀಡಿದ್ದಾರೆ. ಹೊಸ ಮನೆ ಸೇರ್ಪಡೆ ಮಾಡಲು ಆಗುತ್ತದೆ. ಅವರಿಗೆ 57 ಯುನಿಟ್ ಮಾತ್ರ ಉಚಿತ ವಿದ್ಯುತ್ ನೀಡಲಾಗುತ್ತದೆ ಎಂದರು. ಅಲ್ಲಲ್ಲಿ ತಂತಿಗಳಿಗೆ ಬೀಳುವ ಅಪಾಯದ ಮರಗಳನ್ನು ತೆರವು ಮಾಡುವ ಕುರಿತು ಸದಸ್ಯರು ಪ್ರಸ್ತಾಪಿಸಿದಾಗ ಉತ್ತರಿಸಿದ ಮೆಸ್ಕಾಂ ವೃತ್ತ ಕಚೇರಿಯ ಅಧೀಕ್ಷಕ ಇಂಜಿನಿಯರ್ ಕೃಷ್ಣರಾಜ್, ಅಪಾಯದ ದೊಡ್ಡ ಗಾತ್ರದ ಮರವಿದ್ದರೆ ಅದನ್ನು ಅರಣ್ಯ ಇಲಾಖೆಗೆ ಬರೆಯಬೇಕು. ಖಾಸಗಿ ಜಮೀನಿನಲ್ಲಿ ಇದ್ದರೆ ಅವರಿಗೆ ಇಲಾಖೆಯಿಂದ ನೋಟೀಸ್ ಜಾರಿ ಮಾಡಬಹುದು. ಬಳಿಕ ಅವರ ಸಹಕಾರದೊಂದಿಗೆ ಮರ ತೆರವ ಮಾಡಬಹುದು. ಮರ ತೆರವಿಗೆ ನಾವು ಲೈನ್ ಆಫ್ ಮಾಡಿ ಸಹಕಾರ ನೀಡುತ್ತೇವೆ. ವಿದ್ಯುತ್ ತಂತಿಗೆ, ಕಂಬಗಳಿಗೆ, ಟಿ.ಸಿ.ಗಳಿಗೆ ತಾಗುತ್ತಿರುವ ಮರದ ಗೆಲ್ಲುಗಳನ್ನು ಮಾತ್ರ ನಾವು ತೆರವು ಮಾಡುತ್ತೇವೆ ಎಂದರು. ಉಪವಿಭಾಗದಲ್ಲಿ ಸುಮಾರು 800 ಕಿ.ಮೀ. ಲೈನ್ ಇದೆ. ಬಂದ ಬಜೆಟ್‌ನಲ್ಲಿ ಶೇ.60 ಲೈನ್ ಬದಲಾವಣೆ ಮಾಡುತ್ತೇವೆ ಎಂದು ಕಾರ್ಯನಿರ್ವಾಹಕ ಇಂಜಿನಿಯರ್ ರಾಮಚಂದ್ರ ತಿಳಿಸಿದರು. ಹಲವು ಸಮಸ್ಯೆಗಳ ಕುರಿತು ಸಭೆಯಲ್ಲಿ ಪ್ರಸ್ತಾಪವಾಯಿತು.

ಸಿಬ್ಬಂದಿ ಕೊರತೆ ನೀಗಿಸಿ

ಮೆಸ್ಕಾಂನಲ್ಲಿ ಪವರ್ ಮ್ಯಾನ್‌ಗಳ ಕೊರತೆ ಇದೆ. ಪವರ್ ಮ್ಯಾನ್‌ಗಾಗಿ ಸರಕಾರಕ್ಕೆ ಒತ್ತಡ ತರುವ ಕೆಲಸ ಆಗಬೇಕಾಗಿದೆ. ದಕ್ಷಿಣ ಕನ್ನಡಕ್ಕೆ ವಿಶೇಷ ಆದ್ಯತೆಗೆ ಶಾಸಕರ ಮೂಲಕ ಸಲ್ಲಿಸಬೇಕಾಗಿದೆ ಎಂದು ಪಂಚ ಗ್ಯಾರೆಂಟಿ ಯೋಜನೆಯ ತಾಲೂಕು ಅಧ್ಯಕ್ಷ ಉಮಾನಾಥ ಶೆಟ್ಟಿ ಹೇಳಿದರು. ಮೆಸ್ಕಾಂ ಅಧೀಕ್ಷಕ ಕೃಷ್ಣರಾಜ್ ಮಾತನಾಡಿ, ನಮ್ಮಲ್ಲಿ ಪಾರದರ್ಶಕ ಆಯ್ಕೆ ನಡೆಯುತ್ತದೆ. ಆದರೆ ಈ ಭಾಗದ ಜನರು ಎಸ್ಸೆಸ್ಸೆಲ್ಸಿಯಲ್ಲಿ ಶೇ.80 ಅಂಕ ಗಳಿಸಿದರೆ ಬೇರೆ ಬೇರೆ ಫೀಲ್ಡ್‌ಗೆ ಹೋಗುತ್ತಾರೆ. ಇಲ್ಲಿನ ಪವರ್‌ಮ್ಯಾನ್‌ಗಳಿಗೆ ವರ್ಗಾವಣೆ ಆದೇಶ ಬಂದರೂ ಹೊಸ ಪವರ್ ಮ್ಯಾನ್ ಇಲ್ಲಿಗೆ ಬಂದ ಬಳಿಕವೇ ಅವರಿಗೆ ರಿಲೀವ್ ಆಗುವುದು ಎಂಬ ಮಾಹಿತಿಯನ್ನು ನೀಡಿದರು.

ಸುತ್ತಮುತ್ತ

ಸಿಬಿಎಸ್‌ಇ ಪರೀಕ್ಷೆ: ಕಾಸರಗೋಡು ಚಿನ್ಮಯಕ್ಕೆ ಶೇ.100 ಫಲಿತಾಂಶ

ಕಾಸರಗೋಡು: 2026ರ ಸಿಬಿಎಸ್‌ಇ 10ನೇ ಮತ್ತು 12ನೇ ತರಗತಿಯ ಪರೀಕ್ಷೆಯಲ್ಲಿ ಕಾಸರಗೋಡು ಚಿನ್ಮಯ ವಿದ್ಯಾಲಯವು ಅತ್ಯುತ್ತಮ ಫಲಿತಾಂಶವನ್ನು ಸಾಧಿಸಿ ಜಿಲ್ಲೆಯ ಹೆಮ್ಮೆಗೆ ಪಾತ್ರವಾಗಿದೆ. ಎರಡೂ ತರಗತಿಗಳಲ್ಲೂ ಶಾಲೆಯು ಶೇಕಡಾ 100 ಫಲಿತಾಂಶವನ್ನು ದಾಖಲಿಸಿದೆ. 10ನೇ ತರಗತಿಯಲ್ಲಿ ಪರೀಕ್ಷೆ ಬರೆದ 114 ವಿದ್ಯಾರ್ಥಿಗಳಲ್ಲಿ 81 ಮಂದಿ ಅತ್ಯುತ್ತಮ ಶ್ರೇಣಿ, 31 ಮಂದಿ ಪ್ರಥಮ ಶ್ರೇಣಿ ಮತ್ತು 2 ಮಂದಿ ದ್ವಿತೀಯ ಶ್ರೇಣಿಯನ್ನು ಪಡೆದಿದ್ದಾರೆ. ನಿರಂಜನಾ ವಿನೋದ್ 494 ಅಂಕಗಳೊಂದಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಸಚಿಕಾ ಎಸ್.ಶೆಟ್ಟಿ 486 ಅಂಕಗಳೊಂದಿಗೆ ದ್ವಿತೀಯ ಸ್ಥಾನ ಮತ್ತು ನೇಹಲ್ ಆರ್.ಗಟ್ಟಿ 484 ಅಂಕಗಳೊಂದಿಗೆ ತೃತೀಯ ಸ್ಥಾನ ಪಡೆದಿದ್ದಾರೆ. 12ನೇ ತರಗತಿಯಲ್ಲಿ ಪರೀಕ್ಷೆ ಬರೆದ 27 ವಿದ್ಯಾರ್ಥಿಗಳಲ್ಲಿ 15 ಮಂದಿ ಅತ್ಯುನ್ನತ ಶ್ರೇಣಿ, 10 ಮಂದಿ ಪ್ರಥಮ ಶ್ರೇಣಿ ಮತ್ತು 2 ಮಂದಿ ದ್ವಿತೀಯ ಶ್ರೇಣಿಯನ್ನು ಪಡೆದಿದ್ದಾರೆ. ಮಾಳವಿಕಾ ಪ್ರವೀಣ್ 462 ಅಂಕಗಳೊಂದಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಎ.ಸಹನಾ ಹಾಗೂ ಗೌರವ್ ಕೆ. 454 ಅಂಕಗಳೊಂದಿಗೆ ದ್ವಿತೀಯ ಸ್ಥಾನ ಮತ್ತು ರುದ್ರಪ್ರಸಾದ್ 438 ಅಂಕಗಳೊಂದಿಗೆ ತೃತೀಯ ಸ್ಥಾನವನ್ನು ಪಡೆದಿದ್ದಾರೆ. ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳು ಹಾಗೂ ಅವರನ್ನು ಮಾರ್ಗದರ್ಶನ ನೀಡಿದ ಶಿಕ್ಷಕರನ್ನು ಶಾಲಾ ಆಡಳಿತ ಮಂಡಳಿ ಅಭಿನಂದಿಸಿದೆ.

ಬಾರಿಕಾಡು ಅಂಜಾರಿಲ್ಲಂ ತರವಾಡಿನಲ್ಲಿ ದೈವಗಳ ಪುನರ್ ಪ್ರತಿಷ್ಠೆ

ಕಾಸರಗೋಡು: ಕೂಡ್ಲು ರಾಮದಾಸನಗರ ಕಾಳ್ಯಾಂಗಾಡಿನಲ್ಲಿರುವ ಬಾರಿಕ್ಕಾಡು ಅಂಜಾರಿಲ್ಲಂ ತರವಾಡಿನ ನವೀಕೃತ ತರವಾಡು ಮನೆಯ ಗೃಹ ಪ್ರವೇಶ, ಕೊರತ್ತಿಯಮ್ಮ ಹಾಗೂ ಗುಳಿಗ ದೈವಗಳ ಪುನರ್ ಪ್ರತಿಷ್ಠಾ ಕಲಶಾಭಿಷೇಕವು ಮೇ 17ರಿಂದ 19ರ ತನಕ ತಂತ್ರಿವರ್ಯರಾದ ಬ್ರಹ್ಮ ಶ್ರೀ ಉಳಿಯತ್ತಾಯ ವಿಷ್ಣು ಆಸ್ರರವರ ನೇತೃತ್ವದಲ್ಲಿ ಜರಗಲಿದೆ. 17ರಂದು ಬೆಳಗ್ಗೆ 10ಕ್ಕೆ ಕೊಂಡೆವೂರು ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿಗೆ ಪೂರ್ಣಕುಂಭ ಸ್ವಾಗತ, ಬೆಳಗ್ಗೆ 10.10ರಿಂದ 11.32ರ ಮಧ್ಯೆ ನಡೆಯುವ ಕರ್ಕಾಟಕ ಲಗ್ನ ಶುಭಮುಹೂರ್ತದಲ್ಲಿ ನವೀಕೃತ ತರವಾಡು ಮನೆಯ ಗೃಹ ಪ್ರವೇಶ ಮತ್ತು ಕೊರತ್ತಿಯಮ್ಮ, ಗುಳಿಗ ಪ್ರತಿಷ್ಠೆ, ಕಲಶಾಭಿಷೇಕ, ತಂಬಿಲ, ನಾಗತಂಬಿಲ ನೆರವೇರಲಿದೆ. 11.45ಕ್ಕೆ ಧಾರ್ಮಿಕ ಸಭೆ ನಡೆಯಲಿದೆ. ಕೊಂಡೆವೂರು ಶ್ರೀ ಶ್ರೀ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿಗಳು, ತಂತ್ರಿವರ್ಯ ಬ್ರಹ್ಮ ಶ್ರೀ ಉಳಿಯತ್ತಾಯ ವಿಷ್ಣು ಆಸ್ರರು ಉದ್ಘಾಟಿಸಿ ಆಶೀರ್ವಚನ ನೀಡುವರು. ರಾಜ್ಯ ಸಭಾ ಸದಸ್ಯ ಡಾ. ಕೆ. ನಾರಾಯಣ ಬೆಂಗಳೂರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ತೆರುವತ್ ಶ್ರೀ ಚೀರುಂಭಾ ಭಗವತೀ ಕ್ಷೇತ್ರದ ಸ್ಥಾನಿಕ ಗಣೇಶ ಮಡೆಯ, ವೇಣುಗೋಪಾಲನ್ (ಭಾಮ), ಸರೋಜಿನಿ ಗೋವರ್ಧನ್ ಅತಿಥಿಗಳಾಗಿರುವರು. ದೈವಜ್ಞರಾದ ಬಾಲಕೃಷ್ಣ ಮುನಿಕ್ಕಲ್, ರತೀಶ್ ನೀಲೇಶ್ವರ, ಶಿಲ್ಪಿ ವಾಮನ ಕೊಳತ್ತೂರು, ಸಿವಿಲ್ ಇಂಜಿನಿಯರ್ ಬಿ. ಲೋಕೇಶ್ ಶೆಟ್ಟಿ ಅವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಗುವುದು. ಅಪರಾಹ್ನ 1ರಿಂದ ಅನ್ನಸಂತರ್ಪಣೆ, 2ರಿಂದ ಭಜನೆ, ಸಂಜೆ 5.30 ರಿಂದ ಸಾಂಸ್ಕೃತಿಕ ಕಾರ್ಯಕ್ರಮ, 19ರಂದು ಬೆಳಗ್ಗೆ 9ರಿಂದ ಕುಣಿತ ಭಜನೆ, 10.30ರಿಂದ ಕೊರತ್ತಿಯಮ್ಮನ ಕೋಲ, ನಂತರ ಗುಳಿಗ ದೈವದ ಕೋಲ ನೆರವೇರಲಿದೆ.

ಮೇ 21ರಿಂದ ಕುಂಟಾರಿನಲ್ಲಿ ನೇಮ

ಮುಳ್ಳೇರಿಯ: ಕುಂಟಾರು ಶ್ರೀರಾಮನಗರ ಶ್ರೀ ದುರ್ಗಾ ರಕ್ತೇಶ್ವರೀ ಬನದಲ್ಲಿ 5 ವರ್ಷಗಳಿಗೊಮ್ಮೆ ನಡೆಯುವ ರಕ್ತೇಶ್ವರೀ ದೈವದ ನೇಮ ಮೇ 21, 22ರಂದು ಬ್ರಹ್ಮಶ್ರೀ ವಾಸುದೇವ ತಂತ್ರಿಯವರ ಮಾರ್ಗದರ್ಶನದಲ್ಲಿ ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು ಅವರ ನೇತೃತ್ವದಲ್ಲಿ ವಿವಿಧ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ. ಮೇ 21ರಂದು ಬೆಳಗ್ಗೆ 8ಕ್ಕೆ ಗಣಪತಿ ಹೋಮ, ಶುದ್ಧಿಕಲಶ, ದೈವಗಳಿಗೆ ತಂಬಿಲ, 10 ಗಂಟೆಯಿಂದ ಸಂಜೆ 6 ಗಂಟೆಯ ವರೆಗೆ ವಿವಿಧ ಭಜನಾ ತಂಡಗಳಿಂದ ಭಜನೆ ಹಾಗೂ ಕುಣಿತ ಭಜನೆ ನಡೆಯಲಿದೆ. ಮಧ್ಯಾಹ್ನ 1 ಗಂಟೆಗೆ ಅನ್ನಸಂತರ್ಪಣೆ, ಸಂಜೆ 6.30ಕ್ಕೆ ಶ್ರೀ ದೈವಗಳ ಭಂಡಾರ ಆಗಮನ, ರಾತ್ರಿ 7.30ಕ್ಕೆ ದೈವಗಳ ತೊಡಂಗಲ್, 8ರಿಂದ ಸ್ಥಳೀಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು, 9 ಗಂಟೆಗೆ ಅನ್ನಸಂತರ್ಪಣೆ, 9.30ರಿಂದ ನೃತ್ಯ ವೈವಿಧ್ಯ ಕಾರ್ಯಕ್ರಮ ನಡೆಯಲಿದೆ. ಮೇ 22ರಂದು ಬೆಳಗ್ಗೆ 8ರಿಂದ ಶ್ರೀ ರಕ್ತೇಶ್ವರಿ ದೈವದ ನೇಮ, ಪ್ರಸಾದ ವಿತರಣೆ, ಮಧ್ಯಾಹ್ನ 1 ಗಂಟೆಗೆ ಅನ್ನಸಂತರ್ಪಣೆ, ಭಂಡಾರದ ನಿರ್ಗಮನ ನಡೆಯಲಿದೆ.

ಶಿಕ್ಷಕ ಹುದ್ದೆಗಳ ನೇಮಕಾತಿಗೆ ಸಂದರ್ಶನ

ಕಾಸರಗೋಡು: ಮೊಗ್ರಾಲ್ ಪುತ್ತೂರು ಸರ್ಕಾರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಹೈಯರ್ ಸೆಕೆಂಡರಿ ವಿಭಾಗದಲ್ಲಿ ಇಂಗ್ಲಿಷ್, ಅರ್ಥಶಾಸ್ತ್ರ ಮಲಯಾಳಂ, ಅರೇಬಿಕ್, ರಾಜ್ಯಶಾಸ್ತ್ರ, ಇತಿಹಾಸ, ಭೂಗೋಳ, ವಾಣಿಜ್ಯ, ರಾಜ್ಯಶಾಸ್ತ್ರ – ಜೂನಿಯರ್ ಶಿಕ್ಷಕರ ನೇಮಕಾತಿಗಾಗಿ ಮೇ 29ರಂದು ಬೆಳಗ್ಗೆ 10 ಗಂಟೆಗೆ ಹೈಯರ್ ಸೆಕೆಂಡರಿ ಕಚೇರಿಯಲ್ಲಿ ಸಂದರ್ಶನ ನಡೆಯಲಿದೆ. ವೈವಳಿಕೆ ಸರ್ಕಾರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಇಂಗ್ಲಿಷ್, ಗಣಿತ, ಭೂವಿಜ್ಞಾನ ಮತ್ತು ರಾಜ್ಯಶಾಸ್ತ್ರ ವಿಷಯಗಳ ಹೈಯರ್ ಸೆಕೆಂಡರಿ ವಿಭಾಗದಲ್ಲಿ ಹಿರಿಯ ಶಿಕ್ಷಕರು ಮತ್ತು ಇಂಗ್ಲಿಷ್, ಮಲೆಯಾಳಂ, ಹಿಂದಿ, ಅರೇಬಿಕ್, ಭೌತಶಾಸ್ತ್ರ ರಸಾಯನಶಾಸ್ತ್ರ ಗಣಿತ ಮತ್ತು ಸಸ್ಯಶಾಸ್ತ್ರ ವಿಷಯಗಳಲ್ಲಿ ಕಿರಿಯ ಶಿಕ್ಷಕರ ನೇಮಕಾತಿಗಾಗಿ ಮೇ 28ರಂದು ಬೆಳಗ್ಗೆ 10 ಗಂಟೆಗೆ ಶಾಲಾ ಕಚೇರಿಯಲ್ಲಿ ಸಂದರ್ಶನ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 9447955901ಕರೆ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಕಾಸರಗೋಡು ಜಿಲ್ಲಾ ಪಂಚಾಯತ್ ಆಡಳಿತ ಸಮಿತಿಯ ಸಭೆ | ಅಧ್ಯಕ್ಷ ಸಾಬು ಅಬ್ರಹಾಂ ಮಾಹಿತಿ

ಜಿಲ್ಲಾಸ್ಪತ್ರೆಯ ರೋಗಿಗಳಿಗೆ ಉಪಾಹಾರ ನೀಡುವ ಯೋಜನೆ

ಕಾಸರಗೋಡು: ಜಿಲ್ಲಾಸ್ಪತ್ರೆಯಲ್ಲಿ ರೋಗಿಗಳಿಗೆ ಉಪಾಹಾರ ನೀಡುವ ಯೋಜನೆ ಜೂ. 1ರಿಂದ ಆರಂಭವಾಗಲಿದೆ ಎಂದು ಜಿಲ್ಲಾ ಪಂಚಾಯತ್ ಅಧ್ಯಕ್ಷ ಸಾಬು ಅಬ್ರಹಾಂ ತಿಳಿಸಿದ್ದಾರೆ.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಗುರುವಾರ ನಡೆದ ಜಿಲ್ಲಾ ಪಂಚಾಯತ್ ಆಡಳಿತ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು.

ಯೋಜನೆಯ ಆರಂಭಕ್ಕೆ ಸಂಬಂಧಿಸಿದ ಎಲ್ಲಾ ಕ್ರಮಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಅವರು ಸಭೆಯಲ್ಲಿ ನಿರ್ದೇಶನ ನೀಡಿದರು.

ಪ್ರಾಂಶುಪಾಲರು ಭಾಗವಹಿಸಲು ಸೂಚನೆ

ಇನ್ನು ಮುಂದೆ ಜಿಲ್ಲಾ ಪಂಚಾಯತ್ ಶಿಕ್ಷಣ ವಲಯದಲ್ಲಿ ಕರೆಯುವ ಸಭೆಗಳಲ್ಲಿ ಹೈಯರ್ ಸೆಕೆಂಡರಿ ಪ್ರಾಂಶುಪಾಲರು ಕೂಡಾ ಭಾಗವಹಿಸ ಬೇಕಾಗುತ್ತದೆ ಮತ್ತು ಅದಕ್ಕಾಗಿ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ಜಿಲ್ಲಾ ಪಂಚಾಯತ್‌ನ ಆಮ್ಲಜನಕ ಸ್ಥಾವರದ ಕಾರ್ಯಾಚರಣೆಗಾಗಿ ಏಜೆನ್ಸಿಗಳನ್ನು ಆಹ್ವಾನಿಸಲಾಗಿದೆ ಮತ್ತು ಬೆಲೆ ನಿಗದಿ ಮಾಡಲಾಗಿದೆ ಎಂದು ಸಭೆಯಲ್ಲಿ ತಿಳಿಸಲಾಯಿತು.

ಉಪಾಧ್ಯಕ್ಷೆ ಕೆ.ಕೆ.ಸೋಯಾ, ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷೆ ಇರ್ಫಾನಾ ಇಕ್ಬಾಲ್, ಲೋಕೋಪಯೋಗಿ ಸ್ಥಾಯಿ ಸಮಿತಿ ಅಧ್ಯಕ್ಷ ಕೃಷ್ಣನ್ ಓಕ್ಲಾವ್, ಅಭಿವೃದ್ಧಿ ವ್ಯವಹಾರಗಳ ಸ್ಥಾಯೀ ಸಮಿತಿ ಅಧ್ಯಕ್ಷೆ ರೀನಾ ಥೋಮಸ್, ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷೆ ಎಂ.ಮನು, ಜಿಲ್ಲಾ ಪಂಚಾಯತ್ ಸದಸ್ಯರು, ಬ್ಲಾಕ್ ಪಂಚಾಯತ್ ಅಧ್ಯಕ್ಷರು, ಜಿಲ್ಲಾ ಪಂಚಾಯತ್ ಕಾರ್ಯದರ್ಶಿ ಎಸ್.ಬಿಜು ಮತ್ತು ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಮಾತನಾಡಿದರು.



- ಉಪಾಹಾರ ಯೋಜನೆಯ ಆರಂಭಕ್ಕೆ ಸಂಬಂಧಿಸಿದ ಎಲ್ಲಾ ಕ್ರಮಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಸೂಚನೆ
- ಜೂ.1ರಿಂದ ಯೋಜನೆ ಆರಂಭ
- ಶಿಕ್ಷಣ ಸಭೆಗಳಲ್ಲಿ ಹೈಯರ್ ಸೆಕೆಂಡರಿ ಪ್ರಾಂಶುಪಾಲರು ಪಾಲ್ಗೊಳ್ಳಲು ಸೂಚನೆ
- ಆಮ್ಲಜನಕ ಸ್ಥಾವರ ಕಾರ್ಯಾಚರಣೆಗೆ ಏಜೆನ್ಸಿಗಳ ಆಹ್ವಾನ

ಶಾಲೆ ಕಟ್ಟಡದ ಬಳಿಯ ಅಪಾಯಕಾರಿ ಮರ ತೆರವಿಗೆ ಸೂಚನೆ

ಶಾಲೆ ತೆರೆಯುವ ಮೊದಲು ಶಾಲಾ ಕಟ್ಟಡಗಳ ಸುರಕ್ಷತೆಯನ್ನು ಪರಿಶೀಲಿಸಿ ಫಿಟ್‌ನೆಸ್‌ನ್ನು ತುರ್ತಾಗಿ ನೀಡಬೇಕು ಮತ್ತು ಕಟ್ಟಡದ ಬಳಿಯ ಅಪಾಯಕಾರಿ ಮರಗಳನ್ನು ಕಡಿಯುವ ಕ್ರಮಗಳನ್ನು ಮಳೆಗಾಲದ ಮೊದಲು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಜಿಲ್ಲಾ ಪಂಚಾಯತ್ ಅಧ್ಯಕ್ಷ ಸಾಬು ಅಬ್ರಹಾಂ ಸೂಚಿಸಿದರು. ಶಾಲಾ ಕಟ್ಟಡದ ಪಕ್ಕದಲ್ಲಿರುವ ಆರಣ್ಯ ಕಡಿತ ಮತ್ತು ಶುಚಿಗೊಳಿಸುವ ಕೆಲಸವನ್ನು ಸೆ.25ರೊಳಗೆ ಪೂರ್ಣಗೊಳಿಸಬೇಕು. ಸುರಕ್ಷಾ ಲೋಪವಿರುವ ಶಾಲಾ ಕಟ್ಟಡಗಳನ್ನು ಕೆಡವಿ ತೆಗೆದುಹಾಕಲು ಸ್ಥಳೀಯಾಡಳಿತ ಸಂಸ್ಥೆಗಳ ಕಾರ್ಯನಿರ್ವಾಹಕ ಇಂಜಿನಿಯರ್‌ಗಳಿಗೆ ನಿರ್ದೇಶನ ನೀಡಿದೆ. ಪ್ರಸಕ್ತ ಹಣಕಾಸು ವರ್ಷದ ಯೋಜನೆಗಳನ್ನು ಈ ವರ್ಷವೇ ಪೂರ್ಣಗೊಳಿಸಬೇಕು ಎಂದು ಹೇಳಿದರು.

ನೀಲೇಶ್ವರ ಬ್ಲಾಕ್ ಪಂಚಾಯತ್‌ನ 'ಸ್ನೇಹಪಥಂ' ಯೋಜನೆ

ರೋಗಿಗಳಿಗೆ ಮನೆ ಬಾಗಿಲಿಗೆ ಚಿಕಿತ್ಸೆ, ಆರೈಕೆ

ಕಾಸರಗೋಡು: ನೀಲೇಶ್ವರ ಬ್ಲಾಕ್ ಪಂಚಾಯತ್‌ನ 'ಆಸ್ಪತ್ರೆ ಆನ್ ದಿ ಪಾತ್ ಆಫ್ ಲವ್' (ಸ್ನೇಹಪಥಂ) ಯೋಜನೆಯು ಹಾಸಿಗೆ ಹಿಡಿದ ರೋಗಿಗಳಿಗೆ ಮನೆ ಬಾಗಿಲಿಗೆ ಚಿಕಿತ್ಸೆ ಮತ್ತು ಆರೈಕೆಯನ್ನು ಖಚಿತಪಡಿಸುತ್ತಿದೆ. ಆಸ್ಪತ್ರೆಗಳಿಗೆ ಹೋಗಲು ಸಾಧ್ಯವಾಗದ ನೂರಾರು ಹಾಸಿಗೆ ಹಿಡಿದ ರೋಗಿಗಳಿಗೆ ಮನೆ ಬಾಗಿಲಿಗೆ ಚಿಕಿತ್ಸೆ ಮತ್ತು ಆರೈಕೆಯನ್ನು ಖಚಿತಪಡಿಸುವ ಈ ಯೋಜನೆಯು ಆರೈಕೆಯ ಹೊಸ ಮಾದರಿಯಾಗಿದೆ.

ಸ್ನೇಹಪಥಂ ಯೋಜನೆಯನ್ನು ಜನವರಿ 2012ರಲ್ಲಿ ಅಂದಿನ ಬ್ಲಾಕ್ ಪಂಚಾಯತ್ ಅಧ್ಯಕ್ಷ ಟಿ.ವಿ.ಗೋವಿಂದನ್ ಅವರು ಪ್ರಾರಂಭಿಸಿದ್ದರು. ಈ ಯೋಜನೆಯು ಬ್ಲಾಕ್ ಪಂಚಾಯತ್ ವ್ಯಾಪ್ತಿಯ 6 ಗ್ರಾಮ ಪಂಚಾಯತ್‌ಗಳಲ್ಲಿ ಹಾಸಿಗೆ ಹಿಡಿದ ರೋಗಿಗಳಿಗೆ ಪರಿಹಾರವನ್ನು ಒದಗಿಸುತ್ತದೆ. ಆಶಾ ಕಾರ್ಯಕರ್ತರು ಗುರುತಿಸಿದ ಫಲಾನುಭವಿಗಳನ್ನು ಉಪ ಕೇಂದ್ರಗಳ ಆಧಾರದ ಮೇಲೆ ವೈದ್ಯಕೀಯ ತಂಡವು ಭೇಟಿ ಮಾಡುತ್ತದೆ ಮತ್ತು ವರ್ಗೀಕರಿಸುತ್ತದೆ. ಸುಮಾರು 500 ರೋಗಿಗಳನ್ನು ಒಂದು ಸುತ್ತಿನಲ್ಲಿ ಭೇಟಿ ಮಾಡುವ ತಂಡವು ವರ್ಷಕ್ಕೆ ಐದು ಅಥವಾ ಆರು ಬಾರಿ ತಪಾಸಣೆಗಾಗಿ ಅವರ ಮನೆಗಳಿಗೆ ಭೇಟಿ ನೀಡುತ್ತದೆ.



ವೈದ್ಯಾಧಿಕಾರಿ ಡಾ.ಟಿ.ವಿ.ಸುರೇಂದ್ರನ್, ನರ್ಸ್ ಪಿ.ಸುನೀತಾ ಮತ್ತು ಆಂಬ್ಯುಲೆನ್ಸ್ ಚಾಲಕ ರಮೇಶನ್ ಅವರನ್ನೊಳಗೊಂಡ ತಂಡವು ಮನೆಗಳಿಗೆ ಭೇಟಿ ನೀಡುತ್ತದೆ.

ಈ ತಂಡವು ರೋಗಿಗಳ ರಕ್ತದೊತ್ತಡ ಮತ್ತು ಮಧುಮೇಹವನ್ನು ಪರೀಕ್ಷಿಸಲಾಗುತ್ತದೆ ಮತ್ತು ಅವರಿಗೆ ಅಗತ್ಯವಾದ ಔಷಧಿಗಳನ್ನು ಉಚಿತವಾಗಿ ನೀಡಲಾಗುತ್ತದೆ. ಭೇಟಿ ನೀಡುವ ವೈದ್ಯರು ರೋಗಿಯ ಸ್ಥಿತಿಯನ್ನು ನಿಖರವಾಗಿ ನಿರ್ಣಯಿಸುತ್ತಾರೆ ಮತ್ತು ಔಷಧಿಗಳ ಪ್ರಮಾಣದಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡುತ್ತಾರೆ.

ಈ ಯೋಜನೆಯ ಪ್ರಮುಖ ಫಲಾನುಭವಿಗಳು ವಿವಿಧ ಕಾಯಿಲೆಗಳಿಂದ ಹಾಸಿಗೆ ಹಿಡಿದವರು. ಪ್ರಸ್ತುತ ಅಂಕಿ ಅಂಶಗಳ ಪ್ರಕಾರ ಪಾರ್ಶ್ವವಾಯು ಪೀಡಿತ 74 ಜನರು, ಸ್ವಂತವಾಗಿ ಆಸ್ಪತ್ರೆಗೆ ಹೋಗಲು ಸಾಧ್ಯವಾಗದ 100 ಮಂದಿ ವೃದ್ಧರು, ಕ್ಯಾನ್ಸರ್‌ನಿಂದ ಬಳಲುತ್ತಿರುವ 37 ಮಂದಿ, ಪಾರ್ಕಿನ್ಸನ್ ಕಾಯಿಲೆಯಿಂದ ಬಳಲುತ್ತಿರುವ 18 ಜನರು, ರುಮಟಾಯ್ಡ್ ಸಂಧಿ ವಾತದಿಂದ ಬಳಲುತ್ತಿರುವ 7 ಮಂದಿ ಮತ್ತು ದೀರ್ಘಕಾಲದ ಮೂತ್ರಪಿಂಡ ಕಾಯಿಲೆಯಿಂದ ಬಳಲುತ್ತಿರುವ 9 ಮಂದಿ ಈ ಯೋಜನೆಯ ಪ್ರಯೋಜನ ಪಡೆಯುತ್ತಿದ್ದಾರೆ.

ರೋಗಿಗಳಿಗೆ ನಿಯಮಿತ ಸಾಂತ್ವನ

ಅಧಿಕ ರಕ್ತದೊತ್ತಡ ಮತ್ತು ಮಧುಮೇಹ ಹೊಂದಿರುವವರು, ಪೋಲಿಯೊ ಪೀಡಿತರು ಮತ್ತು ಇತರ ದೈಹಿಕ ತೊಂದರೆಗಳಿಂದ ಬಳಲುತ್ತಿರುವ 166 ಜನರು ಸ್ನೇಹಪಥಂ ಯೋಜನೆಯ ಸೇವೆಗಳನ್ನು ನಿರಂತರವಾಗಿ ಬಳಸುತ್ತಿದ್ದಾರೆ. ವೈದ್ಯರು ಮತ್ತು ನರ್ಸ್ ಅವರನ್ನು ಒಳಗೊಂಡ ತಂಡವು ನಿಯಮಿತವಾಗಿ ಅವರನ್ನು ಭೇಟಿ ಮಾಡಿ ಹಾಸಿಗೆ ಹಿಡಿದ ರೋಗಿಗಳಿಗೆ ಸಾಂತ್ವನ ನೀಡುತ್ತಿದೆ.

ಮೂರನೇ ವರ್ಷಕ್ಕೆ ಕಾಲಿಟ್ಟ ಕುತ್ತಿಕೋಲ್‌ನ 'ಜೀವನಂ' ಜೀವ ವೈವಿಧ್ಯ ಸಮಿತಿ

ಮೇ 22ರಂದು ಪರಿಸರ, ಅರಣ್ಯ ರಕ್ಷಣೆ ಜಾಗೃತಿ

ಕಾಸರಗೋಡು: ಜೀವನಂ ಜೀವವೈವಿಧ್ಯ ಸಮಿತಿಯು ಕುತ್ತಿಕೋಲ್ ಗ್ರಾಮ ಪಂಚಾಯತ್‌ನ ಜೀವವೈವಿಧ್ಯ ಸಂರಕ್ಷಣಾ ಚಟುವಟಿಕೆಗಳ ರಕ್ಷಕನಾಗಿದೆ. ನೈಸರ್ಗಿಕ ಪರಿಸರ ವ್ಯವಸ್ಥೆಯನ್ನು ಸಂರಕ್ಷಿಸುವ ಮಹತ್ತರ ಗುರಿಯೊಂದಿಗೆ ಕುತ್ತಿಕೋಲ್‌ನಲ್ಲಿ ನೆಲೆಗೊಂಡಿರುವ 'ಜೀವನಂ' ಜೀವವೈವಿಧ್ಯ ಸಮಿತಿಯು ಎರಡು ಯಶಸ್ವಿ ವರ್ಷಗಳನ್ನು ಪೂರೈಸಿ ಮೂರನೇ ವರ್ಷಕ್ಕೆ ಕಾಲಿಡುತ್ತಿದೆ.

ಈ ಅವಧಿಯಲ್ಲಿ ಗ್ರಾಮ ಪಂಚಾಯತ್‌ನ ಜೀವವೈವಿಧ್ಯತೆಯನ್ನು ರಕ್ಷಿಸಲು ಅನೇಕ ಚಟುವಟಿಕೆಗಳನ್ನು ಕೈಗೊಂಡು ಕಾರ್ಯಗತಗೊಳಿಸಲಾಗಿದೆ. ಕುತ್ತಿಕೋಲ್ ಗ್ರಾಮ ಪಂಚಾಯತ್‌ನಲ್ಲಿ ಪರಿಸರ ಕಾರ್ಯಕರ್ತರ ಗುಂಪಿನಿಂದ ರಚಿಸಲ್ಪಟ್ಟ 'ಜೀವನಂ' ಜೀವವೈವಿಧ್ಯ ಸಮಿತಿಯು ಹಸಿರು ಕೇರಳಂ ಮಿಷನ್ ಕಲ್ಪಿಸಿಕೊಂಡ ಪರಿಸರ ಪುನರ್‌ಸ್ಥಾಪನೆ ಚಟುವಟಿಕೆಗಳಿಗೆ ಸಹಾಯಕವಾಗುವ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.

ನಿವೃತ್ತ ಶಿಕ್ಷಕ ತಂಬಾನ್ ಕೆ. ಮೀಯಂಗನಮ್ ಅವರ ಕಲ್ಪನೆಯ ಮೇರೆಗೆ 2023ರಲ್ಲಿ ವಾಟ್ಸಾಪ್ ಗುಂಪು, ಹಸಿರು ಕೇರಳಂ ಮಿಷನ್ ಪಂಚಾ ಯತ್‌ನಲ್ಲಿ ಜಾರಿಗೆ ತಂದ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು ಮತ್ತು ಕಾರ್ಯಗತಗೊಳಿಸಲು ಜೀವನಂ ಜೀವವೈವಿಧ್ಯ ಸಮಿತಿಯು ಒಂದು ಉದಾಹರಣೆಯಾಗಿ ಮುಂದೆ ಬಂದಿದೆ. ಪ್ರಕೃತಿಯನ್ನು ತಿಳಿದುಕೊಳ್ಳಲು 'ತುಲಪ್ಪಚ್ಚ' ಪ್ರವಾಸ, ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಆಯೋಜಿಸಲಾದ 'ರಣಾಚೆ ಪೊಲ್ಯೂ' ಅರಣ್ಯ ಪ್ರವಾಸ ಮತ್ತು ಮಕ್ಕಳಿಗಾಗಿ ಜಿಲ್ಲಾ ಮಟ್ಟದ ಪಕ್ಷಿ ವೀಕ್ಷಣಾ ಶಿಬಿರವು ಹೆಚ್ಚಿನ ಗಮನ ಸೆಳೆದಿದೆ.


ಜೀವವೈವಿಧ್ಯದ ಆಧಾರಸ್ತಂಭಗಳಾಗಿರುವ ಕಾಡುಗಳನ್ನು ಸಂರಕ್ಷಿಸಲು ನಡೆಸಿದ ಅಧ್ಯಯನ ಪ್ರವಾಸಗಳು ಮತ್ತು ಕೃಷಿಗೆ ಅಪಾಯಕಾರಿಯಾದ ಆಕ್ರಮಣಕಾರಿ ಸಸ್ಯ ಸಿಂಗಾಪುರ್ ಡೈಸಿಯನ್ನು ನಾಶಮಾಡಲು ನಡೆಸಿದ ಅಭಿಯಾನಗಳು ಕೂಡಾ ಸಮಿತಿಯ ಸಕ್ರಿಯ ಮಧ್ಯಸ್ಥಿಕೆಗಳ ಭಾಗವಾಗಿದ್ದವು. ಇದರ ಜೊತೆಗೆ ಶಾಲಾ ಆವರಣದಲ್ಲಿ ಹಣ್ಣಿನ ಮರಗಳನ್ನು ನೆಡುವ 'ಮಧುರವಣಂ' ಯೋಜನೆಯು ಭವಿಷ್ಯದ ಪೀಳಿಗೆಗೆ ಪ್ರಕೃತಿಯನ್ನು ಸಂರಕ್ಷಿಸಲು ಸಮಿತಿಗೆ ಅನುವು ಮಾಡಿಕೊಟ್ಟಿದೆ. ಪರಿಸರ ಸಂರಕ್ಷಣೆಯ ಜೊತೆಗೆ ಜೀವನಂ ಸಾಮಾಜಿಕ ಬದ್ಧತಾ ಚಟುವಟಿಕೆಗಳಲ್ಲಿಯೂ ಮುಂಚೂಣಿಯಲ್ಲಿದೆ.

ಸುಡು ಬೇಸಿಗೆಯಲ್ಲಿ ಪ್ರಯಾಣಿಕರಿಗಾಗಿ ನೀರಿನ ಕಾರಂಜಿಗಳನ್ನು ಸ್ಥಾಪಿಸುವ ಮೂಲಕ ಮತ್ತು ಹಿರಿಯ ಕೃಷಿಕರು ಮತ್ತು ಸಾಂಪ್ರದಾಯಿಕ ವೈದ್ಯರನ್ನು ಅವರ ಮನೆಗಳಿಗೆ ಭೇಟಿ ಮಾಡುವ ಮೂಲಕ ಸಮಿತಿಯು ಮಾದರಿಯಾಗಿದೆ.

ಈ ವರ್ಷದ ಅಂತರರಾಷ್ಟ್ರೀಯ ಜೈವಿಕ ವೈವಿಧ್ಯತೆಯ ದಿನ (ಮೇ22) ಸಂದರ್ಭದಲ್ಲಿ 'ಕಾಪ್ ಭೂಮಿಕ್ಕೊರೊ ಕಾವಲ್' ಹೆಸರಿನಲ್ಲಿ ವ್ಯಾಪಕ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ತಿಂಗಳಿಗೆ ಒಂದು ಕಾರ್ಯಕ್ರಮವಾಗಿ ನಡೆಸಲಾಗುತ್ತಿದೆ. ಪ್ರಸ್ತುತ ಜೀವನಂ ಸಮಿತಿಯಲ್ಲಿ ಸುಮಾರು 50 ಮಂದಿ ಸದಸ್ಯರಿದ್ದಾರೆ.



ಸಂಶೋಧನೆಯಲ್ಲಿ ಆಕರಗಳ ವಿಶ್ಲೇಷಣೆ ಅಗತ್ಯ: ಪ್ರಾಧ್ಯಾಪಕ ಡಾ.ಮೋಹನಕೃಷ್ಣ ರೈ



ಮಂಜೇಶ್ವರ: ಆಕರಗಳ ವಿಶ್ಲೇಷಣೆಯ ಮೂಲಕ ಅರಿವಿನ ದಾರಿಯನ್ನು ಕಂಡುಕೊಳ್ಳುವುದು ಸಂಶೋಧನೆಯಲ್ಲಿ ಅಗತ್ಯ. ಸಮಾಜದಲ್ಲಿ ಸಂಶೋಧನೆಗಳು ನಡೆಯುತ್ತಲೇ ಇರುತ್ತವೆ. ಅವುಗಳನ್ನು ಗುರುತಿಸಿ ಸಮಕಾಲೀನ ಸಮಾಜಕ್ಕೆ ಉಪಯೋಗವಾಗುವಂತೆ ಒದಗಿಸಬೇಕಾದುದು ಸಂಶೋಧಕರ ಹೊಣೆಗಾರಿಕೆ ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ಪ್ರಾಧ್ಯಾಪಕ ಡಾ.ಮೋಹನಕೃಷ್ಣ ರೈ ಹೇಳಿದ್ದಾರೆ.

ಕಾಸರಗೋಡು ಮಂಜೇಶ್ವರ ಗೋವಿಂದ ಪೈ ಸ್ಮಾರಕ ಮಹಾವಿದ್ಯಾಲಯದಲ್ಲಿ ಕನ್ನಡ ಸಂಶೋಧನಾ ಕೇಂದ್ರ ಕಾಸರಗೋಡು ಹಮ್ಮಿಕೊಂಡಿದ್ದ ಸಂಶೋಧನಾ ಕಮ್ಮಟವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವೇದಿಕೆಯಲ್ಲಿ ಉಪಸ್ಥಿತರಿದ್ದ ಪ್ರಾಧ್ಯಾಪಕ ಡಾ.ರತ್ನಾಕರ ಮಲ್ಲಮೂಲೆ ಅವರು ಮಾತನಾಡಿ, ಹಿರಿಯ ತಲೆಮಾರುಗಳೊಡನೆ ನಾಶವಾಗುವ ಸ್ಥಳೀಯ ಮೌಖಿಕ ಆಕರಗಳನ್ನು ಕ್ಷೇತ್ರಕಾರ್ಯದ ಮೂಲಕ ಇನ್ನಾದರೂ ಸಂಗ್ರಹಿಸಿ ಸಂರಕ್ಷಿಸಬೇಕು. ಅವು ನಮ್ಮ ಹಿರಿಯರ ಬದುಕಿನ ವಿಧಾನ ಹಾಗೂ ಚಿಂತನೆಗಳ ಆಗಾಧತೆಗಳನ್ನು ತಿಳಿದುಕೊಳ್ಳಲು ನೆರವಾಗಬಹುದು ಎಂದು ತಿಳಿಸಿದರು. ಕಾಲೇಜಿನ ಪ್ರಾಂಶುಪಾಲ ಡಾ.ಮಹಮ್ಮದಾಲಿ ಅಧ್ಯಕ್ಷತೆ ವಹಿಸಿದ್ದರು.

ಕೇಂದ್ರದ ನಿರ್ದೇಶಕ ಡಾ.ಮೋಹನ ಕುಂಟಾರ್ ಪ್ರಾಸ್ತಾವಿಕವಾಗಿ ಮಾತನಾಡಿ, ಕಾಸರಗೋಡಿನ ಆಕರಗಳನ್ನು ಬಳಸಿ ಸಂಶೋಧನೆ ಮಾಡುವವರಿಗೆ ಉತ್ತೇಜನ ನೀಡುವ ಕೇಂದ್ರದ ಕಾರ್ಯ ಯೋಜನೆಗಳನ್ನು ತಿಳಿಯಪಡಿಸಿದರು. ಪ್ರೊ.ಶಿವಶಂಕರ್ ಸ್ವಾಗತಿಸಿದರು. ರೇಣುಕಾ ಸುಧೀರ್ ಅರಸಿನಮಕ್ಕಿ ಪ್ರಾರ್ಥನಾ ಗೀತೆಯನ್ನು ಹಾಡಿ ನಿರೂಪಿಸಿದರು.

ಕ್ಯಾಂಪ್ಕೋ ಸಂಸ್ಥೆಯ ಸಾಂತ್ವನ ಯೋಜನೆ ನೆರವು, ಚೆಕ್ ವಿತರಣೆ



ಕಾಸರಗೋಡು: ಮಂಗಳೂರಿನ ಕ್ಯಾಂಪ್ಕೋ ವತಿಯಿಂದ ಸಾಂತ್ವನ ಯೋಜನೆಯನ್ವಯ ಬಾಯಾರು ಕ್ಯಾಂಪ್ಕೋ ಶಾಖೆಯ ಸಕ್ರಿಯ ಸದಸ್ಯರೂ ಕ್ಯಾಂಪ್ಕೋ ಸಂಸ್ಥೆಯ ಮಾಜಿ ನಿರ್ದೇಶಕ ಅಶೋಕ್‌ಕುಮಾರ್ ಹೊಳ್ಳ ಕುಬಣೂರು ಅವರ ತೆರೆದ ಹೃದಯದ ಶಸ್ತ್ರಚಿಕಿತ್ಸೆಗಾಗಿ ಧನ ಸಹಾಯವಾಗಿ 2 ಲಕ್ಷ ರೂ. ಚೆಕ್‌ನ್ನು ಕ್ಯಾಂಪ್ಕೋ ಸಂಸ್ಥೆಯ ಅಧ್ಯಕ್ಷ ಎಸ್.ಆರ್.ಸತೀಶ್ಚಂದ್ರ ಬುಧವಾರ ಹೊಳ್ಳರ ಮನೆಗೆ ತೆರಳಿ ವಿತರಿಸಿದರು.

ಈ ಸಂದರ್ಭ ಸಂಸ್ಥೆಯ ನಿರ್ದೇಶಕ ಕೋಳ್ಯಾರು ಸತೀಶ್ಚಂದ್ರ ಭಂಡಾರಿ, ವೈ. ವೆಂಕಟ್ರಮಣ ಭಟ್ ಎಡಮಲೆ, ಸದಾನಂದ ಶೆಟ್ಟಿ ಕೊಮ್ಮಂಡ, ಸೌಮ್ಯಾ ಪ್ರಕಾಶ್ ಮೀಯಪದವು, ಬದಿಯಡ್ಕ ವಲಯದ ಪ್ರಬಂಧಕ ಚಂದ್ರ ಎಂ., ಬಾಯಾರು ಶಾಖೆ ಪ್ರಬಂಧಕ ರಮೇಶ್ ವೈ., ಅಶೋಕ್ ಕುಮಾರ್ ಹೊಳ್ಳರ ಪತ್ನಿ ವಿಜಯಲಕ್ಷ್ಮಿ, ಕ್ಯಾಂಪ್ಕೋ ಸದಸ್ಯ ರಾಮಚಂದ್ರ ಮಯ್ಯ ಉಪಸ್ಥಿತರಿದ್ದರು.

ಮೇ 25ರಂದು ಅಧ್ಯಾಪಕ ಹುದ್ದೆಗಳಿಗೆ ಸಂದರ್ಶನ

ಮಂಜೇಶ್ವರ: ಬೇಕೂರು ಹೈಯರ್ ಸೆಕೆಂಡರಿ ಶಾಲೆಯ ಹೈಯರ್ ಸೆಕೆಂಡರಿ ವಿಭಾಗದಲ್ಲಿ ಚರಿತ್ರೆ (ಹಿಸ್ಟರಿ) ಸೀನಿಯರ್, ರಾಜ್ಯಶಾಸ್ತ್ರ (ಪೊಲಿಟಿಕಲ್ ಸಯನ್ಸ್) ಸೀನಿಯರ್, ಪ್ರಾಣಿಶಾಸ್ತ್ರ (ಜೂನಿಯರ್), ಗಣಿತ (ಜೂನಿಯರ್), ಉರ್ದು (ಜೂನಿಯರ್) ಅಧ್ಯಾಪಕ ಹುದ್ದೆಗಳಿಗೆ ದಿನಗೂಲಿ ವೇತನದಡಿಯಲ್ಲಿ ಮೇ 25ರಂದು ಬೆಳಗ್ಗೆ 10 ಗಂಟೆಗೆ ಸಂದರ್ಶನ ನಿಗದಿಪಡಿಸಲಾಗಿದ್ದು ಅರ್ಹ ಅಭ್ಯರ್ಥಿಗಳು ಅಸಲಿ ಪ್ರಮಾಣ ಪತ್ರದೊಂದಿಗೆ ಪ್ರಾಂಶುಪಾಲರ ಕಚೇರಿಯಲ್ಲಿ ಹಾಜರಾಗಬೇಕಾಗಿದೆ.

'ಕವರ್ ಸ್ಟೋರಿ' ಕಿರುಚಿತ್ರದ ಪೋಸ್ಟರ್, ಆಡಿಯೋ ಬಿಡುಗಡೆ



ಉಪ್ಪಳ: ತುಕಾರಾಮ ಬಾಯಾರು ನಿರ್ದೇಶನದಲ್ಲಿ ಕಡಲು ಕ್ರಿಯೇಷನ್ಸ್ ಬ್ಯಾನರಿನಲ್ಲಿ ಸಿದ್ಧವಾಗಿರುವ 'ಕವರ್ ಸ್ಟೋರಿ' ಕಿರುಚಿತ್ರದ ಪೋಸ್ಟರ್ ಹಾಗೂ ಆಡಿಯೋ ಬಿಡುಗಡೆ ಸಮಾರಂಭವು ಉಡುಪಿಯ ಚಿಟ್ಪಾಡಿ ಮಂಚಿ ಶ್ರೀ ವಿಶ್ವಕರ್ಮ ಸಭಾಭವನ ಇದರ ಉದ್ಘಾಟನೆ ಸಮಾರಂಭದ ವೇದಿಕೆಯಲ್ಲಿ ನಡೆಯಿತು.

ಶ್ರೀ ವಿಶ್ವಕರ್ಮ ಸೇವಾ ಸಂಘದ ಗೌರವ ಅಧ್ಯಕ್ಷ ದಾಮೋದರ ಆಚಾರ್ಯ, ಉಪಾಧ್ಯಕ್ಷ ಜನಾರ್ದನ ಆಚಾರ್ಯ ಕುಕ್ಕಿಕಟ್ಟೆ ಹಾಗೂ ಪ್ರಧಾನ ಕಾರ್ಯದರ್ಶಿ ರಾಜೇಶ್ ಆಚಾರ್ಯ ಚಿಟ್ಪಾಡಿ ಬಿಡುಗಡೆಗೊಳಿಸಿದರು.

ಕಾರ್ಯಕ್ರಮದಲ್ಲಿ ನಿರ್ದೇಶಕ ತುಕಾರಾಮ ಬಾಯಾರು, ನಾಯಕ ನಟ ಪ್ರಭಾಕರ ಆಚಾರ್ಯ, ನಾಯಕಿ ಶಿಲ್ಪ ಆಚಾರ್ಯ (ಕಿರುತೆರೆ ನಟಿ) ಹಾಗೂ ಕಲಾವಿದರಾದ ಜಗದೀಶ್ ಜಿ. ಸುಳ್ಯ, ಭಾರತಿ ಪಿ.ಕೆ., ಶಶಿಕಾಂತ ಆಚಾರ್ಯ ಎಡ್ಮೇರು ಇದ್ದರು.

ಅತ್ಯುತ್ತಮವಾದ ಕಥೆಯನ್ನು ಒಳಗೊಂಡ ಇಂಪಾದ ಸಂಗೀತದಿಂದ ಕೂಡಿದ ಈ ಕಿರುಚಿತ್ರ ಅತೀ ಶೀಘ್ರದಲ್ಲಿ ಬರಲಿದೆ. ಈ ಚಿತ್ರದ ಸಂಗೀತ ಮೆಲ್ವಿನ್ ಡಿ. ಎಸ್.ಪಿ. ಸಾಹಿತ್ಯ ಶುಭ ಪ್ರೀತಮ್ ಆಚಾರ್ಯ ಮುಂಬೈ ಸಂಕಲನ ಹಾಗೂ ಛಾಯಾಗ್ರಹಣ ಮಹೇಶ್, ಪೋಸ್ಟರ್ ಡಿಸೈನರ್ ಸಂತೋಷ್ ಆಚಾರ್ಯ ಕಾಸರಗೋಡು (ತ್ರಿದಳ್ ಆರ್ಟ್ಸ್). ಚಿತ್ರದ ನಿರ್ಮಾಪಕರು ಪ್ರಭಾಕರ ಆಚಾರ್ಯ, ನಾರಾಯಣ (ನಾಣಿ) ಉಪ್ಪಿನಂಗಡಿ, ಉದಯ್ ಕುಮಾರ್ ಆಚಾರ್ಯ ಬಾಯಾರು ಸಹಕಾರ ನೀಡಿದರು.

ಹೆದ್ದಾರಿಗಳಲ್ಲಿ ಕಸ ಎಸೆಯುವ ಹಳೆ ಚಾಳಿ ಬಿಡದ ಜನರು | ಚರಂಡಿಗಳಲ್ಲಿರುವ ಪ್ಲಾಸ್ಟಿಕ್ ತ್ಯಾಜ್ಯ, ಮಳೆ ನೀರಿನ ಹರಿಯುವಿಕೆಗೆ ಅಡ್ಡಿ

ಕಾಸರಗೋಡು ಜಿಲ್ಲೆಯಲ್ಲಿ ನಡೆಯದ ಮುಂಗಾರು ಪೂರ್ವ ಸ್ವಚ್ಛತಾ ಕಾರ್ಯ

ಕಾಸರಗೋಡು: ಮಳೆಗಾಲ ಸಮೀಪಿಸುತ್ತಿರುವುದರಿಂದ, ಕಾಸರಗೋಡಿನಲ್ಲಿ ಮುಂಗಾರು ಪೂರ್ವ ಶುಚಿಗೊಳಿಸುವ ಚಟುವಟಿಕೆಗಳು ಎಷ್ಟು ಪರಿಣಾಮಕಾರಿ ಎಂಬುದರ ಬಗ್ಗೆ ಜನರು ಕಳವಳ ವ್ಯಕ್ತಪಡಿಸಿದ್ದಾರೆ. ಸಿವಿಲ್ ಸ್ಟೇಷನ್‌ನಲ್ಲಿ ಶುಚಿಗೊಳಿಸುವ ಚಟುವಟಿಕೆಗಳು ದಿನಗಳ ಹಿಂದೆಯಷ್ಟೇ ಪ್ರಾರಂಭವಾದರೂ ಸ್ಥಳೀಯಾಡಳಿತ ಸಂಸ್ಥೆಗಳು ಈ ವಿಷಯದಲ್ಲಿ ಸಾಕಷ್ಟು ಜಾಗರೂಕರಾಗಿಲ್ಲ.

ಹೆಚ್ಚುತ್ತಿರುವ ಪ್ಲಾಸ್ಟಿಕ್ ತ್ಯಾಜ್ಯವು ಸ್ವಚ್ಛತೆಗೆ ಪ್ರಮುಖ ಸವಾಲಾಗಿದೆ. ಮಂಜೇಶ್ವರದಿಂದ ತೊಡಗಿ ರಾಷ್ಟ್ರೀಯ ಹೆದ್ದಾರಿಗಳಾದ್ಯಂತ ಜನರು ಕಸ ಎಸೆಯುತ್ತಿರುವುದು ಹಳೆಯ ಸಂಸ್ಕೃತಿಯನ್ನು ಈಗಲೂ ಬಿಡಲು ಸಿದ್ಧರಾಗಿಲ್ಲ ಎಂಬುದರ ಸ್ಪಷ್ಟ ಸೂಚನೆಯಾಗಿದೆ. ಈ ರೀತಿ ಸುರಿಯುವ ಕಸವು ಚರಂಡಿಗಳು ಮತ್ತು ಕಲ್ವರ್ಟ್‌ಗಳಲ್ಲಿ ಸಂಗ್ರಹಗೊಂಡು ಮಳೆನೀರಿನ ಹರಿವಿಗೆ ಅಡ್ಡಿಯಾಗುತ್ತದೆ. ಇದು ದೊಡ್ಡ ಅವಘಡಗಳಿಗೆ ಕಾರಣವಾಗುತ್ತದೆ. ಮಣ್ಣಿನಲ್ಲಿ ಕೊಳೆಯದ ಪ್ಲಾಸ್ಟಿಕ್ ತ್ಯಾಜ್ಯವು ಪರಿಸರಕ್ಕೆ ದೊಡ್ಡ ಅಪಾಯವನ್ನುಂಟುಮಾಡುತ್ತದೆ.





ಹಸಿರು ಕ್ರಿಯಾಸೇನಾಗೆ ಸಹಕಾರ ಅಗತ್ಯ

ಸ್ಥಳೀಯಾಡಳಿತ ಸಂಸ್ಥೆಗಳ ಹಸಿರು ಕ್ರಿಯಾಸೇನೆ ಸದಸ್ಯರು ಗ್ರಾಮ, ನಗರವನ್ನು ಕಸ ಮುಕ್ತಗೊಳಿಸಲು ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದಾರೆ. ಆದರೆ ವಾಸ್ತವವೆಂದರೆ ಇದಕ್ಕೆ ಸಹಕರಿಸದ ಅನೇಕ ವ್ಯಾಪಾರಿಗಳು, ಸಂಸ್ಥೆಗಳು ಮತ್ತು ಕುಟುಂಬಗಳು ಇನ್ನೂ ಇವೆ. ಜಾರಿ ದಳ ಮತ್ತು ಆರೋಗ್ಯ ಇಲಾಖೆ ಅಂತಹ ಜನರಿಂದ ಕೋಟ್ಯಂತರ ರೂ. ದಂಡವನ್ನು ಸಂಗ್ರಹಿಸುತ್ತಿದ್ದರೂ, ಅವರು ಸಾರ್ವಜನಿಕ ಸ್ಥಳಗಳಲ್ಲಿ ಕಸವನ್ನು ಸುರಿಯುತ್ತಲೇ ಇದ್ದಾರೆ.

ತ್ಯಾಜ್ಯ ಎಸೆಯುವುದು ಸಾಮಾನ್ಯ

ಹಸಿರು ಕ್ರಿಯಾ ಸೇನಾ ಸದಸ್ಯೆಯರು ಪ್ಲಾಸ್ಟಿಕ್ ಸಂಗ್ರಹಕ್ಕಾಗಿ ಮನೆ ಮನೆಗಳಿಗೆ ತಿಂಗಳಿಗೊಮ್ಮೆ ಬರುತ್ತಾರೆ ಮತ್ತು ಪ್ಲಾಸ್ಟಿಕ್ ತ್ಯಾಜ್ಯದ ಕುರಿತು ಮಾಹಿತಿ ನೀಡುತ್ತಾರೆ. ಆದರೆ ಅದನ್ನೆಲ್ಲಾ ಲೆಕ್ಕಿಸದೆ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಚರಂಡಿಗಳಿಗೆ ಬಿಸಾಡುವುದು ದೈನಂದಿನ ಕೆಲಸವಾಗಿದೆ. ಇದು ಸಾಂಕ್ರಾಮಿಕ ರೋಗಗಳ ಹರಡುವಿಕೆಗೆ ಪ್ರಮುಖ ಕಾರಣವಾಗಿದೆ.

ಸಾಂಕ್ರಾಮಿಕ ರೋಗದ ಭೀತಿ

ಮಳೆಗಾಲಕ್ಕೂ ಮುನ್ನ ಸ್ವಚ್ಛತಾ ಕಾರ್ಯ ವಿಫಲವಾದರೆ ಜಿಲ್ಲೆಗೆ ದೊಡ್ಡ ಆರೋಗ್ಯ ಬಿಕ್ಕಟ್ಟು ಎದುರಾಗಲಿದೆ. ಚಿಕೂನ್ ಗುನ್ಯಾ, ಕಾಲರಾ, ಲೆಪ್ಟೊಸ್ಪಿರೋಸಿಸ್ ಮತ್ತು ಡೆಂಗ್ಯೂ ಜ್ವರ ಸೇರಿದಂತೆ ವಿವಿಧ ರೋಗಗಳು ಹರಡುವ ಸಾಧ್ಯತೆಯಿದೆ. ಅದಕ್ಕಾಗಿ ಸೊಳ್ಳೆಗಳ ಸಂತಾನೋತ್ಪತ್ತಿ ತಾಣಗಳು, ಜಲಮೂಲಗಳನ್ನು ಸ್ವಚ್ಛಗೊಳಿಸುವುದು, ಚರಂಡಿಗಳಿಂದ ಮಣ್ಣನ್ನು ವಿಲೇವಾರಿಗೊಳಿಸಲು ಕಠಿಣ ಕ್ರಮಕ್ಕೆಗೊಳ್ಳಬೇಕಿದೆ. ಹಿಂದಿನ ಅನುಭವಗಳಿಂದ ಪಾಠ ಕಲಿತು ಸ್ಥಳೀಯಾಡಳಿತ ಸಂಸ್ಥೆಗಳು ಮತ್ತು ಕ್ಲಬ್‌ಗಳ ಸಹಾಯದಿಂದ ಶುಚಿಗೊಳಿಸುವಿಕೆ ತೀವ್ರಗೊಳಿಸಲು ಸಾರ್ವಜನಿಕರು ಒತ್ತಾಯಿಸುತ್ತಿದ್ದಾರೆ.

ಸುತ್ತ ಮುತ್ತ

ಮೇ 17: ಪಡುಬೆಳ್ಳೆ ವಿಹಿಂಪ ರಜತ ಸಂಭ್ರಮ

ಶಿರ್ವ: ಶ್ರೀಕ್ಷೇತ್ರ ಪಡುಬೆಳ್ಳೆ ಶ್ರೀಮಹಾಲಿಂಗೇಶ್ವರ ದೇವಳದಲ್ಲಿ ವಿಶ್ವಹಿಂದು ಪರಿಷತ್, ಬಜರಂಗದಳ ಪಡುಬೆಳ್ಳೆ ಇದರ ರಜತ ಸಂಭ್ರಮ ಹಾಗೂ 25ನೇ ವರ್ಷದ 'ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ' ಧಾರ್ಮಿಕ ಅನುಷ್ಠಾನಗಳು -ಧಾರ್ಮಿಕ ಸಭಾ ಮೇ 17ರಂದು ಸಂಪನ್ನಗೊಳ್ಳಲಿದೆ. ಪೂರ್ವಾಹ್ನ ಭಾವಿಯಾಗಿ ಸಂಜೆ ಗಂಟೆ 3ಕ್ಕೆ ಪಡುಬೆಳ್ಳೆ ಪೇಟೆಯಿಂದ ಶ್ರೀದೇವಳದವರೆಗೆ ಭವ್ಯ ಶೋಭಾಯಾತ್ರೆ ನಡೆಯಲಿದೆ. ಸಂಜೆ 6ಕ್ಕೆ ಶ್ರೀಮಹಾಲಿಂಗೇಶ್ವರ ದೇವರಿಗೆ ರಂಗಪೂಜೆ, ಶ್ರೀಸತ್ಯನಾರಾಯಣ ದೇವರ ಸನ್ನಿಧಿಯಲ್ಲಿ ಮಹಾಪೂಜೆ, ಸಂಜೆ 7ರಿಂದ ಜರುಗುವ ಧಾರ್ಮಿಕ ಸಭೆಯಲ್ಲಿ ಗುರುಪುರ ವಜ್ರದೇಹಿ ಮಠದ ಶ್ರೀರಾಜಶೇಖರಾನಂದ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದು, ಕ್ಷೇತ್ರದ ಆಡಳಿತ ಮೊಕ್ತೇಸರ ಬೆಳ್ಳೆ ದೊಡ್ಡಮನೆ ಸುಭಾಸ್‌ಚಂದ್ರ ಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಉಡುಪಿ ಚಿಕ್ಕಮಗಳೂರು ಕ್ಷೇತ್ರದ ಸಂಸದ ಕೋಟ ಶ್ರೀನಿವಾಸ ಪೂಜಾರಿ, ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ವಿಹಿಂಪ ಉಡುಪಿ ಜಿಲ್ಲಾ ಕಾರ್ಯದರ್ಶಿ ದಿನೇಶ್ ಮೆಂಡನ್, ವಿಹಿಂಪ ಕಾಪು ಪ್ರಖಂಡದ ಅಧ್ಯಕ್ಷ ಪ್ರಸನ್ನ ಭಟ್ ಭಾಗವಹಿಸುವರು. ರಾತ್ರಿ 9ರಿಂದ ಬೆಂಕಿನಾಥೇಶ್ವರ ಕೃಪಾಪೋಷಿತ ದಶಾವತಾರ ಯಕ್ಷಗಾನ ಮಂಡಳಿಯಿಂದ 'ಶ್ರೀದೇವಿ ಅಗ್ನಿ ಕಲ್ಲುರ್ಟಿ' ಯಕ್ಷಗಾನ ಬಯಲಾಟ ಜರುಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ತ್ಯಾಜ್ಯ ಎಸೆದರೆ ರೂ. 5000 ದಂಡ

ಕೋಟ: ಕೋಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ರಸ್ತೆ ಸಹಿತ ಇತರ ಸ್ಥಳಗಳಲ್ಲಿ ತ್ಯಾಜ್ಯ ಎಸೆಯುವವರ ಮೇಲೆ ಕಠಿಣ ಕ್ರಮಕ್ಕೆ ಮುಂದಾಗಿದೆ. ಕಸ ಎಸೆಯುವ ಬ್ಲ್ಯಾಕ್ ಸ್ಪಾಟ್‌ಗಳಲ್ಲಿ ಸಿಸಿ ಕ್ಯಾಮರ ಸ್ಥಾಪಿಸಲು ತೀರ್ಮಾನಿಸಿದೆ. ಯಾವುದೇ ಸ್ಥಳದಲ್ಲಿ ಪ್ಲಾಸ್ಟಿಕ್ ಇನ್ನಿತರ ತ್ಯಾಜ್ಯಗಳನ್ನು ಎಸೆದವರ ಮೇಲೆ ರೂ. 5000 ದಂಡ ವಿಧಿಸುವ ಎಚ್ಚರಿಕೆಯನ್ನು ಗ್ರಾ.ಪಂ. ನೀಡಿದೆ. ಮನೆಯ ಕಸವನ್ನು ಪಂಚಾಯತ್ ಎಸ್‌ಎಲ್‌ಆರ್‌ಎಂ ಘಟಕಕ್ಕೆ ನೀಡುವಂತೆ ಪಂಚಾಯತ್ ಪ್ರಕಟಣೆ ತಿಳಿಸಿದೆ.

ಮೊದಲನೇ ಪುಟದಿಂದ

ಬಸ್ ಶೆಲ್ಟರ್

ಇಲ್ಲಿನ ಬಸ್ ನಿಲ್ದಾಣ ಮತ್ತು ಸರ್ವಿಸ್ ರಸ್ತೆ ಬದಿ ಅನಧಿಕೃತ ಫ್ಲೆಕ್ಸ್ ಹಾವಳಿ ಅಪಾಯಕಾರಿ ಪರಿಣಾಮ ಬೀರಿದೆ ಎಂಬ ಆರೋಪವೂ ವಾಹನ ಸವಾರರಿಂದ ಕೇಳಿ ಬಂದಿದೆ. ಇಲ್ಲಿನ ಶ್ರೀನಿವಾಸ್ ಆರ್ಕೇಡ್ ವಾಣಿಜ್ಯ ಸಂಕೀರ್ಣ ಎದುರು ಹೆದ್ದಾರಿ ಬದಿ ಕಳೆದ ಒಂದು ತಿಂಗಳ ಹಿಂದೆ ಗೇಲ್ ಕಂಪೆನಿ ಸಂಬಂಧಿಸಿದಂತೆ ಗ್ಯಾಸ್ ಪೈಪ್‌ಲೈನ್ ಅಳವಡಿಸಲು ಅಲ್ಲಲ್ಲಿ ಬೃಹತ್ ಗಾತ್ರದ ಹೊಂಡ ಕೊರೆದು ಅದರಲ್ಲಿ ನೀರು ಮತ್ತು ಕೆಸರು ತುಂಬಿಕೊಂಡಿದೆ. ಈ ಅಪಾಯಕಾರಿ ಹೊಂಡ ಮುಚ್ಚುವಂತೆ ಹೆದ್ದಾರಿ ಇಲಾಖೆ ಅಧಿಕಾರಿಗಳಿಗೆ ಕರೆ ಮಾಡಿದರೆ, ಈಗಾಗಲೇ ಅವರಿಗೆ ನೋಟಿಸು ನೀಡಲಾಗಿದೆ ಎಂದು ಎಂಜಿನಿಯರ್ ನವೀನ್ ಪ್ರತಿಕ್ರಿಯಿಸಿದ್ದಾರೆ. ಇಲ್ಲಿನ ಬಿ.ಸಿ.ರೋಡು ಸರ್ವಿಸ್ ರಸ್ತೆ ಬದಿ ಅಲ್ಲಲ್ಲಿ ಹೊಂಡ ಕೊರೆದು ಕೇಬಲ್ ಎತ್ತರಕ್ಕೆ ಮಣ್ಣು ತುಂಬಿಸಿದ ಪರಿಣಾಮ ಪಾದಚಾರಿಗಳು ಕುಸಿದು ಬೀಳುತ್ತಿದ್ದಾರೆ ಎಂಬ ಆರೋಪವೂ ಕೇಳಿ ಬಂದಿದೆ. ಈ ಅನಧಿಕೃತ ಬಸ್ ಶೆಲ್ಟರ್ ಮತ್ತು ರಿಕ್ಷಾ ಪಾರ್ಕಿಂಗ್ ತೆರವುಗೊಳಿಸಬೇಕು ಎಂದು ಆಗ್ರಹಿಸಿ ಸ್ಥಳೀಯ ವರ್ತಕರು ಮತ್ತು ಸಾರ್ವಜನಿಕರು ಸಹಿ ಸಂಗ್ರಹಿಸಿ ಪುರಸಭೆ ಮತ್ತು ಸಂಚಾರಿ ಪೊಲೀಸ್ ಠಾಣೆಗೆ ಸೋಮವಾರ ಮನವಿ ಸಲ್ಲಿಸಿದ ಹಿನ್ನೆಲೆಯಲ್ಲಿ ಮುಖ್ಯಾಧಿಕಾರಿ ಮತ್ತು ಸಂಚಾರಿ ಠಾಣೆ ಎಸ್ಸೈ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದ್ದಾರೆ.

ಬ್ಯಾರಿಕೇಡ್‌ಗಳು

ಈ ರೀತಿ ಖರೀದಿಸಲಾಗುವ ಬ್ಯಾರಿಕೇಡ್ ಇಲಾಖೆಯ ನಿರ್ಲಕ್ಷ್ಯದಿಂದ ಮಣ್ಣುಪಾಲಾಗುತ್ತಿದೆ. ಆದರೆ, ಪೊಲೀಸ್ ಇಲಾಖೆಗೆ ಈ ಕುರಿತು ಚಿಂತೆ ಇರುವುದಿಲ್ಲ. ಯಾಕೆಂದರೆ, ಸರಕಾರ ಮೊತ್ತ ನೀಡದಿದ್ದರೆ ಪೊಲೀಸರಿಗೆ ಪ್ರಾಯೋಜಕತ್ವ ನೀಡುವವರು ಸಾಕಷ್ಟು ಮಂದಿ ಸಿಗುತ್ತಾರೆ ಎಂಬುದು ನಗರದ ಮಂದಿ ವ್ಯಂಗ್ಯವಾಡುತ್ತಾರೆ.

ಪಯಣ

ಮಧ್ಯಪ್ರಾಚ್ಯ ದೇಶಗಳಲ್ಲಿ ನಡೆದ ಯುದ್ಧ ಕಾರಣದಿಂದಾಗಿ ವಿಶ್ವ ಮಾರುಕಟ್ಟೆಯಲ್ಲಿ ಉಂಟಾಗುತ್ತಿರುವ ಆರ್ಥಿಕ ಸಮಸ್ಯೆ ಅರಿತುಕೊಂಡು ನಮ್ಮ ದೇಶದಲ್ಲಿ ಜನತೆಗೆ ತೊಂದರೆ ಆಗದಂತೆ, ಆರ್ಥಿಕತೆಯನ್ನು ಸ್ಥಿರವಾಗಿಟ್ಟುಕೊಳ್ಳುವ ಉದ್ದೇಶದಿಂದ ಪ್ರಧಾನಿಯವರು ದೇಶದ ಜನತೆಗೆ ಮಿತ ವ್ಯಯದ ಕರೆ ನೀಡಿದ್ದಾರೆ. ಈ ಮೂಲಕ ಮೂಲಕ ನಾವು ಅನುಷ್ಠಾನ ಮಾಡಿ ಆರ್ಥಿಕತೆಗೆ ಹೊಡೆತ ಬೀಳದಂತೆ ಪ್ರಧಾನಿಯವರ ಕೈ ಬಲಪಡಿಸಲಾಗುವುದು. ಪ್ರಧಾನಿಯವರ ಒಂದು ಕರೆಗೆ ದೇಶದ ಜನ ಅರ್ಥ ಮಾಡಿಕೊಳ್ಳುವುದಾದರೆ ವಿರೋಧ ಪಕ್ಷದವರು ಯೋಚಿಸಬೇಕಾಗಿದೆ. ಈ ಹಿಂದೆ ಲಾಲ್ ಬಹದ್ದೂರ್ ಶಾಸ್ತ್ರೀ, ಇಂದಿರಾ ಗಾಂಧೀಯವರೂ ದೇಶದಲ್ಲಿ ಕಷ್ಟ ಬಂದಾಗ ಈ ರೀತಿ ಕರೆಗಳನ್ನು ಅನೇಕ ಬಾರಿ ನೀಡಿದ್ದು ದೇಶದ ಜನ ಪ್ರಾಮಾಣಿಕವಾಗಿ ಪಾಲನೆ ಮಾಡಿದ್ದರು ಎಂದು ಅವರು ಹೇಳಿದರು. ಬಿಜೆಪಿ ದ.ಕ. ಜಿಲ್ಲಾ ಉಪಾಧ್ಯಕ್ಷ ಪ್ರಸನ್ನ ಕುಮಾರ್ ಮಾರ್ತ, ಜಿಲ್ಲಾ ಪ್ರಮುಖರಾದ ಪ್ರೇಮಾನಂದ ಶೆಟ್ಟಿ ಸುನಿಲ್, ನಗರ ಮಂಡಲದ ಅಧ್ಯಕ್ಷ ಶಿವಕುಮಾರ್ ಕಲ್ಲಿಮಾರ್, ಗ್ರಾಮಾಂತರ ಮಂಡಲದ ಅಧ್ಯಕ್ಷ ದಯಾನಂದ ಶೆಟ್ಟಿ ಉಜಿರೆಮಾರ್, ಪ್ರಧಾನ ಕಾರ್ಯದರ್ಶಿ ಲೋಕೇಶ್ ಚಾಕೋಟೆ, ಗ್ರಾಮಾಂತರ ಮಂಡಲ ಬಿಜೆಪಿ ಉಪಾಧ್ಯಕ್ಷ ವಿದ್ಯಾಧರ ಜೈನ್, ಉಪಾಧ್ಯಕ್ಷ ಸತೀಶ್ ನ್ಯಾಕ್ ಪರ್ಲಡ್ಕ, ನಿರಂಜನ ಮಾನ್ಯ, ಅಭಿಜಿತ್ ಕೊಳ್ತಿಗೆಮಾರ್, ಮಹಿಳಾ ಮೋರ್ಚಾದ ಜಯಲಕ್ಷ್ಮೀ ಶ್ರೀನಿವಾಸ ಸಹಿತ ಹಲವು ಮಂದಿ ಪಕ್ಷದ ಪ್ರಮುಖರು ಉಪಸ್ಥಿತರಿದ್ದರು.

ಕೋಡಿಕನ್ಯಾಣ: ನೂರಾರು ಎಕ್ರೆ ಜಮೀನಿಗೆ ನದಿಯ ಉಪ್ಪುನೀರು | ಪ್ರತಿಭಟನೆಗೂ ದೊರೆಯದ ಸ್ಪಂದನೆ

ತಾತ್ಕಾಲಿಕ ಹೊಳೆ ದಂಡೆ ನಿರ್ಮಿಸಲು ಮುಂದಾದ ರೈತರು

ಕೋಟ: ಇಲ್ಲಿನ ಕೋಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಕನ್ಯಾಣ ಭಾಗದ ನೂರಾರು ಎಕ್ರೆ ಕೃಷಿ ಭೂ ಭಾಗ ಸೀತಾ ನದಿಯ ಉಪ್ಪು ನೀರು ನುಗ್ಗಲ್ಪಟ್ಟಿದ್ದರಿಂದ ಸಾಕಷ್ಟು ಕೃಷಿ ಭೂಮಿ ಹಾನಿಗೊಳಗಾಗಿದ್ದು ಕೃಷಿ ಕಾಯಕದಿಂದ ಕೃಷಿಕರು ವಿಮುಖರಾಗುತ್ತಿದ್ದಾರೆ. ಈ ಬಗ್ಗೆ ಜನಪ್ರತಿನಿಧಿಗಳಿಗೆ, ಜಿಲ್ಲಾಡಳಿತಕ್ಕೆ ಸಾಕಷ್ಟು ಬಾರಿ ಮನವಿ ನೀಡಿಯೂ ಪ್ರಯೋಜನ ಶೂನ್ಯವಾಗಿದೆ.

ಈ ಹಿನ್ನೆಲೆಯಲ್ಲಿ ಇತ್ತೀಚೆಗಷ್ಟೇ ಗ್ರಾಮಸ್ಥರು ಪ್ರತಿಭಟನೆ ನಡೆಸಿ ನದಿ ತಟ ಶಾಶ್ವತ ದಂಡೆ ನಿರ್ಮಿಸಲು ಆಗ್ರಹಿಸಿದ್ದರೂ ಸೂಕ್ತ ಸ್ಪಂದನೆಯಿಲ್ಲ. ಕೋಡಿ ಕನ್ಯಾಣ ಬಹು ವ್ಯಾಪ್ತಿಯಲ್ಲಿ ಸೀತಾನದಿ ಆವರಿಸಿಕೊಂಡಿದೆ. ಆ ಎಲ್ಲಾ ಭಾಗಗಳಲ್ಲಿ ಕೃಷಿ ಭೂಮಿಯು ಕೂಡಾ ಅಷ್ಟೆ ಪ್ರಮಾಣದಲ್ಲಿದೆ. ಆದರೆ ನದಿತಟ ಸುಭದ್ರವಾಗಿರದೆ ಪ್ರತಿವರ್ಷ ವಿವಿಧ ಬೆಳೆಗಳ ಭೂಭಾಗಕ್ಕೆ ಉಪ್ಪು ನೀರು ನುಗ್ಗಲ್ಪಡುತ್ತಿದೆ. ಇದರಿಂದ ಕೃಷಿ ಕಾಯಕದಿಂದ ಕೃಷಿಕರು ಬೆಸತ್ತು ಹೋಗಿ ಆ ಎಲ್ಲಾ ಭಾಗಗಳು ಹಡಿಲು ಬೀಳುವ ಸ್ಥಿತಿಯಲ್ಲಿವೆ.



ಆದರೆ ಈ ಬಗ್ಗೆ ಎಷ್ಟೇ ಬಾರಿ ಎಚ್ಚರಿಸಿದರೂ ಇಲಾಖೆ ಮತ್ತು ಜನಪ್ರತಿಗಳು ಭರವಸೆ ನೀಡಿ ಕೃಷಿಕರನ್ನು ದಿಕ್ಕುತಪ್ಪಿಸುತ್ತಿದ್ದಾರೆ ಎಂಬ ಆರೋಪಗಳು ಕೇಳಿಬಂದಿದೆ. ಅಲ್ಲದೆ ಹೆಚ್ಚಿನ ವ್ಯಾಪ್ತಿಯಲ್ಲಿ ಹೊಸ ಹೊಸ ರಸ್ತೆಗಳು ನಿರ್ಮಾಣಗೊಂಡರು ಕೃಷಿಕರ ಬಹು ಬೇಡಿಕೆಯ ನದಿ ತಟ ದಂಡೆ ನಿರ್ಮಿಸುವ ಕಾರ್ಯ ಮರೀಚಿಕೆಯಾಗಿಯೇ ಉಳಿದುಕೊಂಡಿದೆ. ಈ ದಿಸೆಯಲ್ಲಿ ಇತ್ತೀಚೆಗೆ ನಡೆದ ಸಾಂಕೇತಿಕ ಪ್ರತಿಭಟನೆಯ ಹೊರತಾಗಿ ಕೃಷಿಕರೇ ತಾವೇ ಸ್ವಂತ ಹಣದಲ್ಲಿ ಹೊಳೆ ದಂಡೆ ನಿರ್ಮಿಸಲು ಮುಂದಾಗಿದ್ದಾರೆ.

ಹಿಟಾಚಿ ಮೂಲಕ ತಾತ್ಕಾಲಿಕ ದಂಡೆ

ಸೀತಾ ನದಿಯಲ್ಲಿ ತುಂಬಿರುವ ಹೂಳು, ಕೃತಕ ನೆರೆ

ಇಲ್ಲಿನ ಕೋಡಿ ಕನ್ಯಾಣ ಭಾಗದಲ್ಲಿ ಹೊಳೆ ಸಂಪೂರ್ಣ ಹೂಳು ತುಂಬಿಕೊಂಡಿದ್ದು, ಹೊಳೆಯ ಮಧ್ಯ ಹಾಗೂ ತಟದಲ್ಲಿ ಕಾಂಡ್ಲ ಗಿಡಗಳು ಹೆಮ್ಮರವಾಗಿ ಬೆಳೆದು ನಿಂತಿದ್ದು ಅದರ ಎಲೆ ಹಾಗೂ ಇತರ ತ್ಯಾಜ್ಯಗಳು ಹೊಳೆಯಲ್ಲಿ ಹೂಳು ರೀತಿಯಲ್ಲಿ ಸೃಷ್ಟಿಸಿವೆ. ಒಂದೆಡೆ ಹೂಳು ತೆಗೆಯದೆ ಹೊಳೆ ನೀರು ಕೃಷಿ, ಮನೆಗಳಿರುವ ಭೂಭಾಗಗಳತ್ತ ನುಗ್ಗುತ್ತಿದೆ. ಇನ್ನೊಂದೆಡೆ ಕೃಷಿಕ ಕೃಷಿ ಕಾಯಕ ನಡೆಸಲಾಗದೆ ಅಸಹಾಯಕನಾಗಿ ಕಂಗೆಟ್ಟು ಕೂತಿದ್ದಾನೆ. ಹೀಗಾದರೆ ಕೃಷಿಕನ ಪಾಡು ಕೇಳುವವರಾರು ಎಂಬ ಪ್ರಶ್ನೆ ಉದ್ಭವಿಸಿದೆ.

ಈ ಬಾರಿ ಕೃಷಿ ಕಾಯಕ ನಡೆಸಬೇಕು ಎಂಬ ಉದ್ದೇಶದಿಂದಲೇ ಕೃಷಿಕರು ತಾವೇ ಸ್ವತಃ ಹಣ ಕ್ರೋಢೀಕರಿಸಿ ತಾತ್ಕಾಲಿಕ ಹೊಳೆ ದಂಡೆ ನಿರ್ಮಿಸಲು ಮುಂದಾಗಿದ್ದಾರೆ.

ದೊಡ್ಡಮಟ್ಟದ ಹೋರಾಟಕ್ಕೆ ಸಜ್ಜು

ಸರಕಾರ ಹಾಗೂ ಇಲಾಖೆಗಳು ಕೃಷಿಕರನ್ನು ನಿರ್ಲಕ್ಷ್ಯದಿಂದ ನೋಡುವ ಸ್ಥಿತಿ ವಾತಾವರಣ ನಿರ್ಮಿಸಿದ್ದಾರೆ, ನಮ್ಮ ಪೂರ್ವಜರ ಕಾಲದಿಂದಲೂ ಕೃಷಿಯನ್ನೇ ಅವಲಂಬಿತವಾದ ಈ ಭೂ ಭಾಗ ಇಂದು ಅಸಾಯಕ ಸ್ಥಿತಿಗೆ ದೂಡಲ್ಪಟ್ಟಿದೆ. ಇದಕ್ಕೆ ಸರ್ಕಾರ ಇಚ್ಛಾಶಕ್ತಿ ಕೊರತೆಯೇ ಕಾರಣ, ಶೀಘ್ರಗತಿಯಲ್ಲಿ ಶಾಶ್ವತ ಹೊಳೆ ದಂಡೆ ನಿರ್ಮಿಸಿ ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ದೊಡ್ಡ ಮಟ್ಟದ ಹೋರಾಟ ಸಜ್ಜಾಗಲಿದ್ದೇವೆ.

- ಲಕ್ಷ್ಮೀ ಮರಕಾಲ್ತಿ ಸ್ಥಳೀಯ ಕೃಷಿಕರು ಕೋಡಿ ಕನ್ಯಾಣ

ಕ್ವಾಂಟಮ್ ಕಂಪ್ಯೂಟಿಂಗ್ ಲ್ಯಾಬ್, ಡೆಲ್ಟಾ-ಕ್ಯೂಗೆ ಬೋಸರಾಜು ಭೇಟಿ



ಕುಂದಾಪುರ: ಕರ್ನಾಟಕ ಸರಕಾರದ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಅವರು ಕುಂದಾಪುರದ ಮೂಡ್ಲಕಟ್ಟೆಯ ಐ.ಎಂ.ಜೆ. ಸಂಶೋಧನಾ ಸಂಸ್ಥೆಯಲ್ಲಿರುವ ಕ್ವಾಂಟಮ್ ಕಂಪ್ಯೂಟಿಂಗ್ ಪ್ರಯೋಗಾಲಯ, ಡೆಲ್ಟಾ-ಕ್ಯೂಗೆ ಬುಧವಾರ ಭೇಟಿ ನೀಡಿದರು.

ಸಂಸ್ಥೆಯಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿರುವ ಅಯಾನ್-ಟ್ರ್ಯಾಪ್ ಆಧಾರಿತ 16-ಕ್ವಿಬಿಟ್ ಕ್ವಾಂಟಮ್ ಪ್ರೊಸೆಸರ್‌ನ ಪ್ರಾಯೋಗಿಕ ವ್ಯವಸ್ಥೆ ವೀಕ್ಷಿಸಿದ ಸಚಿವರು ಸಂಸ್ಥೆಯ ಸಂಶೋಧನಾ ದೃಷ್ಟಿಕೋನ ಮತ್ತು ನಡೆಯುತ್ತಿರುವ ಪ್ರಯತ್ನಗಳನ್ನು ಶ್ಲಾಘಿಸಿದರು. ಗ್ರಾಮೀಣ ಕರ್ನಾಟಕದಲ್ಲಿ ಇಂತಹ ವಿಶಿಷ್ಟ ಮತ್ತು ಅತ್ಯಾಧುನಿಕ ತಂತ್ರಜ್ಞಾನ ಉಪಕ್ರಮವನ್ನು ಯಶಸ್ವಿಯಾಗಿ ಸಾಧಿಸಲು ಶುಭ ಕೋರಿದರು. ಮಹಾನಗರಗಳ ಹೊರಗೆ ಮುಂದುವರಿದ ವೈಜ್ಞಾನಿಕ ಸಂಶೋಧನೆ ಮತ್ತು ನಾವೀನ್ಯತೆಯ ಪರಿಸರ ವ್ಯವಸ್ಥೆಯನ್ನು ಉತ್ತೇಜಿಸುವ ಮಹತ್ವವನ್ನು ಹೇಳಿದ ಅವರು, ಕರ್ನಾಟಕದಲ್ಲಿ ಜಾಗತಿಕವಾಗಿ ಪ್ರಸ್ತುತವಾದ ಕ್ವಾಂಟಮ್ ತಂತ್ರಜ್ಞಾನ ಕಾರ್ಯಕ್ರಮವನ್ನು ರೂಪಿಸುವ ಸಂಸ್ಥೆಯ ಪ್ರಯತ್ನದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ವೇಳೆ ಐ.ಎಂ.ಜೆ ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ. ಕೆ. ಟಿ. ಸತ್ಯಜಿತ್ ಅವರು 2026-2030ರ ಅವಧಿಗೆ ಐ.ಎಂ.ಜೆ ಐ.ಆರ್. ಕ್ವಾಂಟಮ್ ಕಂಪ್ಯೂಟಿಂಗ್ ಕಾರ್ಯಕ್ರಮದ ಕಾರ್ಯ ಯೋಜನೆಯನ್ನು ಮಂಡಿಸಿದರು.

ವಿಧಾನ ಪರಿಷತ್ ಸದಸ್ಯ ಮಂಜುನಾಥ್ ಭಂಡಾರಿ, ಮಾಜಿ ಸಚಿವ ಜಯಪ್ರಕಾಶ್ ಹೆಗ್ಡೆ ಸ್ಟೆಪ್ಸ್ ಕರ್ನಾಟಕದ ವಿಜ್ಞಾನ ಮತ್ತು ತಂತ್ರಜ್ಞಾನ ನಿರ್ದೇಶಕ ಶಿವಾನಂದ ಪ್ರಭು,

ಮಾವು ಮೇಳ: ವಿವಿಧ ತಳಿಗಳ ಹಣ್ಣಿನ ಸವಿಗೆ ಗ್ರಾಹಕರು ಫಿದಾ!



ಉಡುಪಿ: ರಾಮನಗರ ಜಿಲ್ಲಾ ಮಾವು ಮತ್ತು ತೋಟದ ಬೆಳೆಗಾರರ ಮಾರಾಟ ಸಂಘ ಹಾಗೂ ತೋಟಗಾರಿಕೆ ಇಲಾಖೆಯ ಸಹಯೋಗದಲ್ಲಿ ಉಡುಪಿಯ ದೊಡ್ಡಣಗುಡ್ಡೆ ರೈತ ಸೇವಾ ಕೇಂದ್ರದ ಆವರಣದಲ್ಲಿ ಆಯೋಜಿಸಲಾಗಿರುವ ನಾಲ್ಕು ದಿನಗಳ ಮಾವು ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಗುರುವಾರ ಅದ್ದೂರಿ ಚಾಲನೆ ನೀಡಲಾಯಿತು.

ಮಾವು ಮೇಳವನ್ನು ಉದ್ಘಾಟಿಸಿ ಮಾತನಾಡಿದ ಉಡುಪಿ-ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರು, ಇಂದಿನಿಂದ ನಾಲ್ಕು ದಿನಗಳ ಕಾಲ ದೊಡ್ಡಣಗುಡ್ಡೆಯ ತೋಟಗಾರಿಕೆ ಇಲಾಖೆ ಆವರಣದಲ್ಲಿ ಈ ಮೇಳ ನಡೆಯಲಿದೆ. ಸುಮಾರು 12ರಿಂದ 15 ವಿವಿಧ ಮಾವಿನ ತಳಿಗಳು ಇಲ್ಲಿ ಲಭ್ಯವಿದ್ದು, ಮಾವು ಪ್ರಿಯರಿಗೆ ಒಂದೇ ಸೂರಿನಡಿ ವೈವಿಧ್ಯಮಯ ಹಣ್ಣುಗಳನ್ನು ಸವಿಯುವ ಅವಕಾಶ ಕಲ್ಪಿಸಲಾಗಿದೆ. ರಾಮನಗರ ಹಾಗೂ ಮಂಡ್ಯ ಜಿಲ್ಲೆಯ ರೈತರು ನೇರವಾಗಿ ಇಲ್ಲಿ ಮಾರಾಟ ಮಾಡುತ್ತಿದ್ದು, ಗ್ರಾಹಕರು ಹಣ್ಣುಗಳನ್ನು ಖರೀದಿಸುವ ಮೂಲಕ ರೈತರಿಗೆ ನೆರವಾಗಬೇಕು ಎಂದರು.

ಗಮನಸೆಳೆದ ಮಾವಿನ ತಳಿಗಳು

ಮೇಳದಲ್ಲಿ ಮಲ್ಲಿಕಾ, ಕೇಸರ್, ಇಮಾಮ್ ಪಸಂದ್, ರಸಪುರಿ, ಸಿಂಧೂರ, ಸುಂದರಿ, ಆಲ್ಫಾನ್ಸೋ, ತೋತಾಪುರಿ, ಕಾಲಪ್ಪಾಡಿ, ಸಕ್ಕರೆಗುತ್ತಿ, ಮಲಗೋವಾ ಹಾಗೂ ದಸೇರಿ ಮೊದಲಾದ ಹತ್ತಾರು ತಳಿಗಳ ಮಾವುಗಳು ಪ್ರದರ್ಶನಗೊಂಡವು. ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕಿ ಕ್ಷಮಾ ಪಾಟೀಲ್, ಸಹಾಯಕ ನಿರ್ದೇಶಕರಾದ ನಿದೀಶ್ ಮತ್ತು ಹೇಮಂತ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು. ಮೇ 17ರ ವರೆಗೆ ಈ ಮೇಳ ನಡೆಯಲಿದೆ.

ಬ್ರಹ್ಮಾವರ ಕಸಾಪದ ಸಾಹಿತ್ಯ ಪ್ರೇರಣೆ, ಸಾಹಿತ್ಯ ಸಂಚಾರ 67



ಕೋಟ: ಕನ್ನಡ ಸಾಹಿತ್ಯ ಪರಿಷತ್ತು ಬ್ರಹ್ಮಾವರ ತಾಲೂಕು ಘಟಕದ ವಿಶಿಷ್ಟವಾದ ಕಾರ್ಯಕ್ರಮ ಸಾಹಿತ್ಯ ಪ್ರೇರಣೆ, ಸಾಹಿತ್ಯ ಸಂಚಾರ 67 ಬುಧವಾರ ಆಶ್ರಿತ್ ಕಾಲೇಜ್ ಆಫ್ ನರ್ಸಿಂಗ್‌ನಲ್ಲಿ ನಡೆಯಿತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಸಂಸ್ಥೆಯ ಪ್ರಾಂಶುಪಾಲೆ ಡಾ. ವಿದ್ಯಾ ರಾಜ್ ಸಾಲಿಯಾನ್, ಕನ್ನಡವನ್ನು ಅನ್ನದ ಭಾಷೆಯಾಗಿ ರೂಪಿಸುವಲ್ಲಿ ಸೋತಿರುವ ನಾವು ಅನ್ಯ ಭಾಷೆಯನ್ನು ಬಹಳ ವೇಗವಾಗಿ ಒಪ್ಪಿಕೊಳ್ಳುವ ಸ್ಥಿತಿ ಬಂದಿದೆ ಎಂದು ವಿಷಾದಿಸಿದರು.

ಉಡುಪಿ ಜಿಲ್ಲಾ ಅಧ್ಯಕ್ಷ ನೀಲಾವರ ಸುರೇಂದ್ರ ಅಡಿಗ ಕಥೆ ಕವನಗಳನ್ನು ರಚಿಸುವ ಸುಲಭ ಕ್ರಮವನ್ನು ವಿದ್ಯಾರ್ಥಿಗಳಿಗೆ ವಿವರಿಸಿದರು. ರಾಜ್ಯ ಶಿಕ್ಷಕ ಪ್ರಶಸ್ತಿ ಪುರಸ್ಕೃತ ನರೇಂದ್ರ ಕುಮಾರ್ ಕೋಟ ತಮ್ಮ ಜೀವನದ ಏರಿಳಿತವನ್ನೇ ಸಾಹಿತ್ಯ ರೂಪದಲ್ಲಿ ವಿದ್ಯಾರ್ಥಿಗಳಿಗೆ ಕಟ್ಟಿಕೊಟ್ಟರು. ಗುಂಡ್ಮಿ ರಾಮಚಂದ್ರ ಐತಾಳ್ ಕಥೆ ಕವನಗಳನ್ನು ಹಾಡಿ ಭಾವಾಭಿನಯದ ಮೂಲಕ ಸಾಹಿತ್ಯದ ಮೆರುಗನ್ನು ವಿವರಿಸಿದರು. ಚಿತ್ರನಟ ಪುನೀತ್ ಶೆಟ್ಟಿ ಧಾರವಾಹಿ ಮತ್ತು ಚಲನಚಿತ್ರಗಳಲ್ಲಿ ಸಾಹಿತ್ಯದ ಅವಶ್ಯಕತೆ ತಿಳಿಸಿದರು. ನರಸಿಂಹ ತುಂಗ ಮತ್ತು ನಾಗರತ್ನ ಜಿ. ಯಕ್ಷಗಾನದಲ್ಲಿ ಬರುವ ದ್ವಂದ್ವಾರ್ಥ ಪದಗಳ ಅರ್ಥಗಳನ್ನು ವಿವರಿಸುತ್ತಾ ಪ್ರಸಂಗದ ಪಾತ್ರಗಳನ್ನು ಅಭಿನಯಿಸಿ ತೋರಿಸಿದರು.

ಅಚ್ಯುತ ಪೂಜಾರಿ ಕನ್ನಡ ಗೀತೆ ಹಾಡಿದರು. ಮಣಿಪಾಲ್ ನರಸಿಂಹಮೂರ್ತಿ ಮಾತನಾಡಿದರು. ಪ್ರಾಧ್ಯಾಪಕ ಮೆಲ್ವಿನ್ ವಂದಿಸಿದರು.

ಮರವಂತೆ ಸರಕಾರಿ ಪ್ರೌಢಶಾಲೆ ಮಕ್ಕಳ ಬೇಸಗೆ ಶಿಬಿರದ ಸಂಪನ್ನ



ಕುಂದಾಪುರ: ಮರವಂತೆಯ ನೇತಾಜಿ ಸುಭಾಷ್ಚಂದ್ರ ಬೋಸ್ ಸರಕಾರಿ ಪ್ರೌಢಶಾಲೆಯಲ್ಲಿ ಆಸರೆ ಚಾರಿಟೇಬಲ್ ಟ್ರಸ್ಟ್ ನೇತೃತ್ವದಲ್ಲಿ 8 ದಿನಗಳ ಕಾಲ ಬೇಸಗೆ ಶಿಬಿರ ನಡೆಯಿತು.

ಶಿಬಿರದಲ್ಲಿ ಬೈಂದೂರು, ಕುಂದಾಪುರ, ಬ್ರಹ್ಮಾವರ, ಹೊನ್ನಾವರ ಭಾಗದ ಒಂದರಿಂದ 10ನೇ ತರಗತಿಯವರೆಗಿನ 80ಕ್ಕೂ ಮಿಕ್ಕಿ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಶಿಬಿರದಲ್ಲಿ ಒಟ್ಟು 20 ಮಂದಿ ಸಂಪನ್ಮೂಲ ವ್ಯಕ್ತಿಗಳು ಪಾಲ್ಗೊಂಡು ಭಜನೆ, ಯೋಗ, ಧ್ಯಾನ, ಕ್ರಾಫ್ಟ್, ಚಿತ್ರಕಲೆ, ಮಕ್ಕಳ ಸಾಹಿತ್ಯ, ಅಭಿನಯ, ಪರಿಸರ ಪ್ರಜ್ಞೆ, ಸ್ವಚ್ಛತೆ, ಆರೋಗ್ಯ ತಪಾಸಣೆ, ಉತ್ತಮ ಹವ್ಯಾಸ, ನಾಳೆಗಾಗಿ ನಾವು, ಮುಖವಾಡ, ಮುಖ ವರ್ಣಿಕೆ, ನಮ್ಮೊಳಗಿನ ಕಲಿಕೆ ಪ್ರಮುಖ ವಿಷಯವಾಗಿ ವಿಚಾರ ವಿನಿಮಯ ಮಾಡಿಕೊಂಡರು. ಅದಲ್ಲದೆ ನಾನಾ ಅಭಿನಯ ಗೀತೆ ಮೂಲಕ ನಾನಾ ಚಟುವಟಿಕೆಗಳನ್ನು ಮಾಡಲಾಯಿತು.

ಸುಶೀಲಾ, ಲಕ್ಷ್ಮಿ ಸಹಕರಿಸಿದರು. ಆಸರೆ ಬಳಗ ಮರವಂತೆಯ ಕರುಣಾಕರ ಆಚಾರ್ಯ ಮರವಂತೆ ಮುಂದಾಳತ್ವದಲ್ಲಿ ಎಲ್ಲ ಸದಸ್ಯರು ಸಕ್ರೀಯವಾಗಿ ಪಾಲ್ಗೊಂಡರು. ಬೈಂದೂರು ಶಾಸಕ ಗುರುರಾಜ್ ಗಂಟಿಹೊಳೆ ಶುಭಹಾರೈಸಿದರು. ಪತ್ರಕರ್ತ ಪ್ರಭಾಕರ ಆಚಾರ್ಯ, ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ರಾಮಕೃಷ್ಣ ಮಾಲೂರು, ಅವರ ಸ್ನೇಹಿತರು, ಮರವಂತೆ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಎಂ. ಭಾಸ್ಕರ ಮಯ್ಯ ಮತ್ತು ಸಹ ಶಿಕ್ಷಕರು ಸಿಬಂದಿ ಪಾಲ್ಗೊಂಡಿದ್ದರು. ಮರವಂತೆ ಪ್ರೌಢಶಾಲೆಯ ಕನ್ನಡ ಭಾಷಾ ಶಿಕ್ಷಕ ರಮೇಶ ನಾಯ್ಕ ಉಪ್ಪುಂದ, ವಿಘ್ನೇಶ್ ಮೂಡಬಿದಿರೆ, ಮನೋಜ್ ಹೆಬ್ರಿ, ದೀಕ್ಷಿತ್ ಆರ್. ನಾಯ್ಕ್ ಉಪ್ಪುಂದ ಸಹಕರಿಸಿದರು.

'ಶಿಕ್ಷಕ-ವಿದ್ಯಾರ್ಥಿಗಳು: ಗುರಿ, ಮೌಲ್ಯಗಳು' ಉಪನ್ಯಾಸ ಮಾಲಿಕೆ



ಕುಂದಾಪುರ: ಶಿಕ್ಷಣ ಕೇವಲ ಅಂಕಗಳಿಕೆಯಲ್ಲ, ಒಳ್ಳೆಯ ಮನುಷ್ಯನನ್ನು ರೂಪಿಸುವ ಪ್ರಕ್ರಿಯೆ. ಇದರಲ್ಲಿ ಶಿಕ್ಷಕ ಮತ್ತು ವಿದ್ಯಾರ್ಥಿಯ ನಡುವಿನ ಸಂಬಂಧ, ಅವರ ಗುರಿ ಮತ್ತು ಮೌಲ್ಯಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಶಿಕ್ಷಕ ವಿದ್ಯಾರ್ಥಿಗಳಲ್ಲಿ ಪ್ರಾಮಾಣಿಕತೆ, ನಿಷ್ಠೆ ಸಮಾನತೆ ಮುಂತಾದ ಗುಣಗಳನ್ನು ಬೆಳೆಸಲು ಪ್ರೇರೇಪಿಸಬೇಕು. ಶಿಕ್ಷಕ ಮಾರ್ಗದರ್ಶಕನಾಗಿ, ವಿದ್ಯಾರ್ಥಿ ಅನ್ವೇಷಕನಾಗಿರಬೇಕು. ಸಮರ್ಪಣಾ ಮನೋಭಾವ ಮತ್ತು ಸೃಜನಶೀಲತೆ ಹೊಂದಿದ ಶಿಕ್ಷಕ ಮೌಲ್ಯಯುತ ಸಮಾಜದ ನಿರ್ಮಾತೃ ಎಂದು ಉಡುಪಿಯ ಸರ್ಕಾರಿ ಮಹಿಳಾ ಪದವಿ ಪೂರ್ವ ಕಾಲೇಜಿನ ನಿವೃತ್ತ ರಾಜ್ಯಶಾಸ್ತ್ರ ಉಪನ್ಯಾಸಕ ದಯಾನಂದ ಡಿ. ಕಿದಿಯೂರು ಹೇಳಿದರು.

ಕುಂದಾಪುರದ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ವತಿಯಿಂದ ಸಿಬ್ಬಂದಿ ಪುನಶ್ಚೇತನ ಕಾರ್ಯಕ್ರಮದ ಭಾಗವಾಗಿ ಆಯೋಜಿಸಿದ ಬೆಳದಿಂಗಳ ಚಿಂತನ ಉಪನ್ಯಾಸ ಮಾಲಿಕೆ -3 ರಲ್ಲಿ ಶಿಕ್ಷಕ ಮತ್ತು ವಿದ್ಯಾರ್ಥಿಗಳು: ಗುರಿ ಮತ್ತು ಮೌಲ್ಯಗಳು" ಎಂಬ ವಿಷಯದ ಕುರಿತು ಅವರು ಮಾತನಾಡಿದರು.

ಸಂಸ್ಥೆಯ ಪ್ರಾಂಶುಪಾಲ ಪ್ರೊ. ಡಾ. ಕೆ. ಉಮೇಶ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಉಪ ಪ್ರಾಂಶುಪಾಲ ಡಾ. ಚೇತನ ಶೆಟ್ಟಿ ಕೋವಾಡಿ ಪ್ರಾಸ್ತಾವಿಕ ಮಾತುಗಳನ್ನಾಡಿ, ಸ್ವಾಗತಿಸಿದರು. ಕಾರ್ಯಕ್ರಮ ಸಂಯೋಜಕಿ ರಶ್ಮಿತಾ ಶೆಟ್ಟಿ ವಂದಿಸಿದರು. ಸಹಾಯಕ ಪ್ರಾಧ್ಯಾಪಕಿ ಪ್ರವೀಣಾ ಎಂ.ಪೂಜಾರಿ ನಿರೂಪಿಸಿದರು.



ಕುಂದಾಪುರ ತಾಲೂಕಿನ ಹಂಗಳೂರು ಗ್ರಾಮ ಪಂಚಾಯತ್, ಎಸ್.ಎಲ್. ಆರ್. ಎಂ. ಘಟಕ ಮತ್ತು ಸಂಜೀವಿನಿ ಸಂಘ ಹಂಗಳೂರು ಹಾಗೂ ವಿವಿಧ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ವಿವಿಧೆಡೆಗಳಲ್ಲಿ ಸ್ವಚ್ಛತಾ ಅಭಿಯಾನ ಗುರುವಾರ ನಡೆಯಿತು. ಸ್ವಚ್ಛತಾ ಅಭಿಯಾನದ ನೋಡಲ್ ಅಧಿಕಾರಿ ದೀಪಾ, ನಾಗರಾಜ್ ಆಚಾರ್, ಆನಂದ ಪೂಜಾರಿ, ಸುಧಾಕರ ಪೂಜಾರಿ, ರೋಶನ್ ಬೆರೆಟ್ಟೋ, ಸ್ಟೀವನ್ ಡಿಕೋಸ್ಟಾ ಗ್ರಾ.ಪಂ. ಪಿಡಿಒ ನಾಗೇಂದ್ರ ಜೆ., ಲತಾ ಪಾಲ್ಗೊಂಡಿದ್ದರು.



ಕೋಟ ಬಲಿಯ ಕೆಕಟ್ಟೆ ಕೊಮೆ ಕೊರವಡಿ ಶ್ರೀ ಮಲಸಾವರಿ ಶ್ರೀ ಮಹಾಕಾಳಿ ದೈವಸ್ಥಾನದಲ್ಲಿ ಪ್ರತಿಷ್ಠಾ ವರ್ಧಂತಿ ಪ್ರಯುಕ್ತ ಯಶಸ್ವಿ ಕಲಾವೃಂದ ಕೊಮೆ ತೆಕಟ್ಟೆ ಕಲಾವಿದರಿಂದ ರೋಹಿತ್ ತೀರ್ಥಹಳ್ಳಿ ನಿರ್ದೇಶನದಲ್ಲಿ 'ವಜ್ರದುಂಬಿ' ಯಕ್ಷಗಾನ ಪ್ರದರ್ಶನಗೊಂಡಿತು.

ಉಪ್ಪು ಮಿಶ್ರಿತ ಕಲುಷಿತ ನೀರಿನ ಸಮಸ್ಯೆಗೆ ಪರಿಹಾರ, ಶುದ್ಧ ಕುಡಿಯುವ ನೀರನ್ನು ಪೂರೈಸುವಂತೆ ಆಗ್ರಹ

ನಾಡ ಗ್ರಾಮ ಪಂಚಾಯತ್ ಕಚೇರಿ ಎದುರು ಗ್ರಾಮಸ್ಥರ ಬೃಹತ್ ಪ್ರತಿಭಟನೆ

ಕುಂದಾಪುರ: ನಾಡ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಉಪ್ಪು ಮಿಶ್ರಿತ ಕಲುಷಿತ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವಂತೆ ಮತ್ತು ಶುದ್ಧ ಕುಡಿಯುವ ನೀರನ್ನು ಪೂರೈಸುವಂತೆ ಆಗ್ರಹಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿವೈಎಫ್ಐ) ಪಡುಕೋಣೆ ಘಟಕ, ಜನವಾದಿ ಮಹಿಳಾ ಸಂಘಟನೆ ನಾಡ ವಲಯ ಇವರ ನೇತೃತ್ವದಲ್ಲಿ ಗ್ರಾಮಸ್ಥರು ನಾಡ ಗ್ರಾಮ ಪಂಚಾಯತ್ ಎದುರು ಗುರುವಾರ ಬೃಹತ್ ಪತಿಭಟನೆ ನಡೆಸಿದರು.

ನಾಡ ಗ್ರಾಮ ಪಂಚಾಯತ್ ವ್ಯಾಪ್ತಿಯ ನಾಡ, ಹಡವು, ಪಡುಕೋಣೆ, ಬಡಾಕೆರೆ ಮತ್ತು ಹೊಸಾಡು ಗ್ರಾಮ ಪಂಚಾಯತ್ ವ್ಯಾಪ್ತಿಯ ಸೇನಾಪುರ ಗ್ರಾಮಗಳಲ್ಲಿ ಉಪ್ಪು ಮಿಶ್ರಿತ ಹಾಗೂ ಕಲುಷಿತ



ಕುಡಿಯುವ ನೀರನ್ನು ಪೂರೈಕೆ ಮಾಡಲಾಗುತ್ತಿದೆ. ಇದರಿಂದ ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದು, ಬೇಸಿಗೆಯಲ್ಲಿ ಸೌಪರ್ಣಿಕಾ ನದಿಯಲ್ಲಿ ಉಪ್ಪು ನೀರು ಸೇರುವ ಪರಿಣಾಮ ಜನರು ಕುಡಿಯುವ ನೀರಿಗಾಗಿ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಕಳೆದ ವರ್ಷ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನೀರಿನ ಗುಣಮಟ್ಟವನ್ನು ಪರೀಕ್ಷಿಸಿ ತಾಂತ್ರಿಕ ವರದಿ ಸಿದ್ಧಪಡಿಸಲು ಸೂಚಿಸಲಾಗಿತ್ತಾದರೂ ವರದಿ ಬಗ್ಗೆ ಯಾವುದೇ ಮಾಹಿತಿ ಬಂದಿಲ್ಲ, ಅಧಿಕಾರಿಗಳ ನಿರ್ಲಕ್ಷ್ಯದಿಂದ ಜನರು ಉಪ್ಪು ನೀರು ಕುಡಿಯುವ ಪರಿಸ್ಥಿತಿ ಬಂದೊದಗಿದ್ದು, ಈ ಬಗ್ಗೆ ಗ್ರಾಮಸಭೆಗಳಲ್ಲಿ ಅಹವಾಲು ಸಲ್ಲಿಸಿ ಸಮಸ್ಯೆ ಪರಿಹಾರಕ್ಕೆ ಒತ್ತಾಯಿಸಲಾಗಿತ್ತು. ಆದರೂ ಸಮಸ್ಯೆ ಬಗೆಹರಿದಿಲ್ಲ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಡಿವೈಎಫ್ಐ ಮುಖಂಡ ರಾಜೀವ ಪಡುಕೋಣೆ, ಸಿಐಟಿಯು ಜಿಲ್ಲಾ ಉಪಾಧ್ಯಕ್ಷ ಎಚ್.ನರಸಿಂಹ, ಯುವಸಂಘಟನೆ ಕಾರ್ಯದರ್ಶಿ ರಾಜೇಶ ಬಗ್ವಾಡಿ, ಜನವಾದಿ ಮಹಿಳಾ ಸಂಘಟನೆ ತಾಲೂಕು ಅಧ್ಯಕ್ಷೆ ನಾಗರತ್ನ ನಾಡ, ವಲಯ ಅಧ್ಯಕ್ಷೆ ಮನೋರಮಾ ಭಂಡಾರಿ, ಕಾರ್ಯದರ್ಶಿ ಶೋಭಾ, ಆದಿವಾಸಿ ಹಕ್ಕುಗಳ ಸಮಿತಿ ಮುಖಂಡ ಶ್ರೀಧರ ನಾಡ, ರೈತ ಸಂಘದ ಮುಖಂಡ ಲಯನ್ಸ್ ರೆಬೆಲ್ಲೊ, ನಿಸರ್ಗ ಪಡುಕೋಣೆ, ಶೀಲಾವತಿ, ಜನಾರ್ದನ ಹೆಬ್ಬಾರ್ ಮೊದಲಾದವರು ಉಪಸ್ಥಿತರಿದ್ದರು.

ಮನವಿ ಸಲ್ಲಿಕೆ

ಜಿಲ್ಲಾಧಿಕಾರಿ ನೇತೃತ್ವದಲ್ಲಿ ನಡೆದ ಸಭೆಯ ನಿರ್ಣಯ ತಕ್ಷಣ ಜಾರಿ ಮಾಡಬೇಕು, ಸೌಪರ್ಣಿಕ ನದಿ ಹೇರೂರು-ಕೋಣ್ಕಿ ಭಾಗದಲ್ಲಿ ವೆಂಟೆಡ್ ಡ್ಯಾಮ್ ನಿರ್ಮಿಸಬೇಕು, ನಾಡ, ಹಡವು, ಬಡಾಕೆರೆ ಹಾಗೂ ಸೇನಾಪುರ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರಿನ ಶಾಶ್ವತ ವ್ಯವಸ್ಥೆ ಕಲ್ಪಿಸಬೇಕು, ಬೇಸಿಗೆಯಲ್ಲಿ ಟ್ಯಾಂಕರ್ ನೀರಿನ ವ್ಯವಸ್ಥೆ ಮಾಡಬೇಕು, ಅಧಿಕಾರಿಗಳ ನಿರ್ಲಕ್ಷ್ಯದ ಕುರಿತು ತನಿಖೆ ನಡೆಸಬೇಕು ಎಂಬಿತ್ಯಾದಿ ಬೇಡಿಕೆ ಮನವಿಯನ್ನು ಪಿಡಿಒಗೆ ಸಲ್ಲಿಸಲಾಯಿತು.